ಪುಸ್ತಕ ಪ್ರಪಂಚ

ಮೇ ೧೯೮೮



ಜೇನ್ ಆಸ್ಟಿನ್: ವಿಶೇಷ ಸಂಚಿಕೆ

ಪುಸ್ತಕ ಪ್ರಪಂಚ
ಮಾಸಿಕ

ಪರಿವಿಡಿ

ಪುಸ್ತಕ ವಿಭಾಗ

ಸಂಪುಟ : ೪೨ ಸಂಚಿಕೆ–೧೦

PUSTAKA PRAPANCHA : Monthly

Published and printed by Karnataka State Adult Eductaion Council, Mysore-4 Pages 128. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 004

ಜೇನ್ ಆಸ್ಟಿನ್ ಜೀವನ ಮತ್ತು ಕೃತಿಗಳು

—ದೇಜಗೌ

೧

ಆಂಗ್ಲ ಕಾದಂಬರಿ ಇತಿಹಾಸದಲ್ಲಿ ಜೇನ್ ಆಸ್ಟಿನ್ ಪ್ರಜ್ವಲಿಸುವ ಧ್ರುವತಾರೆ. ಕಾದಂಬರಿ ಕ್ಷೇತ್ರದಲ್ಲಿ ಅಗ್ರ ಪೂಜೆಗರ್ಹವಾದ ವ್ಯಕ್ತಿ ಅವಳೆಂದು ಅವಳ ಸಮಕಾಲೀನನೂ ಸುಪ್ರಸಿದ್ಧ ಕಾದಂಬರಿಕಾರನೂ ಆದ ಸರ್ ವಾಲ್ಟರ್ ಸ್ಕಾಟ್‌ನೇ ಒಪ್ಪಿಕೊಂಡಿದ್ದಾನೆ. ಕಾದಂಬರಿಕಾತಿಯರಲ್ಲಂತು ಅಗ್ರತಾಂಬೂಲ ಅವಳಿಗೆ ಸಲ್ಲತಕ್ಕದ್ದೆಂಬ ವಿಷಯ ನಿರ್ವಿವಾದವಾದುದು. ಅವಳು ಆರಿಸಿಕೊಂಡಿರುವ ವಸ್ತುವಿನ ಅಥವಾ ಚಿತ್ರಿಸಿರುವ ಸಮಾಜದ ಪರಿಮಿತವ್ಯಾಪ್ತಿಯಿಂದ ಮತ್ತು ಜೀವನವನ್ನು ಅಲ್ಲೋಲಕಲ್ಲೋಲಗೊಳಿಸುವ ರಾಗದ್ವೇಷಗಳ ಅಭಾವದಿಂದ ಆಸ್ಟಿನ್ ಕಾದಂಬರಿಗಳು ನಿಸ್ಸತ್ವವಾಗಿವೆ, ನೀರಸವಾಗಿವೆಯೆಂದು ಕೆಲವು ವಿಮರ್ಶಕರು ಟೀಕಿಸಿರುವುದುಂಟು. ಆದರೆ ಆಸ್ಟಿನ್ ಕಲಾಕೃತಿಗಳು ಬೇಲೂರಿನ ಶಿಲಾಬಾಲಿಕೆಯರನ್ನು ಹೋಲುವಂಥವೇ ಹೊರತು ಶ್ರವಣ ಬೆಳ್ಗೊಳದ ಗೊಮ್ಮಟನನ್ನು ಹೋಲುವಂಥವಲ್ಲ. "ಎರಡಂಗುಲ ಅಗಲದ ದಂತದ ಚೂರೊಂದರಲ್ಲಿ ಸಪುರವಾದ ಕುಂಚಿಕೆಯಿಂದ ಶ್ರಮವಹಿಸಿ ಸಣ್ಣ ಕಲಾಕೃತಿಗಳನ್ನು ನಿರ್ಮಿಸುತ್ತೇನೆ. ಅವುಗಳಿಂದ ಎಷ್ಟು ಫಲ ಸಿದ್ಧಿಸಿದರೆ ಅಷ್ಟೇ ಸಾಕು[1]" ಎಂದು ಆಸ್ಟಿನ್‌ಳೆ ತನ್ನ ಕಲಾಕೃತಿಯ ಬಗೆಗಿರುವ ಸ್ವಾಭಿಪ್ರಾಯವನ್ನು ಮುಚ್ಚುಮರೆಯಿಲ್ಲದೆ ಹೇಳಿಕೊಳ್ಳುತ್ತಾಳೆ. ಆಸ್ಟಿನ್ ಹಳ್ಳಿಯ ಹೆಣ್ಣು; ಹಳ್ಳಿಯ ಜೀವನವನ್ನು—ಅದರಲ್ಲಿಯೂ ಮಧ್ಯಮವರ್ಗದ ಜೀವನವನ್ನು ಬಲ್ಲವಳು; ನಗರವನ್ನಾಗಲೀ, ನಗರ ಜೀವನವನ್ನಾಗಲೀ ಬಲ್ಲವಳಲ್ಲ. ತಾನು ಕಂಡದ್ದನ್ನು ಮಾತ್ರ ನಿಷ್ಠೆಯಿಂದ ಮತ್ತು ಪ್ರಾಮಾಣಿಕತೆಯಿಂದ ನಿರೂಪಿಸುತ್ತಾಳೆ. ತನಗೆ ಪ್ರತ್ಯಕ್ಷಾನುಭವ

[1] Jane Austen and her Country House Comedy by W. H. Helm : p 64.

ವಿಲ್ಲದ ಸಂಗತಿಗಳನ್ನು ಊಹಾ ಪೋಹಗಳ ಮೂಲಕ ಕಲ್ಪಿಸಿಕೊಂಡು ವಾಸ್ತವದೂರ ವಾದ ಸಂಗತಿಗಳನ್ನೆಂದೂ ಅವಳು ಚಿತ್ರಿಸುವುದಿಲ್ಲ. ಕನಸಿನ ಮೇರುಪರ್ವತಕ್ಕಿಂತ ಕೈ ಹಿಡಿಯ ಹೊನ್ನೆ ಅವಳಿಗೆ ಸಾಕು.

೨

ಜೇನ್ ಆಸ್ಟಿನ್ ಹುಟ್ಟಿದ್ದು ೧೭೭೫ ನೆಯ ಇಸವಿ ಡಿಸೆಂಬರ್ ೧೬ ರಂದು, ಹ್ಯಾಂಪ್‌ಷೈರ್ ಜಿಲ್ಲೆಯ ಸ್ಟಿವೆಂಟನ್ ಹಳ್ಳಿಯಲ್ಲಿ. ಅವಳ ತಂದೆ ಜಾರ್ಜ್ ಆಸ್ಟಿನ್ ಮಠಾಧಿಕಾರಿಯಾಗಿದ್ದ ಪಾದ್ರಿ; ತಾಯಿ ಕಸಾಂಡ್ರ ಲೆ. ಏಳು ಮಕ್ಕಳಲ್ಲಿ[2] ಅವಳು ಆರನೆಯವಳು. ಉಳಿದ ಆರು ಮಂದಿ ಮಕ್ಕಳಲ್ಲಿ ಮೊದಲ ನಾಲ್ವರೂ ಕೊಟ್ಟಕೊನೆಯವನೂ ಗಂಡುಮಕ್ಕಳು; ಅವಳ ಒತ್ತಿನ ಅಕ್ಕನೇ ಕಸಾಂಡ್ರ.

ಜಾರ್ಜ್ ಆಸ್ಟಿನ್‌ಗೆ ಕುಟುಂಬವೆಂದರೆ ಪ್ರಾಣ, ಮಕ್ಕಳಲ್ಲಿ ಅಪಾರ ವಾತ್ಸಲ್ಯ, ಸಾಹಿತ್ಯದಲ್ಲಿ ವಿಶೇಷಾಭಿರುಚಿ, ವಿದ್ಯಾರ್ಜನೆಯಲ್ಲಿ ಅಕ್ಷೂಣಾನುರಕ್ತಿ; ಮಕ್ಕಳ ಸ್ವಭಾವಾನುಗುಣವಾದ ವ್ಯಾಸಂಗ ನಿರ್ದೇಶನದಲ್ಲಿ, ಶಿಷ್ಯಕೋಟಿಯ ಕ್ಷೇಮಸಾಧನೆಯಲ್ಲಿ, ವ್ಯವಸಾಯಾಭಿವೃದ್ಧಿಯಲ್ಲಿ ಅವನು ಸದಾ ನಿರತ. ಶ್ರೀಮತಿ ಆಸ್ಟಿನ್ ಮನೆಗಾರಿಕೆ ತೋಟಗಾರಿಕೆಗಳಲ್ಲಿ ನಿಪುಣೆ. ಇಬ್ಬರು ಅಣ್ಣಂದಿರು ಆಕ್ಸ್‌ಫರ್ಡ್‌ನಲ್ಲಿ ವ್ಯಾಸಂಗ ಮಾಡಿ ವಿದ್ಯಾಪರಿಣತಿಯನ್ನು ಪಡೆದಿದ್ದರು; ಕೊನೆಯಿಬ್ಬರು ನಾವಿಕರಾದರು; ಮಧ್ಯದವನು ಜೇನ್‌ಳ ಗ್ರಂಥ ಪ್ರಕಟಣೆಯಲ್ಲಿ ನೆರವಾಗಿ ಅವಳಿಗೆ ಸ್ಫೂರ್ತಿದಾಯಿಯಾಗಿದ್ದನು. ಇವರೆಲ್ಲರಿಗಿಂತ ಮಿಗಿಲಾಗಿ ಜೇನಳ ಬಾಳನ್ನು ತಿದ್ದಿದ, ಅವಳ ನೋವುನಲಿವುಗಳಲ್ಲಿ ಏರುಬೀಳುಗಳಲ್ಲಿ ವಿಚಾರ ವಿಹಾರಗಳಲ್ಲಿ ಸದಾ ಸಮಭಾಗಿಯಾಗಿ. ಒಡಲೆರಡಾದರೂ ಒಂದೇ ಆತ್ಮವಾಗಿ ಬೆಳೆದ, ಅವಳ ನೆರಳೆಂಬಂತೆ ಹೋದೆಡೆಯಲ್ಲೆಲ್ಲ ಹಿಂಬಾಲಿಸಿದ ಅಕ್ಕ ಕಸಾಂಡ್ರ ಅವಳಿಗೆ ಪ್ರಚೋದಕ ಶಕ್ತಿಯಾಗಿದ್ದಳು. ಕಾಲ ಕ್ರಮೇಣ ಮದುವೆಯಾಗಿ ಮನೆಗೆ ಬಂದ ಅತ್ತಿಗೆ ನಾದಿನಿಯರು, ಅವರ ಮಕ್ಕಳು,[3] ಆಗಾಗ್ಗೆ ಮನೆಗೆ ಬರುತ್ತಿದ್ದ ತಾಯಿಯ ಕಡೆಯ ನೆಂಟರು, ಸುತ್ತಮುತ್ತಣ ನಾಲ್ಕಾರು ಕುಟುಂಬಗಳು, ಬೇರೆ ಊರುಗಳಿಗೆ ಹೋಗಿ ನೆಲಸಿದಾಗ ಅಲ್ಲಿ ದೊರೆತ ಮಿತಸಂಖ್ಯೆಯ ಸ್ನೇಹಿತರು—ಇದು ಮುಖ್ಯವಾಗಿ ಅವಳು ಕಂಡ ಸಮಾಜ; ಆ ಸಮಾಜದ ನಾನಾ ಮುಖಗಳನ್ನವಳು ನೋಡಿದ್ದಳು. ಅವಳ ಒಲವು ನಿಸರ್ಗಕ್ಕಿಂತ ಮಿಗಿಲಾಗಿ ಮಾನವಜೀವನದ ಕಡೆಗೆ ವಾಲಿತ್ತು.

---

2 ಜನನಕ್ರಮದಲ್ಲಿ ಉಳಿದ ಮಕ್ಕಳ ಹೆಸರಿನ್ನಿಲ್ಲಿ ಕೊಟ್ಟಿದೆ: ಜೇಮ್ಸ್ (೧೭೬೫–೧೮೧೯), ಎಡ್ವರ್ಡ್ (೧೭೬೭–೧೮೫೨), ಹೆನ್ರಿ ೧೭೭೧–೧೮೫೦), ಕಸಾಂಡ್ರ (೧೭೭೩–೧೮೪೫), ಫ್ರಾನ್ಸಿಸ್ (೧೭೭೪–೧೮೬೫), ಚಾರ್ಲ್ಸ್ (೧೭೭೯–೧೮೫೨). 3 ಎಡ್ವರ್ಡ್ ಒಬ್ಬನಿಗೇ ಹನ್ನೆರಡು ಮಂದಿ ಮಕ್ಕಳಿದ್ದರಂತೆ. ಜೇಮ್ಸ್, ಎಡ್ವರ್ಡ್ ಮತ್ತು ಚಾರ್ಲ್ಸ್ ಅವರ ಮಕ್ಕಳನ್ನು ನೋಡಿಕೊಳ್ಳುವ ಹೊಣೆಗಾರಿಕೆ ಅಕ್ಕ ತಂಗಿಯರ ಪಾಲಿಗೆ ಬಿದ್ದಿತ್ತಂತೆ. ಜೇಮ್ಸನ ಹೆಂಡತಿ ಎರಡು ವರ್ಷದ ಅನ್ನಾಳನ್ನು ಬಿಟ್ಟು ತೀರಿಕೊಂಡಾಗ ಆ ಮಗುವನ್ನು ನೋಡಿಕೊಳ್ಳುವ ಹೊಣೆ ತಂಗಿಯ ಮೇಲೆಯೇ ಬಿತ್ತು.

ಜೇನ್ ತನ್ನ ಮೊದಲ ಇಪ್ಪತ್ತು ವರ್ಷಗಳನ್ನು ಸ್ಟಿವೆಂಟನ್ ಹಳ್ಳಿಯಲ್ಲಿ ಕಳೆದಳು. ನಗರದ ಹೊಗೆ ಧೂಳುಗಳಿಂದ ಗಲಭೆ ಗಲಿಬಿಲಿಗಳಿಂದ, ಹೋರಾಟ ಮೇಲಾಟಗಳ ತಿಕ್ಕಾಟಗಳಿಂದ, ದ್ವೇಷಾಸೂಯೆ ವೈಷಮ್ಯಗಳಿಂದ ಕೋಪತಾಪ ಸಂತಾಪಗಳಿಂದ ಕದಡಿ ಬಗ್ಗಡವಾಗದ ಪ್ರಶಾಂತ ವಾತಾವರಣದಲ್ಲಿ ಅವಳು ತನ್ನ ಹ್ರಸ್ವಜೀವನದ ಅರ್ಧ ಭಾಗ ವನ್ನು ಕಳೆದಳು. ದಿನ ಬೆಳಗಾದರೆ ವ್ಯಾಸಂಗ,4 ವ್ಯಾಸಂಗ ಬೇಸರವಾದಾಗ ಮನೆಯವ ರೊಡನೆ ವಿಚಾರ ವಿಮರ್ಶೆ, ಯಾರೂ ಬಳಿಯಿಲ್ಲದಾಗ ಅಧ್ಯಯನ ಮಂದಿರದ ಏಕಾಂತತೆ ಯಲ್ಲಿ ಚಿಂತನ ಮಂಥನ ಮತ್ತು ಗ್ರಥನ—ಇದು ಅವಳ ನಿತ್ಯಜೀವನದ ಪರಿಪಾಠ ವಾಗಿತ್ತು. ಆ ಹೊತ್ತಿಗಾಗಲೆ ಸ್ವಿಫ್ಟ್, ಡೀಫೊ, ಗೋಲ್ಡ್‌ಸ್ಮಿತ್, ರಿಚರ್ಡ್‌ಸನ್, ಕುಮಾರಿ ಬರ್ನ್ನಿ, ಕುಮಾರಿ ಎಡ್ಜ್‌ವರ್ತ್, ಶ್ರೀಮತಿ ರ್‍ಯಾಡ್‌ಕ್ಲಿಫ್ ಮೊದಲಾದ ಪ್ರತಿಭಾವಂತ ಸಾರಸ್ವತಭಕ್ತರು ಕಾದಂಬರಿಯ ತೇರನ್ನು ಬಹುದೂರ ಎಳೆದು ತಂದಿದ್ದರು. ಕೂಪರ್, ಕ್ರ್ಯಾಬ್ ಮೊದಲಾದ ಕವಿಪುಂಗವರು ಅವಳ ಮೇಲೆ ತುಂಬ ಪ್ರಭಾವ ಬೀರಿದ್ದರು. ಡಾಕ್ಟರ್ ಜಾನ್‌ಸನ್‌ನಂತು ಅವಳ ಅಚ್ಚುಮೆಚ್ಚಿನ ಆದರ್ಶ ವ್ಯಕ್ತಿ ಯಾಗಿದ್ದನು. ಸರ್ ವಾಲ್ಟರ್ ಸ್ಕಾಟ್ ಅವಳ ಸಮಕಾಲೀನನಾಗಿದ್ದು ಪರಸ್ಪರ ಪರಿಚಯ ಪಡೆದಿದ್ದರಲ್ಲದೆ, ಅವನು ಅವಳ ಕಾದಂಬರಿಗಳನ್ನು ಬಹುವಾಗಿ ಮೆಚ್ಚಿ ಕೊಂಡಿದ್ದನು.

ಅಣ್ಣತಮ್ಮಂದಿರಲ್ಲಿ ಅತ್ತಿಗೆ ನಾದಿನಿಯರಲ್ಲಿ ಜೇನ್‌ಳಿಗೆ ನಿರ್ವ್ಯಾಜ ಪ್ರೇಮವಿತ್ತು; ಆದರೆ ಸೋದರಿ ಕಸಾಂಡ್ರಳನ್ನಂತು ಎಂದೂ ಬಿಟ್ಟಿರುತ್ತಿರಲಿಲ್ಲ. ಅವರ ಮನೆಯ ನೆರೆ ಹೊರೆಯಲ್ಲಿ ಶ್ರೀಮತಿ ಲೆಫ್ರಾಯ್ ಎಂಬ ಸುಸಂಸ್ಕೃತ ಮಹಿಳಾಮಣಿಯೊಬ್ಬಳಿದ್ದಳು. ಅವಳಿಗೆ ಜೇನ್‌ಳಲ್ಲಿ ತುಂಬ ಅಕ್ಕರೆ; ಅವಳ ಪ್ರತಿಭಾಮಹಿಮೆ ಶಕ್ತಿಸಾಮರ್ಥ್ಯಗಳು ಆ ಮಹಿಳೆಯ ಸೂಕ್ಷ್ಮಮತಿಗೆ ಮೊದಲೇ ಗೋಚರವಾಗಿದ್ದುವು. ಜೇನ್‌ಳಿಗೆ ಸ್ವಸ್ವರೂಪ ದರ್ಶನ ಮಾಡಿಸಿ ಕೊಟ್ಟು, ಅವಳು ಕೃತಿರಚನೆಗೆ ಕೈಹಾಕುವಂತೆ ಪ್ರೋತ್ಸಾಹಿಸಿದ ಪ್ರಥಮ ಯಶಸ್ಸು ಆ ಮಹಿಳೆಗೆ ಸಲ್ಲಬೇಕು. ಜೇನ್‌ಳಿಗೆ ಹ್ಯಾನ್‌ಕಾರ್ಕ್ ಎಂಬ ವಿಧವೆ ಸೋದರತ್ತೆಯಿದ್ದಳು. ಅವಳ ಮಗಳು ಎಲಿಸಬೆತ್ ಪ್ಯಾರಿಸ್ಸಿನಲ್ಲೊಬ್ಬ ಫ್ರೆಂಚ್ ತರುಣನೊಬ್ಬನನ್ನು ಮದುವೆಯಾಗಿದ್ದಳು. ಗಂಡನನ್ನೂ ತಾಯಿಯನ್ನೂ ಕಳೆದುಕೊಂಡ ಅವಳು ಆಗಾಗ್ಗೆ ಆಸ್ಟಿನ್‌ಳ ಮನೆಗೆ ಬರುತ್ತಿದ್ದು, ಕೊನೆಗೆ ಹೆನ್ರಿ ಆಸ್ಟಿನ್‌ನನ್ನು ಮದುವೆಯಾದಳು. ಅವಳು ಆಗಾಗ್ಗೆ ಜೇನ್ ಮತ್ತು ಕಸಾಂಡ್ರರಿಗೆ ಇಟ್ಯಾಲಿಯನ್ ಮತ್ತು ಫ್ರೆಂಚ್ ಸಾಹಿತ್ಯಕೃತಿಗಳನ್ನು ಓದಿ ಹೇಳುತ್ತಿದ್ದಳು. ಜೇನ್‌ಳ ಏಕಾಂತ ಪ್ರಿಯತೆಯನ್ನು ನೋಡಿ ಅವಳ ಸುತ್ತಮುತ್ತಣ ಜನ ಸೋಜಿಗ ಪಡುತ್ತಿದ್ದರು. ಅವಳು ಅಗ್ಗಿಷ್ಟಿಕೆಯ ಮುಂದೆ ಕುಳಿತು ಚಳಿ ಕಾಯಿಸಿಕೊಳ್ಳುತ್ತ ಮಕ್ಕಳೊಡನೆ ಹರಟೆ ಹೊಡೆಯುತ್ತ ಸೂಜಿ ಹಿಡಿದು ಕೆಲಸ ಮಾಡುತ್ತಿದ್ದಾಗ ಇದ್ದಕ್ಕಿದ್ದಂತೆ ಏನೋ ಮನಸ್ಸಿನಲ್ಲಿ ಮಿಂಚಿದಂತಾಗಿ ನಕ್ಕು ನೆಗೆದು ತನ್ನ ಕೋಣೆಗೆ ಓಡಿಹೋಗಿ ತಾಳ ಹಾಕಿ ಕೊಂಡು ಬರೆವಣಿಗೆಯಲ್ಲಿ ಮಗ್ನಳಾಗುತ್ತಿದ್ದಳು. ಅವಳ ಕಲ್ಪನಾ ಶಕ್ತಿ ಎಷ್ಟು ಜಾಗೃತ

4 ಜೇನ್ ಆಸ್ಟಿನ್ ಶಾಲೆಯಲ್ಲಿ ಬಹಳ ದಿನ ಓದಲಿಲ್ಲ; ಸುಮಾರು ೯–೧೦ ವರ್ಷಗಳ ತನಕ ಮಾತ್ರ ಶಾಲೆಗೆ ಹೋಗುತ್ತಿದ್ದು ಅಕ್ಕನ ಜೊತೆಯಲ್ಲಿ ತಾನೂ ಓದು ಬಿಟ್ಟಳಂತೆ.

ವಾಗಿತ್ತೆಂದರೆ ಅಣ್ಣತಮ್ಮಂದಿರ ಮಕ್ಕಳು ಕತೆ ಹೇಳೆಂದು ಪೀಡಿಸಿದಾಗಲೆಲ್ಲ ಲೀಲಾಜಾಲ ವಾಗಿ ಕೊನೆಗೆ ರಾತ್ರಿ ಸರಿಹೊತ್ತಿನ ತನಕ ಕತೆ ಹೇಳುತ್ತಿದ್ದಳು.

ಆಸ್ಟಿನ್‌ಳ ಕಾರ್ಯಕ್ಷೇತ್ರ ಅತಿ ಸಂಕುಚಿತವಾಗಿದ್ದು, ಅವಳ ಲೋಕಾನುಭವ ಪರಿಮಿತವಾಗಿತ್ತೆಂಬುದು ನಿಜ. ಆದರೆ ಅವಳಿದ್ದ ಸಂಕುಚಿತ ವಲಯದಲ್ಲಿಯೆ ಅವಳ ಪ್ರತಿಭಾ ವಿಕಾಸಕ್ಕೆ ಕಲಾಪರಿಣತೆಗೆ ಸಾಕಷ್ಟು ಪ್ರೋತ್ಸಾಹಾವಕಾಶಗಳು ದೊರೆತುವು. ಅವಳನ್ನು ತೀರ ಹತ್ತಿರದಿಂದ ಬಲ್ಲ ಜನ, ಅವಳ ಬರೆವಣಿಗೆಯನ್ನು[5] ಓದಿದ ಸಹೃದಯರು ಅವಳ ಕಲ್ಪನಾಶಕ್ತಿ ಸಾಮರ್ಥ್ಯಗಳನ್ನು ಪ್ರಶಂಸಿಸಿ ಕಾದಂಬರಿ ಬರೆಯುವಂತೆ ಪ್ರಚೋದಿಸಿದರು. ಹೀಗಾಗಿ ತನ್ನ ೧೮-೧೯ನೆಯ ವಯಸ್ಸಿನಲ್ಲಿಯೆ ಅವಳು ಪತ್ರ ಲೇಖನ ರೂಪದಲ್ಲಿ ಸೆನ್ಸ್ ಮತ್ತು ಸೆನ್ಸಿಬಿಲಿಟಿ ಎಂಬ ಗ್ರಂಥವನ್ನು ಬರೆದಳು. ತನ್ನ ಪ್ರಸಿದ್ಧ ಕಾದಂಬರಿಯಾದ ಪ್ರೈಡ್ ಅಂಡ್ ಪ್ರಿಜುಡಿಸ್ (ಹಮ್ಮು-ಬಿಮ್ಮು) ಗ್ರಂಥವನ್ನು ೨೧ನೆಯ ವಯಸ್ಸಿನಲ್ಲಿ ಬರೆದು ಮುಗಿಸಿದಳು. ಅದು ಮುಗಿದಾಗ ಅವಳದಕ್ಕೆ ಕೊಟ್ಟ ಹೆಸರು 'ಫಸ್ಟ್ ಇಂಪ್ರೆಷನ್ಸ್.'[6] ಮರುವರ್ಷವೆ ಎಂದರೆ ೧೭೯೭ ರಲ್ಲಿ ಸೆನ್ಸ್ ಅಂಡ್ ಸೆನ್ಸಿಬಿಲಿಟಿ ಎಂಬ ಕಾದಂಬರಿಯನ್ನು ತಿದ್ದಿ ಅದಕ್ಕೆ ಹೊಸ ರೂಪವನ್ನು ಕೊಟ್ಟಳು. ೧೭೯೮ ರಲ್ಲಿ ನಾರ್ತ್ಯಾಂಗರ್ ಆಬ್ಬೆ[7] ಎಂಬ ವಿಡಂಬನಾತ್ಮಕವಾದ ಮೂರನೆಯ ಕಾದಂಬರಿಯನ್ನು ಬರೆದಳು. ಮೊದಲ ಕಾದಂಬರಿ ಮುಗಿದ ಕೂಡ ಅವಳ ತಂದೆ ಓದಿ ನೋಡಿ ಅದನ್ನು ಪ್ರಕಟಿಸುವ ಉತ್ಸಾಹದಿಂದ ಪ್ರಕಟಣಕಾರರಿಗೆ ಪತ್ರ ಬರೆದು, ಅದನ್ನು ಅಚ್ಚು ಹಾಕಿಸಲು ಖರ್ಚೆಷ್ಟಾಗುತ್ತದೆಂದು ವಿಚಾರಿಸಿದನಂತೆ ಆದರೆ ಅವರಿಂದ ಸಾಕಷ್ಟು ಪ್ರೋತ್ಸಾಹ ದೊರಕಲಿಲ್ಲ. ಬಹಳ ದಿನಗಳ ತನಕ ಆ ಪುಸ್ತ ಗಳ ಪ್ರಕಟಣೆ ಕಾರ್ಯಗತವಾಗಲಿಲ್ಲ. ಅವನ್ನು ಮತ್ತೆ ಮತ್ತೆ ಕಸಾಂದ್ರಳ ಮತ್ತು ತನ ನೆಂಟರ ಮುಂದೆ ಓದಿ, ಆವಶ್ಯಕತೆ ತೋರಿದಾಗಲೆಲ್ಲ ತಿದ್ದುತ್ತಿದ್ದಳು. ಅದರ ಬ ಅವಳಿಗೆ ತುಂಬ ಆತ್ಮಪ್ರತ್ಯಯವಿತ್ತು. ತಂದೆಯ ಮರಣಾನಂತರ ಹೆನ್ರಿ ಪ್ರಕಟಣೆ ಕಾರ್ಯದಲ್ಲಿ ತಂಗಿಗೆ ನೆರವಾದನು.

ಬರಬರುತ್ತ ಜೇನಳ ಅನುಭವಕ್ಷೇತ್ರ ವಿಶಾಲವಾಗುತ್ತಿತ್ತು. ತಾಯಿಯ ಕಡೆ ನೆಂಟರಾದ ಲೇ ಪೆರ್ರ್ಯಾಟ್ಸ್ ಮತ್ತು ಕೂಪರ್ಸ್, ಜೊತೆಗೆ ತನ್ನ ಗೆಳೆಯರಾದ ಲಾಯ

---

5 ಅವಳಿಗೆ ಹದಿನಾರು ವರ್ಷ ತುಂಬುವುದರೊಳಗೆ ಅನೇಕ ಕಥೆಗಳನ್ನು ಬರೆದಿದ್ದಳೆಂ ಜೆ. ಇ. ಆಸ್ಟಿನ್‌ಲೇ ಬರೆದ 'ಮೆಮಾಯಿರ್' ಎಂಬ ಗ್ರಂಥದಿಂದೆ ಗೊತ್ತಾಗುತ್ತದೆ. ನಾಟಕಗಳನ್ನೊಳಗೊಂಡ ಎರಡು ಕೈಬರಹದ ಪ್ರತಿಗಳೂ ಸಿಕ್ಕಿವೆ. 6 ಇದನ್ನು 1796ನೆ ಅಕ್ಟೋಬರ್ ತಿಂಗಳಲ್ಲಿ ಆರಂಭಿಸಿ, 1797ನೆಯ ಅಗಸ್ಟ್ ತಿಂಗಳಲ್ಲಿ ಬರೆದು ಮುಗಿಸಿದಳ (Jane Austen: Her life and letters by R. A. Austen Leigh a W. Austen-Leigh) P 96. 7 ಶ್ರೀಮತಿ ರ್‍ಯಾಡ್ ಕ್ಲಿಫ್ ಬರೆದ ಕಾದಂಬರಿಗಳ ಮ ವಿಡಂಬನ ರೂಪದಲ್ಲಿ ಬರೆದ ಕಾದಂಬರಿ. 8 ಅದರ ಮೊದಲ ಹೆಸರು 'ಸುಸಾನ್ಸ್.' ಸುಮಾ 1803ರಲ್ಲಿ ಅದನ್ನು ಮತ್ತೆ ತಿದ್ದಿ, ಹೆನ್ರಿಯ ನೆರವಿನಿಂದ ಲಂಡನ್‌ನ ಕ್ರಾಸ್‌ಬಿ ಎಂಬ ಪ್ರಕ ಕಾರನಿಗೆ ಹಸ್ತಪ್ರತಿಯನ್ನು ಮಾರಿಬಿಟ್ಟಳು. ಆದರೆ ಅದನ್ನವನು ಪ್ರಕಟಿಸಲೇ ಇಲ್ಲ. 9 ಲಂಡ ಪ್ರಕಟಣಕಾರ ಕಾಡೆಲ್ ಎನ್ನುವವನೊಬ್ಬ.

ಮತ್ತು ಬಿಗ್ಸ್ ಸೋದರ ಸೋದರಿಯರ ಸಂಪರ್ಕ ಕ್ರಮೇಣ ವೃದ್ಧಿಯಾಯಿತು. ತನ್ನ ಅಣ್ಣ ಎಡ್ವರ್ಡ್ ಗಾಡ್‌ಮರ್‌ಷ್ಯಾಮ್ ಹಳ್ಳಿಯ ಥಾಮಸ್‌ನೈಟ್ ಎಂಬ ಶ್ರೀಮಂತನಿಗೆ ದತ್ತುವಾಗಿ ಅವನು ತೀರಿಕೊಂಡ ಮೇಲೆ ಅವನ ಆಸ್ತಿಗೆ ಹಕ್ಕುದಾರನಾಗಿ ಅಲ್ಲಿಯೇ ಉಳಿದಿದ್ದನು. ಜೇನ್ ಆಗಾಗ್ಗೆ ಅವನ ಮನೆಗೆ ಹೋಗಿಬರುತ್ತಿದ್ದಳು. ಅದೇ ಸಮಯದಲ್ಲಿ ಸುತ್ತಮುತ್ತಣ ಊರುಗಳಲ್ಲಿ ನಡೆಯುತ್ತಿದ್ದ ನೃತ್ಯಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದಳು. ೧೭೯೭ರಲ್ಲಿ ಜೇನಳ ಕುಟುಂಬದಲ್ಲಿ ದುಃಖಕರವಾದ ಘಟನೆಯೊಂದು ನಡೆಯಿತು. ಕಸಾಂದ್ರಳನ್ನು ಮದುವೆಯಾಗುವುದೆಂದು ಗೊತ್ತಾಗಿದ್ದ ಥಾಮಸ್ ಫೌಲ್ ತೀರಿಕೊಂಡನು. ಮೊಟ್ಟಮೊದನೆಯ ಸಾರಿ ಅವಳು ತನ್ನ ಜೀವನದಲ್ಲಿ ಅನುಭವಿಸಿದ ದುಃಖದ ಪ್ರಸಂಗವದು.

ಸುಮಾರು ೧೮೦೦ ರ ಹೊತ್ತಿಗೆ ಜಾರ್ಜ್ ಆಸ್ಟಿನ್ ನಿವೃತ್ತಿಯಾಗಿ ಬಾತ್ ಎಂಬ ಊರಲ್ಲಿ ತನ್ನ ಕುಟುಂಬದೊಡನೆ ನೆಲಸಿದನು! ಮನಸ್ಸಿಲ್ಲದ ಮನಸ್ಸಿನಿಂದ ಜೇನ್ ಸ್ಟಿವೆಂಟನ್ ಬಿಡಬೇಕಾಯಿತು. ನಿಸರ್ಗದ ಮಡಿಲಲ್ಲಿ ಹಳ್ಳಿಯ ಪ್ರಶಾಂತ ಜೀವನದ ಸೊಬಗನ್ನು ಸವಿದಿದ್ದ ಜೇನಳಿಗೆ ನಗರದ ಗಲಿಬಿಲಿ ಅಸಹ್ಯವಾಯಿತು. ಇದೇ ಸಂದರ್ಭದಲ್ಲಿ ಅವಳು ತನ್ನ ಕುಟುಂಬದೊಡನೆ ಡೆವೊನ್‌ಷೈರಿಗೆ ಹೋಗಿದ್ದಾಗ ಅಲ್ಲೊಬ್ಬ ತರುಣನಲ್ಲನು-ರಕ್ತೆಯಾದಳು. ಆದರೆ ಅವನು ಕೂಡಲೆ ಅಕಾಲಮರಣವನ್ನೈದಿದನು.[10] ಅಕ್ಕನಿಗೊದಗಿದ ದುಃಖ, ಸ್ಥಾನಪಲ್ಲಟ ಮತ್ತು ಪ್ರಣಯಭಂಗ—ಇವುಗಳಿಂದಾಗಿ ಅವಳ ಮನಸ್ಸು ಕದಡಿಹೋಗಿ ಬಹಳ ದಿನಗಳ ತನಕ ಲೇಖಣಿಯನ್ನೇ ಹಿಡಿಯಲಿಲ್ಲ. ಸುಮಾರು ಅದೇ ಸಮಯದಲ್ಲಿ ತನ್ನ ಗೆಳತಿ ಶ್ರೀಮತಿ ಲೆಫ್ರಾಯ್ ಮತ್ತು ತಂದೆ ಜಾರ್ಜ್ ತೀರಿಕೊಂಡರು.[11] ಆತ್ಮಸಂಬಂಧವಾದ ಪ್ರಣಯಭಂಗವನ್ನು ಆದಷ್ಟು ಜಾಗ್ರತೆ ಮರೆತುಬಿಟ್ಟಳು. ಅವಳೆಂದೂ ಅತಿಯಾದ ಭಾವಾತಿರೇಕಗಳಿಗೆ ಬಲಿಯಾದವಳಲ್ಲ.[12] ತಂದೆಯ ಮರಣಾನಂತರ ಜೇನ್‌ಳ ಕುಟುಂಬ ಬಾತ್ ಬಿಟ್ಟು ಸೌತಾಂಪ್ಟನ್ ಊರು ಸೇರಿತು. ಅಲ್ಲಿ ಅವರು ಎರಡು ಮೂರು ವರ್ಷಗಳಿದ್ದರು. ವಿಂಚೆಸ್ಟರ್ ಬಳಿಯ ಚಾಟನ್ ಹಳ್ಳಿಯಲ್ಲಿ ನೆಲೆ ನಿಲ್ಲಬಹುದೆಂದು ಎಡ್ವರ್ಡ್ ತಾಯಿಗೆ ಹೇಳಲು, ಅವರ ಕುಟುಂಬ ೧೮೦೯ರಲ್ಲಿ ಅಲ್ಲಿಗೆ ಬಂದು ನೆಲಸಿತು.

ಚಾಟನ್ ಮನೆ ಸುಂದರವಾದೊಂದು ಉಪವನದ ಮೂಲೆಯಲ್ಲಿತ್ತು. ಆ ಮನೆಯ ಮುಂದೆಯೇ ವಿಂಚೆಸ್ಟರ್‌ಗೆ ಹೋಗುವ ರಾಜಮಾರ್ಗವಿತ್ತು. ಸ್ಟಿವೆಂಟನ್ ಹಳ್ಳಿಯಂತು ಅಲ್ಲಿಗೆ ಬಹಳ ಹತ್ತಿರದಲ್ಲಿತ್ತು. ನಗರದ ಗಡಿಬಿಡಿಯಿಂದ ಪಾರಾಗಿ ಅಲ್ಲಿಗೆ ಬಂದಕೂಡಲೆ ಜೇನ್‌ಳ ಶರೀರದಲ್ಲಿ ನವಚೈತನ್ಯ ಸಂಚಾರವಾದಂತಾಯಿತು. ತಾಯಿ ಮಡಿಲನ್ನು ಸೇರಿದಂತಾಯಿತು. ಅಲ್ಲಿಗೆ ಅಣ್ಣ ತಮ್ಮಂದಿರ ಮಕ್ಕಳು ಆಗಾಗ್ಗೆ ಬಂದು ಹೋಗಿ

---

[10] ಅನಂತರ ಹ್ಯಾರಿಸ್ ಬಿಗ್ ವಿದರ್ ಎಂಬುವನೊಡನೆ ಮದುವೆಯ ಮಾತುಕತೆ ನಡೆದು, ಕೊನೆಗೆ ಅದೂ ಕಿತ್ತು ಹೋಯಿತಂತೆ (Life pp 89—90) [11] 1805 ರ ಜನವರಿ. [12] ಜೇನ್ ಮತ್ತು ಎಲಿಸಬೆತ್‌ರ ಪ್ರಣಯಜೀವನದಲ್ಲಿ ಕಾದಂಬರಿಕಾತಿಯ ಆತ್ಮವೃತ್ತವನ್ನು ಗಮನಿಸಬಹುದು.

ಅತ್ತೆಯರೊಡನೆ ತುಂಬ ವಿಶ್ವಾಸ ಬೆಳೆಸಿದರು. ಅನ್ನಾಳನ್ನು ಕಂಡರಂತು ಅತ್ತೆಯರಿಗೆ ಪ್ರಾಣ. ಈ ಪ್ರೇಮಮಯ ಪ್ರಶಾಂತ ವಾತಾವರಣದಲ್ಲಿ ಮತ್ತೆ ಅವಳ ಕಾದಂಬರಿ ಕಲೆಗೆ ವಸಂತೋದಯ ಪ್ರಾಪ್ತವಾದಂತಾಯಿತು. ಇದೇ ಸಂದರ್ಭದಲ್ಲಿ ಅವಳು ಆಗಾಗ್ಗೆ ಹೆನ್ರಿಯನ್ನು ನೋಡುವ ಸಲುವಾಗಿ ಲಂಡನ್‌ಗೆ ಹೋಗಿ ಬರುತ್ತಿದ್ದುದರಿಂದ ಅವಳ ವ್ಯವಹಾರಜ್ಞಾನ ಮತ್ತಷ್ಟು ಗಾಢವಾಯಿತು. ಹೀಗೆ ಪರಿಪಾಕಗೊಂಡ ಅನುಭವದ ಪರಿಣಾಮವಾಗಿ ಸುಮಾರು ಐದು ವರ್ಷದ ಅವಧಿಯಲ್ಲಿ (೧೮೧೧–೧೮೧೬) ಮ್ಯಾನ್ಸ್ ಫೀಲ್ಡ್ ಪಾರ್ಕ್, ಎಮ್ಮ ಮತ್ತು ಪರ್ಸುಯೇಷನ್—ಈ ಮೂರು ಕಾದಂಬರಿಗಳು ಸಿದ್ಧವಾದುವು. ಜೇನ್ ತುಂಬ ಗುಟ್ಟಿನ ಹೆಣ್ಣು. ತಾನು ಮತ್ತೆ ಕಾದಂಬರಿ ಸೃಷ್ಟಿಗೆ ಕೈ ಹಾಕಿದ ಸಂಗತಿಯನ್ನು ಯಾರಿಗೂ ಬಹಳ ದಿನಗಳ ತನಕ ಆ ಗುಟ್ಟನ್ನು ತಿಳಿಸಿರಲಿಲ್ಲ. ಅವಳ ಪುಸ್ತಕಗಳ ಪ್ರಕಟಣೆಗೆ ಕಾರಣನಾದ ಅಣ್ಣ ಹೆನ್ರಿಗೂ ಕೂಡ ಬಿಟ್ಟುಕೊಟ್ಟಿರಲಿಲ್ಲ. ಕಾದಂಬರಿಗಳನ್ನು ಬರೆದು, ಮೂರು ನಾಲ್ಕು ಬಾರಿ ತಿದ್ದಿ ತನ್ನ ಮನಸ್ಸಿಗೆ ಸಮಾಧಾನವಾಗುವ ತನಕ ಯಾರಿಗೂ ಅದರ ಸುಳಿವು ಕೊಡುತ್ತಿರಲಿಲ್ಲ.

ಈ ಮೂರು ಕಾದಂಬರಿಗಳು ಸಿದ್ಧವಾಗುತ್ತಿದ್ದಾಗಲೆ ಸೆನ್ಸ್ ಮತ್ತು ಸೆನ್ಸಿಬಿಲಿಟಿ ಹಾಗೂ ಪ್ರೈಡ್ ಅಂಡ್ ಪ್ರಿಜುಡಿಸ್ ಗ್ರಂಥಗಳು ಅಚ್ಚಿನ ಮನೆ ಸೇರಿ, ಕೆಲವು ದಿನಗಳಲ್ಲಿಯೆ ಪ್ರಕಟವಾದುವು.[13] ಆದರೆ ಅವುಗಳ ಕರ್ತೃತ್ವದ ವಿಷಯದಲ್ಲಿ ಬಹುದಿನಗಳ ತನಕ ಜನಮನಸ್ಸಿನಲ್ಲಿ ಸಂದೇಹವುಳಿಯಿತು. ಅವಳು ಪುಸ್ತಕಗಳ ಮೇಲೆ ತನ್ನ ಹೆಸರನ್ನು ಅಚ್ಚುಹಾಕಿಸಿರಲಿಲ್ಲ. ಆದರೆ ತಂಗಿಯ ವಿಷಯದಲ್ಲಿ ವಿಶೇಷಾಭಿಮಾನವಿದ್ದ ಹೆನ್ರಿ ಕೊನೆಗೆ ಲೇಖಕಿಯ ಹೆಸರನ್ನು ಪ್ರಕಟಿಸಿದನು. ಮೊದಮೊದಲು ಸಾಮಾನ್ಯ ಜನರಿಗೆ ಆ ಕೃತಿಗಳು ಪ್ರಿಯವಾಗದೆ ಹೋದರೂ ಸ್ಕಾಟ್‌ನಂಥ ಪ್ರಸಿದ್ಧ ಕಾದಂಬರಿಕಾರ ಅವುಗಳನ್ನು ಮನಸಾರೆ ಹೊಗಳಿದನು.

ಕ್ರೂರವಾದ ರೋಗದಿಂದ ನರಳುತ್ತಿದ್ದ ಅಣ್ಣ ಹೆನ್ರಿಯನ್ನುಪಚರಿಸುವ ಸಲುವಾಗಿ ಜೇನ್ ತನ್ನ ಕೊನೆಗಾಲದ ಕೆಲವು ದಿನ ಲಂಡನ್‌ನಲ್ಲಿರಬೇಕಾಯಿತು. ಅವನ ಆರೋಗ್ಯದ ಬಗ್ಗೆ ಅವಳು ತುಂಬ ಕಳವಳಗೊಂಡಳು. ಅಷ್ಟರಲ್ಲಿ ಅವನ ವ್ಯಾಪಾರೋದ್ಯಮವೂ ಕುಸಿದುಹೋದುದರಿಂದ ಸರ್ಕಾರ ಅವನನ್ನು ದಿವಾಳಿಯೆಂದು ಘೋಷಿಸಿತು. ಈ ವ್ಯಥೆಯಲ್ಲಿ ಜೇನ್ ಸೊರಗಿ ಹೋದಳು; ದಿನೇ ದಿನೇ ದೇಹ ಕೃಶವಾಯಿತು; ಅದೆಲ್ಲ ಕ್ಷಯರೋಗದ ಹಾವಳಿಯೆಂದು ಗೊತ್ತಾಯಿತು.

---

[13] ಆಸ್ಟಿನ್ ಕಾದಂಬರಿಗಳು ಮೊಟ್ಟಮೊದಲು ಈ ಕಾಲಕ್ರಮದಲ್ಲಿ ಪ್ರಕಟವಾದುವು. ಸೆನ್ಸ್ ಅಂಡ್ ಸೆನ್ಸಿಬಿಲಿಟಿ 1811; ಪ್ರೈಡ್ ಅಂಡ್ ಪ್ರಿಜುಡಿಸ್ 1813; ಮ್ಯಾನ್ಸ್ ಫೀಲ್ಡ್ ಪಾರ್ಕ್ 1814; ಎಮ್ಮ 1816; ನಾರ್ತ್ಯಾಂಗರ್ ಅಬ್ಬೆ ಮತ್ತು ಪರ್ಸುಯೇಷನ್ (ಅವಳು ಸತ್ತನಂತರ) 1817; ಅಷ್ಟೇನೂ ಪ್ರಸಿದ್ಧವಲ್ಲದ ಉಳಿದ ಗ್ರಂಥಗಳು: ದಿ ಲೆಟರ್ 1894; ಲೌವ್ ಅಂಡ್ ಫ್ರೆಂಡ್‌ಷಿಪ್ 1922; ಲೇಡಿ ಸುಸನ್ ಮತ್ತು ಸ್ಯಾಂಡಿಟನ 1925; ದಿ ವಾಟ್ಸನ್ಸ್ 1927.

ಔಷಧೋಪಚಾರಕ್ಕಾಗಿ ಅವಳನ್ನು ವಿಂಚೆಸ್ಟರ್‌ಗೆ ಸಾಗಿಸಲಾಯಿತು. ಅಲ್ಲಿ ಏನೂ ಗುಣ ಕಾಣಲಿಲ್ಲ. ೧೮೧೭ನೆಯ ಜುಲೈ ೧೮ರಂದು ಅವಳು ಇಹಲೋಕದಿಂದ ಮರೆಯಾದಳು.[14]

೨

ಜೇನ್ ಆಸ್ಟಿನ್‌ಳ ಈ ಸಂಕ್ಷಿಪ್ತ ಜೀವನ ವೃತ್ತಾಂತದಿಂದ ಅವಳ ಕೌಟುಂಬಿಕ ಪ್ರೇಮ, ಕವಿ ಸಹಜವಾದ ಪ್ರತಿಭೆ, ಶ್ರದ್ಧಾಪೂರ್ವವಾದ ಸತತಾಭ್ಯಾಸ, ಪರಿಮಿತ ವ್ಯಾಪ್ತಿಯ ಲೋಕಾನುಭವ, ಹಾಗೂ ಮಾನವ ಸ್ವರೂಪ ಜ್ಞಾನ, ಅವಳ ನಿಷ್ಠೆ ಪ್ರಾಮಾಣಿಕತೆಗಳು ವ್ಯಕ್ತವಾಗುತ್ತವೆ. ಅವಳು ರೊಮಾಂಟಿಕ್ ಯುಗದ ಪ್ರಾರಂಭ ಕಾಲದಲ್ಲಿ, ವರ್ಡ್ಸ್‌ವರ್ತ್, ಷೆಲ್ಲಿ, ಬೈರನ್ ಮೊದಲಾದ ಕವಿಗಳು ಬದುಕಿದ್ದ ಸಮಯ ದಲ್ಲಿ ಜೀವಿಸಿದ್ದರೂ ಆ ಯುಗದ ಗಾಳಿ ಇವಳ ಮೇಲೆ ಬೀಸುವುದಿಲ್ಲ.[15] ಆ ಯುಗದ ಪ್ರೇರಕಶಕ್ತಿಯಾಗಲಿ ಮನೋಧರ್ಮವಾಗಲಿ ಅವಳನ್ನು ಸೋಕುವುದಿಲ್ಲ; ಫ್ರಾನ್ಸಿನ ಮಹಾ ಕ್ರಾಂತಿಯ ಬೇಗೆ ಅವಳಿಗೆ ತಟ್ಟುವುದಿಲ್ಲ. ಹಿಂದೆ ನೋಡಿದಂತೆ ಅವಳ ಪ್ರಪಂಚ ಭೌಗೋಲಿಕವಾಗಿಯಾಗಲಿ ಸಾಮಾಜಿಕವಾಗಿಯಾಗಲಿ ಅತಿ ಸಂಕುಚಿತವಾದುದು. ಅವಳು ಸೃಷ್ಟಿಸಿರುವ ಪಾತ್ರಗಳಂತು ಪರಿಚಯದ ಕ್ಷೇತ್ರವನ್ನು ಬಿಟ್ಟಲುಗುವುದಿಲ್ಲ; ಎಂದಾದರೊಮ್ಮೆ ಲಂಡನ್ ನಗರಕ್ಕೆ ಹೋಗಿ ಕ್ಷಿಪ್ರದಲ್ಲಿಯೆ ಹಿಂದಿರುಗುತ್ತಾರೆ. ಅವಳ ಪಾತ್ರಗಳೆಲ್ಲ ಮಧ್ಯಮವರ್ಗದಿಂದ ಆರಿಸಿಕೊಂಡುವು; ಶ್ರೀಮಂತ ಮನೆತನಕ್ಕಾಗಲಿ ಬಡಕುಟುಂಬಕ್ಕಾಗಲಿ ಸೇರಿದ ಜನ ಅವಳ ಕೃತಿಗಳೆಲ್ಲಿಯೂ ಕಾಣಸಿಗರು. ಹಾಗೆಯೆ ಸಾಹಸ ಪ್ರಿಯರಾದ ಯೋಧರರಿಗೆ, ವಿಷಯಲಂಪಟರಿಗೆ, ಶಠರಿಗೆ, ಖಲರಿಗೆ, ದರೋಡೆ ಕೋರರಿಗೆ, ಜೂಜುಗಾರರಿಗೆ, ನೀತಿಭ್ರಷ್ಟರಿಗೆ ಅವಳ ಸಾಮ್ರಾಜ್ಯದಲ್ಲಿ ಸ್ವಲ್ಪವೂ ಸ್ಥಳವಿಲ್ಲ. ಅವಳು ಸೃಷ್ಟಿಸಿರುವ ಪಾತ್ರಗಳಲ್ಲಿ ವೈವಿಧ್ಯವಿದೆ. ಆದರೆ ಅದಕ್ಕೊಂದು ಮಿತಿ ಯುಂಟು. "ಸುಶೀಲೆಯಾದ ನಾಯಿಕೆ, ಸುಂದರನಾದ ನಾಯಕ, ಹುಡುಗಾಟಿಕೆಯ ಬೆಡಗುಗಾತಿ, ಜನಮನಸ್ಸನ್ನು ಮರುಳುಗೊಳಿಸುವ ಸ್ವೇಚ್ಛಾಚಾರಿ, ಪ್ರಾಪಂಚಿಕಾ ಸಕ್ತಿಯಲ್ಲನುರಕ್ತನಾದ ಪಾದ್ರಿ—ಇವರನ್ನಿಲ್ಲಿ ಕಾಣಬಹುದೆ ಹೊರತು ಖಲಸ್ವಭಾವದ ಶ್ರೀಮಂತನಿಗಾಗಲಿ ನೀಚರಾಕ್ಷಸನಿಗಾಗಲಿ ಇಲ್ಲಿ ಸ್ಥಳವಿಲ್ಲ."[16]

ಆಸ್ಟಿನ್ ಕೃತಿಗಳಲ್ಲಿ ಭಾವಾವೇಶ ಪ್ರದರ್ಶನಕ್ಕೆ ಸ್ವಲ್ಪವೂ ಅವಕಾಶವಿಲ್ಲ; ಅತಿರೇಕ ಅವಳ ಸ್ವಭಾವಕ್ಕೆ ತೀರ ವಿರೋಧವಾದುದು. ಇಲ್ಲಿ 'ಮದಮಾತ್ಸರ್ಯ ದ್ವೇಷ ದಾಷ್ಟ್ರ್ಯ

14 ಅವಳ ತಾಯಿ ಶ್ರೀಮತಿ ಆಸ್ಟಿನ್ ತನ್ನ ೮೯ನೆಯ ವಯಸ್ಸಿನಲ್ಲಿ ತೀರಿಕೊಂಡಳು.

15 Jane Austen writes as one who is entirely ignorant of the growing force of Romanticism, which already has spread its power around her ; or rather she holds herself aloof, meeting its fascination with ironical immunity. (P 965: A History of English Literature by Louis Cazamian) 16 P 15: Jane and Her Country-House Comedy by W. H. Helm.

ಮೊದಲಾದ ಆಸುರೀಗುಣಗಳ ಹಾಹಾಕಾರವಿಲ್ಲ. ಇಲ್ಲಿ ಚಿತ್ರಿತವಾಗಿರುವ ಪ್ರೇಮ ಸಹ ಆಂದೋಲನಕಾರಿಯಲ್ಲ; ಪ್ರಶಾಂತ ನಿರ್ಮಲವಾದುದು. ಮನೆಮಾರು ಊರುಕೇರಿ ಗಳನ್ನು ಕೊಳ್ಳೆಹೊಡೆಯುವ ಪಾಳೆಯಗಾರರಾಗಲಿ, ಚಕ್ರಾಧಿಪತ್ಯಗಳನ್ನುರುಳಿಸುವ ಚಕ್ರೇಶ್ವರರಾಗಲಿ, ಕುಡುವುಬ್ಬು ಕೊಂಕು ಮೂಗುಗಳಿಂದ ಪ್ರಪಂಚವಿಜಯಿಗಳನ್ನು ಗೆದ್ದು ವಶಪಡಿಸಿಕೊಳ್ಳುವ ರಮಣಿಯರಾಗಲಿ ಇಲ್ಲಿಲ್ಲ. ಇಲ್ಲಿಯ ಜನ ಶಾಂತವಾಗಿ ಇಸ್ಪೀಟಾಟ ಆಡುತ್ತಾರೆ, ನೃತ್ಯ ಮಂದಿರದಲ್ಲಿ ಕುಣಿಯುತ್ತಾರೆ, ಮಿತವಾಗಿ ಕುಡಿಯು ತ್ತಾರೆ, ಹೆಣ್ಣು ಗಂಡುಗಳು ಹೆಚ್ಚು ಆರ್ಭಟವಿಲ್ಲದ ಪ್ರಣಯ ಸಾಧನೆಯಲ್ಲಿ ಸಿದ್ಧಿ ಪಡೆಯುತ್ತಾರೆ. ಹೆಂಗಸರು ಸದ್ಗೃಹಿಣಿಯರಾಗಿ ಅಚ್ಚುಕಟ್ಟಾಗಿ ಗೃಹಕೃತ್ಯವನ್ನು ನಿರ್ವಹಿಸಿ, ಬಿಡುವು ದೊರೆತಾಗ ಅಗ್ಗಿಷ್ಟಿಕೆಯ ಮುಂದೆ ಕುಳಿತು ಹೆಣಿಗೆ ಹಾಕುತ್ತ, ಹರಟೆ ಹೊಡೆಯುತ್ತ, ಪುಸ್ತಕಗಳನ್ನೋದುತ್ತ ಕಾಲ ಕಳೆಯುತ್ತಾರೆ. ಅವರ ನಗುವಿನಲ್ಲಿ ಅಬ್ಬರವಿಲ್ಲ, ಅಟ್ಟಹಾಸವಿಲ್ಲ; ಅವರ ನಡೆನುಡಿಯಲ್ಲಿ ಬಿಂಕ ಬಿಡಗುಗಳಿಲ್ಲ. ಎಲ್ಲಿಯೂ ಪ್ರೇಮ ಮನೆ ಮಠಗಳನ್ನೂ ಸಮಾಜವನ್ನೂ ಕೊಚ್ಚುವ ಹುಚ್ಚುಹೊಳೆಯಾಗಿ ಹರಿಯುವುದಿಲ್ಲ.

ಅವಳು ಕಲಾಕ್ಷೇತ್ರದಲ್ಲೆಂತೊ ಸಾಮಾಜಿಕ ಕ್ಷೇತ್ರದಲ್ಲಿಯೂ ಕ್ರಾಂತಿಕಾರಿಯಲ್ಲದ ಸಂಪ್ರದಾಯ ಶರಣೆ. ಹಳೆಯ ಸಮಾಜವನ್ನು ರೂಪಿಸುವ ಅಥವಾ ನವಸಮಾಜವನ್ನು ನಿರ್ಮಿಸುವ ಗೋಜಿಗೆ ಅವಳು ಹೋಗುವುದಿಲ್ಲ. ಅಷ್ಟಾಗಿ ಅವಳ ಕೃತಿಗಳಲ್ಲಿ ಗಹನವಾದ ಸಾಮಾಜಿಕ ಸಮಸ್ಯೆಗಳಿಗೆ ಪ್ರವೇಶವಿಲ್ಲ. ಇದ್ದದ್ದನ್ನು ಇದ್ದಹಾಗೆ ರಂಗು ಹಚ್ಚದೆ ವಿವರಿಸುವುದೇ ಅವಳ ಸ್ವಭಾವ. ಆಗಿನ ಕಾಲದ ಸಂಪ್ರದಾಯ ಮನೋಧರ್ಮಗಳನ್ನು ಪ್ರತಿಬಿಂಬಿಸುವುದೇ ಅವಳ ಮುಖ್ಯೋದ್ದೇಶ. ಅವಳ ಮುಂದಿರುವ ಕೆಲವೇ ಕೆಲವು ಸಮಸ್ಯೆಗಳಲ್ಲಿ ಅವಿವಾಹಿತ ಕನ್ಯೆಯ ಸಮಸ್ಯೆ ಬಹಳ ಪ್ರಧಾನವಾದುದು. ಸಾಕಷ್ಟು ವಿದ್ಯೆ ಕಲಿತು, ಜೀವನಯಾಪನೆಗಾಗಿ ಸ್ವತಂತ್ರ ವೃತ್ತಿಯನ್ನವಲಂಬಿಸಲವಕಾಶ ಕಲ್ಪಿಸದ ಸಮಾಜದಲ್ಲಿ ಇಂಥ ಸ್ತ್ರೀಯರ ಪಾಡು ನಾಯಿಪಾಡಾಗುತ್ತದೆ. ಅಂಥವರು ತಮ್ಮ ಜೀವನದ ಸರ್ವಾವಸ್ಥೆಗಳಲ್ಲಿಯೂ ಗಂಡಸರ ಕೈಕಾಯಬೇಕಾಗುತ್ತದೆ. ಅಂಥ ಸಮಾಜ ದಲ್ಲಿ ಹೆಣ್ಣು ಮಕ್ಕಳಿಗೆ ಮದುವೆಯಾಗಿ ಗಂಡನ ಮನೆ ಸೇರಿ ಸುಖವಾಗಿ ಬಾಳುವಂತಾದರೆ ತಂದೆ ತಾಯಿಯರಿಗೆ ಅಮರಲೋಕ ಕೈಗೆಟುಕಿದಂತಾಗುತ್ತದೆ; ಇಲ್ಲವಾದರೆ ಅವ ಜೀವನವೆಲ್ಲ ದುಃಖದ ಬೀಡಾಗುತ್ತದೆ. ಹೆಣ್ಣು ಮಕ್ಕಳ ಕೈ ಹಿಡಿಯುವ ಗಂಡಂದಿರಾದರು ಸಾಲಗಾರರಾಗಿರಕೂಡದು, ಜೂಜುಕೋರರಾಗಿರಕೂಡದು, ಬಡಾಯಿಗಾರರಾಗಿ ಬಾರದು, ಲಫಂಗರಾಗಿರಬಾರದು; ಅವರ ಕೈತುಂಬ ರೊಕ್ಕವಿರಬೇಕು, ಸಾಕಷ್ಟು ಆಸ್ತಿಪಾಸ್ತಿಗಳಿರಬೇಕು. ಹೆಣ್ಣುಮಕ್ಕಳು ಅಲ್ಪಸ್ವಲ್ಪ ವಿದ್ಯೆ ಕಲಿತಿರಬೇಕು. ನೃತ್ಯ ಅಭ್ಯಾಸ ಮಾಡಿರಬೇಕು, ಕೊಂಚ ಸಂಗೀತ ತಿಳಿದಿರಬೇಕು. ವಧುಗಳೂ ವಧುಗ ಕಡೆಯವರೂ ಸ್ಪರ್ಧಾಮನೋಭಾವದಿಂದ ವರಾನ್ವೇಷಣೆಗೆ ತೊಡಗುತ್ತಾರೆ. ಆದ ರೊಕ್ಕವಿಲ್ಲದ ಗಂಡು ಅವರ ಲೆಕ್ಕಕ್ಕೂ ಇಲ್ಲ, ಜಮಾಕ್ಕೂ ಇಲ್ಲ. ಅಂದರೆ ಅವರ ಪ್ರೇಮ ವಾಣಿಜ್ಯರೂಪವನ್ನು ತಾಳಿತ್ತೆಂದು ಹೇಳುವಂತಿಲ್ಲ. ರೂಪ ಗುಣ ಸಂಪತ್ತುಗಳ

ಅನುರೂಪನಾದ ವರನನ್ನವರು ಅಪೇಕ್ಷಿಸುತ್ತಿದ್ದರು. ನೀತಿ ಕುಟುಂಬದ, ಸಮಾಜದ ಮತ್ತು ಇಡೀ ಮಾನವ ಜೀವನದ ಅಡಿಗಲ್ಲಾಗಬೇಕೆಂಬುದು ಆಸ್ಟಿನ್‌ಳ ಹೆಬ್ಬಯಕೆ. ಪ್ರಾಪ್ತವಯಸ್ಕರಾದ ತರುಣಿಯರು ತಮಗನುರೂಪರಾದ ತರುಣರನ್ನೊಲಿಸಿಕೊಂಡು ಗೌರವಯುತರಾಗಿ ಬಾಳುವುದರಲ್ಲಿ ಯಾವ ತಪ್ಪೂ ಇಲ್ಲ; ಆದರೆ ಬಣ್ಣದ ಚಿಟ್ಟೆಗಳಂತೆ ಗೊತ್ತು ಗುರಿಯಿಲ್ಲದೆ ಸ್ವೇಚ್ಛೆಯಾಗಿ ಹಾರಾಡುತ್ತ ಸ್ಥಾನಮಾನಗಳ ಮರ್ಯಾದೆ ಯಿಲ್ಲದೆ, ಲಂಗು ಲಗಾಮಿಲ್ಲದೆ ದಾರಿಹೋಕರ ಸೈನಿಕರ ಬೆನ್ನಟ್ಟಿಹೋಗುವ ಚೆಲ್ಲುಗುಳಿ ಕೋರೆಯರು; ಅಂತೆಯೇ ಗೃಹಸ್ಥರ ಮನೆಯ ಹೆಣ್ಣುಗಳನ್ನು ಬಟ್ಟೆಗೆಡಿಸಿ ಮೋಸ ಗೊಳಿಸಿ ಚೊಕ್ಕವಾದ ಒಗೆತನವನ್ನು ಹಾಳುಮಾಡುವ ವಿಷಯಲಂಪಟರಾದ ಪಟಿಂಗರು; ಸಮಾಜಘಾತಕರು, ಮಾತಾಪಿತೃ ದ್ರೋಹಿಗಳು; ಪ್ರಾರ್ಥನೆ ಪಾಠ ಪ್ರವಚನ ಧರ್ಮ ಬೋಧೆಗಳು ಪಾದ್ರಿಗಳ ಅನಿವಾರ್ಯವಾದ ಕರ್ತವ್ಯವಾದರೂ ಅವರು ಲೌಕಿಕರಂತೆ ಗೃಹಸ್ಥಾಶ್ರಮವನ್ನು ಸ್ವೀಕರಿಸಲೇನೂ ಅಡ್ಡಿಯಿರಲಿಲ್ಲ—ಇದು ಸ್ಥೂಲವಾಗಿ ಆಸ್ಟಿನ್ ಕೃತಿಗಳಲ್ಲಿ ಪ್ರತಿಬಿಂಬಿತವಾಗಿರುವ ಸಮಾಜ.

ಆಸ್ಟಿನ್ ಕಾದಂಬರಿಗಳೆಲ್ಲ ಸಾಮಾನ್ಯವಾಗಿ ಗ್ರಾಮಜೀವನದ ಚಿತ್ರಣಕ್ಕೆ ಮೀಸಲು. ಅಲ್ಲಿ ಬರುವ ಪಾತ್ರಗಳೆಲ್ಲ—ಶ್ರೀಮಂತರಾಗಲಿ, ಪಾದ್ರಿಗಳಾಗಲಿ, ಸೈನಿಕ ರಾಗಲಿ, ವಕೀಲರಾಗಲಿ, ವರ್ತಕರಾಗಲಿ–ಹಳ್ಳಿಯವರು, ಅಥವಾ ಹಳ್ಳಿಯಿಂದ ಪಟ್ಟಣಕ್ಕೆ ಹೋಗಿ ನೆಲಸಿದವರು. ಕೆಲವರು ಚೆಲ್ಲುಗುಳಿ ಚೆಲುವೆಯರಿಗೆ, ತುಂಟಗುಳಿ ತುಂಡಾಡಿಗರಿಗೆ ಹಳ್ಳಿಯ ಬದುಕು ನೀರಸವಾಗಿ, ಬಾಳು ಬೇಸರವಾಗಿ ಕಾಣಬಹುದು; ನಗರದ ಬೀದಿಗಳಲ್ಲಿ ಅಡ್ಡಾಡಿ ಬರಬಹುದು. ಆದರೆ ಹಳ್ಳಿಯ ಮಣ್ಣಿನ ನಂಟನ್ನುಳಿಸಿ ಕೊಂಡಿರುವ ಮಂದಿಯೇ ಹೆಚ್ಚು. ಕೋಪ ಕ್ರೋಧ ಮಾತ್ಸರ್ಯಾದಿ ಕ್ಷೋಭಕಾರಿಗಳಾದ ಭಾವವೈರೂಪ್ಯಗಳಿಗೆ ಅವಕಾಶವಿಲ್ಲದ ಈ ಕಾದಂಬರಿಗಳಲ್ಲಿ ಸಾವು ನೋವುಗಳಿಗೂ ಜಾಗವಿಲ್ಲ. ಆದುದರಿಂದಲೇ ಇವುಗಳನ್ನು 'ಗ್ರಾಮಜೀವನದ ಹರ್ಷಾಂತ ಕಾದಂಬರಿ' ಗಳೆಂದು ಕರೆಯುತ್ತಾರೆ.

ಕಥಾನಿರೂಪಣೆಯಲ್ಲಿ ಸನ್ನಿವೇಶ ಸೃಷ್ಟಿಯಲ್ಲಿ ಪಾತ್ರರಚನೆಯಲ್ಲಿ ಮಾನವ ಸ್ವರೂಪ ಸ್ವಭಾವ ವಿಶ್ಲೇಷಣ ವಿಚಿಕಿತ್ಸೆಯಲ್ಲಿ ಅವಳು ತೋರಿಸಿರುವ ಜಾಣ್ಮೆ ಅತ್ಯದ್ಭುತ ವಾದುದು. ಸ್ವಕ್ಷೇತ್ರದಲ್ಲವಳು ಸಾಮ್ರಾಜ್ಞಿ, ಅದ್ವಿತೀಯೆ. ಎಚ್ಚರದ ಬಿಡುಗಣ್ಣಿಗೆ ಅಲ್ಲಿ ಇಲ್ಲಿ ಪ್ರಾಚೀನ ಅಥವಾ ಸಮಕಾಲೀನ ಲೇಖಕ ಲೇಖಕಿಯರ[17] ಪ್ರಭಾವಮುದ್ರೆ ಕಾಣಬಹುದಾದರೂ ಅವಳ ಆತ್ಮತೇಜಸ್ಸಿನ ಪ್ರಖರತೆಯ ಮುಂದೆ ಅದು ಮಸಕಾಗುತ್ತದೆ. ಗ್ರಾಮಜೀವನ ಚಿತ್ರಣವೆ ಪ್ರಮುಖವಾದ ಈ ಕಾದಂಬರಿಗಳಲ್ಲಿ ನಿಸರ್ಗದ ಹಿನ್ನೆಲೆ ಸ್ಪಷ್ಟವಾಗಿ ಮೂಡಿಲ್ಲವಾದರೂ, ಉಡುಪು, ತೋಟ, ಬೀದಿ, ಮನೆಗಳ ವರ್ಣನೆ ಲುಪ್ತವಾಗಿದ್ದರೂ, ಭೋಜನಕೂಟ, ನೃತ್ಯಗೋಷ್ಠಿ, ಪಾತ್ರಗಳ ಪರಸ್ಪರ ಸಂಭಾಷಣೆಗಳ ಸಂಭ್ರಮದಲ್ಲಿ ಮರೆತುಹೋಗುತ್ತದೆ. ಆಸ್ಟಿನ್ ಕಾದಂಬರಿಗಳ ಜೀವಾಳ ವೈಶಿಷ್ಟ್ಯಗಳೆಂದರೆ ಸಂಭಾಷಣೆ. ಎಲ್ಲಿಯೂ ಅತಿರೇಕಕ್ಕೆಡೆಯಿಲ್ಲದ ಈ ಕೃತಿಗಳಲ್ಲಿ

[17] ರಿಚರ್ಡ್ಸನ್, ಕುಮಾರಿ ಬರ್ನಿ ಮೊದಲಾದವರು.

ಸಂಭಾಷಣೆ ಅತಿಯಾಯಿ[18]ತ್ತೇನೊ ಎಂದು ತೀಕ್ಷ್ಣ ಸ್ವರೂಪದ ಕಟು ವಿಮರ್ಶೆ ಟೀಕಿಸಬಹುದು. ಆದರೆ ನಾಟಕೀಯತೆ ಈ ಕಾದಂಬರಿಗಳ ಪ್ರಧಾನ ಲಕ್ಷಣವೆಂಬುದನ್ನು ಮರೆಯಬಾರದು. ಅವಳ ಸ್ತ್ರೀಪುರುಷರ ಸ್ವರೂಪ ಸ್ವಭಾವಗಳು, ಗುಣಾವಗುಣಗಳು ಬಹುತೇಕವಾಗಿ ಪರಸ್ಪರ ಅಥವಾ ಭಿನ್ನ ಪಾತ್ರಗಳ ಸಂಭಾಷಣೆಗಳ ಮೂಲಕ ಪ್ರಕಾಶಗೊಳ್ಳುತ್ತವೆ. ತಾನೇ ನೇರವಾಗಿ ಪಾತ್ರಗಳ ವ್ಯಕ್ತಿತ್ವವನ್ನು ಚಿತ್ರಿಸುವ, ಅವುಗಳ ಮಾನಸಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸುವ ಪ್ರಕರಣ ಸಂದರ್ಭಗಳು ಅತ್ಯಲ್ಪ. ಸಮುಚಿತ ಪ್ರಯೋಗದ ನಾಟಕೀಯತೆಯಿಂದ ಕಾದಂಬರಿ ಶೋಭಿಸುತ್ತಿದೆಯಾದರೂ, ಪಾತ್ರಗಳ ಶೀಲಸ್ವರೂಪಾಭಿವ್ಯಕ್ತಿಗೆ ಅದು ಪರಿಣಾಮಕಾರಿಯಾದ ಸಾಧನವೆಂದೊಪ್ಪಬಹುದಾದರೂ, ಅದರ ನಿರಂಕುಶ ಪ್ರಭುತ್ವದಿಂದ ಕಾದಂಬರಿ ತನ್ನತನವನ್ನು ಕಳೆದುಕೊಂಡು ಕಲೆ ಇಬ್ಬಂದಿಯಾಗುವ ಸಂಭವವುಂಟೆಂದು ವಿಮರ್ಶಕರು ಶಂಕೆ ಪಡುವುದುಂಟು. ಅಂಥ ವಿಮರ್ಶೆಯಲ್ಲಿ ಹುರುಳಿಲ್ಲದಿಲ್ಲ. ಆದರೆ ಆಸ್ಟಿನ್‌ಳ ಸಂಭಾಷಣೆಯ ಶೈಲಿ ಅನನುಕರಣೀಯವಾದುದು;[19] ಅದರಲ್ಲಿ ಆಂಗ್ಲ ತಳಿನುಡಿಗಟ್ಟಿನ ತನಿತನಿಯಾದ ನಯನವುರು ಸೊಗಸು ಬನಿಗಳಿವೆ; ದುಂಬುದೂಳೆಬ್ಬಿಸದ ನವೆನಸೆಗಳನ್ನು ರೇಗಿಸದ ಕಹಿಯೊಗರುಗಳನ್ನು ಕಾರದ ಮೃದುಮಧುರವಾದ ವಿಡಂಬನೆಯಿದೆ; ಪಾತ್ರಗಳ ಹೃದಯವನ್ನು ಪ್ರತಿಬಿಂಬಿಸುವ ಹೊಳಪಿದೆ; ಮೇಲಾಗಿ ರೈಲ್ವೆ ಎಂಜಿನ್ನಿನಂತೆ ಕಥೆಯನ್ನೂ ಕ್ರಿಯೆಯನ್ನೂ ಮುಂದೆ ಮುಂದೆ ಕೊಂಡೊಯ್ಯುವ ಚಾಲಕಶಕ್ತಿಯಿದೆ. ಆದುದರಿಂದ ಸಂಭಾಷಣೆ ಸ್ವಲ್ಪ ಅತಿಯಾದರೂ ಮುಖ ಚಿಟ್ಟಾಗುವುದಿಲ್ಲವೆನ್ನಬಹುದು.

ಆಸ್ಟಿನ್‌ಳ ತಂತ್ರ ಸಾಮರ್ಥ್ಯ ಕಾದಂಬರಿಯ ಮುಖಸಂಧಿಯಲ್ಲಿಯೆ ಅಭಿವ್ಯಕ್ತವಾಗುತ್ತದೆ. ಬಹುಶಃ ಅವಳಂತೆ ಪರಿಣಾಮಕಾರಿಯಾಗಿ ಅರ್ಥವತ್ತಾಗಿ ಧ್ವನಿಪೂರ್ವಕವಾಗಿ ಕಥೆಯನ್ನಾರಂಭಿಸುವ ಶಕ್ತಿ ಬಹುಜನರಲ್ಲಿ ಶೂನ್ಯವೆಂದೇ ಹೇಳಬೇಕು. ಮೊದಲ ವಾಕ್ಯ ಅಥವಾ ವಾಕ್ಯವೃಂದವನ್ನೋದಿದಕೂಡಲೆ ವಾಚಕನ ಕುತೂಹಲಾಸಕ್ತಿ ಕೆರಳುತ್ತದೆ, ಮನಸ್ಸು ಬಾಹ್ಯ ಪ್ರಪಂಚವನ್ನು ಮರೆಯುತ್ತದೆ. "ಜೇನ್ ಆಸ್ಟಿನ್‌ಳಂತೆ ಕಾದಂಬರಿಯನ್ನು ಪ್ರಾರಂಭಿಸುವವರಾಗಲಿ ಬೆಳೆಸುವವರಾಗಲಿ ಮತ್ತಾರೂ ಇಲ್ಲ.

[18] The principle that it is always better that a character should be made to reveal itself than that it should be dissected from the outside, is thoroughly sound—It is one advantage which prose fiction possesses in comparison with the drama that the author himself may from time to time appear in the capacity of the expositor and critic; and when he avails himself of this privilege he may justly maintain that as he is writing a novel and not a drama, it is by the laws of the novel and not by those of the drama that he is bound (P 194: The Study of Literature by W. H. Hudson). [19] She is one of the greatest because one of the mostaccurate writers of dialogue of her own or any other age (p 389: Miss Austen's English—sense and sensibility by Dr. Chapman.)

ಪ್ರೈಡ್ ಅಂಡ್ ಪ್ರಿಜುಡಿಸ್ ಕಾದಂಬರಿಯ[20] ಮೊದಲನೆಯ ಗರಿಯನ್ನು ಮಾತ್ರ ಬರೆದು ನಿಲ್ಲಿಸಿದ್ದರೂ ಅವಳ ಕೀರ್ತಿ ಅಮರವಾಗುತ್ತಿತ್ತು" ಎಂದು ವಿಖ್ಯಾತ ವಿಮರ್ಶಕ ಬ್ರಾಡ್ಲೆ ಹೇಳುತ್ತಾನೆ. ಇವಳ ಕೃತಿಗಳಲ್ಲಿ ಕಾಣುವ ಕಲಾಪರಿಪೂರ್ಣತೆ ಡಿಕನ್ಸ್ ಥೇಕರಿ ಮೊದಲಾದವರ ಕೃತಿಗಳಲ್ಲಿ ಕಾಣುವುದಿಲ್ಲವೆಂದು ವಿದ್ವಜ್ಜನರು ಅಭಿಪ್ರಾಯಪಡುತ್ತಾರೆ.

ಆಸ್ಟಿನ್ ಕಾದಂಬರಿಗಳ ಜನಪ್ರಿಯತೆಗೆ ಆದ್ಯಂತವಾಗಿ ಮಿಂಚುತ್ತಿರುವ ತಿಳಿಹಾಸ್ಯ ಮುಖ್ಯ ಕಾರಣ. ಆ ಹಾಸ್ಯದಲ್ಲಿ ಮಾತ್ಸರ್ಯವಿಲ್ಲ, ಕ್ರೋಧವಿಲ್ಲ, ಅವಹೇಳನವಿಲ್ಲ, ಸೇಡಿಲ್ಲ, ಇರಿತ ಕೊರೆತಗಳಿಲ್ಲ. ಅವಳಿಗೆ ಮಾನವ ಸ್ವಭಾವದಲ್ಲಿ ಸಹಾನುಭೂತಿಯಿದೆ, ಮಾನವ ಸಮಾಜದಲ್ಲಿ ಅಪಾರ ಗೌರವವಿದೆ. ಅವಳ ಹಾಸ್ಯ ಹೃದಯಾಹ್ಲಾದಕಾರಿ ಯಾಗುತ್ತದೆಯೆ ಹೊರತು, ಹೃದಯದಲ್ಲಿ ಹಾಲಾಹಲವನ್ನು ಕದಡುವುದಿಲ್ಲ.

ವಾಸ್ತವತೆ ಮತ್ತು ಪ್ರಾಮಾಣಿಕತೆ ಆಸ್ಟಿನ್‌ಳ ಕಲೆಯ ಗುಟ್ಟು. ತನಗೆ ಅಪರಿಚಯವಾದ ಕ್ಷೇತ್ರಕ್ಕೆಂದೂ ಅವಳು ಕಾಲಿಡುವುದಿಲ್ಲ ; ತನ್ನ ಅನುಭವಕ್ಕೆ ಬಾರದ ವಿಷಯಗಳ ನಿರೂಪಣೆಗೆ ಕೈಹಾಕುವುದಿಲ್ಲ. ಸೂಕ್ಷ್ಮದರ್ಶಕಯಂತ್ರದಿಂದ ನೋಡಿದರೂ ನಗರಜೀವನದ ವರ್ಣನೆ ಅವಳ ಕೃತಿಗಳಲ್ಲಿ ಗೋಚರಿಸುವುದಿಲ್ಲ. ಅಷ್ಟೇ ಅಲ್ಲ ; ಪ್ರೇಮ ಸಂಬಂಧವಾದ ಕತೆಗಳಲ್ಲಿ ಪ್ರೇಮದ ವಿವಿಧ ರೂಪವೇಷಗಳನ್ನಾಗಲಿ, ಉನ್ಮಾದೋತ್ಕರ್ಷ ಗಳನ್ನಾಗಲಿ ಕಾಣುವಂತಿಲ್ಲ ; ವಿವಾಹ ಮತ್ತು ತತ್ಸಂಬಂಧವಾದ ಆಚಾರ ವಿಚಾರಗಳ ವಿವರಣೆಯಿಲ್ಲ. ಯಾವ ಕಾದಂಬರಿಯಲ್ಲಿಯೂ ಪುರುಷರ ಪರಸ್ಪರ ಸಂಭಾಷಣೆಗಳು— ಕ್ವಚಿತ್ತಾಗಿ ಬರುವ ಒಂದೆರಡು ಸಂದರ್ಭಗಳನ್ನು[21] ಬಿಟ್ಟರೆ—ನಡೆಯುವ ಸಂದರ್ಭಗಳೇ ಇಲ್ಲ. ಸ್ತ್ರೀಯರ ಅಥವಾ ಸ್ತ್ರೀಪುರುಷರ ಪರಸ್ಪರ ಸಂಭಾಷಣೆಗಳನ್ನು ಹೆಜ್ಜೆಹೆಜ್ಜೆಗೂ ಗಮನಿಸಬಹುದು. ಇಷ್ಟು ಕಟ್ಟುನಿಟ್ಟಾಗಿ ಪ್ರಾಮಾಣಿಕತೆಯನ್ನು ಕಾಪಾಡಿಕೊಂಡು ಬರುವ ಲೇಖಕರು ಸಾಹಿತ್ಯ ಲೋಕದಲ್ಲಿಯೇ ವಿರಳ. ಕೆಲವರು ಆಪ್ತವಚನ ಅನುಮಾನ ಕಲ್ಪನೆಗಳ ಪ್ರಮಾಣವನ್ನು ಮನ್ನಿಸಿ, ಅವುಗಳ ಆಧಾರದಮೇಲೆ ಸಾಹಿತ್ಯ ನಿರ್ಮಾಣ ಮಾಡುವುದುಂಟು.[22] ಆದರೆ ಅಂಥ ಸಾಹಸ ಅವಳ ಸ್ವಭಾವಕ್ಕೆ ಹೊರಗು. ಐತಿಹಾಸಿಕ

---

[20] ಮ್ಯಾನ್ಸ್‌ಫೀಲ್ಡ್ ಪಾರ್ಕ್ ಕಾದಂಬರಿಯ ಪ್ರಾರಂಭವೂ ಗಮನಾರ್ಹವಾದುದು.
[21] ಹಮ್ಮು-ಬಿಮ್ಮು ಮತ್ತು ವಾಟ್ಸನ್ಸ್ ಕಾದಂಬರಿಗಳಲ್ಲಿ ಅಂಥ ಒಂದೆರಡು ಸಂದರ್ಭಗಳೊದಗುತ್ತವೆ. [22] Knowledge of life may be obtained in various ways besides direct personal experience ; it may in particular› be obtained through books and through conversation with other people who have touched the world at points where we have not touched it ourselves. A writer of real creative genius› with that power of absorbing and utilising all kinds of material derived from all kinds of sources and that sheer power of realistic imagination which habitually goes with this, may thus attain substantial fidelity even when he is handling scenes and incidents which had never come within the range of his own experience and observation (p 178 : The Studv of Literature by W. H. Hudson)

ಅಥವಾ ರೋಮಾಂಚಕಾರಕ ಕಾದಂಬರಿಗಳನ್ನೇಕೆ ಬರೆಯಬಾರದೆಂದು ಯಾರೊ ಸಲಹೆ ನೀಡಿದಾಗ "ನಾನೆಂತು ಮಹಾಕಾವ್ಯವನ್ನು ಬರೆಯಲಾರೆನೋ ಅಂತೆಯೆ ರೋಮಾಂಚಕಾರಕ ಕಾದಂಬರಿಯನ್ನು ಬರೆಯಲಾರೆ" ಎಂದು ಉತ್ತರ ನೀಡುತ್ತಾಳೆ.[23] ತನ್ನ ಸೋದರಸೊಸೆಯೊಬ್ಬಳು ತಾನು ಬರೆದ ಕತೆಯೊಂದರ ಬಗೆಗೆ ಅವಳ ಅಭಿಪ್ರಾಯ ಕೇಳಿದಾಗ "ನಾವಿಕರು ಐರ್‌ಲೆಂಡಿಗೆ ಹೋಗಲಿ; ನಿನಗೆ ಅಲ್ಲಿಯ ಜನರ ರೀತಿನೀತಿಗಳು ಗೊತ್ತಿಲ್ಲವಾದುದರಿಂದ ನೀನವರ ಜೊತೆಯಲ್ಲಿ ಹೋಗದಿರುವುದೊಳ್ಳೆಯದು. ನೀನು ತಪ್ಪುತಪ್ಪಾಗಿ ವರ್ಣಿಸುವ ಅಪಾಯಕ್ಕೊಳಗಾಗಬಹುದು" ಎಂದು ಹೇಳುತ್ತಾಳೆ.[24]

ಇಡೀ ಪ್ರಪಂಚದ ಅಥವಾ ಒಂದು ರಾಷ್ಟ್ರದ ಅಥವಾ ಒಂದು ಭಾಷೆಯ ಸಾಹಿತ್ಯ ಕೃತಿಗಳನ್ನು ಪರಸ್ಪರ ತುಲನೆ ಮಾಡಿ, ಅವುಗಳ ತೂಕ ಬಣ್ಣ ತಿರುಳುಗಳನ್ನು ನಿರ್ಧರಿಸಿ, ತಾರತಮ್ಯ ಕ್ರಮದಲ್ಲಿ ಅವುಗಳ ಮೌಲ್ಯ ನಿಷ್ಕರ್ಷಿಸುವುದು ಕಷ್ಟಸಾಧ್ಯವಾದ ಕಾರ್ಯ. ಅದೂ ಹೋಗಲಿ, ನಿರ್ಮಾಣವಾದ ಕೃತಿಗಳೆಲ್ಲ ಏಕಪ್ರಕಾರವಾದ ಜನಪ್ರಿಯತೆಯನ್ನೂ ಲೋಕಗೌರವವನ್ನೂ ಪಡೆಯುತ್ತವೆಂದು ಯಾರೂ ಹೇಳುವಂತಿಲ್ಲ. ಕೆಲವು ಕೃತಿಗಳಂತು ಪ್ರಾಚ್ಯ ಸಂಶೋಧನಾಲಯದ ಸಾಮಗ್ರಿಯಾಗಿವೆಯೇ ಹೊರತು ಮನೆ ಮನೆಯ ಆರಾಧ್ಯ ಶಕ್ತಿಗಳಾಗಿಲ್ಲ. ವೈಜ್ಞಾನಿಕ ಪ್ರಗತಿಯಿಂದ ಸಾಮಾಜಿಕ ಸಂಪ್ರದಾಯಗಳು ಜೀವನದ ನೀತಿ ನಿಯಮಗಳು ರುಚಿ ಅಭಿರುಚಿಗಳು ಕಲಾತಂತ್ರ ಸಾಹಿತ್ಯ ಮೌಲ್ಯಗಳು ಬದಲಾವಣೆಯಾಗುತ್ತಿರುವಾಗ ಒಂದು ಕಾಲಕ್ಕೆ ಮಹಾಕವಿಯೆಂದು ಗಣ್ಯನಾದ ವ್ಯಕ್ತಿ ಮತ್ತೊಂದು ಕಾಲಕ್ಕೆ ತೆರೆಮರೆಗೆ ಸರಿಯಬಹುದು. ಜನಪ್ರಿಯತೆಯಾದರೂ ಗ್ರಂಥಪ್ರಮಾಣ ಸಂಖ್ಯೆಗಳನ್ನವಲಂಬಿಸಿಲ್ಲ. ಹೋಮರ್, ಬೊಕಾಶಿಯೊ, ಬಾಸ್‌ವೆಲ್, ಥಾಮಸ್–ಎ–ಕೆಂಪಿಸ್ ಮೊದಲಾದವರು ಒಂದೊಂದೇ ಕೃತಿರತ್ನದಿಂದ ವಿಶ್ವಕಲಾವಿದರ ಅಗ್ರ ಪಂಕ್ತಿಯಲ್ಲಿ ಸ್ಥಾನ ಪಡೆದಿದ್ದಾರೆ. ಅಂಥ ಪುಣ್ಯ ಷೇಕ್ಸ್‌ಪಿಯರ್ ವರ್ಡ್ಸ್‌ವರ್ತ್ ಟಾಲ್‌ಸ್ಟಾಯ್ ವಾಲ್ಮೀಕಿ ಕಾಳಿದಾಸ ತುಳಸೀದಾಸ ಹರಿಹರ ಕುಮಾರವ್ಯಾಸ ಮುಂತಾದ ಕೆಲವರಿಗೆ ಮಾತ್ರ ಕಟ್ಟಿಟ್ಟ ಬುತ್ತಿಯಾಗಿದೆ. ಅದರಲ್ಲಿಯೂ ತನ್ನ ಜೀವಿತ ಕಾಲದಲ್ಲಿಯೆ ಜನಪ್ರಿಯತೆಯನ್ನು ಗಳಿಸಬೇಕಾದರೆ ಕವಿ ಸರಸ್ವತಿಯ ವರ ಪಡೆದು ಬಂದಿರಬೇಕು. ಒಮ್ಮೊಮ್ಮೆ ಮಿಲ್ಟನ್ ವರ್ಡ್ಸ್‌ವರ್ತ್ ಅಂಥ ಕವಿಗಳೂ ವಿಮರ್ಶಕರ ಉಗ್ರ ಖಂಡನೆಯ ಖಡ್ಗಕ್ಕೆ ಬಲಿಯಾಗಿರುವುದುಂಟು. ಜೇನ್ ಆಸ್ಟಿನ್ ಸಹ ಇಂಥ ಖಂಡನೆಯಿಂದ ಪಾರಾಗಿಲ್ಲ. ಅವಳು ತೀರಿಕೊಂಡ ೯೧ ವರ್ಷದನಂತರ ಪ್ರಕಟವಾದ 'ಆಂಗ್ಲ ಶ್ರೇಷ್ಠ ಕಾದಂಬರಿಕಾರರು' ಎಂಬ ಸಂಕಲನ ಗ್ರಂಥದಲ್ಲಿ ಡೀಫೊ, ರಿಚರ್ಡ್‌ಸನ್, ಸ್ಮಾಲೆಟ್, ಮೆರಿಡಿತ್, ಥೇಕರಿ ಮುಂತಾದ ಹನ್ನೊಂದು ಲೇಖಕರ ಸಾಲಿನಲ್ಲಿ ಅವಳಿಗೊಂದು ಸ್ಥಾನ ಸಿಗಲಿಲ್ಲವಂತೆ. 'ಅವಳು ಮಧ್ಯಮವರ್ಗದ ಜನಜೀವನದ ಮೇಲ್ಮೈಯನ್ನು ಮಾತ್ರ ಅದ್ಭುತವಾಗಿ ಚಿತ್ರಿಸಬಲ್ಲಳು; ಅವಳ ಕಲೆಗಾರಿಕೆಯಲ್ಲಿ ಪ್ರಾಮಾಣಿಕತೆಯಿದೆ, ಸಯಗಾರಿಕೆ ಇದೆ....ಆದರೆ ಮಾನವ ಜೀವನದ ಗರ್ಭಾಂತರಾಳದಲ್ಲಿ ಪದರ ಪದರವಾಗಿ ಹುದುಗಿರುವ ರಹಸ್ಯಗಳನ್ನು ಮಾನವ ಹೃದಯದ ಅನಂತಾನಂತ

---

[23] p 65 : Jane Austen and her C untry-House Comedy by W. H. Helm. [24] p 176: The Study of Literature by W. H. Hudson.

ರುದ್ರ ರಮಣೀಯ ಭಾವವಿಲಾಸಗಳನ್ನು ಹೊರದೆಗೆಯುವ ಶಕ್ತಿ ಸಾಮರ್ಥ್ಯ ಅವಳಲ್ಲಿಲ್ಲ' ಎಂದು ಕೆಲವರೂ, [25]ಕುಸುರಿ ಕೆಲಸದಲ್ಲಿ ಅದ್ವಿತೀಯೆಯಾದ ಆಸ್ಟಿನ್‌ಳಿಗಿಂತ ಜೀವನದ ನಾನಾಮುಖಗಳನ್ನು ಬೃಹತ್ಪ್ರಮಾಣದಲ್ಲಿ ಮನೋಜ್ಞವಾಗಿ ಚಿತ್ರಿಸಿದ ಸಾಹಿತಿಗಳಿಗೆ ಅಗ್ರಪೂಜೆ ನ್ಯಾಯವಾಗಿ ಸಲ್ಲತಕ್ಕದ್ದೆಂದು ಕೆಲವರೂ ಹೇಳುವುದುಂಟು. ಮಹತ್ತು ಬೃಹತ್ತುಗಳ ದೃಷ್ಟಿಯಿಂದ ಅವರವರಿಗೆ ಯೋಗ್ಯಸ್ಥಾನ ಲಭಿಸುವುದಾದರೂ, ಉಪಯುಕ್ತತೆಯ ದೃಷ್ಟಿಯಿಂದ ಎರಡು ವರ್ಗದ ಕಲಾವಿದರೂ ಆವಶ್ಯಕವೆಂಬುದನ್ನು ಮರೆಯಬಾರದು.

೪

'ಹಮ್ಮು-ಬಿಮ್ಮು' ಹೆಸರು: ಅದನ್ನು ಮೊದಲು ಬರೆದು ಮುಗಿಸಿದಾಗ ಅದಕ್ಕಿಟ್ಟ ಹೆಸರು 'ಫಸ್ಟ್ ಇಂಪ್ರೆಷನ್ಸ್' (ಪ್ರಥಮ ಪ್ರಭಾವ). ಅದು ದಿನ ಕಳೆದಂತೆಲ್ಲ ಹೆಚ್ಚು ಹೆಚ್ಚು ಪರಿಷ್ಕಾರಗೊಂಡು ಕೊನೆಗೆ ಪ್ರೈಡ್ ಅಂಡ್ ಪ್ರಿಜುಡಿಸ್ (ಹಮ್ಮು-ಬಿಮ್ಮು) ಆಗಿ ಪರಿಣಾಮ ಹೊಂದಿತು. ತನ್ನ ಕೃತಿಯ ನಾಮಕರಣದಲ್ಲಿ ಆಸ್ಟಿನ್‌ಳ ಜಾಣ್ಮೆ ಎದ್ದು ಕಾಣುತ್ತದೆ. ಕಥಾನಾಯಕ ನಾಯಿಕೆಯರ ಹೆಸರನ್ನು ಕೃತಿಗಿಡುವುದು ಸಾಮಾನ್ಯ ಸಂಪ್ರದಾಯ. ಅದನ್ನನುಸರಿಸಿದ್ದರೆ ಈ ಕೃತಿಗೆ 'ಡಾರ್ಸಿ' ಎಂದೊ 'ಎಲಿಸಬೆತ್' ಎಂದೊ ಹೆಸರಿಡಬಹುದಿತ್ತು. ಆಗ ಆ ಹೆಸರು ತುಂಬ ಬೋಳಾಗಿ ನೀರಸವಾಗಿ ಕಾಣುತ್ತಿತ್ತು. ಕಥೆಯ ಆದ್ಯಂತವಾಗಿ ಸರ್ವವ್ಯಾಪಿಯಾಗಿರುವ, ಕಥೆಯ ಕ್ರಿಯೆಗೆ ಪೋಷಕವಾಗಿರುವ, ನಾಯಕ ನಾಯಿಕೆಯರ ಮಾತ್ರವಲ್ಲ—ಪ್ರತ್ಯಕ್ಷವಾಗಿಯೊ ಪರೋಕ್ಷವಾಗಿಯೊ ಎಲ್ಲ ಪಾತ್ರಗಳ ಸ್ವರೂಪ ಸ್ವಭಾವಗಳನ್ನೂ ಗತಿಮತಿಗಳನ್ನೂ ರೂಪಾಂತರಗೊಳಿಸುವ ಹಮ್ಮು-ಬಿಮ್ಮು ಎಂಬೆರಡು ಭಾವನೆಗಳನ್ನವಲಂಬಿಸಿ ನಾಮಕರಣ ಮಾಡಿರುವುದರಿಂದ ವಾಚಕರ ಕುತೂಹಲವನ್ನು ಕೆರಳಿಸಿ, ಅವರ ಗಮನವನ್ನು ಕೇಂದ್ರೀಕೃತಗೊಳಿಸಲನುಕೂಲವಾಗುತ್ತದೆ.

ಹೆಮ್ಮೆಯೇ ಮೈತಳೆದಂತಿದ್ದಾನೆ ಡಾರ್ಸಿ. ಅವನು ಹತ್ತು ಸಾವಿರ ಪೌಂಡ್ ವಾರ್ಷಿಕಾದಾಯವುಳ್ಳ ಅನುಕೂಲಸ್ಥ. ಅವನ ತಂದೆ ಅವನನ್ನು ಯಾರ ಗುಂಪಿಗೂ ಸೇರಿಸದೆ ಕೇರ್ಜವಾಗಿ ಬೆಳೆಸಿದ್ದನು, ವಿದ್ಯೆ ಕಲಿಸಿದ್ದನು. ಸುತ್ತಮುತ್ತಣ ಸಮಾಜದೊಡನೆ ಬೆರೆಯದೆ, ಓರಗೆಯ ಮಕ್ಕಳೊಡನೆ ಆಟಪಾಟವಾಡದೆ, ಕಷ್ಟಕಾರ್ಪಣ್ಯಗಳೇನೆಂಬುದನ್ನರಿಯದೆ, ತಾನೊಬ್ಬ ಕುಲೀನ ಶ್ರೀಮಂತ ಮಾನವಮದನನೆಂಬ ಬಿಂಕದಿಂದ ಸ್ವಾರ್ಥತೆಯ ಪಂಕದಲ್ಲಿ ಬೆಳೆದ ಯುವಕ. ನೃತ್ಯಗೋಷ್ಠಿಯಲ್ಲಾಗಲಿ ಭೋಜನ ಕೂಟದಲ್ಲಾಗಲಿ ಅವನು ಯಾರೊಡನೆಯೂ ಮಾತಾಡುವವನಲ್ಲ; ಮಾತಾಡಬೇಕಾದ ಅವಶ್ಯಕತೆಯೊದಗಿದರೆ ಏನೊ ಅನುಗ್ರಹ ತೋರಿಸುವವನಂತೆ ಮಾತಾಡುತ್ತಾನೆ. ಆದುದರಿಂದ ಎಲಿಸಬೆತ್ ಮೊದಲುಗೊಂಡು ಲಾಂಗ್‌ಬರ್ನ್ ಜನರೆಲ್ಲ ಹಮ್ಮುಗುಳಿಯೆಂದವನಿಗೆ ಹೆಸರಿಡುತ್ತಾರೆ. ಗ್ರಾಮ್ಯಶೀಲದ ಗಯ್ಯಾಳಿಯಾದ ಶ್ರೀಮತಿ ಬೆನೆಟ್ ಮತ್ತು ದೈನ್ಯ

[25] Charlotte Bronte in a letter of 2nd Feb. 1850 to W. S. Williams—Quoted in 'Jane Austen and Her art' p 119.

ದಾಸ್ಯಗಳಿಗೆ ಮೂರ್ತಿವೆತ್ತಂತಿದ್ದ ಕೊಲಿನ್ಸ್—ಇವರನ್ನು ಕಂಡರಂತು ಅವನ ತಾಳ್ಮೆ
ತಲೆಕೆಳಗಾಗುತ್ತಿತ್ತು. ಒಂದೆರಡು ಸಾರಿ ಎಲಿಸಬೆತ್ತಳನ್ನು ನೋಡಿದಾಗ ಅವನ ಹೃದಯ
ದಲ್ಲಿ ಪ್ರೇಮ ಸೆಲೆಯೊಡೆಯುತ್ತದೆ. ಆದರೆ ಅವಳು ಕುಲೀನೆಯಲ್ಲವೆಂಬ ವಿಷಯ ನೆನಪಿಗೆ
ಬಂದಾಗ, ಆ ಪ್ರೇಮ ಹಾಗೆಯೆ ಮರೆಯಾಗುತ್ತದೆ. ದಮನ ಮಾಡಿದಂತೆಲ್ಲ ಅದು
ದ್ವಿಗುಣ ದಶಗುಣ ಶತಗುಣವಾಗಿ ಕೊನೆಗೆ ಅದಮ್ಯವಾಗಿ ಉಕ್ಕುತ್ತದೆ. ಆದರೆ
ಪ್ರೇಯಸಿಯ ಮುಂದೆ ತನ್ನ ಪ್ರೇಮವನ್ನು ಪ್ರಕಟಿಸುವಾಗಲೂ ಅವನ ಬಿಂಕ ಮೆಟ್ಟು
ಗಾಲಿನಲ್ಲಿ ಬಾಸ್‌ಮುಟ್ಟಿ ನಿಂತಿರುತ್ತದೆ. ತಾನೊಂದು ಸಲ ಅನುಗ್ರಹ ಕಟಾಕ್ಷ ಬೀರಿದರೆ
ಸಾಕು, ಅವಳು ತನಗೆ ಶರಣಾಗುತ್ತಾಳೆಂದವನು ಭಾವಿಸುತ್ತಾನೆ. ತನ್ನ ದರ್ಪಕ್ಕವಳು
ಮಣಿಯದೆ ತನ್ನನ್ನು ತೃಣಸದೃಶವಾಗಿ ಕಂಡಾಗ ಅವನಿಗೆ ಜ್ಞಾನೋದಯವಾಗುತ್ತದೆ;
ಪಶ್ಚಾತ್ತಾಪದ ಪಾವಕನಿಂದ ದರ್ಪದ ಕಾಳಿಕೆ ದಗ್ಧವಾಗುತ್ತದೆ.

ಹಮ್ಮು ಕಥಾನಾಯಕನಾದ ಡಾರ್ಸಿಯ ಸಂಪತ್ತಾದರೆ ಪೂರ್ವಾಗ್ರಹ ಸಿದ್ಧವಾದ
ಬಿಮ್ಮು ಕಥಾನಾಯಿಕೆಯಾದ ಎಲಿಸಬೆತ್‌ಳ ತವನಿಧಿ. ಅವಳು ಅಪೂರ್ವ ಸುಂದರಿ
ಯಲ್ಲದಿದ್ದರೂ ಆಕರ್ಷಕವ್ಯಕ್ತಿ, ಸುಶೀಲೆ, ಚಾಣಾಕ್ಷೆ, ನಿಶಿತಮತಿ. ಆದರೆ ಅವಳಲ್ಲಿದ್ದ
ಒಂದೇ ಒಂದು ದೋಷವೆಂದರೆ, ಸುಲಭ ಶೀಘ್ರವಾಗಿ ಪರರ ಬಗ್ಗೆ ಅಭಿಪ್ರಾಯವನ್ನು
ರೂಪಿಸಿಕೊಂಡು ಅದನ್ನು ಬಲವಾಗಿ ಪಟ್ಟುಹಿಡಿಯುತ್ತಾಳೆ. ಅವಳಷ್ಟು ಸುಂದರಿಯಲ್ಲ
ವೆಂದು ಪ್ರಥಮಭೇಟಿಯ ಕಾಲದಲ್ಲಿಯೆ ಡಾರ್ಸಿ ಅವಳನ್ನು ತಿರಸ್ಕರಿಸುತ್ತಾನೆ. ಅವಳು
ಸ್ವಲ್ಪ ಹಠಮಾರಿ, ಎದೆಗಾತಿ; ಎಂಥ ಸಂದರ್ಭದಲ್ಲಿಯೂ ತನ್ನ ಆತ್ಮಗೌರವವನ್ನು ಬಿಟ್ಟು
ಕೊಡುವವಳಲ್ಲ. ಡಾರ್ಸಿಯಾಗಲಿ ಲೇಡಿ ಕ್ಯಾಥರೀನ್ ಆಗಲಿ ತನ್ನನ್ನಾಗಲಿ ತನ್ನವರ
ನ್ನಾಗಲಿ ಅವಹೇಳನಮಾಡುವುದಾದರೆ, ಅವರನ್ನು ತೂರಿಸಿ ಹಳಿದು ಹಾದಿ ರಂಪ
ಮಾಡಲೂ ಸಿದ್ಧ. ವಿಕ್ಹ್ಯಾಮ್‌ನ ಚಾಡಿಕೋರತನದಿಂದ ಬಿಂಗ್ಲೆ ಸಹೋದರಿಯರ
ಸ್ವಾರ್ಥಮೂಲವಾದ ಸಂಚಿನಿಂದ ಅವಳ ಬಿಮ್ಮು ಹೊರಹೊಮ್ಮುತ್ತದೆ. ನಿಷ್ಕಾಪಟ್ಯ
ಅವಳ ಹುಟ್ಟುಗುಣ; ಅವಿನಯಕ್ಕೆ ಅವಿನಯ, ಅಹಂಕಾರಕ್ಕೆ ಅಹಂಕಾರ—ಅವಳ ನೀತಿ
ಶಾಸ್ತ್ರದ ಮೂಲಪಾಠ. ಆದರೆ ಅವಳೊಮ್ಮೆ ಒಲಿದರೆ ಅವಳ ಹೃದಯ ಸ್ವರ್ಗವಾಗು
ತ್ತದೆ. ಅವಳಕ್ಕನ ಮೇಲಣ ನಿರ್ವ್ಯಾಜವಾತ್ಸಲ್ಯವೇ ಇದಕ್ಕೆ ಸಾಕ್ಷಿ. ಪೆಂಬರ್ಲಿಯ ಸೇವಕ
ರಿಂದ, ತನ್ನತ್ತೆಯಿಂದ, ಪ್ರತ್ಯಕ್ಷಾನುಭವದಿಂದ ಡಾರ್ಸಿಯ ನಿಜಸ್ವರೂಪ ತಿಳಿದೊಡನೆ
ಎಲಿಸಬೆತ್ ತನ್ನನ್ನು ತಾನೆ ಹಂಗಿಸಿಕೊಳ್ಳುತ್ತಾಳೆ; ತನ್ನಂತೆ ಮಾನವಗುಣಪರೀಕ್ಷಕರು
ಮತ್ತೊಬ್ಬರಿಲ್ಲವೆಂಬ ಅಹಂಭಾವದ ಅವಳ ಮೊರೆತವೆಲ್ಲ ನಿರ್ನಾಮವಾಗುತ್ತದೆ.

ಇವರಿಬ್ಬರ ಹಮ್ಮು-ಬಿಮ್ಮಿನ ಕ್ರಿಯೆ ಪ್ರತಿಕ್ರಿಯೆಗಳಿಂದ ಕತೆಯ ಕ್ರಿಯೆ ಸರಾಗ
ವಾಗಿ ಸಾಗುತ್ತದೆ. ಆದುದರಿಂದ ಈ ಕೃತಿಗಿಟ್ಟಿರುವ ಹೆಸರು ಸಮುಚಿತವಾಗಿದೆ.

ಕಥೆ : ಪ್ರಾಪ್ತವಯಸ್ಕರಾದ ಹೆಣ್ಣುಮಕ್ಕಳಿಗೆ ಗಂಡು ಹುಡುಕುವುದು ಹೊತ್ತು
ಹೆತ್ತವರ ಆದ್ಯಕರ್ತವ್ಯ. ನೆರೆಹೊರೆಯ ನಾಲ್ಕಾರು ಕುಟುಂಬಗಳಲ್ಲಿ ಬೆಳೆದ ಹುಡುಗಿಯರು
ಬಹಳವಾಗಿದ್ದರೆ, ಆಗ ಸ್ಪರ್ಧೆ ಪ್ರತಿಸ್ಪರ್ಧೆಗಳು ಭಯಂಕರಾಕಾರ ತಾಳಿ ಆ ಕುಟುಂಬ
ಗಳಲ್ಲಿ ವಿರಸವುಂಟಾಗಬಹುದು. ಅಂಥ ಕುಟುಂಬಗಳಲ್ಲಿ ಲಾಂಗ್‌ಬರ್ನ್ ಹಳ್ಳಿಯ ಬೆನೆಟ್

ಕುಟುಂಬವೊಂದು; ಆ ಕುಟುಂಬದಲ್ಲಿ ಐವರು ಹೆಣ್ಮಕ್ಕಳು. ನೆರೆಯ ನೆದರ್‌ಫೀಲ್ಡ್ ಪಾರ್ಕ್‌ಗೆ ಕೆಲವು ದಿನಗಳ ತಂಗಣೆಗಾಗಿ ಬಂದ ಬಿಂಗ್ಲೆಯ ಮನವೊಲಿಸಿಕೊಳ್ಳಲು ಸಾಹುಕಾರು ಕುಟುಂಬದ ಕೋರಿಯರು ಬಲೆಯೊಡ್ಡುತ್ತಾರೆ. ಅವರ ಜೊತೆಗೆ ಡಾರ್ಸಿ ಬರುತ್ತಾನೆ. ಅವರ ಹಿಂದೆಯೇ ವಿಕ್ಯಾಮ್ ಮತ್ತು ಕೊಲಿನ್ಸರು ಲಾಂಗ್‌ಬರ್ನ್ ಹಳ್ಳಿಯ ನಾಟಕರಂಗವನ್ನು ಪ್ರವೇಶಿಸುತ್ತಾರೆ. ಒಂದಾದಮೇಲೊಂದು ಪ್ರತಿಬಂಧಕಗಳು ಸುರುಳಿ ಬಿಚ್ಚಿ ಮಾಯವಾದನಂತರ ಡಾರ್ಸಿ-ಎಲಿಸಬೆತ್ತರ, ಬಿಂಗ್ಲೆ-ಜೇನರ, ವಿಕ್ಯಾಮ್-ಲಿಡಿಯಾರ, ಕೊಲಿನ್ಸ್-ಲ್ಯೂಕಾಸ್‌ರ ವಿವಾಹವಾಗಿ ಕತೆ ಮಂಗಳದಲ್ಲಿ ಮುಕ್ತಾಯವಾಗುತ್ತದೆ.

ಕಥಾಸಂವಿಧಾನ: ಸುಮಾರು ಹನ್ನೆರಡು ಅಥವಾ ಹದಿನಾಲ್ಕು ತಿಂಗಳ ಅವಧಿಯಲ್ಲಿ ನಡೆದ ಈ ಕತೆಯಲ್ಲಿ ಅನೇಕ ಘಟನೆಗಳು ಒಂದರಮೇಲೊಂದು ನಾಟಕದ ದೃಶ್ಯಗಳಂತೆ ನಮ್ಮ ಕಣ್ಮುಂದೆ ಹಾದುಹೋಗುತ್ತವೆ. ಪಾತ್ರಗಳ ವ್ಯಕ್ತಿಗತವಾದ ಗುಣದೋಷ ದೌರ್ಬಲ್ಯಗಳಿಂದ, ಅವರ ತಪ್ಪೆಣಿಕೆಯಿಂದ ಹಲವಾರು ತೊಡರೆಡರುಗಳು ಸಂಭವಿಸಿ, ಪ್ರಮಾದಗಳ ಮೇಲೆ ಪ್ರಮಾದಗಳು ಸಂಘಟಿಸಿ, ತನ್ಮೂಲಕ ನೂತನ ಸನ್ನಿವೇಶಗಳು ಸೃಷ್ಟಿಸಿಕೊಂಡು, ಕಥಾಕ್ರಿಯೆ ಮುಂದುವರಿಯುತ್ತದೆ. ಮೊದಮೊದಲು ವಿರಾಮವಾಗಿ ಮಂದಗಮನದಿಂದ ಮುಂದುವರಿದರೂ ಮನಸ್ಸಿಗೆ ಬೇಸರವಾಗುವುದಿಲ್ಲ, ಕುತೂಹಲಾಸಕ್ತಿಗಳ ಬಿಸಿ ತಣ್ಣಗಾಗುವುದಿಲ್ಲ. ಕತೆಯ ಕಟ್ಟಡದಲ್ಲಿ ಯಾವ ತೊಡಕೂ ಇಲ್ಲ. ಮದುವೆ ಅಥವಾ ಮದುವೆಗಳಲ್ಲಿ ಕತೆ ಶಿಖರ ಮುಟ್ಟುತ್ತದೆ.

ಪಾತ್ರರಚನೆ: ಈ ಕಾದಂಬರಿಯಲ್ಲಿ ಐವತ್ತಕ್ಕೆ ಮೇಲ್ಪಟ್ಟು ಪಾತ್ರಗಳ ಹೆಸರು ಬರುತ್ತವೆ. ಆದರೆ ಅವುಗಳಲ್ಲಿ ಬಹು ಮುಖ್ಯವಾದುವು ಹತ್ತು ಅಥವಾ ಹನ್ನೆರಡು. ಅಲ್ಪ ಪ್ರಧಾನವಾದ, ಆದರೆ ಕತೆಯ ಬೆಳೆವಣಿಗೆಗೆ ಅತ್ಯುಪಯುಕ್ತವಾದ ಕೆಲವು ಪಾತ್ರಗಳಿಗೂ ಇಲ್ಲಿ ಸ್ಥಾನವುಂಟು: ಚಾರ್ಲಟ್ ಲ್ಯೂಕಾಸ್, ಕರ್ನಲ್ ಫಿಟ್ಸ್‌ವಿಲಿಯಮ್, ಕರ್ನಲ್ ಫಾರ್ಸ್ಟರ್, ಗಾರ್ಡಿನರ್ ದಂಪತಿಗಳು, ಕುಮಾರಿ ಡಿ ಬೋರ್—ಇವರು ಈ ವರ್ಗಕ್ಕೆ ಸೇರಿದವರು. ಕಥಾನಾಯಕ ನಾಯಿಕೆಯರ ಜೊತೆಯಲ್ಲಿದ್ದುಕೊಂಡೊ ಅಥವಾ ಅವರಿಗೆ ವಿರೋಧವಾಗಿ ವರ್ತಿಸಿಯೊ ಅವರ ಭವಿಷ್ಯ ಜೀವನವನ್ನು ರೂಪಿಸುವುದರಲ್ಲಿ ಸಕ್ರಿಯ ಜವಾಬ್ದಾರಿ ಹೊರುವಂಥ ವ್ಯಕ್ತಿಗಳಿವರು. ಉಳಿದುವು ಊಳಿಗದವರಂತೆ ತೆರೆಯ ಹಿಂದೆಯೆ ತಮ್ಮ ಕೆಲಸ ನಿರ್ವಹಿಸಿ ಯಾರಿಗೂ ಕಾಣದಂತೆ ಮರೆಯಾಗುವಂಥವು: ಕ್ಯಾಪ್ಟನ್ ಕಾರ್ಟರ್, ಡಾಸನ್, ಶ್ರೀಮತಿ ಲಾಂಗ್, ಶ್ರೀಮತಿ ಹಿಲ್, ಕುಮಾರಿ ಕಿಂಗ್, ಹರ್ಸ್ಟ್ ದಂಪತಿಗಳು, ಶ್ರೀಮತಿ ರೇನಾಲ್ಡ್ಸ್ ಮೊದಲಾದವರು ಈ ಗುಂಪಿಗೆ ಸೇರಿದವರು. ಒಮ್ಮೊಮ್ಮೆ ಪ್ರಧಾನ ಪಾತ್ರಗಳ ಗುಣಾವಗುಣಗಳಿಗೆ ಇವರು ಕನ್ನಡಿಯಾಗಿ, ಕತೆಯ ತಿರುವಿಗೆ ಕಾರಣರಾಗುವುದುಂಟು. ಡಾರ್ಸಿಯ ಪರಿಚಾರಿಕೆಯಾದ ಶ್ರೀಮತಿ ರೇನಾಲ್ಡ್ಸ್ ತನ್ನ ಯಜಮಾನನ ಬಗ್ಗೆ ಆತ್ಮೀಯವಾಗಿ ಅತ್ಯಂತ ಗೌರವದಿಂದ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದಾಗ ಬಿಮ್ಮಿನಿಂದ ಬೀಗುತ್ತಿದ್ದ ಎಲಿಸಬೆತ್‌ಳ

ಮನಸ್ಸು ಡಾರ್ಸಿಯ ಕಡೆಗೆ ಬಾಗುತ್ತದೆ. ಕಾದಂಬರಿಯ ವಿದೂಷಕನಂತಿರುವ ಕೊಲಿನ್ಸ್ ಪಾತ್ರ ಆವಶ್ಯಕವೆ? ಎಂಬ ಪ್ರಶ್ನೆ ಏಳುವುದುಂಟು. ಇಲ್ಲಿ ಅವನು ಬರಿಯ ವಿದೂಷಕನಲ್ಲ; ಬೆನೆಟ್ ಕುಟುಂಬದ ಆಸ್ತಿಯ ವಾರಸುದಾರನಾಗಿ, ಬೆನೆಟ್ ಕುಮಾರಿಯರ ಮೊದಲ ಗೆಣೆಕಾರನಾಗಿ, ಎಲಿಸಬೆತ್ ಡಾರ್ಸಿಯರ ಭೇಟಿಗೆ ಸಹಾಯಕನಾಗಿ ಅವನ ಪಾತ್ರಕ್ಕೆ ಪ್ರಾಮುಖ್ಯತೆಯೊದಗುತ್ತದೆ. ಈ ಕಾರಣಗಳಿಂದ ಯಾವ ಪಾತ್ರವನ್ನೂ ಅನವಶ್ಯವಾಗಿ ಸೃಷ್ಟಿಸಿಲ್ಲ, ಮಿತಿಮೀರಿ ಬೆಳೆಸಿಲ್ಲವೆಂದು ಹೇಳಬಹುದು. ಅಷ್ಟೇ ಅಲ್ಲ, ಇಲ್ಲಿ ಬರುವ ಪಾತ್ರಗಳು ಪ್ರಮುಖರಾಗಿರಲಿ ಅಪ್ರಮುಖರಾಗಿರಲಿ, ಪ್ರತಿಯೊಬ್ಬರೂ ವಿಶಿಷ್ಟ ಸ್ವಭಾವ ಲಕ್ಷಣಗಳನ್ನುಳ್ಳವರು; ಒಬ್ಬರು ಮತ್ತೊಬ್ಬರ ಪಡಿಯಚ್ಚಲ್ಲ.

ಸಾಮಂಜಸ್ಯ ಸಾಂಗತ್ಯ ಸುಸಂಬದ್ಧತೆ ಆಸ್ಟಿನ್‌ಳ ಪಾತ್ರರಚನೆಯ ಜೀವಾಳ. ಪಾತ್ರರಚನೆಯಲ್ಲವಳು ನಾಟಕೀಯ ವಿಧಾನವನ್ನನುಸರಿಸುತ್ತಾಳೆ. ತಾನೇ ಪಾತ್ರಗಳ ರೂಪ ಸ್ವರೂಪ ಗುಣಾವಗುಣಗಳನ್ನು ವರ್ಣಿಸಿ ಟೀಕಿಸಿ, ಅವರ ವೇಷಭೂಷಣ ಆಚಾರ ವಿಚಾರಗಳ ವಿವರಣೆಯ ಮೂಲಕ ಅವರ ರುಚಿ ಅಭಿರುಚಿಗಳನ್ನು ಸಂಸ್ಕೃತಿ ಮನೋಧರ್ಮಗಳನ್ನು ಪ್ರಕಟಿಸುವ ಪ್ರತ್ಯಕ್ಷ ವಿಧಾನ ಅವಳಿಗಷ್ಟು ಸಹಜವಾದುದಲ್ಲ. ಪ್ರತ್ಯಕ್ಷವಿಧಾನದ ಮೂಲಕವೇ ಮಾತ್ರ ನಿರ್ವಹಿಸಬಹುದಾದ ಕಾರ್ಯವನ್ನು ಸಹ ಪರೋಕ್ಷ ವಿಧಾನದ ಮೂಲಕ ನಿರ್ವಹಿಸುತ್ತಾಳೆ. ಪಕ್ಷ ಪ್ರತಿಪಕ್ಷದವರ ಪರಸ್ಪರ ಸಂಭಾಷಣೆಯ ಮೂಲಕ ಸ್ವಪಕ್ಷಪರಪಕ್ಷದವರ ಸ್ವರೂಪ ಸ್ವಭಾವಗಳು ಅಭಿವ್ಯಕ್ತ ಗೊಳ್ಳುತ್ತವೆ. ಈ ವಿಧಾನವಲ್ಲವಳು ಸಿದ್ಧಹಸ್ತೆ ಮಾತ್ರವಲ್ಲ, ಅವಳಿಗೆ ಸರಿಗಟ್ಟುವ ಕಾದಂಬರಿಕಾರರು ಬಹಳ ವಿರಳ.

ಪಾತ್ರಪರಿಚಯ : ಡಾರ್ಸಿ ಎಲಿಸಬೆತ್ತರು ಕಾದಂಬರಿಯ ನಾಯಕ ನಾಯಿಕೆಯರೆಂಬಂಶ ಮಾತ್ರ ನಿರ್ವಿವಾದವಾದುದು. ಅವರಿಬ್ಬರೇ ಕಾದಂಬರಿಯ ಕೇಂದ್ರ ಬಿಂದುಗಳು, ಮೇಟಿಗಳು. ಮೊದಮೊದಲು ನಮಗೆ ಡಾರ್ಸಿಯ ಪರಿಚಯವಾಗುವುದು ಎಲಿಸಬೆತ್ತಳ ಮೂಲಕ. ನೃತ್ಯಗೋಷ್ಠಿಯಲ್ಲಿ ಸರ್ ವಿಲಿಯಮ್ ಲ್ಯೂಕಾಸ್ ನೊಡನೆಯೊ, ಮನೆಯಲ್ಲಿ ಜೇನ್ ಒಡನೆಯೊ, ಕುಮಾರಿ ಲ್ಯೂಕಾಸ್ ಒಡನೆಯೊ ಮಾತಾಡುವಾಗ ಎಲಿಸಬೆತ್ ಅವನು ಬಿಂಕಗುಳಿಯೆಂದೂ ಹಮ್ಮುಗನೆಂದೂ ನಯವಿನಯ ಶೂನ್ಯನೆಂದೂ ಕಪಟಿಯೆಂದೂ ಧೂರ್ತನೆಂದೂ ನಾನಾವಿಧವಾಗಿ ಹಳಿಯುತ್ತಾಳೆ. ಅವನ ಆತ್ಮಪ್ರತಿಷ್ಠೆಗೆ ಓದುಗರೂ ಜುಗುಪ್ಸೆ ಪಡುವಂತಾಗುತ್ತದೆ. ಅವನ ಬಗ್ಗೆ ಯಾರೂ ಒಂದು ಒಳ್ಳೆಯ ಮಾತಾಡುವವರಿಲ್ಲ. ಕತೆಯ ಬೆಳವಣಿಗೆಯ ದೃಷ್ಟಿಯಿಂದ ಈ ಏರ್ಪಾಡು ಅತ್ಯವಶ್ಯ. ಆಸ್ಟಿನ್ ಈ ಕಾರ್ಯವನ್ನು ಅಸಮ ಸಂಯಮದಿಂದ ಯಶಸ್ವಿಯಾಗಿ ನಿರ್ವಹಿಸುತ್ತಾಳೆ. ತಾನು ಕುಲೀನನೆಂಬ ಕಾರಣದಿಂದ ಇತರ ಹುಡುಗಿಯರ ಜೊತೆಯಲ್ಲಿ ನೃತ್ಯಮಾಡಲು ಹಿಂಜರಿಯುತ್ತಾನೆ. ಜೇನ್–ಬಿಂಗ್ಲೆಯರ ಪ್ರೇಮ ಸೌಧ ಬಿರುಕುಬಿಡಲು ಇವನೇ ಕಾರಣ. ಜೇನಳ ವಂಶಕ್ಕಂಟಿ ಬಂದಿದ್ದ ಕಳಂಕವೊಂದು ನೆಪ. ಜೊತೆಗೆ ಅವಳು ಬಿಂಗ್ಲೆಯ ಬಗ್ಗೆ ಉಪೇಕ್ಷೆ ತಾಳಿದ್ದಳೆಂದು ಹೇಗೊ ನಿರ್ಣಯಿಸಿಕೊಳ್ಳುತ್ತಾನೆ. ಅವನ ಪ್ರಥಮ ಪ್ರಣಯದಲ್ಲಿಯೂ ಬಿಂಕದ ಕಳಂಕವಿದೆ. ಜೇನಳ ವಿವಾಹ

ಷಯದಲ್ಲಿ ಆಕ್ಷೇಪವೆತ್ತಿದ ವ್ಯಕ್ತಿಯೇ ಕೊನೆಗೆ ಎಲಿಸಬೆತ್ತಳಲ್ಲಿ ಅನುರಕ್ತನಾಗುತ್ತಾನೆ. ಣ್ಣಿ ಕುಕ್ಕದ ಅವಳ ಸೌಮ್ಯ ಸೌಂದರ್ಯಕ್ಕವನು ಮಾರುಹೋಗುತ್ತಾನೆ. ಒಮ್ಮೆ ಪ್ರಾದುರ್ಭವಿಸಿದ ಪ್ರೇಮ ಪಶ್ಚಾತ್ತಾಪದ ಮೂಸೆಯಲ್ಲಿ ಬೆಂದು ಬಿಂಕದ ಕಾಳಿಕೆಯನ್ನು ಕಳೆದುಕೊಂಡು ಸರ್ವಪರೀಕ್ಷೆಗಳಲ್ಲಿಯೂ ತೇರ್ಗಡೆ ಹೊಂದುತ್ತದೆ. ಆಗವನು ಸ್ವಾರ್ಥತೆಯ ನಯವಿನಯಗಳ ಮತ್ತು ಕ್ಷಮೆಯ ಸಾಕಾರಮೂರ್ತಿಯಾಗಿ ಕಾಣು ತ್ತಾನೆ. ಲಂಡಭಂಡರ ದುರ್ಮಾರ್ಗಿಗಳ ಶಿರೋಮಣಿಯಾದ ವಿಕ್ಕ್ಯಾಮ್‌ನ ಉದ್ಧಾರಕ್ಕೆ ಅವನ ಔದಾರ್ಯ ನೆರವಾಗುತ್ತದೆ. ಶ್ರೀಮಂತ ಕುಮಾರಿ ಡಿ ಬೋರ್‌ಳನ್ನು ಬಿಟ್ಟು ಸಾಮಾನ್ಯಸ್ತ್ರೀಯ ವಿವಾಹಕ್ಕೊಡಂಬಟ್ಟುದರಲ್ಲಿ ಅವನ ವಿವೇಕ ವ್ಯಕ್ತವಾಗುತ್ತದೆ. ಡಾರ್ಸಿ ಬಿಂಗ್ಲೆಯರ ನಿರ್ಮಲಸ್ನೇಹದಲ್ಲಿ ತ್ಯಾಗನಿಸ್ವಾರ್ಥತೆಗಳ ಪರಿಮಳ ಸಮಾವೇಶ ಗೊಂಡಿದೆ. ಮೊದಮೊದಲ ನಡೆನುಡಿಗಳಿಂದ ಅವನ ಸ್ವಭಾವ ವಿಕರ್ಷಕವಾಗಿ ಅವಹೇಳ ನಾತ್ಮಕವಾಗಿ ಕಂಡರೂ ಕೊನೆಕೊನೆಗೆ ಆತ್ಮಾಭಿಮಾನಗೌರವ ತ್ಯಾಗಗಳ ಮೂಲಕ ಪಶ್ಚಾತ್ತಾಪದ ಮೂಲಕ ಬೆನೆಟ್ ಕುಟುಂಬದ ಮಾತ್ರವಲ್ಲ, ಇಡೀ ವಾಚಕವೃಂದದ ಗೌರವಾದರಗಳಿಗೆ ಪಾತ್ರನಾಗುತ್ತಾನೆ.

ಪ್ರಾರಂಭದಲ್ಲಿ ಡಾರ್ಸಿಯೊಂದು ಧ್ರುವವಾದರೆ ಎಲಿಸಬೆತ್ ಮತ್ತೊಂದು ಧ್ರುವ. ಅವಳು ಅಕ್ಕ ಜೇನ್‌ಳಷ್ಟು ಸುಕುಮಾರ ಸುಂದರಳಲ್ಲದಿದ್ದರೂ ಆಕರ್ಷಕ ತರುಣಿ. ಡಾರ್ಸಿಯ ದೃಷ್ಟಿಯಲ್ಲಿ ಅವಳ ನೇತ್ರದ್ವಯಗಳು ಸೌಂದರ್ಯದ ಸರೋವರವಾಗಿದ್ದುವು. ಅವಳ ಕುಂದುಕುಂದಿಲ್ಲದ ಶರೀರ ಸೌಷ್ಠವ, ಅವಳ ಅಸಾಧಾರಣ ಬುದ್ಧಿಸೂಕ್ಷ್ಮತೆ ಪ್ರತ್ಯುತ್ಪನ್ನಮತಿ ವಿನೋದಪ್ರವೃತ್ತಿ, ಅವಳ ಬಿಚ್ಚುನುಡಿ ನೇರ್ನಡೆಗಳಲ್ಲಿ ಹೊರಹೊಮ್ಮು ದ್ದ ನಿಷ್ಕಪಟ ಮನೋಭಾವ ನಿಷ್ಕಳಂಕ ಗಾಂಭೀರ್ಯಗಳು ಜನಸಮುದಾಯದೂರನೂ, ಸ್ವಾಭಿಮಾನಿಯೂ ಪ್ರತಿಷ್ಠಾವಂತನೂ ಆದ ಡಾರ್ಸಿಯನ್ನು ಸಹ ಆಕರ್ಷಿಸುವುದಲ್ಲದೆ, ವನ ಸ್ವಭಾವವನ್ನು ತಿದ್ದಿ ಬೆಳಗುತ್ತವೆ; ಅವುಗಳಿಂದ ತನ್ನ ಕುಟುಂಬದಲ್ಲವಳು ರ್ವರ ಗೌರವಾದರಗಳಿಗೆ ಪಾತ್ರಳಾಗಿರುವುದಲ್ಲದೆ ಅಕ್ಕತಂಗಿಯರಿಗೆ ಮಾತ್ರವಲ್ಲ, ಂದೆಗೂ ಮಾರ್ಗದರ್ಶಕಳಾಗಿದ್ದಾಳೆ. ಅವಳ ಹಾಸ್ಯದಲ್ಲಿ ಕಹಿಯಿಲ್ಲ, ಒಗರಿಲ್ಲ; ಸಂಜೀವನ ಕ್ತಿಯಿದೆ; ಅದು ತಂದೆಗೆ ಮಾತ್ರವಲ್ಲ ಡಾರ್ಸಿಗೂ ಪ್ರಿಯವಾಗುತ್ತದೆ. ಅವಳ ಅದ್ಭುತ ಾದ ಮಾನವ ಸ್ವಭಾವ ಸೂಕ್ಷ್ಮಗ್ರಹಣಸಾಮರ್ಥ್ಯ ಲಿಡಿಯಾ ವಿಕ್ಕ್ಯಾಮ್ ಕೊಲಿನ್ಸ್ ೇಡಿ ಕ್ಯಾಥರೀನ್‌ರ ಪ್ರಕರಣಗಳಲ್ಲಿ ಸುಪ್ರಕಟವಾಗುತ್ತದೆ. ಅವಳ ಮಾತಿನಲ್ಲೊಮ್ಮೆ ತ್ತು ಬಿಂಕ ವ್ಯಕ್ತವಾಗುವುದು ನಿಜ; ಆದರೆ ಅವು ಸಭ್ಯತೆಯ ನೇಮಿರೇಖೆಯನ್ನು ಾಟುವುದಿಲ್ಲ. ಆದುದರಿಂದಲೆ ಜೆನೆಟ್ ಡಾರ್ಸಿ ಮತ್ತು ಗಾರ್ಡಿನರ್ ದಂಪತಿಗಳು ವುಗಳಲ್ಲೊಂದು ಸೊಗಸು ಕಾಣುತ್ತಾರೆ. ತನ್ನ ಕುಟುಂಬ ಸಂಬಂಧವಾದ ಗೌರವ ರಕ್ಷಣೆ ುಲ್ಲಿ ಅವಳಿಗೆ ಅತ್ಯಾಸಕ್ತಿ. ಅಕ್ಕನ ಮೇಲಣ ನಿಸ್ವಾರ್ಥವೂ ತ್ಯಾಗಮಯವೂ ವ್ಯಾಜವೂ ಆದ ವಾತ್ಸಲ್ಯ ಅವಳನ್ನು ಆದರ್ಶರಮಣಿಯರ ಶ್ರೇಣಿಗೊಯ್ಯುತ್ತದೆ. ದರೆ ಅವಳ ಬಿಮ್ಮುಬಿಗುಮಾನಗಳೇ ಮಾನವ ಸಹಜವಾದ ದೌರ್ಬಲ್ಯಕ್ಕೆ ತಳಹದಿ ಾಗಿ ಅವಳ ವಿಶಿಷ್ಟತೆಯನ್ನು ರಕ್ಷಿಸಿವೆ. ಈ ಹಮ್ಮು–ಬಿಮ್ಮುಗಳಿಗೆ ತವರಾದ ಕಥಾ ಯಕ ನಾಯಿಕೆಯರ ಸೃಷ್ಟಿಯಲ್ಲಿ, ಆ ಸೃಷ್ಟಿಯ ಕಲೆಗಾರಿಕೆಯಲ್ಲಿ ಆಸ್ಟಿನ್‌ಳ

ಒಂದು ನರ್ತನಕೂಟ ಎಂದರೆ ವಿಶಿಷ್ಟವಾದ, ಸಡಗರದ ಘಟನೆ. ಸ್ವಲ್ಪ ದೂರ ಹೋಗಬೇಕಾದರೂ ಗೌರವಸ್ಥರ ಮನೆಯ ಹೆಣ್ಣುಮಕ್ಕಳು ಮನೆಯ ಕುದುರೆಯೋ ಕೋಚೋ ಗಂಡಸರಿಗೆ ಅಗತ್ಯವಿಲ್ಲದಿರುವವರೆಗೆ ಕಾಯಬೇಕು, ಅವರ ಜೊತೆಗೆ ಗಂಡಸರು ಹೋಗಬೇಕು. ಹೆಂಗಸು ಒಬ್ಬಳೇ ಹೆಚ್ಚು ದೂರ ಹೋದರೆ ಆಗಲೆ ನೆರೆಹೊರೆಯವರ ಕಣ್ಣುಗಳು ಅರಳುವುವು, ನಾಲಿಗೆಗಳು ಪಿಸುಮಾತಾಡುವುವು. ಈ ಸದ್ದುಗದ್ದಲವಿಲ್ಲದ ಬದುಕಿನಲ್ಲಿ ಒಬ್ಬ ಯುವಕ, ಒಬ್ಬ ಯುವತಿ ಓಡಿಹೋದರೆಂದರೆ ಕೋಲಾಹಲ. ಇಲ್ಲಿ ಹೆಂಗಸರ ಮುಖ್ಯ ಕಾಳಜಿ ಎಂದರೆ, ಒಳ್ಳೆಯ ಗಂಡನನ್ನು ದಕ್ಕಿಸಿ ಕೊಳ್ಳುವುದು. ಯಾರು ಯಾರತ್ತ ಒಲಿಯುತ್ತಿದ್ದಾರೆ, ಯಾರು ಯಾರನ್ನು ಮದುವೆ ಯಾಗುತ್ತಾರೆ ಎನ್ನುವುದು ಅವರ ಮಾತುಕತೆಗಳ ಮತ್ತು ಅಂತರಂಗದ ವ್ಯಾಪಾರಗಳ ಮುಖ್ಯ ವಸ್ತು. ಜೇನ್ ಆಸ್ಟಿನ್ ತನ್ನ ಸೋದರ ಸೊಸೆಯರಿಗೆ ಬರೆದ ಕಾಗದಗಳಲ್ಲೆಲ್ಲ ಸುತ್ತಮುತ್ತಲಿನವರ ಸಂಸಾರಗಳ ಮಾಮೂಲು ಆಗುಹೋಗುಗಳು, ಆಗಲಿರುವ–ಆಗ ಬಹುದಾದ ಮದುವೆಗಳು, ಸೋದರ ಸೊಸೆಯರು ಗಂಡಂದಿರನ್ನು ಅರಿಸುವ ಘಟ್ಟ ಇವುಗಳ ಪ್ರಸ್ತಾಪವೇ.

ಜೇನ್ ಆಸ್ಟಿನ್ ಬರೆದದ್ದು ಆರು ಕಾದಂಬರಿಗಳು–'ಪ್ರೈಡ್ ಅಂಡ್ ಪ್ರೆಜುಡಿಸ್', 'ಸೆನ್ಸ್ ಅಂಡ್ ಸೆನ್ಸಿಬಿಲಿಟಿ', 'ನಾರ್ಥಾಂಜರ್ ಅಬೆ', 'ಮಾನ್ಸ್‌ಫೀಲ್ಡ್ ಪಾರ್ಕ್', 'ಎಮ್ಮಾ' ಮತ್ತು 'ಪರ್ಸುಯೇಷನ್.' ಅವಳ ಯುಗದಲ್ಲಿ ಹೆಂಗಸು ಸಾಹಿತ್ಯ ಸೃಷ್ಟಿ ಮಾಡುವುದೆಂದರೆ ಆಕ್ಷೇಪಣೆಗೆ ಯೋಗ್ಯವಾದ, ಗೌರವಸ್ಥರನ್ನು ದಂಗುಬಡಿಸುವ ಸಂಗತಿ. ಪ್ರಾರಂಭದಲ್ಲಿ ಅವಳ ಕಾದಂಬರಿಗೆ ತನ್ನ ಹೆಸರನ್ನು ಹಾಕಿಕೊಳ್ಳಲೇ ಇಲ್ಲ.

ತನ್ನ ನೇರವಾದ ಅನುಭವಕ್ಕೆ ನಿಷ್ಠಳಾದ ಜೇನ್ ಆಸ್ಟಿನ್ ತನ್ನ ಕಥೆಗಳಿಗೆ ತಾನು ಕಂಡ ಬದುಕು, ಸಮಾಜಗಳಷ್ಟನ್ನೇ ಬಳಸಿಕೊಂಡಳು. ಅವಳು ತೀರ ಬಡತನವನ್ನು, ಗೋಳನ್ನು ಕಾಣಲಿಲ್ಲ. ಅವಳಿಗೆ ಪರಿಚಿತವಾದ ಜಗತ್ತಿನಲ್ಲಿ ಎದ್ದು ಕಾಣುವ ಪಾಪಿ ಗಳಿರಲಿಲ್ಲ. ತಾನು ಯಾವುದನ್ನು ಬಣ್ಣಿಸುತ್ತೇನೆ ಎನ್ನುವುದನ್ನು ಅವಳೇ ಒಂದು ಕಾದಂಬರಿಯಲ್ಲಿ ಪ್ರಾಸಂಗಿಕವಾಗಿ ಹೇಳುತ್ತಾಳೆ: "ಪಾಪ, ಯಾತನೆಗಳನ್ನು ಇತರ ಲೇಖನಿಗಳು ಬಣ್ಣಿಸಲಿ." ಮತ್ತೊಂದು ಕಡೆ, "ನಾನು ಎರಡಂಗುಲ ಅಗಲದ ದಂತದ ಮೇಲೆ ಬಹು ಸೂಕ್ಷ್ಮವಾದ ಕೆಲಸ ಮಾಡುತ್ತೇನೆ, ಬಹು ಶ್ರಮದಿಂದ ಕಾಣುವ ಪರಿ ಣಾಮ ಬಹು ಸ್ವಲ್ಪ" ಎಂದಳು.

ಆದರೂ ಇವಳು ಇಂಗ್ಲಿಷ್ ಕಾದಂಬರಿಕಾರರ ಪ್ರಥಮ ಪಂಕ್ತಿಯಲ್ಲಿ ನಿಲ್ಲು ತ್ತಾಳೆ.

ಇದಕ್ಕೆ ಹಲವು ಕಾರಣಗಳುಂಟು. ಒಂದು ದೃಷ್ಟಿಯಿಂದ ಇವಳು ಸೃಷ್ಟಿಸುವ ಜಗತ್ತು ಬಹು ಸಂಕುಚಿತವಾದದ್ದು. ಇಲ್ಲಿ ಅತಿ ಶ್ರೀಮಂತರಿಲ್ಲ, ಅತಿ ಬಡವರಿಲ್ಲ. ಮೇಲಿನ ಮಧ್ಯಮತರಗತಿಯವರು, ಮಧ್ಯಮತರಗತಿಯವರು ಇವಳ ಜಗತ್ತಿನ ನಿವಾಸಿ ಗಳು. ಒಂದು ಸಣ್ಣ ಊರಿನ ಮಧ್ಯಮವರ್ಗದ ನಾಲ್ಕೈದು ಸಂಸಾರಗಳ ಸುತ್ತ ತನ್ನ ಕಥೆಯನ್ನು ಹೆಣೆಯುತ್ತಾಳೆ. ಕೇಂದ್ರ ಪಾತ್ರಗಳು, ನಾಲ್ಕೈದು ಮಂದಿ ತರುಣತರುಣಿ ಯರು, ವಸ್ತು ಅವರ ಪರಸ್ಪರ ಆಕರ್ಷಣೆ. ಆದರೆ ಜೇನ್ ಆಸ್ಟಿನಳಿಗೆ ಪ್ರಥಮ

ಪ್ರಣಯದಲ್ಲಿ, ಒಬ್ಬ ತರುಣ ಒಬ್ಬ ತರುಣಿ ಮೊದಲು ನೋಟದಲ್ಲಿ ತಾವು ಒಬ್ಬರಿನ್ನೊಬ್ಬರಿಗಾಗಿಯೇ ಹುಟ್ಟಿದವರೆಂದು ಪುಟಪುಟಿಯುವ ಪ್ರೇಮವನ್ನು ಅನುಭವಿಸುವುದರಲ್ಲಿ ನಂಬಿಕೆ ಇಲ್ಲ. ಇವಳು ಗೌರವಿಸುವುದು ಸಂಯಮವನ್ನು. ಇದರಿಂದ ಇವಳ ಕಾದಂಬರಿಗಳು ನಮ್ಮ ಮನಸ್ಸನ್ನು ಸೆಳೆಯುವ ಪ್ರಣಯದೃಶ್ಯಗಳಿಲ್ಲ, ತೀವ್ರ ಭಾವೋದ್ವೇಗದ ಸನ್ನಿವೇಶಗಳಿಲ್ಲ, ತೀವ್ರ ಸಂತಾಪ–ಗಾಢ ದುಃಖ–ರೋಮಾಂಚನಗೊಳಿಸುವ ಉದಾತ್ತತೆ ತ್ಯಾಗ ಇವು ತುಂಬಿರುವ ದೃಶ್ಯಗಳೂ ಇಲ್ಲ. ಜೇನ್ ಆಸ್ಟಿನ್ನಳ ಕಾದಂಬರಿಗಳನ್ನು ಸವಿಯುವುದಕ್ಕೆ ಮನಸ್ಸಿನ ಪರಿಪಕ್ವತೆ ಬೇಕು.

ಜೇನ್ ಆಸ್ಟಿನ್ನಳ ವಾಸ್ತವಿಕತೆಯೊಡನೆ ಎದ್ದು ಕಾಣುವುದು ಹಾಸ್ಯ. ಅವಳದು ನವಿರಾದ ಹಾಸ್ಯ, ಸಾಮಾನ್ಯವಾಗಿ ತುಟಿಗೆ ಮಂದಹಾಸವನ್ನು ತರಿಸುವ ಹಾಸ್ಯ, ಜನರ ನಡತೆಯ ಆಭಾಸವನ್ನು ತೆರೆದು ತೋರಿಸಿ ಮುಗುಳ್ನಗೆ ತರಿಸುವ ಹಾಸ್ಯ 'ಪ್ರೈಡ್ ಅಂಡ್ ಪ್ರೆಜುಡಿಸ್'ನಿಂದಲೇ ಅವಳ ಹಾಸ್ಯದ ವಿವಿಧ ಸ್ವರೂಪಗಳ ನಿದರ್ಶನಗಳನ್ನು ಕೊಡಬಹುದು. ಒಂದು ಕೂಟದಲ್ಲ ಒಬ್ಬ ಹುಡುಗಿಗೆ ಇತರರು, ಸೌಜನ್ಯಕ್ಕಾಗಿ ಮಾತ್ರ, ಹಾಡು ಎಂದು ಕೇಳುತ್ತಾರೆ. ಅವಳ ದನಿ ಚೆನ್ನಾಗಿಲ್ಲ. ಅವಳ ರೀತಿ ಅಸಹಜ. ಆದರೂ ಹಾಡಬೇಕೆಂಬ ಆಸೆ ಹಾಡುತ್ತಾಳೆ. (ಅವಳ ಅಕ್ಕ ಕಾದಂಬರಿಯ ನಾಯಕಿ, ಎಲಿಸಬೆತಳಿಗೆ ಅವಳು ಏಕಾದರೂ ಹಾಡುತ್ತಾಳೊ ಎಂದು ಸಂಕಟ) ಒಂದು ಹಾಡು ಮುಗಿಸುತ್ತಲೇ ಸುತ್ತ ಇರುವವರು, ಮತ್ತೆ ಸೌಜನ್ಯಕ್ಕಾಗಿ, ಚೆನ್ನಾಗಿತ್ತು ಎನ್ನುತ್ತಾರೆ. ಯಾರೋ ಒಬ್ಬರು, 'ಇನ್ನೊಂದು ಹಾಡು ಹಾಡಬಹುದಲ್ಲ' ಎನ್ನುತ್ತಾರೆ. ಈ ದಡ್ಡ ಹುಡುಗಿ ಇನ್ನೊಂದು ಹಾಡು ಪ್ರಾರಂಭಿಸಿಯೇ ಬಿಡುತ್ತಾಳೆ. ಎಲಿಸಬೆತ್ ಏನು ಮಾಡಬೇಕೆಂದು ತೋರದೆ ತಂದೆಯ ಕಡೆ ನೋಡುತ್ತಾಳೆ. ಅವನು, ಎರಡನೆಯ ಹಾಡು ಮುಗಿಯುತ್ತಲೇ "ತುಂಬಾ ಚೆನ್ನಾಗಿಯೇ ಇತ್ತು, ಮಗು. ನೀನು ನಮಗೆ ಸಾಕಷ್ಟು ಸಂತೋಷ ಕೊಟ್ಟಿದ್ದೀಯೆ. ಇತರ ಮಹಿಳೆಯರಿಗೂ ಅವಕಾಶ ಇರಲಿ" ಎನ್ನುತ್ತಾನೆ. ಸ್ವಲ್ಪ ಮುಜುಗರದಿಂದಲೇ ಹುಡುಗಿ ಮೇರಿ ಹಾಡನ್ನು ನಿಲ್ಲಿಸುತ್ತಾಳೆ. ಇಲ್ಲಿ ನಮಗೆ ನಗೆ ಬರುವುದು ಮೇರಿಯ ದಡ್ಡತನ, ಅವಳ ತಂದೆಯ ಬುದ್ಧಿವಂತಿಕೆಯ ಮಾತು ಇವುಗಳಿಂದ. (ಅವಳ ದಡ್ಡತನದ ಮೂಲ ಇನ್‌ಸೆನ್ಸಿಟಿವ್‌ನೆಸ್, ಇತರರ ಬಗ್ಗೆ ಯೋಚನೆಯೇ ಇಲ್ಲದ ತನ್ನ ಸಾಮರ್ಥ್ಯದ ಬಗ್ಗೆ ಲವಲೇಶವೂ ಸಂದೇಹವಿಲ್ಲದ ಅಹಂ, ದಪ್ಪಚರ್ಮ ಎನ್ನುವುದು ಗಮನಿಸಬೇಕಾದ ಸಂಗತಿ). ಇನ್ನೊಂದು ಸನ್ನಿವೇಶ ಇದು. ಮಿಸ್ಟರ್ ಕಾಲಿನ್ಸ್ ಎಂಬ ದಡ್ಡ, ತನ್ನ ದೊಡ್ಡಸ್ತಿಕೆಯ ಚಿಂತನೆಯಲ್ಲಿ ಮುಳುಗಿರುವ ಮನುಷ್ಯ, ಆದರೆ ನೆಮ್ಮದಿಯಾಗಿ ಬದುಕುವ ಸ್ಥಿತಿಯವನು, ಎಲಿಸಬೆತ್ ಬೆನೆಟಳಿಗೆ ತನ್ನನ್ನು ಮದುವೆಯಾಗುವಂತೆ ಕೇಳುತ್ತಾನೆ. ಸೂಕ್ಷ್ಮ ಬುದ್ಧಿಯ, ಲವಲವಿಕೆಯೇ ಮೈತಾಳಿದಂತಿರುವ ಎಲಿಜಬೆತ್ ನಿರಾಕರಿಸುತ್ತಾಳೆ. ಅವಳ ತಾಯಿ ಮಿಸೆಸ್ ಬೆನೆಟ್ ಮದುವೆಯಾಗಬೇಕಾದ ಐವರು ಹೆಣ್ಣುಮಕ್ಕಳನ್ನು ಮನೆಯಲ್ಲಿಟ್ಟುಕೊಂಡಿದ್ದಾಳೆ. ಅವರಿಗೆ ನೆಮ್ಮದಿಯಾಗಿ ಸಾಕಿಕೊಳ್ಳುವ ಗಂಡಂದಿರು ಸಿಕ್ಕರೆ ಸಾಕು ಅವಳಿಗೆ. ಜೊತೆಗೆ ಅವಳು ಮನಸ್ಸಿನ ಸೂಕ್ಷ್ಮ ಎಂದರೇನು ಎಂದೇ ತಿಳಿಯದವಳು, ನಯ ಅವಳ ಬಳಿ ಸುಳಿಯದು. ಅವಳು ಎಲಿಸಬೆತಳು

ನಯವಿನಯ ಸಂಪನ್ನನೂ ಸಾಧುವೂ ಸೌಮ್ಯನೂ ನಿಷ್ಕಪಟಿಯೂ ಪ್ರೇಮನಿಷ್ಠನೂ ಸ್ನೇಹಾರಾಧಕನೂ, ಆದರೆ ಅನ್ಯಛಾಯಾನುವರ್ತಿಯೂ ಆದ **ಬಿಂಗ್ಲೆ**; ಸಂಚುಹೊಂಚುಗಳ ಮಾಯಗಾತಿಯರೂ ಹೊಟ್ಟೆಕಿಚ್ಚಿನ ಮೊಟ್ಟೆಗಳೂ ಆದ **ಬಿಂಗ್ಲೆ ಸೋದರಿಯರು**; ಅಪ್ಪಟ ಖಲ ಪಾತ್ರವಲ್ಲದಿದ್ದರೂ, ಡೌಲಿನ ದುಂದುಗಾರನೂ ವಿಷಯ ಲಂಪಟನೂ ದುರಾಚಾರಿಯೂ ಮಿಥ್ಯಾವಾದಿಯೂ ಕಪಟಿಯೂ ಕೀಳನೂ ವಿಶ್ವಾಸಘಾತಕನೂ ಆದ **ವಿಕ್ಯಾಮ್**; ಆಗರ್ಭ ಶ್ರೀಮಂತೆಯೂ ಗರ್ವೋದ್ಧತೆಯಾದ ಪ್ರತಿಷ್ಠಾವಂತೆಯೂ ವಿವೇಕಶೂನ್ಯೆಯೂ ಆತ್ಮಸ್ತುತಿಪ್ರಿಯಳೂ ಸ್ವಯಂನಿಯಾಮಿತ ಮಹಾರಾಣಿಯೂ ಆದ **ಲೇಡಿ ಕ್ಯಾಥರೀನ್**; ಆರತಿ ತೋರಿದರೆ ಉಷ್ಣವಾಗುವ, ತೀರ್ಥ ಕುಡಿದರೆ ಶೀತವಾಗುವ, ಮಾತಾಡಿದರೆ ಮರವಡುವ, ಸೂಕ್ಷ್ಮಪ್ರಕೃತಿಯ ದುರ್ಬಲ ದೇಹದ ಸಣಕಲ ಗಿಡ್ಡಿ ಅವಳ ಮಗಳು **ಕುಮಾರಿ ಡಿ ಬೋರ್**; ಪುರಸಭಾಧ್ಯಕ್ಷನಾಗಿ ರಾಜಮನ್ನಣೆಗೆ ಪಾತ್ರನಾದ **ಸರ್ ವಿಲಿಯಂ ಲ್ಯೂಕಾಸ್**; ದುಃಖಾರ್ತರಿಗೆ ರಕ್ಷಾಮಣಿಗಳಾಗಿ ಸದಾ ಸಂತೃಪ್ತರಾದ ಆದರ್ಶ ದಂಪತಿಗಳಾಗಿ ಕಾದಂಬರಿಯಲ್ಲೆಲ್ಲ ಸ್ನೇಹ ಸೌಗಂಧವನ್ನು ಚೆಲ್ಲುವ **ಗಾರ್ಡಿನರ್ ದಂಪತಿಗಳು**— ಇವರು ಮತ್ತು ಇತರರು ಓದುಗರ ನೆನಪಿನಲ್ಲಿ ಶಾಶ್ವತವಾಗಿ ನಿಲ್ಲುತ್ತಾರೆ; ಅವರನ್ನು ಸೃಷ್ಟಿಸಿದ ಜೇನ್ ಆಸ್ಟಿನ್ ಕಾಲದೇಶಾತೀತವಾಗಿ ಸರ್ವಜನಾಂಗಗಳ ಸಹೃದಯ ಹೃನ್ಮಂದಿರದಲ್ಲಿ ಸುಪ್ರತಿಷ್ಠಿತಳಾಗಿದ್ದಾಳೆ.

ಹಿಂದೂ ಧರ್ಮ ಗಂಗೆಯಂತೆ ಮೂಲದಲ್ಲಿ ಅದು ಪರಿಶುದ್ಧ ಮತ್ತು ಅಕಳಂಕಿತ. ಆದರೆ ಮುನ್ನಡೆಯುವಾಗ ತನ್ನ ದಾರಿಯಲ್ಲಿನ ಅಶುದ್ಧ ವಸ್ತುಗಳನ್ನೆಲ್ಲಾ ತನ್ನೊಳಕ್ಕೆ ಎಳೆದುಕೊಳ್ಳುತ್ತದೆ. ಆದರೆ ಒಟ್ಟು ಪರಿಣಾಮದಲ್ಲಿ ಅದು ಗಂಗೆಯಂತೆಯೇ ಉಪಕಾರಿ.

ಗಾಂಧೀಜಿ

ಜೇನ್ ಆಸ್ಟಿನ್—ನೈತಿಕ ವಿವೇಚನೆಯ ಪ್ರತಿಭೆ

ಎಲ್. ಎಸ್. ಶೇಷಗಿರಿರಾವ್

ಒಬ್ಬ ಮಹಿಳೆ ಆರು ಕಾದಂಬರಿಗಳನ್ನು ಬರೆದಳು. ಇಂಗ್ಲಿಷ್ ಭಾಷೆಯಲ್ಲಿ ಬರೆದ ಕಾದಂಬರಿಕಾರರ ಮೊದಲ ಪಂಕ್ತಿಗೆ ಸೇರಿದವಳು ಎನ್ನಿಸಿಕೊಂಡಳು. ಅವಳ ಇಷ್ಟೂ ಕಾದಂಬರಿಗಳಲ್ಲಿ, ಗಂಡಸರು ಹೆಂಗಸರು ಇರುವ, ಮಾತನಾಡುವ ದೃಶ್ಯಗಳಿವೆ; ಹೆಂಗಸರು ಮಾತ್ರವೇ ಇರುವ ದೃಶ್ಯಗಳಿವೆ; ಆದರೆ ಗಂಡಸರು ಮಾತ್ರ ಇರುವ ಒಂದು ದೃಶ್ಯವೂ ಇಲ್ಲ.

ಕಾರಣ–ಗಂಡಸರು ತಾವು ತಾವೇ ಇದ್ದಾಗ ಹೇಗೆ ಮಾತನಾಡಿಕೊಳ್ಳುತ್ತಾರೆ, ನಡೆದುಕೊಳ್ಳುತ್ತಾರೆ ಎಂದು ಅವಳಿಗೆ ಸ್ವಂತ ಅನುಭವದಿಂದ ತಿಳಿದಿರಲು ಸಾಧ್ಯವಿರಲಿಲ್ಲ. ಹೆಂಗಸರು ಮಾತ್ರ ಇದ್ದಾಗ ಹೇಗೆ ನಡೆದುಕೊಳ್ಳುತ್ತಾರೆ, ಮಾತನಾಡುತ್ತಾರೆ, ಹೆಂಗಸರು ಗಂಡಸರು ಎಲ್ಲ ಇದ್ದಾಗ ಜನ ಹೇಗೆ ನಡೆದುಕೊಳ್ಳುತ್ತಾರೆ ಮಾತನಾಡುತ್ತಾರೆ ಇದು ಅವಳಿಗೆ ತನ್ನ ಅನುಭವದಿಂದ ತಿಳಿದಿತ್ತು. ನೇರವಾಗಿ ತನ್ನ ಅನುಭವಕ್ಕೆ ಬಾರದಿರುವುದನ್ನು ತಾನು ಚಿತ್ರಿವುದಿಲ್ಲ ಎಂದು, ಅನುಭವನಿಷ್ಠೆಯನ್ನು ಇಷ್ಟು ಕಟ್ಟುನಿಟ್ಟಾಗಿ ಪರಿಪಾಲಿಸಿದವಳು ಜೇನ್ ಆಸ್ಟಿನ್.

ಜೇನ್ ಆಸ್ಟಿನ್ ೧೭೭೫ರಲ್ಲಿ ಹುಟ್ಟಿದಳು. ಅವಳ ತಂದೆ ಇದ್ದದ್ದು ಒಂದು ಸಣ್ಣ ಊರಿನಲ್ಲಿ. ಅವನು ಚರ್ಚಿನಲ್ಲಿ ಅರ್ಚಕ. ಅವಳ ಇಡೀ ಜೀವನ ಸಣ್ಣ ಊರುಗಳಲ್ಲೆ ಕಳೆಯಿತು. ಈಗೊಮ್ಮೆ ಆಗೊಮ್ಮೆ ಲಂಡನಿಗೆ ಹೋಗಿ ಬರುತ್ತಿದ್ದಳು. ಅವಳು ತೀರಿಕೊಂಡದ್ದು ೧೮೧೭ರಲ್ಲಿ. ಅವಳ ಇಡೀ ಜೀವನ ಯಾವ ಏಳುಬೀಳುಗಳಿಲ್ಲದೆ ಸದ್ದು ರಭಸಗಳಿಲ್ಲದೆ ಸಾಗಿ ಮುಗಿಯಿತು. ಅವಳು ಮದುವೆಯಾಗಲೆ ಇಲ್ಲ. ಇನ್ನೂ ಬೈಸಿಕಲ್ ಸಹ ಹುಟ್ಟಿರದಿದ್ದ ಕಾಲ. ಹೆಂಗಸರು ಮನೆಬಿಟ್ಟರೆ ಅಕ್ಕಪಕ್ಕದ ಮನೆಗಳು, ಸಂತೆ, ಚರ್ಚ್ ಹೀಗೆ ಹತ್ತಿರದ ಸ್ಥಳಗಳಿಗೆ ಹೋಗಿ ಬರಬಹುದಾಗಿತ್ತು. ಒಬ್ಬರ ಮನೆಗೊಬ್ಬರು ಊಟಕ್ಕೆ ಹೋದರೆ ಅದೇ ದೊಡ್ಡ ವಿಷಯ.

ಒಂದು ನರ್ತನಕೂಟ ಎಂದರೆ ವಿಶಿಷ್ಟವಾದ, ಸಡಗರದ ಘಟನೆ. ಸ್ವಲ್ಪ ದೂರ ಹೋಗಬೇಕಾದರೂ ಗೌರವಸ್ಥರ ಮನೆಯ ಹೆಣ್ಣುಮಕ್ಕಳು ಮನೆಯ ಕುದುರೆಯೋ ಕೋಚೋ ಗಂಡಸರಿಗೆ ಅಗತ್ಯವಿಲ್ಲದಿರುವವರೆಗೆ ಕಾಯಬೇಕು, ಅವರ ಜೊತೆಗೆ ಗಂಡಸರು ಹೋಗಬೇಕು. ಹೆಂಗಸು ಒಬ್ಬಳೇ ಹೆಚ್ಚು ದೂರ ಹೋದರೆ ಆಗಲೆ ನೆರೆಹೊರೆಯವರ ಕಣ್ಣುಗಳು ಅರಳುವುವು, ನಾಲಿಗೆಗಳು ಪಿಸುಮಾತಾಡುವುವು. ಈ ಸದ್ದುಗದ್ದಲವಿಲ್ಲದ ಬದುಕಿನಲ್ಲಿ ಒಬ್ಬ ಯುವಕ, ಒಬ್ಬ ಯುವತಿ ಓಡಿಹೋದರೆಂದರೆ ಕೋಲಾಹಲ. ಇಲ್ಲಿ ಹೆಂಗಸರ ಮುಖ್ಯ ಕಾಳಜಿ ಎಂದರೆ, ಒಳ್ಳೆಯ ಗಂಡನನ್ನು ದಕ್ಕಿಸಿ ಕೊಳ್ಳುವುದು. ಯಾರು ಯಾರತ್ತ ಒಲಿಯುತ್ತಿದ್ದಾರೆ, ಯಾರು ಯಾರನ್ನು ಮದುವೆ ಯಾಗುತ್ತಾರೆ ಎನ್ನುವುದು ಅವರ ಮಾತುಕತೆಗಳ ಮತ್ತು ಅಂತರಂಗದ ವ್ಯಾಪಾರಗಳ ಮುಖ್ಯ ವಸ್ತು. ಜೇನ್ ಆಸ್ಟಿನ್ ತನ್ನ ಸೋದರ ಸೊಸೆಯರಿಗೆ ಬರೆದ ಕಾಗದಗಳಲ್ಲೆಲ್ಲ ಸುತ್ತಮುತ್ತಲಿನವರ ಸಂಸಾರಗಳ ಮಾಮೂಲು ಆಗುಹೋಗುಗಳು, ಆಗಲಿರುವ–ಆಗ ಬಹುದಾದ ಮದುವೆಗಳು, ಸೋದರ ಸೊಸೆಯರು ಗಂಡಂದಿರನ್ನು ಆರಿಸುವ ಘಟ್ಟ ಇವುಗಳ ಪ್ರಸ್ತಾಪವೇ.

ಜೇನ್ ಆಸ್ಟಿನ್ ಬರೆದದ್ದು ಆರು ಕಾದಂಬರಿಗಳು–'ಪ್ರೈಡ್ ಅಂಡ್ ಪ್ರೆಜುಡಿಸ್', 'ಸೆನ್ಸ್ ಅಂಡ್ ಸೆನ್ಸಿಬಿಲಿಟಿ', 'ನಾರ್ಥಾಂಜರ್ ಅಬೆ', 'ಮಾನ್ಸ್‌ಫೀಲ್ಡ್ ಪಾರ್ಕ್', 'ಎಮ್ಮಾ' ಮತ್ತು 'ಪರ್ಸುಯೇಷನ್.' ಅವಳ ಯುಗದಲ್ಲಿ ಹೆಂಗಸು ಸಾಹಿತ್ಯ ಸೃಷ್ಟಿ ಮಾಡುವುದೆಂದರೆ ಆಕ್ಷೇಪಣೆಗೆ ಯೋಗ್ಯವಾದ, ಗೌರವಸ್ಥರನ್ನು ದಂಗುಬಡಿಸುವ ಸಂಗತಿ. ಪ್ರಾರಂಭದಲ್ಲಿ ಅವಳ ಕಾದಂಬರಿಗೆ ತನ್ನ ಹೆಸರನ್ನು ಹಾಕಿಕೊಳ್ಳಲೇ ಇಲ್ಲ.

ತನ್ನ ನೇರವಾದ ಅನುಭವಕ್ಕೆ ನಿಷ್ಠಳಾದ ಜೇನ್ ಆಸ್ಟಿನ್ ತನ್ನ ಕಥೆಗಳಿಗೆ ತಾನು ಕಂಡ ಬದುಕು, ಸಮಾಜಗಳಷ್ಟನ್ನೇ ಬಳಸಿಕೊಂಡಳು. ಅಸಳು ತೀರ ಬಡತನವನ್ನು, ಗೋಳನ್ನು ಕಾಣಲಿಲ್ಲ. ಅವಳಿಗೆ ಪರಿಚಿತವಾದ ಜಗತ್ತಿನಲ್ಲಿ ಎದ್ದು ಕಾಣುವ ಪಾಪಿ ಗಳಿರಲಿಲ್ಲ. ತಾನು ಯಾವುದನ್ನು ಬಣ್ಣಿಸುತ್ತೇನೆ ಎನ್ನುವುದನ್ನು ಅವಳೇ ಒಂದು ಕಾದಂಬರಿಯಲ್ಲಿ ಪ್ರಾಸಂಗಿಕವಾಗಿ ಹೇಳುತ್ತಾಳೆ: "ಪಾಪ, ಯಾತನೆಗಳನ್ನು ಇತರ ಲೇಖನಿಗಳು ಬಣ್ಣಿಸಲಿ." ಮತ್ತೊಂದು ಕಡೆ, "ನಾನು ಎರಡಂಗುಲ ಅಗಲದ ದಂತದ ಮೇಲೆ ಬಹು ಸೂಕ್ಷ್ಮವಾದ ಕೆಲಸ ಮಾಡುತ್ತೇನೆ, ಬಹು ಶ್ರಮದಿಂದ ಕಾಣುವ ಪರಿ ಣಾಮ ಬಹು ಸ್ವಲ್ಪ" ಎಂದಳು.

ಆದರೂ ಇವಳು ಇಂಗ್ಲಿಷ್ ಕಾದಂಬರಿಕಾರರ ಪ್ರಥಮ ಪಂಕ್ತಿಯಲ್ಲಿ ನಿಲ್ಲು ತ್ತಾಳೆ.

ಇದಕ್ಕೆ ಹಲವು ಕಾರಣಗಳುಂಟು. ಒಂದು ದೃಷ್ಟಿಯಿಂದ ಇವಳು ಸೃಷ್ಟಿಸುವ ಜಗತ್ತು ಬಹು ಸಂಕುಚಿತವಾದದ್ದು. ಇಲ್ಲಿ ಅತಿ ಶ್ರೀಮಂತರಿಲ್ಲ, ಅತಿ ಬಡವರಿಲ್ಲ. ಮೇಲಿನ ಮಧ್ಯಮತರಗತಿಯವರು, ಮಧ್ಯಮತರಗತಿಯವರು ಇವಳ ಜಗತ್ತಿನ ನಿವಾಸಿ ಗಳು. ಒಂದು ಸಣ್ಣ ಊರಿನ ಮಧ್ಯಮವರ್ಗದ ನಾಲ್ಕೈದು ಸಂಸಾರಗಳ ಸುತ್ತ ತನ್ನ ಕಥೆಯನ್ನು ಹೆಣೆಯುತ್ತಾಳೆ. ಕೇಂದ್ರ ಪಾತ್ರಗಳು, ನಾಲ್ಕೈದು ಮಂದಿ ತರುಣತರುಣಿ ಯರು, ವಸ್ತು ಅವರ ಪರಸ್ಪರ ಆಕರ್ಷಣೆ. ಆದರೆ ಜೇನ್ ಆಸ್ಟಿನಳಿಗೆ ಪ್ರಥಮ

ಪ್ರಣಯದಲ್ಲಿ, ಒಬ್ಬ ತರುಣ ಒಬ್ಬ ತರುಣಿ ಮೊದಲು ನೋಟದಲ್ಲಿ ತಾವು ಒಬ್ಬರಿನ್ನೊಬ್ಬರಿಗಾಗಿಯೇ ಹುಟ್ಟಿದವರೆಂದು ಪುಟಪುಟಿಯುವ ಪ್ರೇಮವನ್ನು ಅನುಭವಿಸುವುದರಲ್ಲಿ ನಂಬಿಕೆ ಇಲ್ಲ. ಇವಳು ಗೌರವಿಸುವುದು ಸಂಯಮವನ್ನು. ಇದರಿಂದ ಇವಳ ಕಾದಂಬರಿಗಳು ನಮ್ಮ ಮನಸ್ಸನ್ನು ಸೆಳೆಯುವ ಪ್ರಣಯದೃಶ್ಯಗಳಿಲ್ಲ, ತೀವ್ರ ಭಾವೋದ್ವೇಗದ ಸನ್ನಿವೇಶಗಳಿಲ್ಲ, ತೀವ್ರ ಸಂತಾಪ–ಗಾಢ ದುಃಖ–ರೋಮಾಂಚನಗೊಳಿಸುವ ಉದಾತ್ತತೆ ತ್ಯಾಗ ಇವು ತುಂಬಿರುವ ದೃಶ್ಯಗಳೂ ಇಲ್ಲ. ಜೇನ್ ಆಸ್ಟಿನ್ನಳ ಕಾದಂಬರಿಗಳನ್ನು ಸವಿಯುವುದಕ್ಕೆ ಮನಸ್ಸಿನ ಪರಿಪಕ್ವತೆ ಬೇಕು.

ಜೇನ್ ಆಸ್ಟಿನ್ನಳ ವಾಸ್ತವಿಕತೆಯೊಡನೆ ಎದ್ದು ಕಾಣುವುದು ಹಾಸ್ಯ. ಅವಳದು ನವಿರಾದ ಹಾಸ್ಯ, ಸಾಮಾನ್ಯವಾಗಿ ತುಟಿಗೆ ಮಂದಹಾಸವನ್ನು ತರಿಸುವ ಹಾಸ್ಯ, ಜನರ ನಡತೆಯ ಆಭಾಸವನ್ನು ತೆರೆದು ತೋರಿಸಿ ಮುಗುಳ್ನಗೆ ತರಿಸುವ ಹಾಸ್ಯ 'ಪ್ರೈಡ್ ಅಂಡ್ ಪ್ರೆಜುಡಿಸ್'ನಿಂದಲೇ ಅವಳ ಹಾಸ್ಯದ ವಿವಿಧ ಸ್ವರೂಪಗಳ ನಿದರ್ಶನಗಳನ್ನು ಕೊಡಬಹುದು. ಒಂದು ಕೂಟದಲ್ಲ ಒಬ್ಬ ಹುಡುಗಿಗೆ ಇತರರು, ಸೌಜನ್ಯಕ್ಕಾಗಿ ಮಾತ್ರ, ಹಾಡು ಎಂದು ಕೇಳುತ್ತಾರೆ. ಅವಳ ದನಿ ಚೆನ್ನಾಗಿಲ್ಲ. ಅವಳ ರೀತಿ ಅಸಹಜ. ಆದರೂ ಹಾಡಬೇಕೆಂಬ ಆಸೆ ಹಾಡುತ್ತಾಳೆ. (ಅವಳ ಅಕ್ಕ ಕಾದಂಬರಿಯ ನಾಯಕಿ, ಎಲಿಸಬೆತಳಿಗೆ ಅವಳು ಏಕಾದರೂ ಹಾಡುತ್ತಾಳೊ ಎಂದು ಸಂಕಟ) ಒಂದು ಹಾಡು ಮುಗಿಸುತ್ತಲೇ ಸುತ್ತ ಇರುವವರು, ಮತ್ತೆ ಸೌಜನ್ಯಕ್ಕಾಗಿ, ಚೆನ್ನಾಗಿತ್ತು ಎನ್ನುತ್ತಾರೆ. ಯಾರೋ ಒಬ್ಬರು, 'ಇನ್ನೊಂದು ಹಾಡು ಹಾಡಬಹುದಲ್ಲ' ಎನ್ನುತ್ತಾರೆ. ಈ ದಡ್ಡ ಹುಡುಗಿ ಇನ್ನೊಂದು ಹಾಡು ಪ್ರಾರಂಭಿಸಿಯೇ ಬಿಡುತ್ತಾಳೆ. ಎಲಿಸಬೆತ್ ಏನು ಮಾಡಬೇಕೆಂದು ತೋರದೆ ತಂದೆಯ ಕಡೆ ನೋಡುತ್ತಾಳೆ. ಅವನು, ಎರಡನೆಯ ಹಾಡು ಮುಗಿಯುತ್ತಲೇ "ತುಂಬಾ ಚೆನ್ನಾಗಿಯೇ ಇತ್ತು, ಮಗು. ನೀನು ನಮಗೆ ಸಾಕಷ್ಟು ಸಂತೋಷ ಕೊಟ್ಟಿದ್ದೀಯೆ. ಇತರ ಮಹಿಳೆಯರಿಗೂ ಅವಕಾಶ ಇರಲಿ" ಎನ್ನುತ್ತಾನೆ. ಸ್ವಲ್ಪ ಮುಜುಗರದಿಂದಲೇ ಹುಡುಗಿ ಮೇರಿ ಹಾಡನ್ನು ನಿಲ್ಲಿಸುತ್ತಾಳೆ. ಇಲ್ಲಿ ನಮಗೆ ನಗೆ ಬರುವುದು ಮೇರಿಯ ದಡ್ಡತನ, ಅವಳ ತಂದೆಯ ಬುದ್ಧಿವಂತಿಕೆಯ ಮಾತು ಇವುಗಳಿಂದ. (ಅವಳ ದಡ್ಡತನದ ಮೂಲ ಇನ್‌ಸೆನ್ಸಿಟಿವ್‌ನೆಸ್, ಇತರರ ಬಗ್ಗೆ ಯೋಚನೆಯೇ ಇಲ್ಲದ ತನ್ನ ಸಾಮರ್ಥ್ಯದ ಬಗ್ಗೆ ಲವಲೇಶವೂ ಸಂದೇಹವಿಲ್ಲದ ಅಹಂ, ದಪ್ಪಚರ್ಮ ಎನ್ನುವುದು ಗಮನಿಸಬೇಕಾದ ಸಂಗತಿ). ಇನ್ನೊಂದು ಸನ್ನಿವೇಶ ಇದು. ಮಿಸ್ಟರ್ ಕಾಲಿನ್ಸ್ ಎಂಬ ದಡ್ಡ, ತನ್ನ ದೊಡ್ಡಸ್ತಿಕೆಯ ಚಿಂತನೆಯಲ್ಲಿ ಮುಳುಗಿರುವ ಮನುಷ್ಯ, ಆದರೆ ನೆಮ್ಮದಿಯಾಗಿ ಬದುಕುವ ಸ್ಥಿತಿಯವನು, ಎಲಿಸಬೆತ್ ಬೆನೆಟಳಿಗೆ ತನ್ನನ್ನು ಮದುವೆಯಾಗುವಂತೆ ಕೇಳುತ್ತಾನೆ. ಸೂಕ್ಷ್ಮ ಬುದ್ಧಿಯ, ಲವಲವಿಕೆಯೇ ಮೈತಾಳಿದಂತಿರುವ ಎಲಿಸಬೆತ್ ನಿರಾಕರಿಸುತ್ತಾಳೆ. ಅವಳ ತಾಯಿ ಮಿಸೆಸ್ ಬೆನೆಟ್ ಮದುವೆಯಾಗಬೇಕಾದ ಐದು ಹೆಣ್ಣುಮಕ್ಕಳನ್ನು ಮನೆಯಲ್ಲಿಟ್ಟುಕೊಂಡಿದ್ದಾಳೆ. ಅವರಿಗೆ ನೆಮ್ಮದಿಯಾಗಿ ಇಟ್ಟುಕೊಳ್ಳುವ ಗಂಡಂದಿರು ಸಿಕ್ಕರೆ ಸಾಕು ಅವಳಿಗೆ. ಜೊತೆಗೆ ಅವಳು ಮನಸ್ಸಿನ ಸೂಕ್ಷ್ಮ ಎಂದರೇನು ಎಂದೇ ತಿಳಿಯದವಳು, ನಯ ಅವಳ ಬಳಿ ಸುಳಿಯದು. ಅವಳು ಎಲಿಸಬೆತಳು

ಕಾಲಿನ್ಸನನ್ನು ಮದುವೆಯಾಗಬೇಕೆಂದು ಆಗ್ರಹದಿಂದ ಹೇಳುತ್ತಾಳೆ. ಎಲಿಸಬೆತ್ ಒಪ್ಪುವುದಿಲ್ಲ. ಮಿಸೆಸ್ ಬೆನೆಟ್ ತನ್ನ ಗಂಡನ ಬಳಿಗೆ ದೂರನ್ನು ಒಯ್ಯುತ್ತಾಳೆ. ಗಂಡ ಎಲಿಸಬೆತ್‌ಳಿಗೆ ಸಿಟ್ಟಿನಿಂದ ಹೇಳಿ ಅವಳು ಕಾಲಿನ್ಸನನ್ನು ಮದುವೆಯಾಗುವಂತೆ ಮಾಡುತ್ತಾನೆ ಎಂದು ಅವಳ ನಂಬಿಕೆ. ಅವಳೆದುರಿನಲ್ಲಿ ಮಿಸ್ಟರ್ ಬೆನೆಟ್ ಎಲಿಸಬೆತ ಳನ್ನು ಕರೆದು, “ನೀನು ಕಾಲಿನ್ಸನನ್ನು ಮದುವೆಯಾಗಲು ನಿರಾಕರಿಸಿದ್ದೀಯ ?” ಎಂದು ಕೇಳುತ್ತಾಳೆ.

ಅವಳು, “ಹೌದು” ಎನ್ನುತ್ತಾಳೆ.

“ಸರಿ. ಈಗ ವಿಷಯಕ್ಕೆ ಬರೋಣ. ನಿನ್ನ ತಾಯಿ ನೀನು ಅವನನ್ನು ಒಪ್ಪಲೇ ಬೇಕೆಂದು ಹಠ ಹಿಡಿದಿದ್ದಾಳೆ. ಅಲ್ಲವೆ ಮಿಸೆಸ್ ಬೆನೆಟ್ ?”

“ಹೌದು. ಅವಳು ಅವರನ್ನು ಒಪ್ಪದಿದ್ದರೆ ನಾನು ಮತ್ತೆ ಅವಳನ್ನು ನೋಡು ವುದೇ ಇಲ್ಲ” ಎನ್ನುತ್ತಾಳೆ ಮಿಸೆಸ್ ಬೆನೆಟ್.

ಮಿಸ್ಟರ್ ಬೆನೆಟ್: “ಎಲಿಸಬೆತ್, ನಿನ್ನ ಮುಂದೆ ಯಾವುದನ್ನು ಆರಿಸಿದರೂ ಬೇಸರವನ್ನೆ ತರುವ ಎರಡು ದಾರಿಗಳಿವೆ. ಇವತ್ತಿನಿಂದ ನೀನು ನಿನ್ನ ತಂದೆತಾಯಿಯರಲ್ಲಿ ಒಬ್ಬರನ್ನು ನೋಡುವಂತಿಲ್ಲ. ನೀನು ಮಿಸ್ಟರ್ ಕಾಲಿನ್ಸನನ್ನು ಮದುವೆಯಾಗದಿದ್ದರೆ ನಿನ್ನ ತಾಯಿ ಮತ್ತೆ ನಿನ್ನ ಮುಖವನ್ನು ನೋಡುವುದಿಲ್ಲ. ನೀನು ಅವನನ್ನು ಮದುವೆ ಯಾದರೆ ನಾನು ನೋಡುವುದಿಲ್ಲ.”

ಮಿಸ್ಟರ್ ಬೆನೆಟನ ಅನಿರೀಕ್ಷಿತ ಮಾತನ್ನು ಕೇಳಿ ನಗು ಬರುತ್ತದೆ. ಗಟ್ಟಿಯಾಗಿಯೇ ನಗು ಬರುತ್ತದೆ. ಇಲ್ಲಿ ನಗುವಿನ ಮೂಲ ಅನಿರೀಕ್ಷಿತತೆಯೊಂದೇ ಅಲ್ಲ, ಮಿಸೆಸ್ ಬೆನೆಟಳ ಮೂರ್ಖತನಕ್ಕೆ ಶಿಕ್ಷೆಯಾಯಿತೆಂದೂ ನಗುತ್ತೇವೆ.

ಮತ್ತೊಂದು ಸನ್ನಿವೇಶದಲ್ಲಿ, ಎಲಿಸಬೆತ್ ಮತ್ತು ಸ್ವಲ್ಪ ಅಹಂಕಾರಿಯಂತೆ ಕಂಡರೂ ಯೋಗ್ಯ ತರುಣನಾದ ಡಾರ್ಸಿ ಹಳ್ಳಿಯ ಜೀವನವನ್ನು ಕುರಿತು ಗಂಭೀರ ವಾಗಿ ಮಾತನಾಡುತ್ತಿದ್ದಾರೆ. ಎಲಿಸಬೆತಳು, ಸಂಕೀರ್ಣ ಸ್ವಭಾವದವರನ್ನು ಅಧ್ಯಯನ ಮಾಡುವುದೇ ಒಂದು ಖುಷಿ ಎನ್ನುತ್ತಾಳೆ. ಡಾರ್ಸಿ, “ಗ್ರಾಮಜೀವನದಲ್ಲಿ ಅಂತಹ ಜನ ವಿರಳ. ಹಳ್ಳಿಯಲ್ಲಿ ನೀವು ಸಣ್ಣದಾದ, ಬದಲೇ ಆಗದ ಸಾಮಾಜಿಕ ಆವರಣದಲ್ಲಿ ಓಡಾಡುತ್ತೀರಿ” ಎನ್ನುತ್ತಾನೆ. ಜನರ ಸ್ವಭಾವವೇ ಬದಲಾಗುತ್ತದೆ ಎನ್ನುತ್ತಾಳೆ ಎಲಿಸಬೆತ್. ಮನುಷ್ಯ ಸ್ವಭಾವವನ್ನು ಕುರಿತು ಗಂಭೀರವಾದ ಅವರ ಮಾತುಗಳನ್ನು ಅರ್ಥ ಮಾಡಿಕೊಳ್ಳಲಾರದ ಅವಳ ತಾಯಿ, “ಹೌದು ಹೌದು. ಅದು ಪಟ್ಟಣದಲ್ಲಿ ಎಷ್ಟು ನಡೆಯುತ್ತದೆಯೋ ಅಷ್ಟರ ಮಟ್ಟಿಗೇ ಹಳ್ಳಿಯಲ್ಲೂ ನಡೆಯುತ್ತಿದೆ” ಎಂದು ಸಿಡುಕುತ್ತ ಹೇಳಿ ಮುಂದೆ, “ಇಲ್ಲಿ ನಾವು ಇಪ್ಪತ್ತನಾಲ್ಕು ಸಂಸಾರಗಳೊಂದಿಗೆ ಭೋಜನ ಮಾಡುತ್ತೇವೆ” ಎಂದು ಹೆಮ್ಮೆಯಿಂದ ಹೇಳುತ್ತಾಳೆ. ಇಲ್ಲಿ ನಮಗೆ ನಗೆ ಬರುವುದು ಆ ಸನ್ನಿವೇಶದಲ್ಲಿರುವ ಪಾತ್ರಗಳ ನಡುವಣ ಬೌದ್ಧಿಕ ಅಂತರದಿಂದ.

ಇಲ್ಲಿ ಮಿಸ್ಟರ್ ಕಾಲಿನ್ಸನ ಪ್ರಸ್ತಾಪ ಬಂದಿದೆ. ಇವನು ಜೇನ್ ಆಸ್ಟಿನ್ ಸೃಷ್ಟಿಸಿದ ಒಂದು ಅಪೂರ್ವ ಹಾಸ್ಯಪಾತ್ರ. ಇವನು ಚರ್ಚಿನಲ್ಲಿ ಅರ್ಚಕ. ಆದರೆ ಹೆಮ್ಮೆಯ ಮುದ್ದೆ. ಮನಸ್ಸಿನ ಸೂಕ್ಷ್ಮತೆಯು ಲವಲೇಶವೂ ಇಲ್ಲ. ಇವನಿಗೆ ಕೆಲಸ

ಕೊಟ್ಟವಳು. ಇವನ ಆಶ್ರಯದಾತೆ ಲೇಡಿ ಕ್ಯಾಥರಿನ್ ಡ ಬರೊ ಎಂಬ ಶ್ರೀಮಂತಳು, ಅಹಂಕಾರದ ಮೂರ್ತಿ. ಕಾಲಿನ್ಸ್ ಹುಟ್ಟುಗುಲಾಮ. ಅವನು ಧರ್ಮಾಧಿಕಾರಿಯಾದರೂ ಅವನ ನಡತೆಯಲ್ಲಿ ದೇವರಿಗಿಂತ ಮೇಲಿನ ಸ್ಥಾನ ಲೇಡಿ ಕ್ಯಾಥರಿನಳಿಗೆ. ಈ ಮನುಷ್ಯ ಮಿಸ್ಟರ್ ಬೆನೆಟನ ಹೆಣ್ಣುಮಕ್ಕಳಲ್ಲಿ ಒಬ್ಬಳನ್ನು ಮದುವೆಯಾಗಬೇಕೆಂದು ಬರುತ್ತಾನೆ. ಮೊದಲನೆಯವಳು ಜೇನ್, ಬಹು ಸುಂದರಿ. ಅವಳನ್ನು ಮದುವೆಯಾಗುತ್ತೇನೆ ಎನ್ನುತ್ತಾನೆ. ಅವಳಿಗೆ ಮದುವೆ ಗೊತ್ತಾಗುವಂತಿದೆ ಎಂದು ತಿಳಿಯುತ್ತಲೇ ; ಒಂದು ಕ್ಷಣದಲ್ಲಿ ನೂರರಲ್ಲಿ ಒಂದರಷ್ಟು ಕಾಲವೂ ಯೋಚಿಸದೆ, ಅವಳ ನಂತರದವಳು ಎಲಿಸಬೆತಳನ್ನು ಮದುವೆಯಾಗುತ್ತಾನೆ. 'ನನ್ನನ್ನು ಮದುವೆಯಾಗಲೊಪ್ಪು' ಎಂದು ಅವಳನ್ನು ಕೇಳುವ ದೃಶ್ಯ ಹಾಸ್ಪದ ಗಟ್ಟಿ. 'ನೀನು ನನ್ನನ್ನು ಮದುವೆಯಾಗು ಎಂದು ಕೇಳುವ ಮೊದಲು ನಾನು ಮದುವೆಯಾಗಲು ನಿರ್ಧರಿಸಿರುವುದಕ್ಕೆ ಕಾರಣಗಳನ್ನು ಹೇಳುತ್ತೇನೆ' ಎಂದು ಕಾರಣಗಳನ್ನು ಕೊಡುತ್ತಾನೆ. (ಅವನು ಮದುವೆಯಾಗಬೇಕೆಂದು ಲೇಡಿ ಕ್ಯಾಥರೀನಳು ಹೇಳಿದ್ದಾಳೆ ಎನ್ನುವುದೊಂದು ಮುಖ್ಯ ಕಾರಣ!) ಅವನ ಪಟ್ಟಿಯಲ್ಲಿ ಪ್ರೇಮಕ್ಕೆ ಸ್ಥಾನವೇ ಇಲ್ಲ! 'ನಿನ್ನಲ್ಲಿ ನನಗೆ ಪ್ರೀತಿ. ನಿನ್ನನ್ನು ಮದುವೆಯಾಗಬೇಕೆಂದು ಹಂಬಲ' ಎನ್ನುವ ಮಾತನ್ನು ಹೇಳಬೇಕೆಂದೆ ಅವನಿಗೆ ತೋರದು. ಅವಳು ಅವನನ್ನು ಮದುವೆಯಾಗಲು ಇಷ್ಟವಿಲ್ಲ ಎಂದರೆ, ಇದು ನಿನ್ನ ನಿಜವಾದ ಭಾವನೆಯಲ್ಲ, ಸ್ತ್ರೀಗೆ ಭೂಷಣವಾದ ಲಜ್ಜೆಯಿಂದ ಬಂದ ಮಾತು ಎನ್ನುತ್ತಾನೆ. ಅವಳು ಹಾಗಲ್ಲವೇ ಅಲ್ಲ, ವಾಸ್ತವವಾಗಿಯೂ ತಾನು ಅವನ ಹೆಂಡತಿ ಆಗಲಾರೆ ಎಂದರೆ, ಅದು ಅವಳ ನಿಜವಾದ ಭಾವನೆಯಾಗಿರಲು ಸಾಧ್ಯವಿಲ್ಲ, ಏಕೆಂದರೆ ಎಂದು ಪ್ರಾರಂಭಿಸಿ ಕಾರಣಗಳನ್ನು ಕೊಡುತ್ತಾನೆ. ಒಂದು ಕಾರಣ—ಅವಳಿಗೆ ಸ್ವಲ್ಪ ವಯಸ್ಸಾಗಿದೆ, ಆದ್ದರಿಂದ ಅವಳಿಗೆ ಮದುವೆಯಾಗುವ ಅವಕಾಶ ಕಡಮೆ ಎಂದು! ಹೀಗೆ ಹೇಳುವುದು ಸಂಸ್ಕೃತಿಯಲ್ಲ ಎನ್ನುವ ಯೋಚನೆಯೇ ಅವನಿಗಿಲ್ಲ. ಕಾದಂಬರಿಯುದ್ದಕ್ಕೂ ತನ್ನ ಹಿರಿಮೆಗೆ ತಾನೇ ಹಿಗ್ಗುತ್ತ, ಸಂಭ್ರಮಪಡುತ್ತ, ಲೇಡಿ ಕ್ಯಾಥರೀನಳ ಒಂದು ಹೊಗಳಿಕೆಯ ಮಾತು ಕೇಳಿದರೆ ಜನ್ಮ ಸಾರ್ಥಕವೆಂದು ನಲಿಯುತ್ತ ಸಾಗುತ್ತಾನೆ.

ಜೇನ್ ಆಸ್ಟಿನಳ ಕಾದಂಬರಿಯ ಕ್ರಿಯೆ ಹಳ್ಳಿಗಳು, ಸಣ್ಣ ಊರುಗಳಿಗೆ ಸೀಮಿತವಾಗಿರಬಹುದು. ಪಾತ್ರಗಳು ಮಧ್ಯಮವರ್ಗದವು ಮಾತ್ರ ಇರಬಹುದು, ಮೈನವಿರೇಳಿಸುವ ಅಥವಾ ನಾಟಕೀಯವಾದ ದೃಶ್ಯಗಳು ಇಲ್ಲದಿರಬಹುದು. ಆದರೆ ಕಾದಂಬರಿಯು ತನ್ನ ಹಾಸ್ಯದಿಂದ, ಹರಿತವಾದ ಸ್ಫುಟವಾದ ಶೈಲಿಯಿಂದ, ಪಾತ್ರಗಳ ಮನಸ್ಸಿನ ವ್ಯಾಪಾರದ ಸೂಕ್ಷ್ಮ ಒಳನೋಟಗಳಿಂದ ಮನಸ್ಸನ್ನು ಹಿಡಿಯುತ್ತದೆ. ಜೇನ್ ಆಸ್ಟಿನ್ ಮಹತ್ವದ ಕಾದಂಬರಿಕಾರಳು ಎನ್ನಿಸಿಕೊಂಡಿರುವುದು ಅವಳ ನೈತಿಕ 'ಸೀರಿಯಸ್‌ನೆಸ್' ಅಥವಾ ಗಂಭೀರ ಶ್ರದ್ಧೆಯಿಂದ ಎಂದರೆ ಇದು ಸರಿ, ಇದು ತಪ್ಪು ಎಂದು ವ್ಯಾಖ್ಯಾನಮಾಡುತ್ತ ಅಥವಾ ನಿರ್ಣಯ ನೀಡುತ್ತ ಹೋಗುತ್ತಾಳೆ ಎಂದಲ್ಲ. ಅವಳದು ಸರಳವಾಗಿ ತಪ್ಪು-ಸರಿಗಳನ್ನು ನಿರ್ಧರಿಸಿಬಿಡುವ ಮನೋಧರ್ಮವೂ ಅಲ್ಲ. ಅವಳ ಕಾದಂಬರಿಯಲ್ಲಿ ತಮ್ಮ ಘನತೆಯಿಂದ ನಮ್ಮ ಗೌರವವನ್ನು ಗೆಲ್ಲುವ ಪಾತ್ರಗಳು

'ಸೆನ್‌ಸಿಟಿವ್' ಆದವು ಮನಸ್ಸಿನ ಸೂಕ್ಷ್ಮತೆಯನ್ನು, ಇತರರಿಗೆ ಮನಸ್ಸು ನೋಯುತ್ತದೆಯೋ ಎಂಬ ಸಂಕೋಚವನ್ನು ಉಳಿಸಿಕೊಂಡವು. ಈ ಪಾತ್ರಗಳು ಯಾವಾಗಲೂ ತಪ್ಪು ಮಾಡುವುದೇ ಇಲ್ಲ ಎಂದಲ್ಲ. 'ಪ್ರೈಡ್ ಅಂಡ್ ಪ್ರೆಜುಡಿಸ್'ನ ನಾಯಕಿ ಎಲಿಸಬೆತ್, ನಾಯಕ ಡಾರ್ಸಿ ಇಬ್ಬರೂ ತಪ್ಪು ಮಾಡುತ್ತಾರೆ. ಇಬ್ಬರಲ್ಲಿಯೂ ಅಹಂ ಇದೆ, ಪೂರ್ವಾಗ್ರಹ ಇದೆ, ಇಬ್ಬರೂ ತಾವು ಬುದ್ಧಿವಂತರು ಎಂದುಕೊಂಡು ಇತರರ ಬಾಳನ್ನು ನಡೆಸಲು ಹೋಗಿ ಪಶ್ಚಾತ್ತಾಪ ಪಡುತ್ತಾರೆ. ಇಬ್ಬರ ಬಾಳುಗಳೂ ಗೋಜಾಗುತ್ತವೆ. ಆದರೆ ಮುಖ್ಯವಾದ ಅಂಶ ಇದು—ಇಬ್ಬರಲ್ಲಿಯೂ ಸಣ್ಣತನವಿಲ್ಲ, ಇಬ್ಬರೂ ಇತರರಿಗೆ ಉದ್ದೇಶಪೂರ್ವಕವಾಗಿ ನೋವನ್ನುಂಟುಮಾಡುವವರಲ್ಲ, ಇಬ್ಬರೂ ತಮ್ಮ ನಡೆನುಡಿಗಳನ್ನು ಪರೀಕ್ಷೆ ಮಾಡಿಕೊಂಡು ತಮ್ಮ ತಪ್ಪನ್ನು ಒಪ್ಪಿಕೊಳ್ಳಬಲ್ಲವರು, ತಮ್ಮನ್ನು ತಿದ್ದಿಕೊಳ್ಳಬಲ್ಲವರು. ಜೇನ್ ಆಸ್ಟಿನಳ ಕಾದಂಬರಿಗಳಲ್ಲಿ 'ನೀತಿ' ಎಂದರೆ ಇದು—ಇತರರ ವಿಷಯದಲ್ಲಿ, ಅವರ ಭಾವನೆಗಳ ವಿಷಯದಲ್ಲಿ ಗೌರವ, ಅವರಿಗೆ ಅನ್ಯಾಯವಾಗಬಾರದು ನೋವಾಗಬಾರದು ಎಂಬ ಕಾಳಜಿ. 'ಎಮ್ಮಾ' ಕಾದಂಬರಿಯ ನಾಯಕಿ ಪರಿಪೂರ್ಣಳೇನೂ ಅಲ್ಲ. ಆದರೆ ಅವಳನ್ನು ನಾವು ಗೌರವಿಸುವಂತೆ ನಮ್ಮ ಮುಂದೆ ನಿಲ್ಲುತ್ತಾಳೆ. ಒಂದು ಸನ್ನಿವೇಶ ಅವಳಿಗೆ ಶ್ರೀಮತಿ ಎಲ್ಟನ್ ಎನ್ನುವವಳನ್ನು ಕಂಡರಾಗುವುದಿಲ್ಲ. ಆದರೆ ವೆಸ್ಟನ್ ಎನ್ನುವಾತನಲ್ಲಿ ವಿಶ್ವಾಸ, ಗೌರವ. ಎಮ್ಮಾ ಏರ್ಪಡಿಸುವ ಒಂದು ಕೂಟಕ್ಕೆ ವೆಸ್ಟನ್ ಅವಳನ್ನು ಕೇಳದೆಯೇ ಶ್ರೀಮತಿ ಎಲ್ಟನಳನ್ನು ಆಹ್ವಾನಿಸಿ, ಅನಂತರ ಬಂದು ಅವಳಿಗೆ ಹೇಳಿ, 'ನಿಮ್ಮದೇನೂ ಆಕ್ಷೇಪಣೆ ಇಲ್ಲ ಎಂದು ನಂಬಿದ್ದೇನೆ' ಎನ್ನುತ್ತಾನೆ. ಎಮ್ಮಾಗೆ ತುಂಬಿ ಮುಜಗರ ಕಾದಂಬರಿ ಹೀಗೆ ಸಾಗುತ್ತದೆ.

"ಅವಳಿಗೆ ಶ್ರೀಮತಿ ಎಲ್ಟನಳೆಂದರೆ ಸ್ವಲ್ಪವೂ ಆಗುತ್ತಿರಲಿಲ್ಲ ಎನ್ನುವುದನ್ನು ಬಿಟ್ಟು ಬೇರೆ ಆಕ್ಷೇಪಣೆ ಇರಲಿಲ್ಲ, ತನಗೆ ಅವಳೆಂದರೆ ಆಗುತ್ತಿರಲಿಲ್ಲ ಎಂದು ಶ್ರೀ ವೆಸ್ಟನರಿಗೂ ತಿಳಿದಿತ್ತು. ಆದ್ದರಿಂದ ಮತ್ತೆ ಅದನ್ನು ಮುಂದಿಟ್ಟು ಪ್ರಯೋಜನವಿರಲಿಲ್ಲ ;—ಅವನನ್ನು ದೂಷಿಸಿದಂತೆ ತೋರದಂತೆ ಅದನ್ನು ಮಾಡುವುದು ಸಾಧ್ಯವಿರಲಿಲ್ಲ, ಹಾಗೆ ಮಾಡಿದರೆ ಅವನ ಹೆಂಡತಿಯ ಮನಸ್ಸಿಗೆ ನೋವಾಗುತ್ತಿತ್ತು ; ಆದ್ದರಿಂದ ಅವಳು, ತಾನು ತಪ್ಪಿಸಲು ಬಹಳಮಟ್ಟಿಗೆ ಅಪೇಕ್ಷಿಸುತ್ತಿದ್ದ ಏರ್ಪಾಟಿಗೆ ಒಪ್ಪಲೇಬೇಕಾಯಿತು—ಆ ಏರ್ಪಾಟನಿಂದ ಅವಳು ಶ್ರೀಮತಿ ಎಲ್ಟನಳ ಪಕ್ಷ ಎಂದು ತೋರುವಂತಾದರು!"

ಎಮ್ಮಾ ಇತರರ ಮನಸ್ಸಿಗೆ ನೋವನ್ನುಂಟು ಮಾಡಬಾರದೆಂದು ತಾನು ಎಷ್ಟು ಅಸಮಾಧಾನವನ್ನು ನುಂಗಿಕೊಳ್ಳುತ್ತಾಳೆ ಎಂಬುದು ಗಮನಿಸಬೇಕಾದ ಅಂಶ. ಜೇನ್ ಆಸ್ಟಿನಳ ದೃಷ್ಟಿಯಲ್ಲಿ ಇದು ಮುಖ್ಯ, ಇದು ನೈತಿಕ—ಇತರರ ಭಾವನೆಗಳನ್ನು ಕುರಿತು ಯೋಚಿಸುವುದು, ಅವನ್ನು ಗೌರವಿಸುವುದು ಮತ್ತು ಮಾನವೀಯ ಸಂಬಂಧಗಳಲ್ಲಿ ನಿಷ್ಠೆ, ಜೇನ್ ಆಸ್ಟಿನಳದು ಇನ್ನೂ ವ್ಯಾಪಾರಿಗಳೆಂದರೆ 'ಗೌರವಸ್ಥ ಅಂತಸ್ತಿನವರು' ಸ್ವಲ್ಪ ತಿರಸ್ಕಾರವನ್ನೇ ತೋರುತ್ತಿದ್ದ ಕಾಲ—ಅವರು ಹಣಕ್ಕಾಗಿ ಕೆಲಸ ಮಾಡುವವರು ಎಂದು. ಆದರೆ 'ಪ್ರೈಡ್ ಅಂಡ್ ಪ್ರೆಜುಡಿಸ್'ನಲ್ಲಿ ವ್ಯಾಪಾರಿಯಾದ ಮಿಸ್ಟರ್ ಗಾರ್ಡ್‌ನರ್ ಮತ್ತು ಅವನ ಹೆಂಡತಿಗೆ ಗೌರವ ಸಲ್ಲುತ್ತದೆ—ಅವರು ಪ್ರಾಮಾಣಿಕವಾಗಿ ಪ್ರೀತಿಸಬಲ್ಲವರು, ವಿನೀತನೆ ಇರುವವರು. ಇತರರಿಗೆ ನೋವಾಗುವವರು ಎಂದು ಜೇನ್ ಆಸ್ಟಿನ್

ಕಾದಂಬರಿಗಳಲ್ಲಿ ತಮ್ಮ ಸುಖವನ್ನನ್ನೆ ಲಕ್ಷಿಸುವವರು ಕೊನೆಗೆ ನಮ್ಮ ತಿರಸ್ಕಾರವನ್ನೆ ಪಡೆಯುತ್ತಾರೆ. ಎಲಿಸಬೆತ್, ಡಾರ್ಸಿ, ಎಮ್ಮಾ ಎಲ್ಲರೂ ತಪ್ಪು ಮಾಡಬಹುದು. ಆದರೆ ತಪ್ಪು ಆಗುವುದು ಅವರು ಇತರ ಮನುಷ್ಯರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗದ್ದರಿಂದ. ತಪ್ಪು ಮಾಡುವಾಗಲೂ ಅವರು ಉದಾರಿಗಳು, ಮಾನವೀಯ ಸಂಬಂಧಗಳಿಗೆ ನಿಷ್ಠರು. 'ಪ್ರೈಡ್ ಅಂಡ್ ಪ್ರೆಜುಡಿಸ್'ನಲ್ಲಿ ಎಲಿಸಬೆತ್ ಮತ್ತು ಡಾರ್ಸಿ ಇಬ್ಬರೂ ಮಾಡುವ ತಪ್ಪುಗಳಿಂದ ಅವರಲ್ಲಿ ಮನಸ್ತಾಪ ಬೆಳೆದು ಒಬ್ಬರ ನ್ನೊಬ್ಬರು ಮತ್ತೆ ನೋಡುವುದಿಲ್ಲ, ಕಂಡರೂ ಮಾತನಾಡಿಸುವುದಿಲ್ಲ ಎನ್ನುವ ಸ್ಥಿತಿ ಉಂಟಾಗುತ್ತದೆ. (ಕ್ರಮೇಣ ತಪ್ಪು ತಿಳಿವಳಿಕೆ ಕರಗಿ, ಒಬ್ಬರನೊಬ್ಬರು ಅರಿತುಕೊಂಡು, ಪ್ರೀತಿಗೌರವಗಳಿಂದ ಗಂಡ ಹೆಂಡತಿಯರಾಗುತ್ತಾರೆ.) ಆದರೆ ಈ ಘಟ್ಟದಲ್ಲೂ ಅವರು ತೋರಿಸುವುದು ಮಾನವೀಯ ಸಂಬಂಧಗಳಲ್ಲಿ ನಿಷ್ಠೆ ಮನುಷ್ಯನಲ್ಲಿ ತತ್ವನಿಷ್ಠೆ ಇದ್ದರೆ, ಎಂದರೆ ಸತ್ವ ಇದ್ದರೆ, ಒಳಗೆ ಟೊಳ್ಳಾಗದೆ ಗಟ್ಟಿಯಾಗಿದ್ದರೆ ಅವನು ಇತರರ ವಿಷಯ ಕಾಳಜಿ ಇಟ್ಟುಕೊಳ್ಳುತ್ತಾನೆ, ಬಾಂಧವ್ಯ–ಸ್ನೇಹಗಳಲ್ಲಿ ನಿಷ್ಠೆಯಿಂದ ನಡೆದುಕೊಳ್ಳು ತ್ತಾನೆ. ವ್ಯಕ್ತಿ ಒಳಗೆ ಗಟ್ಟಿಯಾಗಿದ್ದಾನೆ(ಳೆ)ಯೇ ಇಲ್ಲವೇ ಎನ್ನುವುದು ಮೊದಲ ನೋಟಕ್ಕೆ ಅಥವಾ ಕೆಲವೇ ದಿನಗಳಲ್ಲಿ ಗೊತ್ತಾಗುವುದಿಲ್ಲ. (ವಿಕ್‌ಹ್ಯಾಂ ಎನ್ನುವ ಸ್ಫುರದ್ರೂಪಿಯ ಮಾತು, ಹೊರ ಮೆರುಗು ಎಲಿಸಬೆತಳಂತಹ ವಿವೇಚನೆ ಇರುವ ಹುಡುಗಿಯನ್ನೂ ಮೋಸಗೊಳಿಸುತ್ತವೆ.) ಅದರಿಂದಲೇ ಜೇನ್ ಆಸ್ಟಿನ್‌ಗೆ 'ಲವ್ ಎಟ್‌ಫಸ್ಟ್ ಸೈಟ್', ಪ್ರಥಮ ನೋಟದ ಪ್ರೇಮದಲ್ಲಿ ನಂಬಿಗೆ ಇಲ್ಲ. ಆದರೆ ಈ ಒಳಗಿನ ಗಟ್ಟಿಸ್ಥಿತಿಯೇ, ನಿಷ್ಠೆಯೇ ಸಾರ್ಥಕ ಬದುಕಿನ ಅಡಿಗಲ್ಲು.

ಎಂದರೆ, ಜೇನ್ ಆಸ್ಟಿನಳ ಕಾದಂಬರಿ ಹೊರನೋಟಕ್ಕೆ ಅಮುಖ್ಯ ಘಟನೆಗಳ ಸರಪಳಿ ಇದ್ದಂತೆ ಕಂಡರೂ ಅದರ ಗರ್ಭದಲ್ಲಿ ನೈತಿಕ ವಿವೇಚನೆ ಉಂಟು. ದಿನ ನಿತ್ಯದ ಭೇಟಿ, ಮಾತುಕತೆಗಳು ಇವುಗಳಲ್ಲಿ ಸಹ ಒಳಗಿನ ಸತ್ವ ಅಥವಾ ಟೊಳ್ಳು ಸೂಕ್ಷ್ಮವಾಗಿ ಪ್ರಕಟವಾಗುತ್ತದೆ. ಜೇನ್ ಆಸ್ಟಿನಳ ಸಂಭಾಷಣೆಯ ನಿರ್ವಹಣೆಯ ಕೌಶಲ ಇರುವುದು ಇಲ್ಲಿ.

ಜೇನ್ ಆಸ್ಟಿನಳ ಕಾದಂಬರಿಯ ಶಿಲ್ಪವನ್ನು ಕುರಿತೇ ಬರೆಯಬಹುದು. 'ಪ್ರೈಡ್ ಅಂಡ್ ಪ್ರೆಜುಡಿಸ್'ನ ರಚನೆ ಐದಂಕದ ನಾಟಕದ ಸೊಗಸಾದ ರಚನೆ ಒಂದು ಸಣ್ಣ ಊರಿನಲ್ಲಿ ಹುಟ್ಟಿ, ಏಳು ಬೀಳುಗಳಿಲ್ಲದ ಮಾಮೂಲು ಜೀವನ ನಡೆಸಿ, ಕಾಲೇಜು ಮೆಟ್ಟಿಲು ಹತ್ತದ ಇಪ್ಪತ್ತೆರಡು ವರ್ಷದ ಹುಡುಗಿ ಈ ಕಾದಂಬರಿಯನ್ನು ಬರೆದಳೆಂದು ನಂಬುವುದೇ ಕಷ್ಟ.

ಮ್ಯಾನ್ಸ್‌ಫೀಲ್ಡ್ ಪಾರ್ಕ್ : ನೈತಿಕತೆಯ ಶೋಧನೆ

ಎ. ಆರ್. ನಾಗಭೂಷಣ

ಇಪ್ಪತ್ತನೆಯ ಶತಮಾನದ ಆಧುನಿಕ ಸಂವೇದನೆಯ ನೆಲೆಯಲ್ಲಿ ಜೇನ್ ಆಸ್ಟಿನ್ ರಚಿಸಿದ ಕಾದಂಬರಿಗಳನ್ನು ಓದುವುದು ಮತ್ತು ಅರ್ಥೈಸುವುದು ಕುತೂಹಲಕಾರಿಯೂ ಹೌದು ಒಂದು ಸವಾಲೂ ಹೌದು. ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಇಂಗ್ಲೆಂಡಿನ ಗ್ರಾಮಜೀವನದ ಪರಿಸರದಲ್ಲಿ ಕೌಟುಂಬಿಕ ಆವರಣದಲ್ಲಿ ಸೀಮಿತ ಪ್ರಪಂಚದಲ್ಲಿ ವ್ಯಾಪಾರಗಳಲ್ಲಿ ಮನುಷ್ಯ ಲೋಕವನ್ನು ಆಸ್ಟಿನ್ ಹೇಗೆ ಪರಿಭಾವಿಸಿದ್ದಾಳೆ ಎಂಬುದನ್ನು ಟಾಲ್‌ಸ್ಟಾಯ್, ದಾಸ್ತೊವೆಸ್ಕಿ, ಸಾರ್ತ್ರ್, ಕಾಫ್ಕಾ, ಕಾಮು, ಮನ್, ಲಾರೆನ್ಸ್, ಕೆಸ್ಲರ್, ಮಾರ್ಕ್ವೆಸ್, ಬೋರ್ಹೆಸ್, ಕುಂದೆರ ಮುಂತಾದ ಮಹಾನ್ ಕಾದಂಬರಿಕಾರರಿಂದ ರೂಪುಗೊಂಡ ಓದುಗನ ಮನಸ್ಸು ಹೇಗೆ ಸ್ವೀಕರಿಸುತ್ತದೆ ಎಂಬುದು ಗಮನಾರ್ಹ ಸಂಗತಿಯಾಗಿರುತ್ತದೆ. ಸಾಮಾನ್ಯವಾಗಿ ಎಲ್ಲ ಬಲ್ಲಂತೆ ಆಸ್ಟಿನ್ ತನ್ನನ್ನು ತಾನು ತೆರೆದುಕೊಂಡದ್ದು ಬಹಳ ಸಣ್ಣದಾದ, ತೆಳು ಎನ್ನಬಹುದಾದ ಜಗತ್ತಿಗೆ ಮಾತ್ರ. ತನ್ನ ಕಾಲದ ಮಧ್ಯಮವರ್ಗ ಮತ್ತು ಶ್ರೀಮಂತವರ್ಗಗಳೊಂದಿಗೆ ಮಾತ್ರ ಇವಳಿಗೆ ನಿಕಟ ಪರಿಚಯ ಇತ್ತು. ಜೊತೆಗೆ, ಹೆಣ್ಣಿನ ಬದುಕು ಮತ್ತು ಮನೋವ್ಯಾಪಾರಗಳೇ ಇವಳ ಮನಸ್ಸನ್ನು ಆಕ್ರಮಿಸಿದ್ದವು. ಹೀಗಾಗಿಯೇ, ಇವಳ ಕಾದಂಬರಿಗಳಲ್ಲಿ ಹೆಣ್ಣು ಗಂಡುಗಳ ಮದುವೆ ಮತ್ತಿತರ ರೀತಿಯ ಸಂಬಂಧಗಳೇ ಹೃದಯವಾಗಿವೆ. ಇದರಿಂದಾಗಿ ಈ ಕಾದಂಬರಿಗಳು ಒಂದೇ ವಸ್ತುವನ್ನು ಒಂದೇ ರೀತಿಯಲ್ಲಿ ವಿಶ್ಲೇಷಿಸುತ್ತವೆ ಎಂದು ಅಭಿಪ್ರಾಯ ಮೇಲ ನೋಟಕ್ಕೆ ಮೂಡಬಹುದು. ಆದರೆ ಆಳವಾಗಿ ಅಧ್ಯಯನ ಮಾಡಿದಾಗ ವಾಸ್ತವ ಸಂಗತಿ ಬೇರೆಯೇ ಆಗಿರುವುದು ತಿಳಿಯುತ್ತದೆ. ಜೇನ್ ಆಸ್ಟಿನ್ನಳ ಕಾಲದಲ್ಲಿ ಯುರೋಪಿನಲ್ಲಿ ಎರಡು ಅತ್ಯಂ ಪ್ರಮುಖ ಘಟನೆಗಳು ನಡೆದವು : ಕೈಗಾರಿಕಾ ಕ್ರಾಂತಿ ಮತ್ತು

ಫ್ರಾನ್ಸಿನ ಕ್ರಾಂತಿ. ಈ ಕ್ರಾಂತಿಗಳು ವಿಶ್ವದ ಎಲ್ಲ ಪ್ರಮುಖ ದೇಶಗಳ ಸಂಸ್ಕೃತಿಯನ್ನು ಕೆದಕುವಷ್ಟು ಶಕ್ತವಾದವು. ಸಮಾಜದಲ್ಲಿ ಮನುಷ್ಯನ ಅಸ್ತಿತ್ವ, ಘನತೆ, ಸ್ಥಾನಮಾನ, ಸ್ವಾತಂತ್ರ್ಯ, ಅನನ್ಯತೆ, ಸಮಾನತೆ, ಭ್ರಾತೃತ್ವ ಇತ್ಯಾದಿ ವೈಚಾರಿಕ ವಿಷಯಗಳ ತರಂಗ ಗಳನ್ನು ಫ್ರಾನ್ಸಿನ ಕ್ರಾಂತಿ ಎಬ್ಬಿಸಿದರೆ ಮನುಷ್ಯನ ದುಡಿಮೆ, ಪ್ರತಿಫಲ, ಯಂತ್ರ—ಮನುಷ್ಯನ ಸಂಬಂಧ, ಹಣದ ಪ್ರಾಧಾನ್ಯತೆ ಇತ್ಯಾದಿ ವಿಷಯಗಳನ್ನು ಕೈಗಾರಿಕಾ ಕ್ರಾಂತಿ ಹುಟ್ಟಿಹಾಕಿತು. ಬಹಳ ಕುತೂಹಲದ ವಿಷಯವೆಂದರೆ ಇವೆರಡೂ ಕ್ರಾಂತಿಗಳು ಜೇನ್ ಆಸ್ಟಿನ್ ಸೃಷ್ಟಿಸಿದ ಸಾಹಿತ್ಯಕ ಪ್ರಪಂಚಕ್ಕೆ ಪ್ರವೇಶ ಪಡೆಯಲೇ ಇಲ್ಲ. ವ್ಯಕ್ತಿ ಮತ್ತು ಸಮಾಜಗಳ ಬುಡವನ್ನು ಅಲ್ಲೋಲ ಕಲ್ಲೋಲ ಮಾಡಿಬಿಟ್ಟ ಈ ಎರಡು ಕ್ರಾಂತಿ ಗಳನ್ನು ಆಸ್ಟಿನ್ ಪ್ರಜ್ಞಾಪೂರ್ವಕವಾಗಿ ನಿರಾಕರಿಸಿದಳೇ ? ಇಂತಹ ಪ್ರಮುಖ ಘಟನೆ ಗಳು ಸಮಾಜದ ಜನಜೀವನವನ್ನು ಪಲ್ಲಟಗೊಳಿಸುತ್ತಿರುವಾಗಲೂ ಆ ಸಂಕ್ರಮಣಾ ವಸ್ಥೆಗೆ ತೆರೆದುಕೊಳ್ಳದೆ ತನ್ನ ಪ್ರಪಂಚದಲ್ಲೇ ಆಸ್ಟಿನ್ ಮಗ್ನಳಾದದ್ದು ಅವಳ ಒಂದು ನಿಲುವೇ ? ಪ್ರಮುಖ ರಾಜಕೀಯ, ಆರ್ಥಿಕ ಆಗುಹೋಗುಗಳು ತನ್ನ ಸಾಹಿತ್ಯ ನಿರ್ಮಿತಿಯ ಮೇಲೆ ಏನೂ ಪ್ರಭಾವ ಬೀರದ ಹಾಗೆ ಕಾಯ್ದುಕೊಂಡದ್ದು ಒಣ ಸಾಂಪ್ರದಾಯಿಕತೆಯ ಮೋಹದ ಫಲವೇ ? ಯಾವುದೇ ಸಾಹಿತಿಯ ಸಂವೇದನೆ ಮತ್ತು ಸೃಜನಶೀಲತೆಗಳನ್ನು ಪರಿಣಾಮಕಾರಿಯಾಗಿ, ಮೌಲಿಕವಾಗಿ ಬದಲಾಯಿಸಬಲ್ಲ ಕ್ರಾಂತಿ ಗಳನ್ನು ಆಸ್ಟಿನ್ ತನ್ನ ಪ್ರಜ್ಞಾವಲಯದಿಂದ ದೂರವಿಟ್ಟದ್ದು ಅವಳ ಬೇಜವಾಬ್ದಾರಿಯ ಪ್ರತಿಫಲವೇ ? ಅವಳ ನಿರಾಕರಣೆ ಕುರುಡುತನವೇ ಅಥವಾ ಒಂದು ಧೋರಣೆಯೇ ? ಈ ಎಲ್ಲ ಪ್ರಶ್ನೆಗಳು ಮೊದಲೇ ಹೇಳಿದಂತೆ ಆಧುನಿಕ ನೆಲೆಯಲ್ಲಿ ನಿಂತ ಓದುಗನಿಗೆ ಬಹಳ ಪ್ರಸ್ತುತವಾಗುತ್ತವೆ. ಏಕೆಂದರೆ ಸಾಹಿತ್ಯದ ಸೃಷ್ಟಿ ಮತ್ತು ಗ್ರಹಿಕೆಯಲ್ಲಿ ಮನುಷ್ಯನ ಅಸ್ತಿತ್ವದ ಮತ್ತು ಮನುಷ್ಯ—ಪ್ರಪಂಚದ ಸಂಬಂಧದ ಸಂಕೀರ್ಣತೆಯನ್ನು ಇಡಿಯಾಗಿ ಹಿಡಿಯುವ ನೋಟ ನಮಗಿಂದು ಪ್ರಾಪ್ತವಾಗಿದೆ. ಆದ್ದರಿಂದಲೇ ರಾಜ ಕೀಯ, ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ದರ್ಶನಗಳುಳ್ಳ ಕಾದಂಬರಿಗಳನ್ನು ತನ್ನ ಬೆನ್ನುಹಿಂದೆ ಇರಿಸಿಕೊಂಡಿರುವ ಓದುಗನಿಗೆ ಅಷ್ಟಾಗಿ ಮಹತ್ವಾಕಾಂಕ್ಷೆಯನ್ನು ಪ್ರಕಟ ಪಡಿಸದ ಜೇನ್ ಆಸ್ಟಿನ್ ಎಷ್ಟರ ಮಟ್ಟಿಗೆ ಪ್ರಸ್ತುತವಾಗುತ್ತಾಳೆ ಎಂಬ ಪ್ರಶ್ನೆ ಮಹತ್ವದ್ದಾಗುತ್ತದೆ.

ಮೇಲೆ ಕಾಣಿಸಿದ ವಿಚಾರಗಳ ಶಕ್ತಿ ಏನೇ ಇರಲಿ, ಜೇನ್ ಆಸ್ಟಿನ್ನಳನ್ನು ಏಕಾ ಏಕಿ ದೂರವಿಡುವುದು ಅಪಚಾರದ ಸಂಗತಿಯಾಗುತ್ತದೆ. ಸಾಹಿತ್ಯ ವಿಮರ್ಶೆಯ ಒಂದು ಮೂಲಭೂತ ತತ್ತ್ವವನ್ನು ಅನ್ವಯಿಸಿ ಹೇಳುವುದಾದರೆ ಆಸ್ಟಿನ್ ಏನನ್ನು ತನ್ನ ವಲಯದೊಳಗೆ ತಂದಿಲ್ಲ ಎನ್ನುವುದಕ್ಕಿಂತ ಏನನ್ನು ತಂದಿದ್ದಾಳೆ ಎಂಬುದು ಹೆಚ್ಚು ಮಹತ್ವದ ಪ್ರಶ್ನೆ. ಜೊತೆಗೆ, ತನ್ನ ಗ್ರಹಿಕೆಯ ಪರಿಧಿಯೊಳಗೆ ಬಂದದ್ದರ ಸಂಬಂಧದಲ್ಲಿ ಅವಳು ತೆಗೆದುಕೊಂಡ ನಿಲುವುಗಳನ್ನೂ ಅವಳ ಕಲಾತ್ಮಕ ಯಶ–ಅಪಯಶಗಳನ್ನೂ ಗುರುತಿಸಬೇಕಾದದ್ದು ಮುಖ್ಯ. ಜೊತೆಗೆ ಇಂಗ್ಲಿಷ್ ಸಾಹಿತ್ಯ ಚರಿತ್ರೆಯ ಒಂದು ಮಹತ್ತರ ಘಟ್ಟವನ್ನು ಪ್ರತಿನಿಧಿಸುವ ಆಸ್ಟಿನ್ನಳ ರಚನೆಯನ್ನು ಪುನರ್ಮೌಲ್ಯ ಮಾಪನಕ್ಕೆ ಅಳವಡಿಸುವುದು ಒಂದು ಅವಶ್ಯಕವಾದ ಪ್ರಯತ್ನವೇ ಆಗುತ್ತದೆ.

೧೭೭೫ರಲ್ಲಿ ಒಬ್ಬ ಪಾದ್ರಿಯ ಮಗಳಾಗಿ ಒಂದು ಹಳ್ಳಿಯಲ್ಲಿ ಜೇನ್ ಆಸ್ಟಿನ್ ಹುಟ್ಟಿದಳು. ಕೇವಲ ೪೨ ವರ್ಷಗಳ ಕಾಲ ಬದುಕಿದ ಇವಳು ಒಟ್ಟು ಆರು ಕಾದಂಬರಿಗಳನ್ನು ಬರೆದಿದ್ದಾಳೆ: ಸೆನ್ಸ್ ಎಂಡ್ ಸೆನ್ಸಿಬಿಲಿಟಿ (೧೮೧೧), ಪ್ರೈಡ್ ಎಂಡ್ ಪ್ರೆಜುಡೀಸ್ (೧೮೧೩), ಮ್ಯಾನ್ಸ್‌ಫೀಲ್ಡ್ ಪಾರ್ಕ (೧೮೧೪), ಎಮ್ಮಾ (೧೮೧೬), ನಾರ್ಥ್ಯಾಂಗರ್ ಅಬೆ (೧೮೧೮) ಮತ್ತು ಪರ್ಸುಯೇಷನ್ (೧೮೧೮). ಈ ವರ್ಷಗಳು ಕಾದಂಬರಿಗಳು ಮೊದಲಬಾರಿಗೆ ಪ್ರಕಟವಾದದ್ದನ್ನು ಮಾತ್ರ ಸೂಚಿಸುತ್ತವೆ. ವಾಸ್ತವವಾಗಿ ಆಸ್ಟಿನ್ ಇಪ್ಪತ್ತು ತುಂಬುವ ಮುನ್ನವೇ ಕಾದಂಬರಿಗಳನ್ನು ಬರೆಯಲು ಪ್ರಾರಂಭಿಸಿದ್ದಳು. ಮೇಲಿನ ಪಟ್ಟಿಯ ಕೊನೆಯ ಎರಡು ಕಾದಂಬರಿಗಳು ಪ್ರಕಟವಾದದ್ದು ಆಸ್ಟಿನ್ ಸತ್ತ (೧೮೧೭) ಒಂದು ವರ್ಷದ ತರುವಾಯ. ಈ ಕಾದಂಬರಿಗಳ ಜೊತೆಗೆ ಇವಳು ಹಲವಾರು ಕಥೆಗಳನ್ನೂ ಬರೆದಿದ್ದಾಳೆ.

ಇತಿಹಾಸಕಾರರು ಗುರುತಿಸಿರುವಂತೆ ಜೇನ್ ಆಸ್ಟಿನ್ ತುಂಬಾ ಸಂಕೋಚದ ಪ್ರವೃತ್ತಿಯವಳು. ಕುಟುಂಬದ ಸದಸ್ಯರೊಂದಿಗೆ ಮಾತ್ರ ಬಹಳ ಗಾಢವಾದ ಸಂಬಂಧವನ್ನು ಬೆಸಿಕೊಂಡಿದ್ದಳು. ವಿಶೇಷವಾಗಿ ತನ್ನ ಅಕ್ಕ ಕಸಾಂಡ್ರಳೊಡನೆ ತುಂಬ ಭಾವನಾತ್ಮಕವಾದ ನಂಟು ಇವಳಿಗೆ ಇತ್ತು. ತಂದೆ ಪಾದ್ರಿಯಾಗಿದ್ದದ್ದು, ಗ್ರಾಮೀಣ ಪರಿಸರ, ಮನೆಯ ಸುಂದರ ವಾತಾವರಣ ಇವೆಲ್ಲವೂ ಆಸ್ಟಿನ್ನಳ ಕಥೆ ಕಾದಂಬರಿಗಳ ಮೇಲೆ ಸ್ಪಷ್ಟವಾದ ಪ್ರಭಾವ ಬೀರಿವೆ.

ಜೇನ್ ಆಸ್ಟಿನ್ನಳ ಸಾಹಿತ್ಯದ ಇನ್ನೊಂದು ವಿಶೇಷವೆಂದರೆ ಇವಳು ತನ್ನ ಸಮಕಾಲೀನ ಬರಹಗಾರರಿಗಿಂತ ಹೆಚ್ಚಾಗಿ ಹದಿನೆಂಟನೆಯ ಶತಮಾನದ ಕಾದಂಬರಿಕಾರರಿಂದ ಪ್ರಭಾವಿತಳಾದಳು. ರಿಚರ್ಡ್‌ಸನ್ ಮತ್ತು ಫೀಲ್ಡಿಂಗ್ ಅವರನ್ನು ತನ್ನ ಪ್ರಜ್ಞೆಯ ಒಂದು ಭಾಗಿಟ್ಟುಕೊಂಡು ಸೃಜನಶೀಲ ಕ್ರಿಯೆಯಲ್ಲಿ ತೊಡಗಿದಳು. ಈ ಇಬ್ಬರ ಪ್ರಭಾವದಿಂದಾಗಿ ವಾಸ್ತವಿಕ ಕಾದಂಬರಿಯನ್ನು ದೊಡ್ಡ ಪ್ರಮಾಣದಲ್ಲಿ ಮೊಟ್ಟ ಮೊದಲಬಾರಿಗೆ ಇಂಗ್ಲಿಷ್ ಸಾಹಿತ್ಯದಲ್ಲಿ ಸೃಷ್ಟಿಸಿದಳು.

ಮನುಷ್ಯ ಜೀವಿಯ ನೈತಿಕತೆ ಮತ್ತು ಆತ್ಮದ ಪರಿಶುದ್ಧತೆ ಜೇನ್ ಆಸ್ಟಿನ್ ಗೌರವಿಸುವ ಅತ್ಯುನ್ನತ ಮೌಲ್ಯವಾಗಿ ಎಲ್ಲ ಕಾದಂಬರಿಗಳಲ್ಲೂ ಚಿತ್ರಗೊಂಡಿದೆ. ಇದರ ಜೊತೆಗೆ ವ್ಯಕ್ತಿತ್ವದ ವಿಕಾಸದಲ್ಲಿ ಸಂಸ್ಕೃತಿಯ ಪಾತ್ರ, ಮನೆಯ ವಾತಾವರಣ ಮತ್ತು ಶಿಕ್ಷಣದ ಮಹತ್ವ ಆಸ್ಟಿನ್ ಎತ್ತಿ ಹಿಡಿಯುವ ವಿಚಾರಗಳಿಗಾಗಿ ಅಭಿವ್ಯಕ್ತವಾಗಿವೆ. ಒಂದು ನಿರ್ದಿಷ್ಟ ಸಾಮಾಜಿಕ ಸಂದರ್ಭದಲ್ಲಿ ಆತ್ಮ ಪರಿಶುದ್ಧತೆಯನ್ನು ಉಳಿಸಿಕೊಳ್ಳಲು ವ್ಯಕ್ತಿ ಪಡುವ ನೈತಿಕ ಸಂಕಟಗಳ ಪ್ರಕ್ರಿಯೆ ಆಸ್ಟಿನ್‌ಗೆ ಪ್ರಿಯವಾದ ವಸ್ತುವಾಗಿವೆ. ಈ ಬಿಕ್ಕಟ್ಟಿನಲ್ಲಿ ಆತ್ಮವನ್ನು ಕೊಲ್ಲುವ ಅಪ್ರಮಾಣಿಕತೆ ಮತ್ತು ಕೀಳು ಮನಸ್ಸು ಇವಳ ಟೀಕೆಗೆ ಗುರಿಯಾಗಿವೆ. ಶ್ರೀಮಂತ ವರ್ಗದ ಆಡಂಬರ ಮತ್ತು ಕ್ಷುಲ್ಲಕತನವನ್ನು ಇವಳು ಎಲ್ಲ ಕಾದಂಬರಿಗಳಲ್ಲೂ ಬಯಲಿಗೆಳೆದಿದ್ದಾಳೆ. ಸರಳತೆ, ಪ್ರಸನ್ನತೆ ಮತ್ತು ಭಾವನೆಗಳ ಪ್ರಾಮಾಣಿಕತೆ ಇವು ಆಸ್ಟಿನ್ನಳ ಆಂತರ್ಯದಲ್ಲಿರುವ ಮೌಲ್ಯಗಳಾಗಿವೆ. ಇವಕ್ಕೆ ಕಲಾತ್ಮಕ ರೂಪವನ್ನು ಕೊಡುವಾಗ ಇವಳು ವೈನೋದಿಕ ಮಾರ್ಗವನ್ನೂ ಅದಕ್ಕೆ ತಕ್ಕ ಹಗುರವಾದ ಶೈಲಿಯನ್ನೂ ರೂಢಿಸಿಕೊಂಡಿದ್ದಾಳೆ.

ವ್ಯಂಗ್ಯದ ಮುಖೇನ ಪ್ರತಿಯೊಂದು ಘಟನೆ, ವಿವರಗಳನ್ನು ಗ್ರಹಿಸುತ್ತಾ ತಾನು ನಿರ್ಲಿಪ್ತವಾಗಿ ಉಳಿದು ಸೋಗಿನ ಮುಖವಾಡಗಳನ್ನು ಕಳಚಿ ಹಾಕಿ ಸತ್ಯದ ದಿಕ್ಕಿನೆಡೆಗೆ ಮುಖ ಮಾಡುವುದು ಇವಳ ಸಾಹಿತ್ಯದ ವಿಶಿಷ್ಟ ಲಕ್ಷಣವಾಗಿದೆ. ವ್ಯಂಗ್ಯ, ವಿನೋದ, ಹಗುರತನಗಳಿಂದಾಗಿ ಆಸ್ಟಿನ್ ತನ್ನ ಪರಮ ಶ್ರೇಷ್ಠ ಮೌಲ್ಯವಾದ ನೈತಿಕತೆಯ ಬಗ್ಗೆಯೂ ಉಲ್ಲಾಸದ ದೃಷ್ಟಿಯನ್ನು ತಳೆಯಲು ಸಾಧ್ಯವಾಗಿದೆ. ಇವಳಿಗೆ ನೈತಿಕತೆ ಎಂದರೆ ಒಣ ಧಾರ್ಮಿಕ ತತ್ತ್ವಗಳಲ್ಲ, ಶಾಸ್ತ್ರಸಮ್ಮತವಾದ ರಿಚುಯಲ್‌ಗಳಲ್ಲ, ಬೈಬಲ್ಲಿನ ಪ್ರವಾದಿಗಳ ಗಾಂಭೀರ್ಯದ ಸಂದೇಶಗಳಲ್ಲ. ಬದಲಾಗಿ, ವ್ಯಕ್ತಿ ತನ್ನ ಜೀವನದಲ್ಲಿ ತನ್ನ ಆತ್ಮಸಾಕ್ಷಿಗೆ ಬದ್ಧನಾಗಿ, ಪ್ರಾಮಾಣಿಕ ಭಾವನೆಗಳಿಗಳಷ್ಟೇ ಅವಕಾಶ ನೀಡಿ, ಸಂಬಂಧಿಗಳ ನಿಷ್ಠೆಗೆ ಬೆಲೆ ಕೊಡುವುದೇ ನೈತಿಕತೆ.

ಮೇಲಿನ ವಿಚಾರಗಳ ಹಿನ್ನೆಲೆಯಲ್ಲಿ ಜೇನ್ ಆಸ್ಟಿನ್ನಳ 'ಮ್ಯಾನ್ಸ್‌ಫೀಲ್ಡ್ ಪಾರ್ಕ್' ಕಾದಂಬರಿಯನ್ನು ಓದಿ, ಅರ್ಥಮಾಡಿಕೊಳ್ಳುವ ಪ್ರಯತ್ನ ಸುಸಂಗತವಾಗುತ್ತದೆ. ಸಂಕೀರ್ಣ ಸನ್ನಿವೇಶಗಳಲ್ಲಿ, ಘಟನೆಗಳ ಸರಮಾಲೆಗಳಲ್ಲಿ, ಹಲವಾರು ಪಾತ್ರಗಳ ಮುಖಾಮುಖಿಯಲ್ಲಿ ವ್ಯಕ್ತಿಯನ್ನಿಷ್ಟ ನೈತಿಕತೆಯನ್ನು ಪರೀಕ್ಷಿಸುವ ಕಣ್ಣು ಈ ಕಾದಂಬರಿಯಲ್ಲಿರುವುದರಿಂದ ನೈತಿಕತೆಗೆ ಸಂಬಂಧಪಟ್ಟ ಮೌಲ್ಯಕಲ್ಪನೆಗಳನ್ನು ಅನ್ವೇಷಿಸಬೇಕಾದದ್ದು ಯಾವುದೇ ಓದುಗನ ಮೊದಲ ಹೆಜ್ಜೆಯಾಗುತ್ತದೆ.

ಮ್ಯಾನ್ಸ್‌ಫೀಲ್ಡ್ ಪಾರ್ಕ್‌ನ ಒಡೆಯ ಸರ್ ಥಾಮಸ್ ಬರ್ಟ್ರಮ್ ಮತ್ತು ಇವನ ಕುಟುಂಬದ ಸದಸ್ಯರು ಈ ಕಾದಂಬರಿಯ ಕೇಂದ್ರದಲ್ಲಿದ್ದಾರೆ. ಈ ವ್ಯಕ್ತಿಗಳು ಮತ್ತು ಇವರೊಂದಿಗೆ ಸಂಪರ್ಕಕ್ಕೆ ಬರುವ ಇತರ ಹಲವಾರು ಜನರ ಜೀವನ ಶೈಲಿ ಮತ್ತು ಮೌಲ್ಯಗಳನ್ನು ಈ ಕಾದಂಬರಿ ವಿವೇಚಿಸುತ್ತದೆ. ನಾಯಕಿ ಫ್ಯಾನಿಪ್ರೈಸ್ ಆಸ್ಟಿನ್ನಳ ವೈಚಾರಿಕ ನಿಲುವುಗಳ ಮತ್ತು ಸಾಹಿತ್ಯಕ ಆಶಯಗಳ ನಿಕಷವಾಗಿದ್ದಾಳೆ. ಏಕೆಂದರೆ ಇವಳ ಮೂಲಕವೇ ಈ ಕಾದಂಬರಿಯ ಪ್ರಮುಖ ಕಾಳಜಿಗಳು ಶೋಧನೆಯಾಗಿವೆ. ಒಂದು ಬಡ ಕುಟುಂಬದಲ್ಲಿ ಹುಟ್ಟಿ ತನ್ನ ದೊಡ್ಡಪ್ಪ, ದೊಡ್ಡಮ್ಮ ಇವರ ಕರುಣೆಯ ಫಲವಾಗಿ ಮ್ಯಾನ್ಸ್‌ಫೀಲ್ಡ್ ಪಾರ್ಕಿನಲ್ಲಿ ಉಳಿಯುವ ಫ್ಯಾನಿ ಹಲವಾರು ವ್ಯಕ್ತಿಗಳ ಜೀವನದಲ್ಲಿ ಅನೇಕ ಏಳುಬೀಳುಗಳನ್ನು ಗಮನಿಸುತ್ತಾ ಅದನ್ನು ಜೀರ್ಣಿಸಿಕೊಳ್ಳುತ್ತಾ ತನ್ನ ಆತ್ಮ ಪರಿಶುದ್ಧತೆಯನ್ನು ಕಾಪಾಡಿಕೊಳ್ಳಲು ಸದಾ ಎಚ್ಚರದಿಂದಿರುತ್ತಾ ಅನನ್ಯಳಾಗಿ ಉಳಿಯುತ್ತಾಳೆ. ಮಾರಿಯಾ, ಜೂಲಿಯಾ, ಮೇರಿ ಈ ಮೂರು ಜನ ತನ್ನ ವಾರಿಗೆಯ ಹುಡುಗಿಯರು ಅಪ್ರಾಮಾಣಿಕ ಆಕರ್ಷಣೆ ಮತ್ತು ಮೋಹಕ್ಕೆ ಬಲಿಯಾಗಿ ಅವು ವಿನಾಶಕಾರಿಯೆಂಬ ಅರಿವನ್ನು ಮೂಡಿಸಿಕೊಳ್ಳದೆ ಕ್ಷುಲ್ಲಕವಾದ ಸುಖವನ್ನು ಹಿಡಿವುದರಲ್ಲಿ ನಿರತರಾಗಿದ್ದಾಗ ಫ್ಯಾನಿ ಅವೆಲ್ಲವನ್ನು ದೂರವಿಟ್ಟು, ಗಟ್ಟಿಯಾಗಿ ನಿಲ್ಲಲು ಪ್ರಯತ್ನಿಸುತ್ತಾಳೆ. ಕೊನೆಗೆ ತಾನು ಮೊದಲಿನಿಂದಲೂ ಗುಪ್ತವಾಗಿ, ಪ್ರಾಮಾಣಿಕವಾಗಿ ಪ್ರೀತಿಸಿದ್ದ ಎಡ್ಮಂಡ್‌ನನ್ನು ವಿವಾಹವಾಗುತ್ತಾಳೆ. ಉದ್ದಕ್ಕೂ ತನ್ನ ನೈತಿಕತೆಯನ್ನು ಘಾಸಿ ಮಾಡಿಕೊಳ್ಳದೆ ಅಸಾಧಾರಣ ಆತ್ಮಶುದ್ಧತೆಯನ್ನು ಕಾಯ್ದುಕೊಳ್ಳುತ್ತಾಳೆ. ಇದನ್ನು ಇನ್ನಷ್ಟು ಸ್ಫುಟಗೊಳಿಸಲು ಆಸ್ಟಿನ್ ಫ್ಯಾನಿಯನ್ನು ಮಾರಿಯಾ, ಜೂಲಿಯಾ ಮತ್ತು ಮೇರಿಯರೊಂದಿಗೆ ಮೂರ್ತ ಘಟನೆಗಳ ಮೂಲಕ

ಹೋಲಿಸುತ್ತಾಳೆ. ರಶ್‌ವರ್ಥ್‌ನನ್ನು ಪ್ರಾಮಾಣಿಕವಾಗಿ ಪ್ರೀತಿಸುತ್ತಿದ್ದರೂ ಮಾರಿಯಾ ಅವನನ್ನು ಮದುವೆಯಾಗುತ್ತಾಳೆ. ಮೊದಲಿನಿಂದಲೂ ಹೆನ್ರಿಯ ಸೆಳೆತಕ್ಕೆ ಒಳಗಾಗಿದ್ದ ಅವಳು ವಿವಾಹವನ್ನು ಧಿಕ್ಕರಿಸಿ ಅವನೊಡನೆ ಓಡಿಹೋಗುತ್ತಾಳೆ. ಕ್ರಮೇಣ ಭ್ರಮ ನಿರಸವಾಗಿ ಈ ಸಂಬಂಧವೂ ಮುರಿದುಬೀಳುತ್ತದೆ. ಜೊತೆಗೆ ರಶ್‌ವರ್ಥ್‌ನೊಂದಿಗೆ ವಿಚ್ಛೇದನೆಯಾಗಿ ಅವಳ ಜೀವನ ನೋವು, ವೈಫಲ್ಯಗಳಲ್ಲಿ ಪರ್ಯವಸನವಾಗಿ ಬಿಡುತ್ತದೆ. ಯೇಟ್ಸ್ ಎಂಬ ಗಾಂಭೀರ್ಯವಿಲ್ಲದ ನಟನೊಬ್ಬನೊಡನೆ ಜೂಲಿಯಾ ಓಡಿಹೋಗುತ್ತಾಳೆ. ಇದು ಪ್ರಾಮಾಣಿಕ ಸಂಬಂಧವಲ್ಲ. ಏಕೆಂದರೆ ಇವಳಿಗೂ ತನ್ನ ಅಕ್ಕ ಮಾರಿಯಾಳಂತೆ ಹೆನ್ರಿಯ ಆಕರ್ಷಣೆಯ ಎಳೆತವಿದೆ. ಜೀವನದಲ್ಲಿ ಆಸ್ತಿಯೇ ಪ್ರಬಲವಾದ ಶಕ್ತಿ ಎಂಬ ತಿಳುವಳಿಕೆಯುಳ್ಳ ಮೇರಿ ಪಾದ್ರಿಯಾಗಬೇಕೆಂಬ ಎಡ್ಮಂಡ್‌ನ ಶುದ್ಧವಾದ ಆಪೇಕ್ಷೆಯನ್ನು ಅಣಕಿಸುತ್ತಾಳೆ. ತನ್ನ ಅಣ್ಣ ಹೆನ್ರಿ ಮದುವೆಯಾದ ಮಾರಿಯಾಳೊಂದಿಗೆ ಓಡಿಹೋದುದು ತಪ್ಪೆಂದು ಅವಳಿಗೆ ಅನ್ನಿಸುವುದಿಲ್ಲ; ಬದಲಾಗಿ, ಹಾಗೆ ಓಡಿಹೋದುದು ಬಯಲಾದದ್ದರಿಂದ ಹೆನ್ರಿಗೆ ತೊಂದರೆಯಾಯಿತೆಂದು ಅವಳು ತಿಳಿಯುತ್ತಾಳೆ. ಈ ಮೂರು ಜನ ಹುಡುಗಿಯರಲ್ಲದೆ ಇತರ ಪಾತ್ರಗಳೂ ಆಸ್ಟಿನ್ನಳ ಪ್ರಧಾನ ಕಾಳಜಿಯಾದ ನೈತಿಕತೆಯ ಸ್ವರೂಪವನ್ನು ನಾಟ್ಯೀಕರಿಸುತ್ತವೆ. ಸರ್ ಥಾಮಸ್ ಬರ್ಟ್ರಾಮನ ಹಿರಿಯ ಮಗ ಟಾಮ್ ಸ್ವಂತ ದುಡಿಮೆ ಇಲ್ಲದೆ ಒದಗಿ ಬಂದ ಸಂಪತ್ತನ್ನು ಉಡಾಯಿಸುವುದರಲ್ಲೇ ತೊಡಗುತ್ತಾನೆ. ಎರಡನೆಯ ಮಗ ಎಡ್ಮಂಡ್ ಮೇರಿಯ ಮೋಹದಲ್ಲಿ ಸಿಲುಕಿಕೊಂಡು ಅವಳ ಅಪ್ರಾಮಾಣಿಕ ನಿಲುವು ಗಳಿಗೆ ಕೊನೆಯವರೆಗೂ ಕುರುಡಾಗಿರುತ್ತಾನೆ. ಹೆನ್ರಿ ಇತರರನ್ನು ಮೆಚ್ಚಿಸಿ ತನ್ನ ವರ್ಚಸ್ಸನ್ನು ಬೆಳೆಸಿಕೊಳ್ಳುವ ಆಸಕ್ತಿಯನ್ನು ಮಾತ್ರ ಹೊಂದಿರುವ, ಶೋಕಿಯಲ್ಲೇ ಜೀವನದ ಸಾರ್ಥಕತೆಯನ್ನು ಕಾಣಬಯಸುವ ಮನುಷ್ಯ. ಹಿರಿಯ ವ್ಯಕ್ತಿಗಳಾದ ಸರ್ ಥಾಮಸ್ ಬರ್ಟ್ರಾಮ್, ಲೇಡಿ ಬರ್ಟ್ರಾಮ್ ಮತ್ತು ಮಿಸೆಸ್ ನೋರಿಸ್ ಮಕ್ಕಳ ಬದುಕನ್ನು ನೈತಿಕತೆಯ ದಿಕ್ಕಿನಲ್ಲಿ ಹಬ್ಬಿಸಲು ವಿಫಲರಾಗುತ್ತಾರೆ. ಈ ವೈಫಲ್ಯ ಈ ಕಾದಂಬರಿಯಲ್ಲಿ ಜೇನ್ ಆಸ್ಟಿನ್ ವಿಶ್ಲೇಷಿಸುವ ಇನ್ನೊಂದು ಪ್ರಮುಖ ವಸ್ತುವಿನತ್ತ ಓದುಗರ ಗಮನವನ್ನು ಸೆಳೆಯುತ್ತದೆ. ಅದು ಶಿಕ್ಷಣ.

ಕಾದಂಬರಿಯ ಅತ್ಯಂತ ಮುಖ್ಯವಾದ ಸನ್ನಿವೇಶಗಳಲ್ಲೊಂದನ್ನು ವಿಶ್ಲೇಷಿಸಿದರೆ ಜೇನ್ ಆಸ್ಟಿನ್ ಪ್ರತಿಪಾದಿಸುವ ನೈತಿಕತೆಯ ಸ್ವರೂಪ ಇನ್ನಷ್ಟು ನಿಚ್ಚಳವಾಗುತ್ತದೆ. ಸರ್ ಥಾಮಸ್ ಬರ್ಟ್ರಾಮ್ ಮ್ಯಾನ್ಸ್‌ಫೀಲ್ಡ್ ಪಾರ್ಕಿನಲ್ಲಿ ಇಲ್ಲದ ಸಮಯದಲ್ಲಿ ಯೇಟ್ಸ್ ಎಲ್ಲರೂ ಕೂಡಿ ಒಂದು ನಾಟಕವನ್ನು ಆಡುವ ಸಲಹೆಯನ್ನು ಮುಂದಿಡು ತ್ತಾನೆ. ತಮ್ಮ ತಮ್ಮ ವ್ಯಕ್ತಿತ್ವಗಳಿಂದ ಭಿನ್ನವಾದ ಇನ್ನೊಂದು ವ್ಯಕ್ತಿತ್ವವನ್ನು ಧರಿಸುವ ಆಕರ್ಷಣೆಗೆ ಫ್ಯಾನಿ ಮತ್ತು ಎಡ್ಮಂಡ್ ಬಿಟ್ಟು ಉಳಿದೆಲ್ಲರೂ ಒಳಗಾಗು ತ್ತಾರೆ. ಮಿಸೆಸ್ ನೋರಿಸ್ ನಾಟಕಕ್ಕೆ ಮತ್ತು ನಾಟಕದಲ್ಲಿ ತನ್ನ ಮೇಲ್ವಿಚಾರಣೆ ಯಲ್ಲಿ ಬೆಳೆಯುತ್ತಿದ್ದ ಮಕ್ಕಳು ಭಾಗವಹಿಸಲು ಮನಃಪೂರ್ವಕ ಒಪ್ಪಿಗೆಯನ್ನು ನೀಡು ತ್ತಾಳೆ. ನಾಟಕದ ಕಥೆಯ ಬಗ್ಗೆ ಮತ್ತು ನಾಟಕದಲ್ಲಿ ಪಾಲ್ಗೊಳ್ಳುವ ಬಗ್ಗೆ ನೇತ್ಯಾ ತ್ಮಕ ದೃಷ್ಟಿಯನ್ನು ಇಟ್ಟುಕೊಂಡೂ ಫ್ಯಾನಿ ಸುಮ್ಮನಿದ್ದರೆ ಎಡ್ಮಂಡ್ ತಡೆಗಳನ್ನು

ಮಂಡಿಸುತ್ತಾನೆ: ಸರ್ ಥಾಮಸ್ ಬಾಟ್ರ್ರಾಮ್‌ನ ಅನುಪಸ್ಥಿತಿಯಲ್ಲಿ, ಅದೂ ಅವನು ಪ್ರಯಾಣದಲ್ಲಿ ಪ್ರಾಯಶಃ ತೊಂದರೆಯಲ್ಲಿರುವಾಗ ನಾಟಕವಾಡಿ ಮೋಜುಪಡುವುದು ಸರಿಯಲ್ಲವೆಂದು ಅವನ ಅಭಿಪ್ರಾಯ. ಆದರೆ ಈ ವಾದವನ್ನು ಉಳಿದವರು ತಳ್ಳಿಹಾಕಿ ಬಿಡುತ್ತಾರೆ. ತನ್ನ ಪ್ರಿಯತಮೆ ಮೇರಿ ಪರಕೀಯನೊಬ್ಬನೊಂದಿಗೆ ಪಾತ್ರ ವಹಿಸ ಬೇಕಾದ ಸಂದರ್ಭ ಒದಗಿದಾಗ ಎಡ್ಮಂಡ್ ತನ್ನ ನಿಲುವುಗಳನ್ನು ತ್ಯಜಿಸಿ ಪಾತ್ರ ವಹಿಸಲು ಸಿದ್ಧನಾಗುತ್ತಾನೆ. ತನ್ನ ನೈತಿಕ ನಿಲುವಿಗೆ ಬದ್ಧನಾಗಿ ಉಳಿಯದೆ ರಾಜಿಗೆ ಸಿದ್ಧನಾಗುವ ಎಡ್ಮಂಡ್‌ನ ಅಪಕ್ವ ಮನೋಸ್ಥಿತಿ ಈ ಸನ್ನಿವೇಶದಲ್ಲಿ ಮೂರ್ತರೂಪ ವನ್ನು ತಾಳಿದೆ. ಫ್ಯಾನಿಯ ವ್ಯಕ್ತಿತ್ವವನ್ನು ಉಗ್ರಪರೀಕ್ಷೆಗೆ ಗುರಿಮಾಡುವ ಸಂದರ್ಭ ಇದು. ನಾಟಕದಲ್ಲಿ ಪಾತ್ರ ವಹಿಸಬೇಕೆಂಬ ಎಲ್ಲರ ಒತ್ತಾಯವನ್ನು ಮೊದಲಿನಿಂದಲೂ ನಿರಾಕರಿಸುತ್ತ ಬರುತ್ತಾಳೆ. ಈ ನಾಟಕದ ಆಕರ್ಷಣೆ ಎಷ್ಟು ಪ್ರಬಲವೆಂದರೆ ಸಂಭಾಷಣೆ ಯನ್ನು ನಟನಟಿಯರಿಗೆ ನೆನಪುಮಾಡಿಕೊಡುವ ಕೆಲಸವನ್ನು ನಿರ್ವಹಿಸಲು ಫ್ಯಾನಿ ಒಪ್ಪಿ ಒಂದು ಹೆಜ್ಜೆ ನೈತಿಕತೆಯಿಂದ ದೂರ ಸರಿಯುತ್ತಾಳೆ. ಅನಾರೋಗ್ಯದ ನಿಮಿತ್ತ ಶ್ರೀಮತಿ ಗ್ರ್ಯಾಂಟ್ ಪಾತ್ರ ವಹಿಸಲು ಅಸಮರ್ಥಳಾದಾಗ ಅನಿವಾರ್ಯವಾಗಿ ಫ್ಯಾನಿ ನಾಟಕದ ಪಾತ್ರವರ್ಗಕ್ಕೆ ಸೇರಬೇಕಾಗುತ್ತದೆ. ಇದರಿಂದಾಗಿ ಇವಳ ನೈತಿಕ ನಿಷ್ಠೆ ಕಳಂಕಿತವಾಗಿಬಿಡುತ್ತದೆ ಎಂಬ ಸಂಕಟದ ಪರಿಸ್ಥಿತಿಯಲ್ಲಿ ಇವಳ ಸುದೈವಕ್ಕೆ ಸರ್ ಥಾಮಸ್ ಬಟ್ರ್ರಾಮ್ ವೆಸ್ಟ್ ಇಂಡೀಸ್‌ನಿಂದ ಮ್ಯಾನ್ಸ್‌ಫೀಲ್ಡ್ ಪಾರ್ಕಿಗೆ ಹಿಂದಿರು ಗುತ್ತಾನೆ. ನಾಟಕದ ಸುದ್ದಿ ತಿಳಿದೊಡನೆಯೇ ಇತರರ ವಿರೋಧ, ಅಸಂತೋಷಗಳನ್ನು ಲೆಕ್ಕಿಸದೆ ಅದನ್ನು ನಿಲ್ಲಿಸುವಂತೆ ಆಜ್ಞಾಪಿಸುತ್ತಾನೆ. ಈ ತೀರ್ಮಾನದಿಂದಾಗಿ ಫ್ಯಾನಿಯ ಆತ್ಮ ಶುದ್ಧವಾಗಿಯೇ ಉಳಿಯುತ್ತದೆ. ಇಪ್ಪತ್ತನೆಯ ಶತಮಾನದ ಓದುಗನಿಗೆ ಒಂದು ನಾಟಕವನ್ನು ಆಡುವ ತೀರ್ಮಾನ, ಅದಕ್ಕೆ ವಿರೋಧಗಳು, ಕೊನೆಗೆ ಅದರ ನಿಲುಗಡೆ ಇತ್ಯಾದಿಗಳಿಗೆ ಜೇನ್ ಆಸ್ಟಿನ್ ಕೊಟ್ಟಿರುವ ಪ್ರಾಮುಖ್ಯ ಸೋಜಿಗವೆನಿಸಬಹುದು. ಇದನ್ನು ಅರ್ಥಮಾಡಿಕೊಳ್ಳಲು ಇವಳ ವ್ಯಕ್ತಿತ್ವವನ್ನು ನಾವು ತಿಳಿಯಬೇಕಾಗುತ್ತದೆ. ಮೂಲಭೂತವಾಗಿ ಇವಳು ಒಬ್ಬ ನೈತಿಕವಾದಿ. ಈ ಕಾರಣದಿಂದಾಗಿ 'ಲವರ್ಸ್ ಪಾಸ್' ನಾಟಕಕ್ಕೆ ಇವಳ ದೃಷ್ಟಿಕೋನ ನೇತ್ಯಾತ್ಮಕವಾಗಿದೆ. ಈ ವಿರೋಧದ ಆಧಾರ ಈ ತಾತ್ತ್ವಿಕ ತಿಳುವಳಿಕೆಯ ಮೇಲೆ ನಿಂತಿದೆ: ಒಬ್ಬ ವ್ಯಕ್ತಿ ಒಂದು ಪಾತ್ರವನ್ನು ವಹಿಸಿದಾಗ ಆ ಪಾತ್ರದ ಕೆಲವು ಗುಣಲಕ್ಷಣಗಳು ಪಾತ್ರಧಾರಿಯ ವ್ಯಕ್ತಿತ್ವವನ್ನು ಪ್ರವೇಶಿಸಿಬಿಡುತ್ತವೆ. ಇದರ ಪರಿಣಾಮವಾಗಿ ವ್ಯಕ್ತಿಯ ನೈತಿಕ ಪರಿಶುದ್ಧತೆ ಕಳಂಕ ಗೊಳ್ಳುತ್ತದೆ. ಸರ್ ಥಾಮಸ್‌ನ ಮೌಲ್ಯಗಳು ಗ್ರಾಮೀಣ ಪರಿಸರದಿಂದ ಹುಟ್ಟಿ ಬಂದವಾದ್ದರಿಂದ ಅವು ನಗರ ಸಂಸ್ಕೃತಿಯನ್ನು ರೂಢಿಸಿಕೊಂಡಿರುವ ಹೆನ್ರಿ ಮತ್ತು ಮೇರಿ ಈ ಇಬ್ಬರ ಮೌಲ್ಯಗಳು ಮತ್ತು ಇವರಿಂದ ಪ್ರಭಾವಿತರಾದ ಮಾರಿಯಾ ಮತ್ತು ಜೂಲಿಯಾರ ಪೊಳ್ಳು ಮೌಲ್ಯಗಳನ್ನು ಸೋಲಿಸುತ್ತವೆ. ಈ ಮೂಲಕ ನಗರ–ಗ್ರಾಮೀಣ ಸಂಸ್ಕೃತಿಗಳ ತುಲನೆಯನ್ನು ಆಸ್ಟಿನ್ ಸೂಕ್ಷ್ಮವಾಗಿ ಮಾಡಿ ದ್ದಾಳೆ ಹಾಗೂ ತನ್ನ ವೈಯಕ್ತಿಕ ನಿಲುವು ಎತ್ತಕಡೆ ಇದೆ ಎಂಬುದನ್ನು ವ್ಯಕ್ತಪಡಿಸಿ ದ್ದಾಳೆ.

ವ್ಯಕ್ತಿಯ ನೈತಿಕತೆಯನ್ನು ಬೆಳೆಸಿ ಉಳಿಸುವುದು, ಜೇನ್ ಆಸ್ಟಿನ್ನಳ ಪ್ರಕಾರ, ಸಮರ್ಪಕವಾದ ಶಿಕ್ಷಣ. ವ್ಯಕ್ತಿತ್ವದ ವಿಕಾಸದಲ್ಲಿ ಶಿಕ್ಷಣ ವಹಿಸುವ ಪಾತ್ರವನ್ನು 'ಮ್ಯಾನ್ಸ್‌ಫೀಲ್ಡ್ ಪಾರ್ಕ್'ನಲ್ಲಿ ಆಸ್ಟಿನ್ ಪರಿಶೀಲಿಸಿದ್ದಾಳೆ. ಶಿಕ್ಷಣವೆಂದರೆ ಔಪಚಾರಿಕವಾದ, ಕೇವಲ ಸುದ್ದಿಸಂಗ್ರಹ ಮಾಡುವ, ನೆನಪಿನ ಶಕ್ತಿಯನ್ನು ಉದ್ದೀಪನಗೊಳಿಸುವ ಸಾಧನವಲ್ಲ ಎಂಬುದು ಸರ್ ಥಾಮಸ್, ಬರ್ಟ್ರಾಮ್‌ನ ಮಕ್ಕಳ ಜೀವನಶೈಲಿಯ ಮುಖೇನ ವ್ಯಕ್ತವಾಗುತ್ತದೆ. ಸಂದರ್ಭಕ್ಕೆ 'ಸೂಕ್ತ'ವಾದ ಅರ್ಥಾತ್ ನೈತಿಕವಾದ ನಿಲುವನ್ನು ತೆಗೆದುಕೊಳ್ಳಲು ಅಸಮರ್ಥವಾಗುವ ಮತ್ತು ವಾಸ್ತವಕ್ಕೆ ಕಣ್ಣು ತೆರೆಯಲು ಸೋಲುವ ಈ ಮಕ್ಕಳು ಪಡೆದ ಶಿಕ್ಷಣ ನಿರರ್ಥಕವಾದುದು. ಮಾರಿಯಾ ವಿವಾಹೇತರ ಸಂಬಂಧವನ್ನು ಬೆಳೆಸಿಕೊಳ್ಳುತ್ತಾಳೆ; ಜೂಲಿಯಾ ಟೊಳ್ಳು ವ್ಯಕ್ತಿತ್ವವನ್ನು ಪಡೆದ ಯೇಟ್ಸ್‌ನೊಂದಿಗೆ ಓಡಿಹೋಗುತ್ತಾಳೆ; ಟಾಮ್ ಉಡಾಳನಾಗುತ್ತಾನೆ; ಎಡ್ಮಂಡ್ ಬಹಳ ದೀರ್ಘಕಾಲ ಭ್ರಮೆಯ ಮಂಪರಿನಲ್ಲಿರುತ್ತಾನೆ. ಕೊನೆಗೆ ಇವರಿಗೆ ನಿಜವಾದ ಶಿಕ್ಷಣವನ್ನು ನೀಡುವುದು ಜೀವನದ ವಾಸ್ತವ ಸತ್ಯವೇ. ತಂದೆಯೊಂದಿಗೆ ವೆಸ್ಟ್ ಇಂಡೀಸ್‌ಗೆ ತೆರಳಿದ ಮೇಲೆ ಟಾಮ್‌ಗೆ ಹೊಸ ಅನುಭವ, ಹೊಸ ಚಿಂತನೆಗಳ ಅನುಭವವಾಗುತ್ತದೆ; ಫ್ಯಾನಿಯ ವಲಯದೊಳಗೆ ನಿಧಾನವಾಗಿ ಬಂದ ಎಡ್ಮಂಡ್‌ಗೆ ಮಂಪರು ಹರಿಯುತ್ತದೆ; ಮಾರಿಯಾ ತನ್ನ ತಪ್ಪುಗಳಿಂದ ನೊಂದು ಅಸುಖಿಯಾದ ಬದುಕನ್ನು ಒಪ್ಪಬೇಕಾಗುತ್ತದೆ; ತೀರಾ ಸಾಮಾನ್ಯವಾದ ಬದುಕಿಗೆ ಜೂಲಿಯಾ ಹೊಂದಿಕೊಳ್ಳಬೇಕಾಗುತ್ತದೆ. ಸರ್ ಥಾಮಸ್ ಬರ್ಟ್ರಾಮ್ ಮತ್ತು ಮಿಸೆಸ್ ನೋರಿಸ್ ಈ ನಾಲ್ವರಿಗೆ ಒದಗಿಸಿದ ಶಿಕ್ಷಣ ಹೀಗೆ ವಿಫಲವಾಗುತ್ತದೆ. ಶಿಕ್ಷಣ–ವ್ಯಕ್ತಿತ್ವ ಸಂಬಂಧದ ವಸ್ತು ಇನ್ನಷ್ಟು ನೊನಚಾಗಿ ಅಭಿವ್ಯಕ್ತವಾಗುವುದು ಹೆನ್ರಿ ಮತ್ತು ಮೇರಿಯರ ವಿಷಯದಲ್ಲಿ. ನಗರ ಸಂಸ್ಕೃತಿಯ ಶಿಕ್ಷಣಕ್ರಮವನ್ನೂ ಮೌಲ್ಯಗಳನ್ನೂ ಮೈಗೂಡಿಸಿಕೊಂಡಿರುವ ಈ ಜೋಡಿ ಸುಳ್ಳು ವ್ಯಕ್ತಿತ್ವಗಳನ್ನು ಪಡೆದಿದ್ದಾರೆ. ಯಾವುದೇ ನೈತಿಕ ನಿಷ್ಠೆಯನ್ನು ಹೊಂದಿರದ ಇವರು ಮ್ಯಾನ್ಸ್‌ಫೀಲ್ಡ್ ಪಾರ್ಕಿನ ಜೀವನವನ್ನು ಕಪಡಿಬಿಡುತ್ತಾರೆ. ಮಾರಿಯಾ ಮತ್ತು ಜೂಲಿಯಾ ಇಬ್ಬರೊಂದಿಗೂ ಏಕಕಾಲಕ್ಕೆ ಪ್ರೇಮದಲ್ಲಿರುವಂತೆ ಹೆನ್ರಿ ನಟಿಸುತ್ತಾನೆ; ನಂತರ ಫ್ಯಾನಿಯನ್ನು ಭೇಟಿ ಮಾಡಿ ಅವಳನ್ನು ಪ್ರೀತಿಸುತ್ತಿದ್ದೇನೆಂದು ತಿಳಿಸುತ್ತಾನೆ; ರಶ್‌ವರ್ಥ್‌ನನ್ನು ಮದುವೆಯಾದ ಮಾರಿಯಾಳೊಂದಿಗೆ ಅವಳ ಮದುವೆಯನ್ನು ಮುರಿದು ಓಡಿಹೋಗುತ್ತಾನೆ; ಎಲ್ಲ ಸಂಬಂಧಗಳೂ ಮುರಿದುಬೀಳುತ್ತವೆ. ಎಡ್ಮಂಡ್‌ನ ಮನಸ್ಸನ್ನೂ ಪಾದ್ರಿಯಾಗುವ ಹಂಬಲವನ್ನೂ ಹಠಮಾರಿತನ ಮತ್ತು ಸೋಗಿಗೆ ಅಪ್ಪಿಕೊಳ್ಳುವ ಮೇರಿ ತಿರಸ್ಕರಿಸುತ್ತಾಳೆ. ಸತ್ಯಕ್ಕೆ ಎಂದೂ ದೂರವಾಗಿ ನಿಲ್ಲುವ ಇವಳು ಬದುಕಿನಲ್ಲಿ ಒಂಟಿಯಾಗಿ ಉಳಿಯಬೇಕಾಗುತ್ತದೆ. ಇವರೆಲ್ಲರಿಗೆ ವಿರುದ್ಧವಾದ ನೆಲೆಯಲ್ಲಿ ಫ್ಯಾನಿಯನ್ನು ಆಸ್ಟಿನ್ ನಿಲ್ಲಿಸುತ್ತಾಳೆ. ಬಹಳ ಮುಖ್ಯವಾದ ವಿಚಾರವೆಂದರೆ, ಔಪಚಾರಿಕವಾದ ಯಾವ ಶಿಕ್ಷಣವನ್ನೂ ಫ್ಯಾನಿ ಪಡೆದಿಲ್ಲ. ಇವಳು ಮ್ಯಾನ್ಸ್‌ಫೀಲ್ಡ್ ಪಾರ್ಕಿನಲ್ಲಿ ವಾಸಿಸಲು ಬಂದಾಗ ಇವಳ 'ಅಜ್ಞಾನ'ದ ಬಗ್ಗೆ ಮಾರಿಯಾ ಮತ್ತು ಜೂಲಿಯಾ ಅಣಕವಾಡುತ್ತಾರೆ. ಆದರೆ ಮೊದಲಿನಿಂದ ಕೊನೆಯವರೆಗೂ ತನ್ನ ಅಂತರಂಗದ ಪರಿಶುದ್ಧತೆ

ಯನ್ನೂ ಸರಳ ವ್ಯಕ್ತಿತ್ವವನ್ನೂ ಉಳಿಸಿಕೊಳ್ಳುವವಳು ಫ್ಯಾನಿಯೊಬ್ಬಳೇ. ಇದಕ್ಕೆ ಕಾರಣ ಇವಳಿಗೆ ಸ್ವಾಭಾವಿಕವಾದ ಆಂತರಿಕ ತಾತ್ತ್ವಿಕ ಶಕ್ತಿ ಇದೆ. ಇದು ಇವಳನ್ನು ಉಳಿಸಿ ಬಾಳಿಸುತ್ತದೆ. ಹೀಗೆ ಆಸ್ಟಿನ್ ಶಿಕ್ಷಣವೆಂದರೆ ಕೇವಲ ಔಪಚಾರಿಕವಾದ, ಜ್ಞಾನವನ್ನು ಸಂಗ್ರಹಿಸುವ ಪದ್ಧತಿಯಲ್ಲ, ಅದೊಂದು ವಿವೇಕವನ್ನೂ ನೈತಿಕ ಸ್ಥೈರ್ಯವನ್ನೂ ಸಂಪಾದಿಸಿಕೊಡುವ ಮತ್ತು ಒಂದು ಸಂಸ್ಕೃತಿಯನ್ನು ನಿರ್ಮಿಸುವ ಅಸ್ತ್ರವೆಂದು ಪ್ರತಿಪಾದಿಸಿದ್ದಾಳೆ.

ಶಿಕ್ಷಣ–ವ್ಯಕ್ತಿತ್ವದ ಸಂಬಂಧದ ಜೊತೆಗೆ ಮನೆಯ ವಾತಾವರಣ ಮತ್ತು ಮಕ್ಕಳನ್ನು ಹಿರಿಯರು ಬೆಳೆಸುವ ಕ್ರಮ ಇವುಗಳನ್ನು ಕುರಿತಂತೆಯೂ ವೈಚಾರಿಕವಾದ ನಿಲುವುಗಳನ್ನು ಜೇನ್ ಆಸ್ಟಿನ್ 'ಮ್ಯಾನ್ಸ್‌ಫೀಲ್ಡ್ ಪಾರ್ಕ್'ನಲ್ಲಿ ಪ್ರಕಾಶಪಡಿಸಿದ್ದಾಳೆ. ಹೆನ್ರಿ ಮತ್ತು ಮೇರಿ ಅಡ್ಮಿರಲ್ ಕ್ರಾಫರ್ಡ್ ಮನೆಯ ಅಸಮರ್ಪಕ, ಅಸೂಕ್ಷ್ಮ ವಾತಾವರಣದಲ್ಲಿ ಬೆಳೆದವರಾದ್ದರಿಂದ ಮತ್ತು ಈ ಇಬ್ಬರ ನೈತಿಕತೆಯ ಬಗ್ಗೆ ಕ್ರಾಫರ್ಡ್ ಮತ್ತು ಅವನ ಹೆಂಡತಿ ಯಾವ ಕಾಳಜಿಯನ್ನೂ ವಹಿಸದವರಾದ್ದರಿಂದ ಇಬ್ಬರೂ ಅಪ್ಪಟ ಸುಳ್ಳು ವ್ಯಕ್ತಿತ್ವಗಳನ್ನು ಸಲೀಸಾಗಿ ಪಡೆದುಕೊಳ್ಳುತ್ತಾರೆ. ಇವರು ತಾವೂ ಕುಬ್ಜರಾಗಿದ್ದು ಸರ್ ಥಾಮಸ್ ಬರ್ಟ್ರಾಮನ ಮಕ್ಕಳನ್ನೂ ಕುಬ್ಜರಾಗಿಸುತ್ತಾರೆ. ಇದಕ್ಕೆ ಹೆನ್ರಿ ಮತ್ತು ಮೇರಿ ಈ ಇಬ್ಬರ ಮುಖವಾಡಗಳ ಜೀವನ ಶೈಲಿಯ ಜೊತೆಗೆ ಈ ನಾಲ್ವರ ಟೊಳ್ಳುತನವೂ ಕಾರಣವಾಗಿದೆ. ಈ ಟೊಳ್ಳುತನ ಹುಟ್ಟಿದ್ದು ಮೂಲತಃ ಮನೆಯ ವಾತಾವರಣದಿಂದ. ಮಿಸೆಸ್ ನೋರಿಸಳ ವಶಕ್ಕೆ ಮಕ್ಕಳನ್ನು ಒಪ್ಪಿಸಿ ಸರ್ ಥಾಮಸ್ ಬರ್ಟ್ರಾಮ್ ತನ್ನ ವ್ಯಾಪಾರ ವಹಿವಾಟು, ವೆಸ್ಟ್ ಇಂಡೀಸಿನ ವ್ಯವಹಾರ ಇತ್ಯಾದಿಗಳಲ್ಲಿ ಮುಳುಗಿಹೋಗುತ್ತಾನೆ. ಇವನ ಹೆಂಡತಿ ಲೇಡಿ ಬರ್ಟ್ರಾಮ್ ತನ್ನ ಖಾಯಿಲೆ, ನಾಯಿ ಇತ್ಯಾದಿಗಳಲ್ಲಿ ಮಗ್ನಳಾಗಿ ಮಕ್ಕಳ ವಿಚಾರದಲ್ಲಿ ನಿರ್ಲಕ್ಷ್ಯದಿಂದಿರುತ್ತಾಳೆ. ಮಕ್ಕಳನ್ನು ವಿಶೇಷತಃ ಮಾರಿಯಾ ಮತ್ತು ಜೂಲಿಯಾರನ್ನು ಅತಿ ಮುದ್ದಿನಿಂದ ಬೆಳೆಸಿ ಅವರನ್ನು ಶ್ರೀಮಂತ ಹುಡುಗರೊಂದಿಗೆ ಮದುವೆ ಮಾಡಿಸಿಬಿಡುವುದೇ ಎಲ್ಲಕ್ಕಿಂತ ಮಿಗಿಲು ಎಂದು ನಂಬಿರುವ ಮಿಸೆಸ್ ನೋರಿಸ್ ಇವರು ದಾರಿತಪ್ಪುವುದಕ್ಕೆ ಕಾರಣಕರ್ತಳಾಗುತ್ತಾಳೆ. 'ಲವರ್ಸ್ ವಾಸ್' ನಾಟಕವನ್ನು ಆಡುವುದಕ್ಕೆ ಇವಳು ಹೃದಯಪೂರ್ವಕ ಒಪ್ಪಿಗೆಯನ್ನು ಕೊಡುತ್ತಾಳೆ ಎಂಬುದನ್ನು ಇಲ್ಲಿ ಗಮನಿಸಬೇಕು. ಇವೆಲ್ಲಕ್ಕೆ ವಿರುದ್ಧದ ಧ್ರುವದಲ್ಲಿ ಫ್ಯಾನಿಯ ಹಿನ್ನೆಲೆಯನ್ನು ಚಿತ್ರಿಸಲಾಗಿದೆ. ಇವಳ ತಾಯಿ ಮಿಸೆಸ್ ಪ್ರೈಸ್ ತನ್ನ ಯೌವ್ವನದಲ್ಲಿ ದುಡುಕಿ, ಒಬ್ಬ ಕುಡುಕನನ್ನು ಮದುವೆ ಮಾಡಿಕೊಂಡು, ಬಡತನದ ಬಡವಣೆ ಪಡುತ್ತಿದ್ದರೂ ಮಕ್ಕಳು ಸುಸಂಸ್ಕೃತ ವರ್ತನೆಯನ್ನು ಇವಳಿಂದ ಕಲಿಯುತ್ತಾರೆ. ಫ್ಯಾನಿ, ಇವಳ ತಂಗಿ ಸೂಸನ್ ಮತ್ತು ಇವರಿಬ್ಬರ ಅಣ್ಣ ವಿಲಿಯಮ್ ಮೂವರೂ ಈ ಕಾದಂಬರಿಯ ಇತ್ಯಾತ್ಮಕ ಪಾತ್ರಗಳೆಂಬುದು ಗಮನಾರ್ಹವಾದ ವಿಷಯವಾಗಿದೆ. ಈ ಮೂವರ ಮೂಲಕ ಸರಳತೆ, ಒಳ್ಳೆಯತನ, ಗಾಂಭೀರ್ಯ, ಸುಸಂಸ್ಕೃತ ವರ್ತನೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ನೈತಿಕತೆಯನ್ನು ಜೇನ್ ಆಸ್ಟಿನ್ ಎತ್ತಿ ಹಿಡಿದಿದ್ದಾಳೆ.

ಸಂದರ್ಭಕ್ಕೆ ತಕ್ಕಂತೆ ಪ್ರಾಮಾಣಿಕವಾದ ಭಾವನೆಗಳು ಹುಟ್ಟಿಕೊಳ್ಳುವುದು ಮತ್ತು ಮನುಷ್ಯ ಒಳ್ಳೆಯತನವನ್ನು ಮೈಗೂಡಿಸಿಕೊಳ್ಳುವುದು ಇವು ಸಹಾ ಮನೆಯ ವಾತಾವರಣ, ಹಿರಿಯರು ಮಕ್ಕಳನ್ನು ಬೆಳೆಸುವ ಕ್ರಮ ಇವುಗಳಿಂದ ನಿಯಂತ್ರಿತ ವಾಗಿವೆ. ಹೆನ್ರಿ ಮತ್ತು ಮೇರಿ ಅಪ್ರಮಾಣಿಕ ಭಾವನೆಗಳ ಮತ್ತು ಮಿಥ್ಯೆಯ ಮೂರ್ತಿ ಗಳಾಗಿದ್ದರೆ ಫ್ಯಾನಿ ಎಂದೂ ಸಹಜ ಭಾವಗಳ ಮತ್ತು ಸತ್ಯದ ತವರೂರಾಗಿದ್ದಾಳೆ.

ಫ್ಯಾನಿಯ ಮುಖೇನ ತನ್ನ ವೈಯಕ್ತಿಕ ನಂಬಿಕೆ, ಮೌಲ್ಯಗಳನ್ನು ಬಹುಮಟ್ಟಿಗೆ ಪ್ರತಿಪಾದಿಸಿದರೂ ಜೇನ್ ಆಸ್ಟಿನ್ ಇವಳನ್ನು ಆದರ್ಶದ ಪ್ರತಿರೂಪವಾಗಿಸದಿರುವುದು ಇವಳ ಸಾಹಿತ್ಯಕ ಪ್ರತಿಭೆಯ ದ್ಯೋತಕವಾಗಿದೆ. ಇದನ್ನು ಇವಳು ಸಾಧಿಸಿರುವುದು ವ್ಯಂಗ್ಯದ ಮೂಲಕ. ಈ ಸಾಧನದಿಂದಾಗಿ ಫ್ಯಾನಿಯೂ ಸೇರಿದಂತೆ ಎಲ್ಲರ ವ್ಯಕ್ತಿತ್ವ ಮತ್ತು ಜೀವನಕ್ರಮಗಳನ್ನು ನಿರ್ಲಿಪ್ತವಾಗಿ ಪರಿಭಾವಿಸಲು ಆಸ್ಟಿನ್‌ಗೆ ಸಾಧ್ಯವಾಗಿದೆ. ತನ್ನನ್ನು ತಾನು ವಸ್ತುವಿನಿಂದ, ಸನ್ನಿವೇಶಗಳಿಂದ, ಪಾತ್ರಗಳಿಂದ ದೂರೀಕರಿಸಿಕೊಂಡಿರು ವುದರಿಂದ ತನ್ನ ಮೆಚ್ಚಿನ ಹುಡುಗಿ ಫ್ಯಾನಿಯಲ್ಲೂ ಮಿತಿಗಳನ್ನು ಕಾಣುವುದು ಆಸ್ಟಿನ್ನಿಗೆ ಸಾಧ್ಯವಾಗಿದೆ. ಫ್ಯಾನಿ ಬಹುಸಂಕೋಚದ, ಅತಿ ಸೂಕ್ಷ್ಮದ, ವ್ಯಕ್ತಿತ್ವವನ್ನೇ ಕರಗಿಸಿಕೊಂಡಿರುವ ಹುಡುಗಿ. ಇದಕ್ಕೆ ಇವಳ ಹಿನ್ನೆಲೆ ಕಾರಣವಾಗಿದ್ದು ಈ ಲಕ್ಷಣಗಳು ಇವಳಲ್ಲಿ ಮೂಡಿರುವುದು ತೀರಾ ಸಹಜವಾಗಿದೆ. ಸಂಕೋಚ, ಹಿಂಜರಿತ ಮತ್ತು ದಿಗಿಲು ಗಳು ಇವಳನ್ನು ಕ್ರಿಯೆಯಲ್ಲಿ ತೊಡಗಿಸದಂತೆ ತಡೆಹಿಡಿಯುತ್ತವೆ; ಈ ಕಾರಣದಿಂದಾಗಿ ತನ್ನ ಭಾವನೆ, ವಿಚಾರಗಳನ್ನು ವ್ಯಕ್ತಪಡಿಸಲಾಗದೆ ಮೌನಿಯಾಗುತ್ತಾಳೆ, ಮುರುಟಿ ಕೊಂಡುಬಿಡುತ್ತಾಳೆ. ಈ ಬೆಳಕಿನಲ್ಲಿ ನೋಡಿದಾಗ ಫ್ಯಾನಿ (ಕಾದಂಬರಿಯ ಮೊದಲ ಭಾಗದಲ್ಲಿ ಕಂಡುಬಂದಂತೆ) ಪರಿಪೂರ್ಣ ವ್ಯಕ್ತಿತ್ವವನ್ನು ಇನ್ನೂ ಪಡೆದುಕೊಂಡಿಲ್ಲ. ಸಂದರ್ಭದ ಅಗತ್ಯವಿದ್ದಾಗಲೂ ತನ್ನನ್ನು ಪ್ರಕಟಪಡಿಸಿಕೊಳ್ಳದೆ, ಕ್ರಿಯೆಯಿಂದ ಹಿಂಜರಿಯುವ ಫ್ಯಾನಿಯ ವ್ಯಕ್ತಿತ್ವ ಆಸ್ಟಿನ್ನಳ ಅನುಕಂಪವನ್ನು ಪಡೆದಂತೆ ವ್ಯಂಗ್ಯಕ್ಕೂ ಗುರಿಯಾಗಿದೆ. ಧೈರ್ಯವಾಗಿ, ಸ್ವತಂತ್ರವಾಗಿ, ಸಮಾನತೆಯ ಸ್ತರದಲ್ಲಿ ಫ್ಯಾನಿ ವ್ಯವಹರಿಸುವುದು ತನ್ನ ಅಣ್ಣ ವಿಲಿಯಂನೊಂದಿಗೆ ಮಾತ್ರ. ನಿಧಾನವಾಗಿ ಧೈರ್ಯ ವನ್ನು ಮೈಗೂಡಿಸಿಕೊಳ್ಳುತ್ತಾ ತನ್ನ ನಿಲುವುಗಳನ್ನು ಅಳುಕಿಲ್ಲದೆ ವ್ಯಕ್ತಪಡಿಸುವ ಸಾಮರ್ಥ್ಯವನ್ನು ಇವಳು ದಕ್ಕಿಸಿಕೊಂಡಾಗ ಇವಳ ವ್ಯಕ್ತಿತ್ವ ಪ್ರಕಾಶವಾಗುತ್ತದೆ. ಹೆನ್ರಿ ತನ್ನ ಪ್ರೇಮವನ್ನು ತೋಡಿಕೊಂಡಾಗ, ಇವನ ಪರವಾಗಿ ಸರ್ ಥಾಮಸ್ ಬರ್ಟ್ರಾಮ್, ಮೇರಿ ಮತ್ತು ಎಡ್ಮಂಡ್ ಶಿಫಾರಸು ಮಾಡಿದಾಗ ಫ್ಯಾನಿಗೆ ಒಮ್ಮೆ ಇವನ ಭಾವನೆ ನಿಜವಿರಬಹುದು ಎನ್ನಿಸಿದರೂ ಅಂತಿಮವಾಗಿ ತಿರಸ್ಕರಿಸುತ್ತಾಳೆ. ಇವಳ ನೈತಿಕ ನಿಷ್ಠೆಯೇ ಇವಳ ಈ ನಿರ್ಣಯಕ್ಕೆ ಧಾತುವಾಗುತ್ತದೆ. ಮೊದಲಿನಿಂದಲೂ ಎಡ್ಮಂಡ್‌ನನ್ನು ಪ್ರೀತಿಸಿರುವವಳಾದ್ದರಿಂದ ಹೆನ್ರಿಗೆ ಮನವನ್ನು ಒಪ್ಪಿಸುವುದು ಅನೈತಿಕ ವೆಂದು ಫ್ಯಾನಿಗೆ ತಿಳಿದಿದೆ. ಅರಿವು, ವಿವೇಕ ಹೀಗೆ ಕ್ರಿಯಾತ್ಮಕವಾದಾಗ ಇವಳ ಬಗ್ಗೆ ಆಸ್ಟಿನ್ನಳ ವ್ಯಂಗ್ಯ ನಿಂತುಹೋಗುತ್ತದೆ; ಬದಲಾಗಿ ಪ್ರಶಂಸೆ ಮೂಡುತ್ತದೆ.

'ಮ್ಯಾನ್ಸ್‌ಫೀಲ್ಡ್ ಪಾರ್ಕ್' ಕಾದಂಬರಿಯ ಸಂಧಾನದ ಒಂದು ವಿಶೇಷವನ್ನು ಗಮನಿಸಬೇಕಾದುದು ಅಗತ್ಯ. ಮನುಷ್ಯ ಸಂಬಂಧಗಳ ದೃಷ್ಟಿಯಿಂದ ಇಲ್ಲಿ ಹಲವಾರು

ಎಳೆಗಳಿವೆ: (೧) ಫ್ಯಾನಿ—ಎಡ್ಮಂಡ್—ಮೇರಿ (೨) ರಶ್‌ವರ್ಥ್—ಮಾರಿಯಾ—ಹೆನ್ರಿ (೩) ಯೇಟ್ಸ್—ಜೂಲಿಯಾ—ಹೆನ್ರಿ (೪) ಎಡ್ಮಂಡ್—ಫ್ಯಾನಿ—ಹೆನ್ರಿ ಇತ್ಯಾದಿ ಸಂಬಂಧಗಳು ಮದುವೆ ಹಾಗೂ ಲೈಂಗಿಕತೆಗೆ ಸಂಬಂಧಪಟ್ಟಂತೆ ಇವೆ. ಇವುಗಳ ಜೊತೆಗೆ (೧) ಬರ್ಟ್ರಾಮ್ ದಂಪತಿಗಳು—ಮಕ್ಕಳು (೨) ಮಿಸೆಸ್ ನೋರಿಸ್—ಮಕ್ಕಳು (೩) ಮಿಸೆಸ್ ಪ್ರೈಸ್—ಮಕ್ಕಳು ಇತ್ಯಾದಿ ಸಂಬಂಧಗಳೂ ಇವೆ. ಈ ಎಲ್ಲ ಸಂಬಂಧಗಳಲ್ಲೂ ಬಹುತೇಕ ಜನರು ಇತರರ ಮೇಲೆ ತಮ್ಮ ಪ್ರಭಾವವನ್ನು ಬೀರಬೇಕೆಂದು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುತ್ತಾರೆ ಮತ್ತು ಸೋಲುತ್ತಾರೆ. ಈ ರೀತಿಯ ಯಾವ ಪ್ರಯತ್ನವನ್ನೂ ಮಾಡದ ಫ್ಯಾನಿ ತಾನು ಗೆಲ್ಲುವುದಷ್ಟೇ ಅಲ್ಲದೆ ಇತರರು (ಮುಖ್ಯವಾಗಿ ಬರ್ಟ್ರಾಮ್ ದಂಪತಿಗಳು ಮತ್ತು ಎಡ್ಮಂಡ್) ಸಹಜವಾಗಿ ತನ್ನ ವೃತ್ತಿಗೆ ಬಂದುಬಿಡುವಂತೆ ಮಾಡುವುದರಲ್ಲಿ ಯಶಸ್ವಿಯಾಗುತ್ತಾನೆ. ಹೀಗೆ ಮೌಲ್ಯಗಳು ಮತ್ತು ವೈಚಾರಿಕತೆಯ ನೆಲೆಯಲ್ಲಷ್ಟೇ ಅಲ್ಲದೆ ಕಾದಂಬರಿಯ ಸಂವಿಧಾನದ ನೆಲೆಯಲ್ಲೂ ಫ್ಯಾನಿ ಜೇನ್ ಆಸ್ಟಿನ್ನಳ ಪ್ರಶಂಸೆಯನ್ನು ಗಳಿಸಿದ್ದಾಳೆ.

'ಮ್ಯಾನ್ಸ್‌ಫೀಲ್ಡ್ ಪಾರ್ಕ್'ನ ಶಕ್ತಿಯನ್ನು ಗಮನಿಸಿದ ಮೇಲೆ ಜೇನ್ ಆಸ್ಟಿನ್ನಳ ಕಾದಂಬರಿಗಳು—ಇವು ಎಷ್ಟೇ 'ಸೀಮಿತ' ಜಗತ್ತಿನ ಭಿತ್ತಿಯಲ್ಲಿ ಮೂಡಿರಲಿ—ಇಪ್ಪತ್ತನೆಯ ಶತಮಾನದ ಓದುಗನಿಗೆ ಅಪ್ರಸ್ತುತ ಎಂದು ಏಕಾಏಕಿ ನಿರಾಕರಿಸುವುದು ಅಸಾಧ್ಯವಾಗುತ್ತದೆ. ಈ ಲೇಖನದ ಮೊದಲಲ್ಲಿ ಇವಳ ಸಾಹಿತ್ಯದ ಪ್ರಸ್ತುತತೆಯ ಬಗ್ಗೆ ಎತ್ತಿದ ಪ್ರಶ್ನೆಯ ಹಿನ್ನೆಲೆಯಲ್ಲಿ ಹೇಳುವುದಾದರೆ ಮನುಷ್ಯ ಜೀವಿಯ ಆತ್ಮದ ಪರಿಶುದ್ಧತೆ, ನಿರಾಡಂಬರ ಪ್ರಾಮಾಣಿಕ ಭಾವನೆಗಳ ಪ್ರಾಮುಖ್ಯ ಮತ್ತು ನೈತಿಕತೆಯಂತಹ ಚಿರಂತನ ಮೌಲ್ಯಗಳನ್ನು ತನ್ನ ಕಾದಂಬರಿಗಳಲ್ಲಿ ಬಿತ್ತರಿಸಿರುವ ಇವಳು ನಿಜಕ್ಕೂ ನಮಗೆ ಆಪ್ತಳೇ. ಹೀಗಾಗಿ ಕೈಗಾರಿಕಾ ಕ್ರಾಂತಿ ಮತ್ತು ಫ್ರಾನ್ಸಿನ ಕ್ರಾಂತಿಗಳಿಂದ ಪ್ರಭಾವಿತಳಾಗದೆ ಇವಳು ದೂರ ಉಳಿದದ್ದು ಮುಖ್ಯವಾಗುವುದಿಲ್ಲ. ನಾನು ಬಲ್ಲ ಪ್ರಪಂಚವನ್ನು ಎಚ್ಚರದ ಕಣ್ಣಿನಿಂದ ಶೋಧಿಸಿದ ಸಾರ್ಥಕತೆ ಮುಖ್ಯವಾಗುತ್ತದೆ.

ಮನುಷ್ಯ ಎಷ್ಟರ ಮಟ್ಟಿಗೆ ಇತರರ ಒಳ್ಳೆಯದಕ್ಕೆ ದುಡಿಯುತ್ತಾನೆಯೊ
ಅಷ್ಟರ ಮಟ್ಟಿಗೆ ಅವನು ದೊಡ್ಡವನಾಗುತ್ತಾನೆ.

ಗಾಂಧೀಜಿ

ಪ್ರೈಡ್ ಅಂಡ್ ಪ್ರೆಜುಡಿಸ್‌ನಲ್ಲಿ ಮದುವೆ

ಡಾ|| ಆರ್. ರಾಮಚಂದ್ರ

"ಜೇನ್ ಆಸ್ಟಿನ್, ಜಾರ್ಜ್ ಎಲಿಯಟ್, ಹೆನ್ರಿ ಜೇಮ್ಸ್ ಮತ್ತು ಜೋಸೆಫ್ ಕಾನ್ರಾಡ್ ಇಂಗ್ಲಿಷ್‌ನ ಮಹಾನ್ ಕಾದಂಬರಿಕಾರರು...." ಎಂದು ಲೀವಿಸ್ ತನ್ನ **ದಿ ಗ್ರೇಟ್ ಟ್ರೆಡಿಷನ್**‌ನಲ್ಲಿ ಸಾರುತ್ತಾನೆ. ಲೀವಿಸನು ಕಾಲಕ್ರಮೇಣ ಲಾರೆನ್ಸ್ ಮತ್ತು ಡಿಕನ್ಸ್‌ರನ್ನು ತನ್ನ ಮಹಾನ್ ಕಾದಂಬರಿಕಾರರ ಪಟ್ಟಿಯಲ್ಲಿ ಸೇರಿಸಿದ; ನಥೇನಿಯಲ್ ಹಾಥಾರ್ನ್ ಮತ್ತು ಹರ್ಮನ್ ಮೆಲ್ವಿಲ್‌ರನ್ನೂ ಹೆಸರಿಸಿದ. ಲಾರೆನ್ಸ್, ಮೆಲ್ವಿಲ್ ಮತ್ತು ಕಾನ್ರಾಡ್ ಈ ಬರಹಗಾರರ ಸಮೂಹದಲ್ಲಿ ಜೇನ್ ಆಸ್ಟಿನನ್ನೂ ಸೇರಿಸುವುದು ಸ್ವಲ್ಪ ವಿಪರ್ಯಾಸವಾಗಿ ತೋರಬಹುದು. ಒಂದೆಡೆ ಸ್ವತಃ ಕಾನ್ರಾಡ್ ತಿರಸ್ಕಾರದಿಂದ ಕೇಳುತ್ತಾನೆ: "ಜೇನ್ ಆಸ್ಟಿನ್‌ನಲ್ಲೇನಿದೆ?" ಹೌದು, ಜೇನ್ ಆಸ್ಟಿನ್‌ನಲ್ಲೇನಿದೆ? ಕಾನ್ರಾಡ್, ಮೆಲ್ವಿಲ್‌ರ ಕೃತಿಗಳಲ್ಲಿರುವಂತೆ ರಾಜಕೀಯ, ಆರ್ಥಿಕ, ಪಾರಮಾರ್ಥಿಕ ಸಮಸ್ಯೆಗಳಿವೆಯೆ? ಹೋಗಲಿ, ಕೊಳೆಗೇರಿಗಳಿವೆಯೆ, ಡಿಕನ್ಸ್‌ನ ಕೃತಿಗಳಲ್ಲಿರುವಂತೆ? ಊಹುಂ. ದೊಡ್ಡ ದೊಡ್ಡ ಬಂಗ್ಲೆಗಳಿವೆ; ಬಾಲ್‌ರೂಂ ಡಾನ್ಸ್‌ಗಳಿವೆ. ಅವಳ ಕೃತಿಗಳಲ್ಲಿ ಕಾಣಸಿಗುವುದು ಮದುವೆಗೆ ಸಂಬಂಧಿಸಿದಂಥ ಸಮಸ್ಯೆಗಳು; ಜೀವಯಾತ್ರೆಗೆ ಸಂಬಂಧಿಸಿದಂಥ ಸಮಸ್ಯೆಗಳಲ್ಲ. ಕಾನ್ರಾಡ್, ಮೆಲ್ವಿಲ್‌ರ ಜಗತ್ತಿನ ಹೋಲಿಕೆಯಲ್ಲಿ ಜೇನ್ ಆಸ್ಟಿನ್‌ಳ ಪ್ರಪಂಚ ಘನವಾದುದೇನಲ್ಲದಿರಬಹುದು, ಸಾಂದ್ರತೆಯಿಲ್ಲದಿರುವಂತಹುದಿರಬಹುದು; ಆದರೆ ಕ್ಷುಲ್ಲಕವಾದುದೇನಲ್ಲ. ಇದಕ್ಕೆ ಕಾರಣ ವ್ಯಕ್ತಿ–ವ್ಯಕ್ತಿ ನಡುವಿನ ಸಂಬಂಧಕ್ಕೆ ಆಸ್ಟಿನ್ ಕೊಡುವ ಪ್ರಾಧಾನ್ಯ.

ಕಾನ್ರಾಡ್ ಮತ್ತು ಆಸ್ಟಿನ್‌ರ ನಡುವೆ ಸಾಮ್ಯತೆಯ ಅಂಶವೊಂದು ಬಹುಶಃ ಇರಬಹುದೇನೊ! ಕಾನ್ರಾಡ್‌ನಂತೆ ಆಸ್ಟಿನ್ ಕೂಡ ಹಗಲುಗನಸು ಕಾಣುವ ಮನೋಭಾವವನ್ನು ಮತ್ತು

ಅಂಥ ಮನೋಭಾವಕ್ಕೆ ಒಗ್ಗುವ ಬರಡು ಆದರ್ಶಗಳನ್ನು, ರಂಜಕತೆಯನ್ನು ಟೀಕಿಸುವ ಬರಹಗಾರ್ತಿ. ಈ ಟೀಕೆ ಕಾನ್‌ರ್ಯಾಡ್‌ನ ಕೃತಿಗಳಲ್ಲಿ ಗಂಡಿನ ದೃಷ್ಟಿಕೋನದಿಂದ ನಡೆದರೆ ಆಸ್ಟಿನ್‌ನ ಕೃತಿಗಳಲ್ಲಿ ಹೆಣ್ಣಿನ ದೃಷ್ಟಿಕೋನದಿಂದ ನಡೆಯುತ್ತದೆ. ಹೆಂಗಸರನ್ನು ಹಗಲು ಗನಸಿಗೆಳೆದು ಅವರನ್ನು ರಂಜಿಸಲೆಂದೇ ಒಂದು ಬಗೆಯ ಕಥೆಯ ರೂಪವಿದೆ. ಅದು ಸಿಂಡ್ರೆಲ್ಲಾ ಕತೆಯನ್ನು ಬಳಸಿಕೊಳ್ಳುತ್ತದೆ. ಇಂತಹ ಕತೆಗಳ ನಾಯಕಿ ಸಾಮಾನ್ಯವಾಗಿ ಒಬ್ಬ ಮಧ್ಯಮವರ್ಗದ ಹೆಣ್ಣು. ಸುಶೀಲೆ. ಸುಂದರಿ. ಅಷ್ಟಾಗಿ ಲೋಕವ್ಯವಹಾರ ಅರಿತವಳಲ್ಲ. ಸಾಧಾರಣವಾಗಿ ಇವಳು ನರ್ಸೋ, ಟೈಪಿಸ್ಟೋ ಆಗಿರುತ್ತಾಳೆ. ನಾಯಕ ದೊಡ್ಡ ಡಾಕ್ಟರ್ ಅಥವ ದೊಡ್ಡ ಕಂಪನಿಯ ಡೈರೆಕ್ಟರ್; ಅಧಿಕಾರ ದರ್ಪವನ್ನು ಸೂಸುವವನು. ನಾಯಕಿಗೆ 'ಆಧುನಿಕ'ಳಾದ, ಗಂಡಸರನ್ನು ಮೋಹಗೊಳಿಸುವ ವಿದ್ಯೆಯಲ್ಲಿ ಪರಿಣತಳಾದ ಹೆಣ್ಣಿನಿಂದ ಪೈಪೋಟಿಯಿರುತ್ತದೆ. ಆದರೂ 'ಬಡ', 'ಮುಗ್ಧ' ಹುಡುಗಿಯೇ ನಾಯಕನ ಮೆಚ್ಚುಗೆ ಗಳಿಸುತ್ತಾಳೆ—ಏಕೆಂದರೆ ಮೇಲ್ನೋಟಕ್ಕೆ ಬಹಳ ಕಟುವಾಗಿ, 'ಸ್ಟ್ರಿಕ್ಟ್' ಆಗಿ ಕಾಣುವ ಆ ನಾಯಕನಿಗೆ ನಿಜವಾದ ಒಲುಮೆಯ, ಹೆಣ್ಣಿನ ಅವಶ್ಯಕತೆ ಇರುತ್ತದೆ. ಇಂತಹ ಪ್ರಣಯ ಕಥೆಗಳಲ್ಲಿ ನಾಯಕಿಗೆ ಆದರ್ಶ ಗಂಡ ಸಿಗುವುದನ್ನು ಬಿಟ್ಟು ಉಳಿದುದೆಲ್ಲ ಗೌಣ. ಜೇನ್ ಆಸ್ಟಿನ್‌ಳ ಪ್ರೈಡ್ ಅಂಡ್ ಪ್ರೆಜುಡಿಸ್ ಈ ಸಿಂಡ್ರೆಲ್ಲಾ ಕತೆಯ ಹಗಲುಗನಸನ್ನು ವ್ಯಂಗ್ಯದಿಂದ ಕಾಣುತ್ತದೆ ಎನ್ನಬಹುದೇನೊ ?

ಬೆನೆಟ್ ದಂಪತಿಗಳಿಗೆ ಐದು ಜನ ಹೆಣ್ಣುಮಕ್ಕಳು. ಮಿಸಸ್ ಬೆನೆಟ್‌ಗೆ ಅವರು ಗಂಡಂದಿರನ್ನು ಪಡೆಯುವುದನ್ನು ನೋಡುವ ಆತುರ. ಅವರ ನೆರೆಗೆ ಹೊಸದಾಗಿ ಬಿಂಗ್ಲೆ ಎನ್ನುವ ಶ್ರೀಮಂತ ಯುವಕ ನೆಲೆಸಲು ಬಂದಾಗ ಆಕೆಗೆ ಸಡಗರವೋ ಸಡಗರ. ಬಿಂಗ್ಲೆ ತನ್ನ ಮಕ್ಕಳಲ್ಲಿ ಯಾರನ್ನಾದರೂ ವರಿಸಬಹುದೆಂಬ ಆಸೆ. ಬೆನೆಟ್ ಹೆಣ್ಣುಮಕ್ಕಳಿಗೆ ಲ್ಯೂಕಾಸ್ ಮಕ್ಕಳಿಂದ ಪೈಪೋಟಿಯಿದೆ. ಆದರೇನಂತೆ, ಬೆನೆಟ್‌ರ ಹಿರಿಯ ಮಗಳು ಜೇನ್ ತುಂಬ ಸುಂದರಿ ಬಾಲ್‌ಡಾನ್ಸ್ ಸಮಯದಲ್ಲಿ ಬಿಂಗ್ಲೆಯ ಗಮನವನ್ನು ವಿಶೇಷವಾಗಿ ಸೆಳೆಯುತ್ತಾಳೆ. ಅವರಿಬ್ಬರೂ ಮದುವೆಯಾಗುವುದು ಖಚಿತ ಎಂದು ಮಿಸಸ್ ಬೆನೆಟ್ ಮತ್ತು ಉಳಿದವರು ನಂಬುತ್ತಾರೆ. ಆದರೆ ಅವರೆಲ್ಲರ ನಿರೀಕ್ಷೆಯನ್ನು ಸುಳ್ಳು ಮಾಡಿ ಲಂಡನ್ನಿಗೆ ಹೊರಟುಹೋಗುತ್ತಾನೆ. ಬಿಂಗ್ಲೆಯ ಈ ಅನಿರೀಕ್ಷಿತ ನಡವಳಿಕೆಗೆ ಕಾರಣ ಅವನ ಮಿತ್ರ ಡಾರ್ಸಿ. ಈತ ಬಿಂಗ್ಲೆಗಿಂತ ಅನೇಕ ಪಟ್ಟು ಶ್ರೀಮಂತ. ನೋಡಲೂ ಲಕ್ಷಣವಂತ. ಅವನನ್ನು ಮೊದಲ ಬಾರಿ ಬಾಲ್‌ಡಾನ್ಸ್‌ನಲ್ಲಿ ಕಂಡಾಗ ಮಿಸಸ್ ಬೆನೆಟ್‌ಗೆ ಮತ್ತೂ ಆಸೆ ಚಿಗುರುತ್ತದೆ—ಇವನಿಗೂ ತನ್ನೊಬ್ಬ ಮಗಳು ಹಿಡಿಸಿದರೆ ಎಂದು. ಆದರೆ ಡಾರ್ಸಿ ಯಾರೊಡನೆಯೂ ಡಾನ್ಸ್ ಮಾಡುವುದಿಲ್ಲ. ಬೆನೆಟ್‌ರ ಎರಡನೆ ಮಗಳು ಎಲಿಜಬೆತ್ ಬಾಲ್‌ರೂಂನಲ್ಲಿ ಒಂಟಿಯಾಗಿರುವುದನ್ನು ನೋಡಿಯೂ, ಅವಳೊಡನೆ ಡಾನ್ಸ್ ಮಾಡಬೇಕೆಂದು ಬಿಂಗ್ಲೆ ಅವನನ್ನು ಕೋರಿಕೊಂಡರೂ, ಎಲಿಜಬೆತ್ ತನ್ನನ್ನು ಡಾನ್ಸಿಗೆ ಒಡಂಬಡಿಸುವಂಥ ಸುರೂಪಿ ಯೇನಲ್ಲ; ಬಿಂಗ್ಲೆಯ ತಂಗಿಯರ ಹೊರತಾಗಿ ರೂಮಿನಲ್ಲಿದ್ದ ಯಾವುದೇ ಹೆಣ್ಣಿನ ಸಹವಾಸ ಶಿಕ್ಷೆಗೆ ಸಮಾನ, ಎಂದು ಹೇಳಿ ದೂರ ನಿಲ್ಲುತ್ತಾನೆ. ಆ ಘಳಿಗೆಯಿಂದ

ಡಾರ್ಸಿಯ ಬಗ್ಗೆ ಎಲ್ಲ ಅಸಮಾಧಾನ ಮೂಡುತ್ತದೆ. ತನ್ನ ಅಂತಸ್ತಿನ ಬಗ್ಗೆ ಡಾರ್ಸಿಗೆ ವಿಪರೀತ ಅಹಂಕಾರವೆಂದು ಎಲ್ಲರ ಭಾವನೆ. ಎಲಿಜಬೆತ್‌ಗಂತೂ ಅವನನ್ನು ಕಂಡರಾಗದು ತನ್ನ ಅಕ್ಕ ಜೇನ್‌ಳಿಂದ ಬಿಂಗ್ಲೆಯನ್ನು ದೂರ ಮಾಡಿದ ಎಂದು. ಜೇನ್ ಯಾರಲ್ಲೂ ದೋಷವನ್ನೇ ಕಾಣದಂಥ ಹುಡುಗಿ. ಎಲಿಜಬೆತ್ ಹಾಗಲ್ಲ. ಬೆನೆಟ್ ಮಕ್ಕಳಲ್ಲಿ ಅವಳೇ ಬುದ್ಧಿವಂತೆ. ಆದರೂ ಡಾರ್ಸಿಯ ಬಗ್ಗೆ ಪೂರ್ವಾಗ್ರಹ ಹೊಂದುತ್ತಾಳೆ. ಕ್ರಮೇಣ ಡಾರ್ಸಿ ಅವಳಿಂದ ಆಕರ್ಷಿತನಾದರೂ, ತನ್ನ ಪೂರ್ವಾಗ್ರಹಗಳಿಂದಾಗಿ ಎಲಿಜಬೆತ್ ಅದನ್ನು ಗುರುತಿಸುವುದಿಲ್ಲ. ಅವನು ಅವಳೊಡನೆ ಆಡುವ ಒಂದೊಂದು ಮಾತಿನಲ್ಲೂ ಅವಳಿಗೆ ಕೊಂಕು, ವ್ಯಂಗ್ಯ ಮತ್ತು ಅನಾದರವೇ ಕಾಣುತ್ತದೆ.

ಎಲಿಜಬೆತ್‌ಗೆ ಡಾರ್ಸಿಯ ಬಗ್ಗೆ ತಪ್ಪು ಅಭಿಪ್ರಾಯ ಮತ್ತೂ ಬಲಗೊಳ್ಳಲು ವಿಕ್‌ಹ್ಯಾಮ್ ಎಂಬ ತರುಣ ಸೈನ್ಯದಲ್ಲಿರುವ ಅವನು ಮೇಲ್ನೋಟಕ್ಕೆ ಒಳ್ಳೆಯ ನಡವಳಿಕೆಯವನಂತೆ, ಶಿಸ್ತಿನವನಂತೆ ಕಾಣುತ್ತಾನೆ. ಅವನ ಪ್ರಕಾರ ಡಾರ್ಸಿ ಅವನಿಗೆ ಬರಬೇಕಿದ್ದ ಆಸ್ತಿಯಿಂದ ವಂಚಿಸಿರುತ್ತಾನೆ. ಅವನ ಮಾತನ್ನು ಪೂರ್ತಿಯಾಗಿ ನಂಬಿ ಎಲಿಜಬೆತ್ ಡಾರ್ಸಿಯನ್ನು ಅಸಹ್ಯದಿಂದ ಕಾಣುತ್ತಿರುತ್ತಾಳೆ. ಆದರೆ ವಿಕ್‌ಹ್ಯಾಮ್ ಮತ್ತು ಎಲಿಜಬೆತ್‌ಳ ತಂಗಿ ಲಿಡ್ಯಾ ಓಡಿಹೋದಾಗ, ಅವರನ್ನು ಹುಡುಕಿ, ವಿಕ್‌ಹ್ಯಾಮ್‌ನ ಸಾಲಗಳನ್ನು ತೀರಿಸಿ, ಅವರಿಬ್ಬರೂ ಮದುವೆಯಾಗುವಂತೆ ಮಾಡುವವನು ಡಾರ್ಸಿಯೇ. ಇದಿಷ್ಟೂ ಅವನು ಎಲಿಜಬೆತ್‌ಗಾಗಲೀ ಅವಳ ಮನೆಯವರಿಗಾಗಲಿ ತಿಳಿಯದಂತೆ ಮಾಡುತ್ತಾನೆ. ಡಾರ್ಸಿಯ ಬಗ್ಗೆ ಎಲಿಜಬೆತ್‌ಗಿದ್ದ ತಪ್ಪು ಗ್ರಹಿಕೆಗಳು ದೂರವಾಗುವ ಸಮಯಕ್ಕೆ, ಬಿಂಗ್ಲೆ ಲಂಡನ್ನಿಗೆ ಹೊರಟುಹೋಗಲು ಡಾರ್ಸಿಗಿಂತಲೂ ಮುಖ್ಯವಾಗಿ ಜೇನ್‌ಳ ನಿರಾಸಕ್ತ ಮುಖಭಾವ ಹಾಗೂ ಮಿಸಸ್ ಬೆನೆಟ್‌ಳ ಒಡ್ಡತನವೂ ಕಾರಣ ಎಂದು ಅವಳಿಗೆ ಅರಿವಾಗುವ ಸಮಯಕ್ಕೆ ಡಾರ್ಸಿಗೂ ತನ್ನ ಬಗ್ಗೆ ಅರಿವು ಮೂಡಿರುತ್ತದೆ.

ಕಾದಂಬರಿಯ ಅನೇಕ ಪಾತ್ರಗಳು, ಅನೇಕ ಸನ್ನಿವೇಶಗಳು ಯದ್ವಾತದ್ವಾ ಬೆಳೆಯುದಂತೆ ಮಾಡುವ ಒಂದು ಅಂಶ ಕಾದಂಬರಿಯ ವಸ್ತು. ಡಾರ್ಸಿಯ ವಿಪರೀತವೆನಿಸುವ ಸ್ವಾಭಿಮಾನ (Pride) ಮತ್ತು ಎಲಿಜಬೆತ್‌ಳ ಪೂರ್ವಾಗ್ರಹ (Prejudice) ಇದಿಷ್ಟನ್ನೇ ನೋಡಲು ಹೋದರೆ ಈ ಕೃತಿ ಒಂದು ಸ್ವಾರಸ್ಯಹೀನ ರೂಪಕ ಕಥೆ, ಅಷ್ಟೆ. ಎಲಿಜಬೆತ್ ಮತ್ತು ಡಾರ್ಸಿ ಇಬ್ಬರಲ್ಲಿಯು ತಪ್ಪು ಗ್ರಹಿಕೆಗಳು ದೂರವಾಗಿ, ಆರೋಗ್ಯಕರವಾದ 'ಅಹಂ'ನ ಸಮರ್ಥನೆ ಕಾದಂಬರಿಯಲ್ಲಿ ನಡೆಯುತ್ತದೆ. ಹಾಗೆ ನೋಡಿದರೆ ಈ ಕಾದಂಬರಿ 'ಅಹಂ'ನ ಅನೇಕ ಮುಖಗಳ ವ್ಯಾಸಂಗವೆಂದು ಪರಿಗಣಿಸಬಹುದು. ಎಲಿಜಬೆತ್ ಅಂದುಕೊಂಡಂತೆ 'ಅಹಂ' ಕೇವಲ ವ್ಯಕ್ತಿಯ ಸಮಾಜಿಕ ಸ್ವಪ್ರತಿಷ್ಠೆ ಮಾತ್ರವಾಗಿರುವುದಿಲ್ಲ. ಈ ಬಗ್ಗೆಯ ಸ್ವಪ್ರತಿಷ್ಠೆ, ತಮ್ಮ ಸಾಮಾಜಿಕ ಅಂತಸ್ತಿಗೆ ಔನ್ನತ್ಯದ ಬಗ್ಗೆ ದುರಭಿಮಾನವಿರುವವರು ಡಾರ್ಸಿಯ ದೊಡ್ಡಮ್ಮ ಲೇಡಿ ಕ್ಯಾಥರೀನ್ ಹಾಗೂ ಬಿಂಗ್ಲೆಯ ತಂಗಿ. ಡಾರ್ಸಿಯ ತಂಗಿಯಲ್ಲಿ ಯಾವುದನ್ನು ಎಲಿಜಬೆತ್ 'ಅಹಂ' ಎಂದು ತಿಳಿದಿರುತ್ತಾಳೋ ಅದು ವಾಸ್ತವವಾಗಿ 'ಲಜ್ಜೆ' ಯಾಗಿರುತ್ತದೆ; ಡಾರ್ಸಿಯಲ್ಲಿ ಯಾವುದನ್ನು 'ಅಹಂ' ಎಂದುಕೊಂಡಿರುತ್ತಾಳೋ ಅದು ಅವನ ಆತ್ಮಗೌರವ ಹಾಗೂ

ಜವಾಬ್ದಾರಿತನವಾಗಿರುತ್ತದೆ. ಇದೇ ಗುಣ ಎಲಿಜಬೆತ್ ಹಾಗೂ ಜೇನ್‌ನಲ್ಲೂ ಸಹ ಇರುವುದು. ಎಲಿಜಬೆತ್‌ಳ ಮತ್ತೊಬ್ಬ ತಂಗಿ ಮೇರಿ ಪುಸ್ತಕ ಕ್ರಿಮಿ—ಹಾಗಿರುವುದರ ಬಗ್ಗೆಯೇ ಅವಳಿಗೆ ಗರ್ವ. ಲ್ಯೂಕಾಸ್ ದಂಪತಿಗಳಿಗೆ ತಮ್ಮ 'ರಾಜನಡವಳಿಕೆ' ಬಗ್ಗೆ ಇರುವ 'ಅಹಂ' ಅವರ ಅತಿವಿನಯದಲ್ಲಿ ವ್ಯಕ್ತವಾದರೆ, ಕಾಲಿನ್ಸ್‌ನಂತಹವನ ಅಹಂ ಅವನ ಸೇವಾಮನೋಭಾವ ಹಾಗೂ ನಡವಳಿಯಲ್ಲಿ ವ್ಯಕ್ತವಾಗುತ್ತದೆ. ಮತ್ತೂ ಕೆಲವು ಪಾತ್ರಗಳಲ್ಲಿ 'ಅಹಂ' ಗರ್ವವಾಗಿಯಾಗಲಿ ಹೆಮ್ಮೆಯಾಗಾಗಲೀ ವ್ಯಕ್ತವಾಗದೆ ತೇಜೋಹೀನರಾಗಿಬಿಡುತ್ತಾರೆ. ಕಾಲಿನ್ಸ್‌ನಂತಹ ನೀರಸ ವ್ಯಕ್ತಿಯನ್ನು ಗಂಡನನ್ನಾಗಿ ಒಪ್ಪಿಕೊಳ್ಳುವ ಚಾರ್ಲಟ್ ಲ್ಯೂಕಾಸ್, ಗಾಂಭೀರ್ಯವೇ ಇಲ್ಲದ ಮಿಸಸ್ ಬೆನೆಟ್ ಮತ್ತು ಅವಳ ಕಿರಿಯ ಮಕ್ಕಳು, ಹೆಣ್ಣು ಮಕ್ಕಳ ಮದುವೆ ಬಗ್ಗೆ ಒಂದು ಬಗೆಯ ಬೇಜವಾಬ್ದಾರಿತನ ತೋರಿಸುವ ಬೆನೆಟ್—ಇವರಲ್ಲಿನ 'ಅಹಂ'ನ ಕೊರತೆ ಸಮರ್ಥನೀಯವಾಗುವುದಿಲ್ಲ.

ಕಾದಂಬರಿಯ ಪಾತ್ರಗಳನ್ನು, ಸನ್ನಿವೇಶಗಳನ್ನು ನಿಯಂತ್ರಿಸುವ ಮತ್ತೊಂದು ಮುಖ್ಯ ಅಂಶವೆಂದರೆ ಕಾದಂಬರಿಯ ನಿರೂಪಣಾ ವಿಧಾನ. ಹೆಚ್ಚು ಕಡಿಮೆ ಕಾದಂಬರಿಯೆಲ್ಲವೂ ಎಲಿಜಬೆತ್‌ಳ ದೃಷ್ಟಿಕೋನದಿಂದಲೇ ನಿರೂಪಿತವಾಗುತ್ತದೆ. ಈ 'ಮಿತ ಸಾಕ್ಷಿತ್ವ' ಪ್ರಜ್ಞೆಯಿಂದಾಗಿ ಕಾದಂಬರಿಯ ವಸ್ತು ಸುವ್ಯವಸ್ಥಿತವಾಗುತ್ತದೆ. ಎಲ್ಲ ಪಾತ್ರಗಳ, ಸನ್ನಿವೇಶಗಳ ಬಗ್ಗೆ ಜೇನ್ ಆಸ್ಟಿನ್ ನಿಷ್ಪಕ್ಷಪಾತದಿಂದ, ಹಾಸ್ಯ, ವ್ಯಂಗ್ಯವನ್ನು ಬಳಸುತ್ತಾಳೆ. ಆಗಿನ ಸಮಾಜದಲ್ಲಿ 'ಮದುವೆ', ದಾಂಪತ್ಯಜೀವನದ ನೀರಸತೆಯನ್ನು ಸೂಚಿಸಲೂ ವ್ಯಂಗ್ಯವನ್ನು ಬಳಸುತ್ತಾಳೆ ಜೇನ್ ಆಸ್ಟಿನ್. **ಪ್ರೈಡ್ ಅಂಡ್ ಪ್ರೆಜುಡಿಸ್**‌ನ ಹೆಣ್ಣುಗಳಿಗೆ ಮದುವೆಯಾಗುವುದೇ ಜೀವನದ ಗುರಿ. ಆದರೆ ಇಂಥ ಹೆಣ್ಣುಗಳ ಹಗಲುಗನಸಿಗೆ ಸ್ವಲ್ಪವೂ ಪುಷ್ಟಿ ನೀಡಲಾರದಂಥ ದಾಂಪತ್ಯ ಜೀವನದ ಚಿತ್ರಣಗಳು ಕಾದಂಬರಿಯಲ್ಲಿವೆ. ಉದಾಹರಣೆಗೆ ಬೆನೆಟ್ ದಂಪತಿಗಳು.

> "ತನ್ನ ಕುಟುಂಬದಿಂದಲೇ ಎಲಿಜಬೆತ್ ಸೂಚನೆಗಳನ್ನೇನ್ನಾದರೂ ತೆಗೆದುಕೊಂಡಿದ್ದದ್ದರೆ ದಾಂಪತ್ಯ ಸುಖದ....ಬಗ್ಗೆ ಅವಳು ಅಂಥಾ ಹಿತಕರವಾದ ಚಿತ್ರವನ್ನೇನೂ ಮೂಡಿಸಿಕೊಳ್ಳುತ್ತಿರಲಿಲ್ಲ. ಯೌವನ ಮತ್ತು ಸೌಂದರ್ಯಕ್ಕೆ ಮಾರುಹೋದ ಅವಳ ಅಪ್ಪ ಯೌವನ ಸೌಂದರ್ಯಗಳು ಒಳ್ಳೆ 'ಮನಸ್ಸ'ನ್ನು ಬಿಂಬಿಸುತ್ತವೆಂಬ ಭ್ರಾಂತಿಗೆ ಸಿಕ್ಕಿ, ಗ್ರಹಣ ಶಕ್ತಿ ಕಡಿಮೆ ಇರುವ, ಸಂಕುಚಿತ ಮನಸ್ಸಿನ ಹೆಣ್ಣನ್ನು ಮದುವೆಯಾಗಿಬಿಟ್ಟಿದ್ದ; ವಿವಾಹದ ಹೊಸದರಲ್ಲೋ ಅವಳ ಬಗ್ಗೆ ಅವನಿಗಿದ್ದ ಪ್ರೀತಿ ಇಂಗಿಹೋಗಿತ್ತು. ಅವನ ಗೌರವ, ಆತ್ಮವಿಶ್ವಾಸ ಮಾಯವಾಗಿದ್ದವು; ದಾಂಪತ್ಯಸುಖದ ಬಗ್ಗೆ ಅವನಿಗಿದ್ದ ಅಭಿಪ್ರಾಯಗಳೆಲ್ಲ ತಲೆಕೆಳಗಾಗಿದ್ದವು ....ಗ್ರಾಮಪ್ರದೇಶ ಮತ್ತು ಪುಸ್ತಕಗಳ ಬಗ್ಗೆ ಈಗ ಅವನ ಒಲುಮೆ; ಈ ಅಭಿರುಚಿಗಳಿಂದಷ್ಟೇ ಅವನಿಗೆ ಸುಖ ಸಿಗುತ್ತಿದ್ದುದ್ದು. ಹೆಂಡತಿಯ ಅಜ್ಞಾನ ಮತ್ತು ದಡ್ಡತನ ತನಗೆ ಆಗೀಗ ಒದಗಿಸುತ್ತಿದ್ದ ವಿನೋದವನ್ನು

> ಬಿಟ್ಟರೆ ಬೇರೆ ಯಾವ ಕಾರಣಕ್ಕೂ ಅವನು ಅವಳಿಗೆ ಕೃತಜ್ಞನಾಗ ಬೇಕಾಗಿರಲಿಲ್ಲ."

ಚಾರ್ಲಟ್ ಲ್ಯೂಕಾಸ್ ಮತ್ತು ಕಾಲಿನ್ಸ್‌ರ ವಿವಾಹವೂ ರಸಹೀನವಾದದ್ದು. ಕಾಲಿನ್ಸ್ ಮೊದಲು ಜೇನ್‌ನತ್ತ ಗಮನ ಹರಿಸಿ, ಅವಳು ದಕ್ಕದಿರುವುದ ಕಂಡು ಎಲಿಜಬೆತ್ ಳನ್ನು ವರಿಸುವ ಪ್ರಯತ್ನ ಮಾಡಿ ಸೋತು, ನಂತರ ಚಾರ್ಲಟ್‌ಗಳನ್ನು ಮದುವೆ ಯಾಗಲು ಕೇಳಿಕೊಳ್ಳುತ್ತಾನೆ. ಅವನಂತಹ ನೀರಸ ವ್ಯಕ್ತಿಯನ್ನು ಮದುವೆಯಾಗಿ ಚಾರ್ಲಟ್ ಎಲಿಜಬೆತ್‌ಳನ್ನು ನಿರಾಸೆಗೊಳಿಸುತ್ತಾಳೆ. ಲಿಡ್ಯಾ ಮತ್ತು ವಿಕ್‌ಹ್ಯಾಮ್ ಮದುವೆ ಸಹ ನಮ್ಮ ಮೆಚ್ಚುಗೆ ಗಳಿಸುವಂತಹದ್ದಲ್ಲ. ದಾಂಪತ್ಯಜೀವನದ ನೀರಸತೆ ಯನ್ನು ತೋರಿಸಿದರೂ ಜೇನ್ ಆಸ್ಟಿನ್ ದಾಂಪತ್ಯಜೀವನವನ್ನು ತಿರಸ್ಕರಿಸಬೇಕೆಂದು ಕಾದಂಬರಿಯಲ್ಲೆಲ್ಲೂ ಸೂಚಿಸುವುದಿಲ್ಲ.

ನೀನೇನು ಕೊಡಬಲ್ಲೆ ಎನ್ನುವುದರ ಮೇಲೆ ನಿನ್ನ ಸುಖ ನಿಂತಿದೆಯೇ ಹೊರತು ನೀನೇನು ತೆಗೆದುಕೊಳ್ಳಬಲ್ಲೆ ಎನ್ನುವುದರ ಮೇಲಲ್ಲ.

ನಾಗರೀಕತೆ ಅಂದರೆ ತಾಳ್ಮೆ ಸಹಿಷ್ಣುತೆಗಳ ತವರು. ಹಿಂಸೆ ಪ್ರತಿ ಹಿಂಸೆ ಗಳ ಸಮುದ್ರವಲ್ಲ.

ಗಾಂಧೀಜಿ

ಜೇನ್ ಆಸ್ಟಿನ್ನಳ "ಎಮ್ಮಾ"

ಡಾ|| ಕೆ. ಸಿ. ಬೆಳ್ಳಿಯಪ್ಪ

"ಎಮ್ಮಾ" ಜೇನ್ ಆಸ್ಟಿನ್ನಳ ಅತ್ಯುತ್ತಮ ಕೃತಿ ಎನ್ನುವುದರಲ್ಲಿ ಸಂಶಯವಿಲ್ಲ. ಯುವತಿಯೊಬ್ಬಳ ಭ್ರಾಮಕತೆ, ಅವಳಿಗೆ ತನ್ನ ಬಗ್ಗೆ ಹಾಗೂ ಇತರರ ಬಗ್ಗೆ ತಪ್ಪು ಕಲ್ಪನೆಗಳು—ಇವನ್ನು ಈ ಕಾದಂಬರಿ ನಿರೂಪಿಸುತ್ತದೆ; ಅವಳಲ್ಲಿ ಕ್ರಮೇಣವಾಗಿ ಮೂಡುವ ಅರಿವು, ತಿಳುವಳಿಕೆಗಳನ್ನು ಚಿತ್ರಿಸುತ್ತದೆ. ತಾನು ವಾಸಿಸುವ ಪ್ರಪಂಚದ ವಾಸ್ತವತೆಗೆ, ತನ್ನ ಭ್ರಾಮಕತೆ ಸಾಟಿಯೇ ಅಲ್ಲ ಎನ್ನುವ ಸತ್ಯದ ಗ್ರಹಿಕೆಯಲ್ಲಿ ಎಮ್ಮಾಳ ಜೀವನದ ವಿದ್ಯಾಭ್ಯಾಸ ತೊಡಗಿರುತ್ತದೆ. ಅವಳ ಈ ವಿದ್ಯಾಭ್ಯಾಸ ಕ್ರಮವನ್ನು ಫ್ರೆಂಚ್ ಕಾದಂಬರಿಕಾರ ಫ್ಲಾಬೆಯ "ಮೇಡಮ್ ಬೊವಾರಿ"ಯ ಅದೇ ಹೆಸರಿನ ನಾಯಕಿ ಎಮ್ಮಾವಿನಲ್ಲಿಯೂ ಕೂಡ ನಾವು ಕಾಣ ಬಹುದು.

ಜೇನ್ ಆಸ್ಟಿನ್ ಬರೆದ ಆರು ಕಾಂಬರಿಗಳಲ್ಲಿ ಕೇವಲ "ಎಮ್ಮಾ" ಮಾತ್ರ ಅದರ ನಾಯಕಿಯ ಹೆಸರಿನಿಂದ ಕರೆಯಲ್ಪಟ್ಟಿದೆ. ಇದೊಂದು ಗಮನಿಸಬೇಕಾದ ಅಂಶ. ಎಮ್ಮಾ ಈ ಕಾದಂಬರಿಯ ಕೇಂದ್ರಬಿಂದು ಮಾತ್ರವಲ್ಲ; ಅವಳ ಪಾತ್ರ ಉಳಿದೆಲ್ಲ ಪಾತ್ರ ಗಳನ್ನು ನಿಯಂತ್ರಿಸುವಂತಹದ್ದು. ಜೇನ್ ಆಸ್ಟಿನ್‌ಗೆ ಎಮ್ಮಾಳ ಬಗ್ಗೆ ಬಲು ಪ್ರೀತಿ. ಆದರೆ ತನ್ನ ಈ ನಾಯಕಿ ಸಾರ್ವತ್ರಿಕ ಮೆಚ್ಚುಗೆ ಪಡೆಯಲಾರಳೆಂಬ ಭಾವನೆ ಅವಳಲ್ಲಿ ಬೇರೂರಿತ್ತು. ಇದಕ್ಕೆ ಕಾರಣ ಪ್ರಾಯಶಃ ಎಮ್ಮಾಳಲ್ಲಿ ನಾವು ಕಾಣುವ ಗುಣ ಗಳು ಕಾರಣವೆಂದು ಅಭಿಪ್ರಾಯಪಡಬಹುದು. ಅವಳು ಸಾಂಪ್ರ ದಾಯಿಕ ನಾಯಕಿಯರಂತೆ ಅಲ್ಲ. ಅವಳು ಗರ್ವಿಷ್ಠೆ ಮತ್ತು ಸಂಪೂರ್ಣ ಆತ್ಮವಿಶ್ವಾಸಿ; ತನ್ನ ತಪ್ಪುಗಳಿಂದ ಸುಲಭವಾಗಿ ಕಲಿಯುವಂತಹ ವ್ಯಕ್ತಿತ್ವ ಅವಳದಲ್ಲ.

ಇಪ್ಪತ್ತೊಂದು ವರ್ಷದ ಎಮ್ಮಾ ವುಡ್‌ಹೌಸ್‌ಳಲ್ಲಿ ಬುದ್ಧಿ, ಸೌಂದರ್ಯ, ಐಶ್ವರ್ಯ ಎಲ್ಲವೂ ಇದೆ. ಅವಳು ತನ್ನ ಗೃಹ

ಕೃತ್ಯ ನಡೆಸುತ್ತಿದ್ದ ಮಿಸ್ ಟೈಲರ್ ಮತ್ತು ಅಲ್ಲಿಯವರೇ ಆದ ವೆಸ್ಟನ್ ನಡುವೆ ವಿವಾಹಸಂಬಂಧ ಕುದುರಿಸುತ್ತಾರೆ. ಈ ಯಶಸ್ಸಿನಿಂದ ಉತ್ತೇಜಿತಳಾಗಿ, "ವಿವಾಹ ಸಂಬಂಧ ಕಲ್ಪಿಸುವುದು ಈ ಪ್ರಪಂಚದ ಅತ್ಯಂತ ವಿನೋದಕರ ಕ್ರೀಡೆ" ಎಂದು ಭಾವಿಸುತ್ತಾಳೆ. ಎರಡು ವ್ಯಕ್ತಿಗಳನ್ನು ಹತ್ತಿರ ತರುವ ಮದುವೆಯಂತಹ ಗಂಭೀರ ವಿಷಯದ ಬಗೆಗೆ ಎಮ್ಮಾಗಿರುವ ಉದಾಸೀನ ಮನೋಭಾವವನ್ನು ಈ ಮಾತುಗಳು ಸೂಚಿಸುತ್ತವೆ. ಇನ್ನೊಬ್ಬರ ಜೀವನದಲ್ಲಿ ತಲೆಹಾಕುವ ಪ್ರವೃತ್ತಿಯನ್ನು ಬೆಳೆಸಿ ಕೊಂಡಿರುವುದಲ್ಲದೆ, ಎಮ್ಮಾ ಅಂತಹವರ ಜೀವನವನ್ನು ಆಳಲು ಕೂಡ ಹಿಂಜರಿಯುವು ದಿಲ್ಲ. ಒಂದು ರೀತಿ ನೋಡಿದರೆ, ಮಿಸ್ ಟೈಲರ್‌ನ ವಿವಾಹದ ನಂತರ ಉಂಟಾದ ಒಂಟಿತನ ಮತ್ತು ತನ್ನ ಜೀವನದ ಬೇಸರವನ್ನು ಹೋಗಲಾಡಿಸಲು ಇವುಗಳು ಅವಳಿಗೆ ಸದವಕಾಶವಾಗಿ ಕಾಣುತ್ತವೆ. ಮನಶ್ಶಾಸ್ತ್ರದ ಭಾಷೆಯಲ್ಲಿ ಹೇಳುವುದಾದರೆ, ಎಮ್ಮಾ ಒಬ್ಬ 'ಮುದ್ದಿಸಿದ ಮಗು' (spoilt child). ಹೆಸರಾಂತ ಮನಶ್ಶಾಸ್ತ್ರಜ್ಞ ಆಲ್‌ಫ್ರೆಡ್ ಏಡ್ಲರ್‌ನ ಪ್ರಕಾರ ಅತಿ ಮುದ್ದಿಸಿದ ಮಗು ಯಾವ ಪರಿಶ್ರಮ ಅಥವಾ ಅರ್ಹತೆ ಇಲ್ಲದೆ ಪ್ರಾಮುಖ್ಯತೆಯನ್ನು ಪಡೆಯುತ್ತದೆ ಹಾಗೂ ಅದು ಈ ಪ್ರಾಧಾನ್ಯವನ್ನು ತನ್ನ ಜನ್ಮಸಿದ್ಧವಾದ ಹಕ್ಕು ಎಂದು ಸಾಮಾನ್ಯವಾಗಿ ಭಾವಿಸಲು ತೊಡಗುತ್ತದೆ.

ಇಂತಹ ಗುಣಗಳಿರುವ ಎಮ್ಮಾ ಅಲ್ಲಿಯ ಶಾಲೆಯ ವಿದ್ಯಾರ್ಥಿನಿ ಹ್ಯಾರಿಯೆಟ್ ಸ್ಮಿತ್‌ಳನ್ನು ತನ್ನ ಗೆಳತಿಯಾಗಿ ಸ್ವೀಕರಿಸುತ್ತಾಳೆ. ಹ್ಯಾರಿಯೆಟ್ ಬಲು ಸಾಮಾನ್ಯ ವಾದ ಹೆಣ್ಣು. ಅವಳಲ್ಲಿ ಹೇಳಿಕೊಳ್ಳುವಂತಹ ಬುದ್ಧಿವಂತಿಕೆ ಇಲ್ಲ. ಆದರೂ ಕೂಡ ಎಮ್ಮಾಳಿಗೆ ಇವಳು ಏಕೆ ಇಷ್ಟವಾಗುತ್ತಾಳೆ? ಕಾರಣ ಅವಳದು ಸುಲಭವಾಗಿ ಪ್ರಭಾವಿತಳಾಗುವಂತಹ ವ್ಯಕ್ತಿತ್ವ. ರೈತ ಕುಟುಂಬಕ್ಕೆ ಸೇರಿದ ರಾಬರ್ಟ್ ಮಾರ್ಟಿನ್ ನಿಂದ ಅವಳಿಗೆ ಮದುವೆಯ ಪ್ರಸ್ತಾಪ ಮಾಡುವ ಪತ್ರ ಬಂದಾಗ, ಅವನಲ್ಲಿ ತನಗೆ ಪ್ರೀತಿಯಿದ್ದಾಗ್ಯೂ, ಎಮ್ಮಾಳ ಸಲಹೆಯ ಮೇರೆಗೆ ಅವನನ್ನು ತಿರಸ್ಕರಿಸುವ ನಿರ್ಧಾರ ಕೈಗೊಳ್ಳುತ್ತಾಳೆ. ಈ ಸಂಬಂಧವನ್ನು ಬಯಸುವ ಎಮ್ಮಾಳ ಭಾವ ಜಾರ್ಜ್ ನೈಟ್‌ಲೆ ಇದರಿಂದ ಕುಪಿತಗೊಳ್ಳುತ್ತಾನೆ. ಈ ಘಟನೆ ಕಾದಂಬರಿಯ ಚೌಕಟ್ಟಿನಲ್ಲಿ ಎರಡು ಕೆಲಸ ಮಾಡುತ್ತದೆ. ಇದು ಎಮ್ಮಾ ಹ್ಯಾರಿಯೆಟ್ ನಡುವಿನ ಸಂಬಂಧವನ್ನು ಬಲ ಗೊಳಿಸುವುದಲ್ಲದೆ ಎಮ್ಮಾ ನೈಟ್‌ಲೆ ನಡುವಿನ ವ್ಯತ್ಯಾಸಗಳನ್ನು ತೀವ್ರಗೊಳಿಸುತ್ತದೆ. ತನ್ನ ಹುಟ್ಟಿನ ಬಗ್ಗೆ ಏನೂ ತಿಳಿಯದ ಹ್ಯಾರಿಯೆಟ್‌ನ ತಲೆಯಲ್ಲಿ ತನ್ನ ಬಗ್ಗೆ ಹಿರಿಮೆಯ ಭಾವನೆಯನ್ನು ಕಲ್ಪಿಸುವುದರಲ್ಲಿ ಎಮ್ಮಾ ಯಶಸ್ವಿಯಾಗುತ್ತಾಳೆ. ಇದರ ಪರಿಣಾಮ ವಾಗಿ ತನ್ನ ಗಂಡನಾಗುವಂತಹವನು ರೈತನಿಗಿಂತ ಮೇಲಿರತಕ್ಕಂತ ವರ್ಗಕ್ಕೆ ಸೇರಿದವ ನಾಗಿರಬೇಕು ಎನ್ನುವ ಇಚ್ಛೆ ಹ್ಯಾರಿಯಟ್‌ನಲ್ಲಿ ಬೇರೂರುತ್ತದೆ. ಅಲ್ಲಿಯ ಪ್ಯಾರಿಸ್ಸಿನ ಪಾದ್ರಿ ಎಲ್ಟನ್ ಅವಳಿಗೆ ತಕ್ಕವನು ಎಂದು ಎಮ್ಮಾ ತೀರ್ಮಾನಿಸಿ ಅವರಿಬ್ಬರ ನಡುವೆ ಸಂಬಂಧವನ್ನು ಬೆಳೆಸಲು ಸರ್ವಪ್ರಯತ್ನ ಮಾಡುತ್ತಾಳೆ. ಆದರೆ ಎಲ್ಟನ್‌ನ ನಿಜವಾದ ಆಸಕ್ತಿ ಇರುವುದು ಎಮ್ಮಾಳಲ್ಲಿ, ಹ್ಯಾರಿಯೆಟ್‌ಳಲ್ಲಿ ಅಲ್ಲ. ತನ್ನ ಜಾಣತನದಲ್ಲಿ ಸಂಪೂರ್ಣವಾಗಿ ಮಗ್ನಳಾಗಿರುವ ಎಮ್ಮಾಳಿಗೆ ಇದು ತಿಳಿಯುವುದಿಲ್ಲ. ಕೊನೆಗೆ ಎಲ್ಟನ್ ಎಮ್ಮಾಳನ್ನು ತನ್ನ ಹೆಂಡತಿಯಾಗಲು ಕೇಳಿದಾಗ, ಅವಳಿಗೆ ದಿಗ್ಭ್ರಮೆಯು

ತ್ತದೆ. ಜೇನ್ ಆಸ್ಟಿನ್ ಅರ್ಥಪೂರ್ಣವಾಗಿ ಬಳಸುವ ವ್ಯಂಗ್ಯ ಈ ಸನ್ನಿವೇಶವನ್ನು ಅತ್ಯಂತ ಪರಿಣಾಮಕಾರಿಯನ್ನಾಗಿ ಮಾಡುತ್ತದೆ.

ಎಮ್ಮಾಳ ಬೆಳವಣಿಗೆಯಲ್ಲಿ ಇದು ಒಂದು ಮಹತ್ತರ ಘಟನೆ ಎನ್ನಬಹುದು. ಏಕೆಂದರೆ ಮೊದಲ ಬಾರಿಗೆ ಅವಳಿಗೆ ತನ್ನ ತಪ್ಪಿನ ಅರಿವು ಉಂಟಾಗುತ್ತದೆ. ತಾನು ಹೇಗೆ ಎಲ್ಟನ್‌ನ ನಡವಳಿಕೆಯನ್ನು ತಪ್ಪಾಗಿ ಗ್ರಹಿಸಿದ್ದಳೆಂಬುದು ಅವಳಿಗೆ ತಿಳಿಯುತ್ತದೆ. ಇನ್ನು ಮುಂದೆ ಎರಡು ವ್ಯಕ್ತಿಗಳನ್ನು ಮದುವೆಯಂತಹ ಸಂಬಂಧದಲ್ಲಿ ಒಂದುಗೂಡಿಸಲು ತಾನು ಪ್ರಯತ್ನಿಸುವುದಿಲ್ಲ ಎಂದುಕೊಳ್ಳುತ್ತಾಳೆ. ಆದರೆ ಅವಳ ಈ ನಿರ್ಧಾರ ಕ್ಷಣಿಕಮಾತ್ರ; ಸ್ವಲ್ಪ ಹೊತ್ತಿನ ನಂತರವೇ ಅದೇ ಊರಿನ ವಕೀಲ ವಿಲಿಯಮ್ ಕಾಕ್ಸ್ ಅವಳ ನೆರವಿಗೆ ಬಂದಾಗ, ಆತ ಹ್ಯಾರಿಯೆಟ್‌ಗೆ ಸರಿಸಮಾನನಲ್ಲ ಎಂದು ತೀರ್ಮಾನಿಸುತ್ತಾಳೆ. ಇದು ಎಮ್ಮಾಳಲ್ಲಿ ಕೇವಲ ಬೌದ್ಧಿಕ ತಪ್ಪಿನ ಸ್ವೀಕಾರವೇ ಹೊರತು ನೈತಿಕ ತಪ್ಪಿನದಲ್ಲ ಎನ್ನುವುದನ್ನು ನಾವು ಇದರಿಂದ ತಿಳಿಯಬಹುದು.

ವೆಸ್ಟನ್‌ನ ಮಗ ಫ್ರಾಂಕ್ ಚರ್ಚಿಲ್ ಹೈಬರಿಗೆ ಬರುತ್ತಾನೆ. ಅವನು ಉಲ್ಲಾಸಕರ ಸ್ವಭಾವದ, ಅವಿವಾಹಿತ ಯುವಕ. ಇವನ ಆಗಮನದ ನಂತರ ಎಮ್ಮಾಳಲ್ಲಿ ಹಲವು ಬದಲಾವಣೆಗಳನ್ನು ನಾವು ಕಾಣಬಹುದು. ಆತನೊಡನೆ ಭೇಟಿಯಾಗಲು, ಕೂತು ಹರಟೆಹೊಡೆಯಲು ಎಮ್ಮಾ ಬಲು ಕಾತುರಳಾಗಿರುತ್ತಾಳೆ. ಒಮ್ಮೆ ಅವನು ಹೈಬರಿಯಿಂದ ಹಠಾತ್ತನೆ ಹೊರಡಬೇಕಾಗಿ ಬಂದಾಗ, ಅವಳಲ್ಲಿ ಒಂದು ರೀತಿಯ ಉದಾಸೀನ ಭಾವನೆ ಉಂಟಾಗುತ್ತದೆ. ತನ್ನ ಈ ಮನೋಸ್ಥಿತಿಯ ಬಗ್ಗೆ ಚುರುಕಿನ ಎಮ್ಮಾ ಯೋಚಿಸುವಾಗ, ಇದು ತನ್ನ ಬೇಸರ ತರುವಂತಹ ಜೀವನಶೈಲಿಯ ಕಾರಣದಿಂದಲೋ ಅಥವಾ ಫ್ರಾಂಕ್ ಚರ್ಚಿಲ್‌ನ ನಿರ್ಗಮದಿಂದಲೋ ಎನ್ನುವ ಪ್ರಶ್ನೆ ಅವಳನ್ನು ಕಾಡುತ್ತದೆ. ತಾನು ಫ್ರಾಂಕ್‌ನೊಡನೆ ಮೋಹಗೊಂಡಿರಬಹುದೆಂಬ ಅನುಮಾನ ಅವಳಿಗೆ. ಸಂಪೂರ್ಣವಾಗಿ ಅಲ್ಲದಿದ್ದರೂ ಹಲವು ವಾರಗಳ ಕಾಲ ಅವನನ್ನು ಪ್ರೀತಿಸಿರಬಹುದು ಎಂದು ಹೇಳಿಕೊಳ್ಳುತ್ತಾಳೆ. ನಿಜಕ್ಕೂ ಅವನನ್ನು ಎಮ್ಮಾ ಪ್ರೀತಿಸುತ್ತಿದ್ದರೆ ಈ ರೀತಿಯ ಅನುಮಾನ ಅವಳನ್ನು ಭಾದಿಸುತ್ತಿರಲಿಲ್ಲ. ತನ್ನ ಈ ಉದಾಸೀನ ಮನೋಭಾವಕ್ಕೆ ತನ್ನ ಪರಿಸರ ಕಾರಣ ಎನ್ನುವ ಖಚಿತ ನಿರ್ಧಾರಕ್ಕೆ ಕೊನೆಗೆ ಅವಳು ಬರುತ್ತಾಳೆ. ಇಲ್ಲಿ ನಾವು ಎಮ್ಮಾಳಲ್ಲಿರುವ ಸ್ವಂತ ವಿಶ್ಲೇಷಣೆಯ ಗುಣವನ್ನು ಕಾಣುತ್ತೇವೆ. ತನ್ನ ಮತ್ತು ಫ್ರಾಂಕ್ ಚರ್ಚಿಲ್‌ನ ಸಂಬಂಧದ ಬಗ್ಗೆ ಬಹಳ ಕಾಲ ಆತ್ಮವಂಚನೆಯಲ್ಲಿ ತೊಡಗುವಂತಹವಳಲ್ಲ ಎಮ್ಮಾ. ಎಮ್ಮಾಳಲ್ಲಿ ಎರಡು ವಿಧವಾದ ಆತ್ಮವಂಚನೆಯನ್ನು ಕಾಣಬಹುದು. ಮೊದಲನೆಯ ರೀತಿಯ ಆತ್ಮವಂಚನೆ ವಿವಾಹ ಸಂಬಂಧಗಳನ್ನು ಕಲ್ಪಿಸಲು ಪ್ರಯತ್ನಿಸುವ ಎಮ್ಮಾಳಲ್ಲಿ ಕಾಣುತ್ತೇವೆ. ಇದರಿಂದ ಅವಳು ಬೇರೆ ವ್ಯಕ್ತಿಗಳ ವಿವೇಚನೆಯಲ್ಲಿ ಹಲವಾರು ತೀವ್ರತರ ತಪ್ಪುಗಳನ್ನು ಮಾಡುತ್ತಾಳೆ. ಎರಡನೆಯ ವಿಧದ ಆತ್ಮವಂಚನೆಯಿಂದ ಎಮ್ಮಾ ತನ್ನ ಹೃದಯದ ಮಿಡಿತವನ್ನು ಅರಿಯುವುದರಲ್ಲಿ ವಿಫಲಳಾಗುತ್ತಾಳೆ. ಅಂದರೆ ಮೊದಲನೆಯ ರೀತಿಯ ಆತ್ಮವಂಚನೆ ಬೇರೆಯವರೊಡನೆ ಎಮ್ಮಾಳ ಸಂಬಂಧವನ್ನು ನಿಯಂತ್ರಿಸಿದರೆ, ಎರಡನೆಯ ರೀತಿಯದು ಅವಳ ಬಗ್ಗೆ ಅವಳಿಗೆ ತಪ್ಪು ತಿಳಿವಳಿಕೆಯನ್ನು ಉಂಟುಮಾಡುತ್ತದೆ.

ಜಿಪ್ಸಿಗಳ ಗುಂಪಿನಲ್ಲಿ ಒಮ್ಮೆ ಹ್ಯಾರಿಯೆಟ್ ಸಿಕ್ಕಿಬಿದ್ದ ಸಮಯದಲ್ಲಿ ಅವಳನ್ನು ಫ್ರಾಂಕ್ ಚರ್ಚಿಲ್ ರಕ್ಷಿಸಿದಾಗ, ಎಮ್ಮಾಳ ಅತಿಯಾದ ಕಲ್ಪನಾಶಕ್ತಿ ಮತ್ತೆ ಕೆಲಸ ಮಾಡತೊಡಗುತ್ತದೆ. ಇವರಿಬ್ಬರ ನಡುವೆ ಮದುವೆ ಸಾಧ್ಯವೆಂದು ಅವಳು ಭಾವಿಸುತ್ತಾಳೆ. ಈ ಮಧ್ಯೆ ವೆಸ್ಟನ್‌ರವರ ಮನೆಯಲ್ಲಿ ನಡೆದ ಔತಣಕೂಟದಲ್ಲಿ, ಹ್ಯಾರಿಯೆಟ್ ತನ್ನೊಡನೆ ನರ್ತಿಸಲು ಯಾರು ಸಿಗದೆ ಒಬ್ಬಂಟಿಗಳಾಗಿಬಿಡುತ್ತಾಳೆ. ಎಲ್ಟನ್ ಉದ್ದೇಶಪೂರ್ವಕವಾಗಿ ಅವಳೊಡನೆ ನರ್ತಿಸಲು ನಿರಾಕರಿಸಿದಾಗ, ಸಂಭಾವಿತನಾದ ಜಾರ್ಜ್ ನೈಟ್‌ಲೆ ಅವಳೊಡನೆ ನರ್ತಿಸಲು ಒಪ್ಪಿ ಹ್ಯಾರಿಯೆಟ್‌ನನ್ನು ಅವಮಾನದಿಂದ ತಪ್ಪಿಸುತ್ತಾನೆ. ಇದರಿಂದ ಸಂತೋಷಗೊಂಡ ಹ್ಯಾರಿಯೆಟ್‌ಗೆ ನೈಟ್‌ಲೆ ತನ್ನನ್ನು ಪ್ರೀತಿಸುತ್ತಾನೆ ಎಂಬ ಅನುಮಾನ ಬರುತ್ತದೆ. ಇದನ್ನು ಕೇಳಿ ಆಘಾತಗೊಂಡ ಎಮ್ಮಾಳಿಗೆ ನೈಟ್‌ಲೆ ಕೇವಲ ತನ್ನನ್ನು ಮಾತ್ರ ಮದುವೆಯಾಗಬೇಕೆಂಬ ಅವಳ ಮನೋಭಿಲಾಷೆ ಅರಿವಾಗುತ್ತದೆ. ಈ ಆಘಾತದಿಂದ ಅವಳು ತನ್ನ ಭ್ರಾಮಕ ಪ್ರಪಂಚದಿಂದ ಹೊರಬರಲು ಸಾಧ್ಯವಾಗುವುದನ್ನು ನಾವು ಕಾಣಬಹುದು. ತನ್ನ ಆತ್ಮವಂಚನೆಯಿಂದ ಉಂಟಾದ ತಪ್ಪುಗಳು ಮತ್ತು ಅವುಗಳಿಂದಾದ ಅಚಾತುರ್ಯಗಳು; ಇವೆಲ್ಲವನ್ನೂ ಎಮ್ಮಾ ಈಗ ಗ್ರಹಿಸುತ್ತಾಳೆ. ತನ್ನ ಅತಿ ಬುದ್ಧಿಶಕ್ತಿಯ ಮತ್ತು ಮನಸ್ಸಿನ ಅವಿವೇಕದಿಂದ ಆದ ಪ್ರಮಾದಗಳನ್ನು ಅರಿತ ಎಮ್ಮಾ ತನ್ನ ಸೋಲನ್ನೊಪ್ಪಿ, ಕೊನೆಗೆ ನೈಟ್‌ಲೆ ಅವಳನ್ನು ಮದುವೆಯಾಗಲು ಕೇಳಿದಾಗ ಸಂತೋಷದಿಂದ ಒಪ್ಪುತ್ತಾಳೆ. ಕಾದಂಬರಿಯ ಕೊನೆಯಲ್ಲಿ ಅನೇಕ ದಾಂಪತ್ಯ ಜೋಡಿಗಳು ಒಂದಾಗುವುದನ್ನು ನೋಡುತ್ತೇವೆ: ಎಮ್ಮಾ–ನೈಟ್‌ಲೆ; ಹ್ಯಾರಿಯೆಟ್–ರಾಬರ್ಟ್ ಮಾರ್ಟಿನ್; ಜೇನ್ ಫ್ಯಾರ್‌ಫಾಕ್ಸ್–ಫ್ರಾಂಕ್ ಚರ್ಚಿಲ್; ಅಗಸ್ಟಾ ಹಾಕಿನ್ಸ್–ಎಲ್ಟನ್. ಕಾದಂಬರಿ ಈ ರೀತಿ ಸುಖಾಂತದಲ್ಲಿ ಕೊನೆಗೊಳ್ಳುವುದು ಬಲು ಸ್ವಾಭಾವಿಕ ಎಂದು ಓದುಗನಿಗೆ ಅನ್ನಿಸುವುದು ಜೇನ್ ಆಸ್ಟಿನ್‌ಳ ಶ್ರೇಷ್ಠ ಮಟ್ಟದ ಸಾಧನೆಯ ಪ್ರತೀಕ.

ಎಮ್ಮಾಳದು ಓದುಗರನ್ನು ಆಕರ್ಷಿಸುವ ವ್ಯಕ್ತಿತ್ವ. ಕಾರಣ ಅವಳು ಸಾಮಾನ್ಯ ಮನುಷ್ಯರಂತೆ ತಪ್ಪು ಮಾಡುತ್ತಾಳೆ; ಹಲವು ಬಾರಿ ತಪ್ಪುಗಳಿಂದ ಪಾಠ ಕಲಿಯುತ್ತಾಳೆ; ಮತ್ತೆ ಹಲವುಬಾರಿ ಅದೇ ರೀತಿಯ ತಪ್ಪುಗಳನ್ನು ಪುನಃ ಮಾಡುತ್ತಾಳೆ, ಆಸ್ಕರ್ ವೈಲ್ಡ್ ಹೇಳುವಂತೆ, ಅನುಭವದಿಂದ ತಾನು ಕಲಿಯುವುದಿಲ್ಲ ಎಂಬ ಸತ್ಯವನ್ನು ಮನುಷ್ಯ ಅನುಭವದಿಂದಲೇ ಕಲಿಯುವುದು. ಎಮ್ಮಾಳ ಬೆಳವಣಿಗೆಯನ್ನು ನಂಬಲರ್ಹವಾದ ರೀತಿಯಲ್ಲಿ ಜೇನ್ ಆಸ್ಟಿನ್ ನಿರೂಪಿಸಿದ್ದಾಳೆ. ಈ ಬೆಳವಣಿಗೆ ದಿಢೀರನೆ ಆಗದೆ, ನಿಧಾನವಾಗಿ ಓದುಗನ ಮನಗಾಣಿಸುವಂತೆ ಆಗುತ್ತದೆ. ಆದುದರಿಂದ ಇದು ಪರಿಣಾಮಕಾರಿಯೂ ಕೂಡ. ಎಮ್ಮಾಳ ಮುಖ್ಯ ಸಮಸ್ಯೆ ಎಂದರೆ ಅವಳ ಅತಿಯಾದ ಕಾಲ್ಪನಿಕ ಶಕ್ತಿ. ಇದನ್ನು ವರ್ಣಿಸಲು ಜೇನ್ ಆಸ್ಟಿನ್ 'imaginist' ಎಂಬ ಹೊಸ ಪದವನ್ನು ಸೃಷ್ಟಿಸಿದ್ದಾಳೆ. ಅವಳಲ್ಲಿ ಕಾಣದ ಆತ್ಮವಂಚನೆಯ ಮೂಲವನ್ನು ಭ್ರಾಂತಿ ಮತ್ತು ವಿವೇಚನೆಯ ನಡುವಿನ ಸಂಘರ್ಷದಲ್ಲಿ ನಾವು ಗುರುತಿಸಬಹುದು. ಈ ಆತ್ಮವಂಚನೆ ಎಮ್ಮಾಳನ್ನು ಪದೇ ಪದೇ ತಪ್ಪುದಾರಿಗೆ ಎಳೆಯುತ್ತದೆ. ಅಂತಿಮವಾಗಿ ಅವಳಲ್ಲಿ ಉಂಟಾಗುವ ಅರಿವು ಓದುಗನನ್ನು ಹರ್ಷಗೊಳಿಸುವುದರಲ್ಲಿ ಸಂದೇಹವಿಲ್ಲ. ಎಮ್ಮಾಳಲ್ಲಿ

ಓದುಗ ತನ್ನನ್ನು ಕಂಡುಕೊಳ್ಳುವುದು ಸಹಜ ಕೂಡ. ಕಾದಂಬರಿಯಲ್ಲಿ ಬರುವ ಪ್ರಮುಖ ಪಾತ್ರಗಳೆಲ್ಲವನ್ನು ಎಮ್ಮಾಳ ರೂಪಾಂತರಗಳೆಂದು ಪರಿಗಣಿಸಲು ಸಹ ಸಾಧ್ಯವಿದೆ.

"ಎಮ್ಮಾ" ಕಾದಂಬರಿಯಲ್ಲಿ ಸಾಮಾಜಿಕ ವಿಡಂಬನೆಯನ್ನೂ ಕಾಣಬಹುದು. ಹದಿನೆಂಟನೆಯ ಶತಮಾನದ ಇಂಗ್ಲೆಂಡಿನಲ್ಲಿ ವರ್ಗ ಮತ್ತು ಅಂತಸ್ತು ಬಲು ಮಹತ್ವದ ವಾಸ್ತವಿಕತೆಯನ್ನು ಪಡೆದಿದ್ದ ವಿಷಯಗಳು. ವ್ಯಕ್ತಿಗಳಲ್ಲಿ ಕಾಣಬರುವ ಪ್ರತಿಷ್ಠಾ ಸೂಚಿ ಮತ್ತು ವರ್ಗಪ್ರಜ್ಞೆಯನ್ನು ಜೇನ್ ಆಸ್ಟಿನ್ ಕಟುವಾಗಿ ಟೀಕಿಸುತ್ತಾಳೆ. ಆಗ ತಾನೆ ಶ್ರೀಮಂತರಾದ ವರ್ತಕ ಕುಟುಂಬವಾದ ಕೋಲ್ಸ್ ಎಮ್ಮಾಳನ್ನು ಔತಣಕ್ಕೆ ಕರೆದಾಗ ಅವಳಲ್ಲಿ ಕಾಣುವ ಅಸಮಾಧಾನದ ಮೂಲ ಅವಳ ವರ್ಗಪ್ರಜ್ಞೆ ; ಎಲ್ಟನ್‌ನ ಹೆಂಡತಿ ಅಗಸ್ಟಾ ಹಾಕಿನ್ಸಳ ಪ್ರತಿಷ್ಠಾ ಸೂಚಕ ಮನೋಭಾವದಿಂದ ಉಂಟಾಗುವ ಅವಳ ಅಸಂಸ್ಕೃತ ಮತ್ತು ಅಸಭ್ಯ ನಡತೆ ; ಚರ್ಚಿಲ್ ದಂಪತಿಗಳ ಅಹಂಕಾರ ಪ್ರವೃತ್ತಿ— ಇವೆಲ್ಲವನ್ನು ಜೇನ್ ಆಸ್ಟಿನ್ ತೀಕ್ಷ್ಣವಾಗಿ ಖಂಡಿಸುತ್ತಾಳೆ. ಅವಳ ಈ ಸಾಮಾಜಿಕ ವಿಡಂಬನೆಯನ್ನು ಗಮನಿಸಿದಾಗ ಅವಳ ಮೌಲ್ಯ ಸ್ವರೂಪದ ಸೂಕ್ಷ್ಮತೆಯನ್ನು ನಾವು ತಿಳಿಯಬಹುದು. ಈ ಮೌಲ್ಯರೂಪದಲ್ಲಿ ಎರಡು ಬಗೆಯ ಪ್ರತಿಷ್ಠೆಯನ್ನು ಕಾಣುತ್ತೇವೆ. ಮೊದಲನೆಯದು ಚರ್ಚಿಲ್ ದಂಪತಿಗಳ ಪ್ರತಿಷ್ಠೆ. ಇದರ ಮೂಲ ಸಂಪತ್ತು ಮತ್ತು ಅಂತಸ್ತು. ಈ ಪ್ರತಿಷ್ಠೆ ಸೌಹಾರ್ದಯುತ ಸಂಬಂಧಗಳನ್ನು ವಿರೋಧಿಸುವಂತಹದು. ಇದನ್ನು ಜೇನ್ ಆಸ್ಟಿನ್ ಒಪ್ಪುವುದಿಲ್ಲ. ಎರಡನೆಯದನ್ನು ಜಾರ್ಜ್ ನೈಟ್‌ಲೆಯಲ್ಲಿ ಕಾಣಬಹುದು. ಇದರ ಮೂಲ ಕೂಡ ಅಂತಸ್ತು ಆದರೆ ಇದು ಸೌಹಾರ್ದಯುತ ಸಂಬಂಧಗಳ ಏರ್ಪಡುವಿಕೆಯ ನಡುವೆ ಅಡ್ಡಬರುವಂತಹದಲ್ಲ. ಇಂತಹ ಪ್ರತಿಷ್ಠೆಯ ಮೂಲಕ ಒಬ್ಬ ವ್ಯಕ್ತಿ ಘನತೆ, ಗಾಂಭೀರ್ಯವನ್ನು ಪಡೆಯುತ್ತಾನೆ. ಈ ಕಾರಣಕ್ಕಾಗಿ ಪ್ರತಿಷ್ಠೆ ಜೇನ್ ಆಸ್ಟಿನ್‌ಳ ಪ್ರಪಂಚದಲ್ಲಿ ನೈತಿಕ ಗುಣವನ್ನು ಹೊಂದುತ್ತದೆ. ಇದರಿಂದ ಜೇನ್ ಆಸ್ಟಿನ್‌ಳಲ್ಲಿ ಹೇಗೆ ಸಾಮಾಜಿಕ ಮೌಲ್ಯಗಳು ನೈತಿಕ ಪ್ರಾಮುಖ್ಯತೆಯನ್ನು ಪಡೆಯುತ್ತವೆ ಎನ್ನುವುದು ನಮಗೆ ಮನದಟ್ಟಾಗುತ್ತದೆ. ಹಾಗೂ ಅವಳ ಕಾದಂಬರಿಗಳಲ್ಲಿ ನಡತೆ ಮತ್ತು ನೈತಿಕತೆಯ ನಡುವೆ ಒಂದು ಅನ್ಯೋನ್ಯ ಸಂಬಂಧ ಏರ್ಪಡುತ್ತದೆ. ಉದಾಹರಣೆಗೆ ಜಾರ್ಜ್ ನೈಟ್‌ಲೆ ಮತ್ತು ವೆಸ್ಟನ್ ಇಬ್ಬರ ನಡತೆಯನ್ನು ಎಮ್ಮಾ ಪ್ರಶಂಸಿಸುತ್ತಾಳೆ. ಅಂದರೆ ಅವರು ಅವಳ ದೃಷ್ಟಿಯಲ್ಲಿ ನಡತೆಯ ಆದರ್ಶ ಪುರುಷರಾಗುತ್ತಾರೆ. ಆದರೆ ಅವರು ಇದರೊಂದಿಗೆ ನೈತಿಕತೆಯ ಆದರ್ಶ ಪುರುಷರೂ ಕೂಡ. ಇದರಿಂದ ನಮಗೆ ಹೇಗೆ ನಡತೆ ಅನಿವಾರ್ಯವಾಗಿ ನೈತಿಕತೆಗೆ ಓರ್ವ ವ್ಯಕ್ತಿಯನ್ನು ಒಯ್ಯುತ್ತದೆ ಎನ್ನುವ ಸತ್ಯವನ್ನು ಜೇನ್ ಆಸ್ಟಿನ್ ತಿಳಿಸುತ್ತಾಳೆ. ಆದ್ದರಿಂದಲೇ ಜಾರ್ಜ್ ನೈಟ್‌ಲೆ ಈ ಕಾದಂಬರಿಯ ನಡತೆಯ ಹಾಗೂ ನೈತಿಕತೆಯ ಆದರ್ಶಪುರುಷ ಮತ್ತು ಕಾದಂಬರಿಯಲ್ಲಿ ಬರುವ ಎಲ್ಲ ಪಾತ್ರಗಳನ್ನು ಅಳೆಯುವಂತಹ ನೈತಿಕ ಮಾನದಂಡ ಕೂಡ.

ಕೊನೆಯದಾಗಿ ಇಂಗ್ಲಿಷ್ ಕಾದಂಬರಿಯಲ್ಲಿ ಜೇನ್ ಆಸ್ಟಿನ್‌ಳ ಸ್ಥಾನ ಮತ್ತು ಸಾಧನೆಯ ಬಗ್ಗೆ ನಾವು ತಿಳಿದುಕೊಳ್ಳಬೇಕು. ಇಂದೂ ಕೂಡ ಅವಳ ಸ್ಥಾನದ ಬಗ್ಗೆ ವಿವಾದಗಳಿವೆ. ಹೆಸರಾಂತ ವಿಮರ್ಶಕ ಲೀವಿಸನ ಪ್ರಕಾರ ಇಂಗ್ಲಿಷ್ ಕಾದಂಬರಿಯ

“ಮಹತ್ತರ ಸಂಪ್ರದಾಯ”ದ ಪ್ರಾರಂಭ ಜೇನ್ ಆಸ್ಟಿನ್‌ಳಿಂದಲೇ. ಆದರೆ ಅವಳ ವ್ಯಾಪ್ತಿಯಿಂದ ಪ್ರಚೋದಿತರಾದ ವಿಮರ್ಶಕರು ಅವಳ ಸಾಧನೆಯನ್ನು ಪ್ರಶ್ನಿಸುತ್ತಾರೆ. ಅವಳ ಕಲಾಕೃತಿಗಳು ಕೇವಲ ಎರಡು ಇಂಚಿನ ದಂತದ ಮೇಲೆ ಮಾಡಿದ ಕೆತ್ತನೆ ಕೆಲಸವೆಂದು ಮೂದಲಿಸಲಾಗಿದೆ. ನಾವು ಟಾಲ್‌ಸ್ಟಾಯ್‌ನಂತಹ ಕಾದಂಬರಿಕಾರನ ವಿಶಾಲವಾದ ವ್ಯಾಪಕತೆಯನ್ನು ಗಮನದಲ್ಲಿಟ್ಟುಕೊಂಡು, ಜೇನ್ ಆಸ್ಟಿನ್‌ಳ ಸಾಧನೆಯನ್ನು ಅಳೆಯಬಾರದು. ಟಾಲ್‌ಸ್ಟಾಯ್ ನಮ್ಮ ವಿಮರ್ಶಾ ಪ್ರಜ್ಞೆಯ ಒರೆಗಲ್ಲು ಆಗಕೂಡದು. ನಮ್ಮಲ್ಲಿ ಒಬ್ಬ ಲೇಖಕನ ಪ್ರಾಮುಖ್ಯತೆ ಅವನ ವ್ಯಾಪ್ತಿಯನ್ನು ಅವಲಂಬಿಸಿದೆ ಎನ್ನುವ ತಪ್ಪು ಕಲ್ಪನೆಯಿದೆ. ನಾವು ಗಮನಿಸಬೇಕಾದುದು ಒಂದು ಕಲಾಕೃತಿಯು ಹೇಗೆ ಗಹನವಾದ ಮತ್ತು ದಟ್ಟವಾದ ಅನುಭವಗಳನ್ನು ಅರ್ಥಪೂರ್ಣವಾಗಿ ನಮ್ಮ ಮನಮುಟ್ಟಿಸುತ್ತದೆ ಎಂಬ ಅಂಶವನ್ನು, ಪ್ರತಿಯೊಬ್ಬ ಲೇಖಕನಿಗೂ ತಾನು ಯಾವುದರ ಬಗ್ಗೆ ಬರೆಯಬೇಕು ಎನ್ನುವ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಇದ್ದೇ ಇರುತ್ತದೆ. ಜೇನ್ ಆಸ್ಟಿನ್‌ಳ ಕಾದಂಬರಿಗಳನ್ನು ಓದುವಾಗ ಅವಳ ಕಾಲದಲ್ಲಿ ನಡೆದ ಮಹತ್ತರ ಘಟನೆಗಳಾದ ಫ್ರೆಂಚ್ ಕ್ರಾಂತಿ ಮತ್ತು ನೆಪೋಲಿಯನ್ನನ ಯುದ್ಧಗಳ ಬಗ್ಗೆ ಯಾವ ಉಲ್ಲೇಖವು ಕಂಡುಬರುವುದಿಲ್ಲ. ಇದಕ್ಕಾಗಿ ಅವಳನ್ನು ಹಲವು ವಿಮರ್ಶಕರು ತರಾಟೆಗೆ ತೆಗೆದುಕೊಂಡಿದ್ದಾರೆ. ಈ ಚಾರಿತ್ರಿಕ ಘಟನೆಗಳನ್ನು ಅವಳು ಉದ್ದೇಶಪೂರ್ವಕವಾಗಿ ಕೈಬಿಟ್ಟಿದ್ದಾಳೆ ಎಂಬುದನ್ನು ನಾವು ಪ್ರಥಮವಾಗಿ ಅರಿತುಕೊಂಡರೆ, ಜೇನ್ ಆಸ್ಟಿನ್ ಹೇಗೆ ತನ್ನ ಸಮಾಜದೊಡನೆ ಜೀವಂತವಾಗಿ ಸ್ಪಂದಿಸಿದ್ದಾಳೆ ಎನ್ನುವುದನ್ನು ನಾವು ಗ್ರಹಿಸಬಹುದು. ಅವಳ ಕಾದಂಬರಿಗಳಲ್ಲಿ ಆ ಕಾಲದ ಸಮಾಜದ ಕ್ರಮಬದ್ಧ ಶ್ರೇಣಿಯ ಪ್ರಕಾರಗಳನ್ನು ಕಾಣುವುದಲ್ಲದೆ, ಅವು ಹೇಗೆ ವ್ಯಕ್ತಿಗಳ ನಡುವಿನ ಸಂಬಂಧಗಳನ್ನು ನಿಯಂತ್ರಿಸುತ್ತವೆ ಎನ್ನುವುದನ್ನು ಕೂಡ ಜೇನ್ ಆಸ್ಟಿನ್ ಅತ್ಯಂತ ಮನೋಜ್ಞವಾಗಿ ವಿವರಿಸಿದ್ದಾಳೆ. ಉದಾಹರಣೆಗೆ ಎಮ್ಮಾಳಿಗೆ ಬಡಜನರ ಮೇಲೆ ಇರುವ ಕಳಕಳಿ ಮತ್ತು ರಾಬರ್ಟ್ ಮಾರ್ಟಿನ್ ನಂತಹ ಒಬ್ಬ ಸ್ವತಂತ್ರ ರೈತನ ಬಗ್ಗೆ ಇರತಕ್ಕಂತ ಕೀಳು ಮನೋಭಾವ —ಇದರಿಂದ ಒಬ್ಬ ವ್ಯಕ್ತಿಯ ನಡತೆಯನ್ನು ಕೂಡ ಹೇಗೆ ಸಾಮಾಜಿಕ ಕಟ್ಟಲೆಗಳು ನಿರ್ಬಂಧಿಸುತ್ತವೆ ಎಂಬ ಸತ್ಯಾಂಶವನ್ನು ನಾವು ಅರಿಯಬಹುದು.

ಹೆನ್ರಿ ಜೇಮ್ಸ್ ಹೇಳುವಂತೆ ಜೀವನ, ವ್ಯಾಪಕವೂ ಮತ್ತು ಅಸ್ತವ್ಯಸ್ತವೂ ಆದರೆ, ಕಲೆ ವಿವೇಚನೆ ಮತ್ತು ಐಕ್ಯತೆಯಿಂದ ಕೂಡಿದ ಪ್ರಪಂಚವನ್ನು ನಿರ್ಮಿಸುತ್ತದೆ. ಅಂದರೆ ಒಂದು ಕಲಾಕೃತಿ ತನ್ನ ಚೌಕಟ್ಟಿನೊಳಗೆ ಪರಿಪೂರ್ಣತೆಯ ಭ್ರಮೆಯನ್ನು ಉಂಟುಮಾಡುವುದರಲ್ಲಿ ಯಶಸ್ವಿಯಾಗುತ್ತದೆ. ಈ ಪರಿಪೂರ್ಣತೆಯನ್ನು ಜೇನ್ ಆಸ್ಟಿನ್ ಸಾಧಿಸಿದ್ದಾಳೆ ಎಂಬುದು ನಿಸ್ಸಂಶಯವಾದ ಮಾತು. ಅವಳು ತನ್ನನ್ನು ಪಾಂಡಿತ್ಯವಿಲ್ಲದ, ಓರ್ವ ಅಜ್ಞಾನಿ ಹೆಣ್ಣು ಎಂದು ವರ್ಣಿಸಿಕೊಂಡಿದ್ದಾಳೆ. ಅವಳ ಈ ವರ್ಣನೆಯನ್ನು ಅವುಗಳ ಮುಖಮೌಲ್ಯದಲ್ಲಿ ನಾವು ಸ್ವೀಕರಿಸಕೂಡದು. ಏಕೆಂದರೆ ಅವಳು ತನ್ನ ಜೀವನದೃಷ್ಟಿಯನ್ನು ತನ್ನ ಕಾದಂಬರಿಗಳಲ್ಲಿ ಕಾರ್ಯರೂಪಕ್ಕೆ ತರಲು ಬೇಕಾದಷ್ಟು ಮಾತ್ರ ಜೀವನದ ಅನುಭವಗಳನ್ನು ಬಳಸಿಕೊಂಡಿರುವಂತಹ ಲೇಖಕಿ. ಅವಳ ಕಾದಂಬರಿಗಳು ಮೂಲತಃ ಒಂದು ಹಳ್ಳಿಯಲ್ಲಿ ವಾಸವಾಗಿರುವ ಮೂರು ಅಥವಾ ನಾಲ್ಕು ಕುಟುಂಬ
೪ ಜೀವನಶೈಲಿಯ ಗ್ರಾಹ್ಯವಾದ ಅಭ್ಯಾಸ ಎನ್ನಬಹುದು. ಅವಳ ಕಥಾವಸ್ತುಗಳು

ಸಾಮಾನ್ಯವಾಗಿ ಮದುವೆ ಮತ್ತು ಪ್ರೇಮದ ನಡವಳಿಕೆಗಳಲ್ಲಿ ಕೇಂದ್ರೀಕೃತವಾಗಿವೆ. ಆಲೀವರ್ ಗೋಲ್ಡ್‌ಸ್ಮಿತ್ ತನ್ನ ಕಾದಂಬರಿ "ದಿ ವಿಕರ್ ಆಫ್ ವೇಕ್‌ಫೀಲ್"ನಿಂದ ಪ್ರಾರಂಭಿಸಿದ ಇಂಗ್ಲಿಷ್ ಕೌಟುಂಬಿಕ ಕಾದಂಬರಿಯ ಸಂಪ್ರದಾಯವನ್ನು ಜೇನ್ ಆಸ್ಟಿನ್ ತನ್ನ ಕಾದಂಬರಿಗಳಲ್ಲಿ ಮುಂದುವರಿಸಿದ್ದಾಳೆ.

ನಾವು ಒಬ್ಬ ಲೇಖಕನ ಸಾಧನೆಯನ್ನು ಗುರುತಿಸುವ ಪ್ರಯತ್ನ ಮಾಡುವಾಗ, ಸಾಹಿತ್ಯಕ ಮತ್ತು ಚಾರಿತ್ರಿಕ ಮೌಲ್ಯಮಾಪನೆಯನ್ನು ಮಾಡಬೇಕಾಗುತ್ತದೆ. ಈ ಎರಡು ದೃಷ್ಟಿಕೋನದಿಂದ ನೋಡಿದಾಗ ಜೇನ್ ಆಸ್ಟಿನ್‌ಳ ಸಾಧನೆ ನಮಗೆ ಮನದಟ್ಟಾಗುತ್ತದೆ. ಒಂದು ಕುಟುಂಬದ ಚಿತ್ರಣ ನೀಡುವ ಗೋಲ್ಡ್‌ಸ್ಮಿತ್‌ನ ಕಾದಂಬರಿಗೂ ಜೇನ್ ಆಸ್ಟಿನ್‌ಳ "ಪ್ರೈಡ್ ಎಂಡ್ ಪ್ರೆಜುಡಿಸ್" (೧೮೧೩) ಮತ್ತು "ಎಮ್ಮಾ" (೧೮೧೬) ಕಾಲದಲ್ಲಿ ಕೇವಲ ಐವತ್ತು ವರ್ಷಗಳ ಅಂತರವಿದ್ದರೂ, ಸಾಹಿತ್ಯಕೃತಿಗಳೆಂದು ಅವುಗಳನ್ನು ಪರಿಗಣಿಸಿದಾಗ, ಅವುಗಳ ನಡುವಿನ ವ್ಯತ್ಯಾಸ ನಿಜಕ್ಕೂ ಅಜಗಜಾಂತರ. ಬರಿಯ ಭಾಷಾ ಪ್ರಯೋಗ ಮತ್ತು ಬರಹದ ಶ್ರೇಷ್ಠತೆಯಲ್ಲಿ ಜೇನ್ ಆಸ್ಟಿನ್‌ಳಿಗೆ ಸರಿಸಮಾನವಾದ ಕಾದಂಬರಿಕಾರ ಇಂಗ್ಲಿಷ್ ಭಾಷೆಯಲ್ಲಿ ಕಾಣಬೇಕಾದರೆ ನಾವು ಸುಮಾರು ಒಂದು ಶತಮಾನಗಳ ನಂತರ ಬಂದ ಲೇಖಕ ಹೆನ್ರಿ ಜೇಮ್ಸ್‌ನಿಗೆ ಕಾಯಬೇಕು. ಅವಳ ಬರಹಗಳಲ್ಲಿರುವ ಆಕೃತಿಯ ಪರಿಪೂರ್ಣತೆಯನ್ನು ನಾವು ಗಮನಿಸಿದಾಗ ಅವಳ ನಂತರ ಬರುವ ಕಾದಂಬರಿಕಾರರಾದ ಚಾರ್ಲ್ಸ್ ಡಿಕನ್ಸ್, ಜಾರ್ಜ್ ಎಲಿಯಟ್ ಮತ್ತು ಹಾರ್ಡಿಯರ ಬರಹದಲ್ಲಿನ ಕೊರತೆಗಳು ನಮಗೆ ಸ್ಪಷ್ಟವಾಗಿ ಕಾಣುತ್ತವೆ. ಹೆನ್ರಿ ಜೇಮ್ಸ್ ಹೇಳುವ 'ಸಂಪೂರ್ಣ ಸುಸಂಬದ್ಧತೆ' (Total Relevance) ಅಂದರೆ ಪಾತ್ರ, ಸನ್ನಿವೇಶ ಮತ್ತು ವಸ್ತುವಿನ ನಡುವೆ ಇರಬೇಕಾದ ಸುಸಂಘಟಿತವಾದ ಸಂಬಂಧವನ್ನು ಜೇನ್ ಆಸ್ಟಿನ್‌ಳ ಕಾದಂಬರಿಗಳಲ್ಲಿ ನೋಡುತ್ತೇವೆ. ಅವಳ ಕೃತಿಗಳಲ್ಲಿ ಯಾವ ಪಾತ್ರ ಅಥವಾ ಸನ್ನಿವೇಶ ಅನಾವಶ್ಯಕ ಎಂಬ ಭಾವನೆ ಓದುಗನಿಗೆ ಎಂದೂ ಬರುವುದಿಲ್ಲ. ಈ ಸಂಪೂರ್ಣ ಸುಸಂಬದ್ಧತೆ ಯಾವ ವಿಕ್ಟೋರಿಯನ್ ಕಾದಂಬರಿಕಾರರಲ್ಲೂ ನಮಗೆ ನೋಡ ಸಿಗುವುದಿಲ್ಲ. ಅಂತಿಮವಾಗಿ ಇಷ್ಟು ಹೇಳಬಹುದು: ಸೂಕ್ಷ್ಮತೆಯುಳ್ಳ, ಅಚ್ಚುಕಟ್ಟಾದ, ಒಪ್ಪವಾದ ಬರವಣಿಗೆಯ ದೃಷ್ಟಿಯಿಂದ ನೋಡಿದಾಗ ಜೇನ್ ಆಸ್ಟಿನ್ ನಿಸ್ಸಂದೇಹವಾಗಿ ಇಂಗ್ಲಿಷ್ ಭಾಷೆಯ ಮಹಾನ್ ಕಾದಂಬರಿಕಾರರಲ್ಲಿ ಪ್ರಥಮಳು.

ಜೇನ್ ಆಸ್ಟಿನ್ ಓದುಗರನ್ನು ಕಾಡುವ ಮತ್ತೊಂದು ಪ್ರಶ್ನೆಯೆಂದರೆ: "ಜೀವನವೆಂದರೆ ಇಷ್ಟೇನೆ?". ಇದಕ್ಕೆ ಕಾರಣ, ನಾವು ಸಾಹಿತ್ಯ ಪ್ರಕಾರಗಳಲ್ಲಿ ಬಯಸುವ ವಸ್ತುವಿಷಯಗಳು ನಮ್ಮನ್ನು ತೀವ್ರವಾಗಿ ತಾಕಬೇಕು ಎಂದು ತಿಳಿದಿರುತ್ತೇವೆ. ಅವಳ ಕಾದಂಬರಿಗಳಲ್ಲಿ ತೀವ್ರತರವಾದ, ಭಾವೋದ್ರಿಕ್ತ ಸನ್ನಿವೇಶಗಳು ಹೆಚ್ಚು ಕಡಿಮೆ ಇಲ್ಲವೇ ಇಲ್ಲ. ಅವುಗಳಲ್ಲಿ ಮೂಡಿಬರುವುದು ಕೇವಲ ಸಾಧಾರಣ ಸನ್ನಿವೇಶಗಳು. ಉದಾಹರಣೆಗೆ ಔತಣಕೂಟಗಳು, ಸಂತೋಷ ಸಮಾರಂಭಗಳು, ವಿಹಾರ ಯಾತ್ರೆಗಳು ಇತ್ಯಾದಿ, ಇತ್ಯಾದಿ. ನಾವು ನಮ್ಮ ಸಾಮಾನ್ಯ ಜೀವನದಲ್ಲಿ ಕಾಣುವ ಅನುಭವಗಳನ್ನು ಆಧಾರಿಸಿ ಉತ್ಕೃಷ್ಟ ಸಾಹಿತ್ಯ ಕೃತಿಗಳನ್ನು ರಚಿಸಿರುವ ಜೇನ್ ಆಸ್ಟಿನ್‌ಳ ಅಸಾಧಾರಣ ಪ್ರತಿಭೆಯನ್ನು ಗಮನಿಸಬೇಕಾದದ್ದು ಓದುಗರಾದ ನಮ್ಮ ಆದ್ಯ ಕರ್ತವ್ಯ.

"ಹೋರಾಟ ನಾನು ಬದುಕಲು ಮಾಡುವ ಉಸಿರಾಟ" ಎನ್ನುವ

ಶೇಷೇಂದ್ರಶರ್ಮ

ಡಾ|| ಆರ್ಫಿಯಸ್. ಸುಂದರಂ

೧

ತೆಲುಗರು ಪ್ರೀತಿಸುವ, ಅನುಕರಿಸುವ, ಆರಾಧಿಸುವ, ದ್ವೇಷಿಸುವ, ಅಸೂಯೆಪಡುವ ಕವಿ ಶೇಷೇಂದ್ರಶರ್ಮ (ಜನನ ೨೦-೧೦-೧೯೨೭). ಯಾರು ಯಾವ ದೃಷ್ಟಿಯಿಂದ ನೋಡಿದರೂ ಉಪೇಕ್ಷಿಸಲು ಮಾತ್ರ ಸಾಧ್ಯವಿಲ್ಲದ ಕವಿ. ಮಾತಿನ ಮೋಡಿಗೆ, ಪಾಂಡಿತ್ಯದ ಪ್ರದರ್ಶನಕ್ಕೆ ಸಾಕಷ್ಟು ಸ್ಥಾನ ಕೊಡುತ್ತಾ ಬಂದಿರುವ ತೆಲುಗು ಕಾವ್ಯವನ್ನು ಅರ್ಥದ ಆಳಗಳತ್ತ, ಸುಂದರ ಪ್ರತೀಕಗಳತ್ತ, ಹೊಚ್ಚಹೊಸ ಭಾವಚಿತ್ರಗಳತ್ತ ಕೊಂಡೊಯ್ದ ಪ್ರತಿಭಾಶಾಲಿ. ಇವರು ಇತ್ತೀಚಿನ ತೆಲುಗು ಕಾವ್ಯಕ್ಕೆ ಹೊಸ ಆಯಾಮಗಳನ್ನು ತೆರೆದದ್ದು ನಿಜ. ಬಂಡಾಯದ ವಸ್ತುವಾದರೂ ಕಾವ್ಯಾಭಿವ್ಯಕ್ತಿ ಮುಖ್ಯ ಎಂದು ಶೇಷೇಂದ್ರ ವಾದಿಸುತ್ತಾರೆ. "ನನ್ನ ಕಾವ್ಯ ಯಾವ ಧ್ವಜವನ್ನೂ ಹಾರಿಸುವುದಿಲ್ಲ. ಆದರೆ, ನನ್ನ ಕೈ ಮಾತ್ರ ನನ್ನ ದೇಶದ ಕತ್ತಿ" ಎನ್ನುವ ಈ ಕವಿ ಸಮಾಜ ಪ್ರಜ್ಞೆಗಿಂತ ಸಾಹಿತ್ಯ ಪ್ರಜ್ಞೆ ದೊಡ್ಡದು ಎನ್ನುತ್ತಾರೆ.

ಆಂಧ್ರದ ಒಂದು ಹಳ್ಳಿಯಲ್ಲಿ ಹುಟ್ಟಿದ ಶೇಷೇಂದ್ರಶರ್ಮ ಒಂದು ಕಡೆ ವೇದವೇದಾಂಗಗಳನ್ನು, ಸಂಸ್ಕೃತ ಕಾವ್ಯಶಾಸ್ತ್ರ ನಾಟಕ ಗಳನ್ನು ಅಭ್ಯಾಸ ಮಾಡುತ್ತಾ, ಇನ್ನೊಂದು ಕಡೆ ಬಂಡಾಯದ ಪಾಠಗಳನ್ನು ಕಲಿತದ್ದು ಒಂದು ವಿಪರ್ಯಾಸ. ಸಂಪ್ರದಾಯಗತ ವಾಗಿ ಬಂದ ಪಾಂಡಿತ್ಯ, ಸಮತಾವಾದದ ಕಡೆ ಇರುವ ಒಲವು ಇವರ ವ್ಯಕ್ತಿತ್ವಕ್ಕೆ ಒಂದು ಅಪರೂಪದ ಹೊಸತನ, ಮೆರಗ ಕೊಟ್ಟಿವೆ. ಇದರಿಂದ ಈ ಕವಿಯ ರಚನೆಗಳ ಬಗ್ಗೆ ಕೆಲವರಲ್ಲಿ ಅನುಮಾನವೂ ಮೂಡಿದೆ. ವಸ್ತುವಿನ ವಿಷಯದಲ್ಲಿ ಕೆಲವ ವಿಮರ್ಶಕರು ಮಾಡುವ ಅರ್ಭಟಕ್ಕೆ ಅರ್ಥವೇ ಇಲ್ಲ ಎನ್ನುತ್ತಾ

ಶೇಷೇಂದ್ರಶರ್ಮ. ಏಕೆಂದರೆ ಅವರ ಅಭಿಪ್ರಾಯದಲ್ಲಿ ಕಾವ್ಯಾಭಿವ್ಯಕ್ತಿ ಮುಖ್ಯ. 'ಹಸಿವಿನ ಮೇಲೆ ಕಾವ್ಯ ಬರೆಯಿರಿ, ಉಪ್ಪಿನಕಾಯಿ ಮೇಲೆ ಕಾವ್ಯ ಬರೆಯಿರಿ, ಆದರೆ ಕಾವ್ಯ ಬರೆಯಿರಿ' ಎನ್ನುತ್ತಾರೆ ಅವರು. ದುಡಿಮೆಗೂ ಕವಿಗೂ ಇರುವ ಸಹಜ ಸಂಬಂಧ ವನ್ನು ಗುರುತಿಸಬೇಕೆಂದು ಅಭಿಪ್ರಾಯಪಟ್ಟರೂ ಅದನ್ನು ವಾಚ್ಯಮಾಡಬಾರದೆಂದು ಶೇಷೇಂದ್ರ ವಾದಿಸುತ್ತಾರೆ. ದುಡಿಯುವ ರೈತನೂ, ಬರೆಯುವ ಕವಿಯೂ ಸಮಾಜದ ಕ್ರೌರ್ಯಕ್ಕೆ ಬಲಿಯಾಗುತ್ತಿರುವುದನ್ನು ನೋವಿನಿಂದ ಹಲವು ಕಡೆ ಪ್ರಸ್ತಾಪಿಸುತ್ತಾರೆ.

> ಮನೆಯಿಲ್ಲದವನು ಆಕಾಶ ಕ್ರೌರ್ಯಕ್ಕೆ ಗುರಿ
> ಭೂಮಿಯಿಲ್ಲದವನು ಹಸಿವಿನ ಕೋರೆ ಹಲ್ಲಿಗೆ ಬಲಿ
> ಸಾಯುವ ಮುನ್ನ ತನ್ನ ಮಾತನ್ನು ಹೇಳಲಾಗದ
> ಅಸಹಾಯ ಮಾನವನ ಗಂಟಲಿನ ಹೆಸರೇ ಕವಿ !

ಮ್ಯಾಥ್ಯೂ ಆರ್ನಾಲ್ಡನ ಕಾವ್ಯಕ್ಕೆ ಅನುಕರಣೆಯಾಗಿ ಬರೆದ 'ಸೊರಾಬ್' (೧೯೫೧) ನಿಂದ ಪ್ರಾರಂಭವಾದ ಶೇಷೇಂದ್ರರ ಕಾವ್ಯರಚನೆ ಮೊದಮೊದಲು ಸಾಂಪ್ರ ದಾಯಿಕ ಪದ್ಯಗಳಲ್ಲೇ ಸಾಗಿತು. 'ಋತುಘೋಷ' (೧೯೬೩) ಆರು ಋತುಗಳ ಆಧುನಿಕ ವರ್ಣನೆ. ಆದರೆ ಈ ಆಧುನಿಕ ವರ್ಣನೆ ಸಾಂಪ್ರದಾಯಿಕ ಪದ್ಯಗಳಲ್ಲೇ ನಡೆದಿದೆ. 'ಪಕ್ಷುಲು' (೧೯೭೦) ಪ್ರಾಚೀನ ಪದ್ಯಗಳಲ್ಲೇ ನಡೆದ ಇನ್ನೊಂದು ರಚನೆ. ಶೇಷೇಂದ್ರಶರ್ಮರ ಕಾವ್ಯಧಾರೆ ಇದೇ ರೀತಿ ಮುಂದುವರಿದಿದ್ದರೆ ಅವರೂ ಹೊಸ ತಲೆಮಾರಿನ ಹಳೆಯ ಕವಿಯಾಗಿ ಪ್ರಸಿದ್ಧರಾಗುತ್ತಿದ್ದರು. 'ಶೇಷಜ್ಯೋತ್ಸ್ನ' (೧೯೭೨) ದಿಂದ ಈ ಕವಿಯ ಧೋರಣೆಯಲ್ಲಿ ಮೂಲಭೂತವಾದ ಬದಲಾವಣೆಯನ್ನು ನೋಡು ತ್ತೇವೆ. ಶೈಲಿಯ ದೃಷ್ಟಿಯಿಂದ, ವಸ್ತುವಿನ ದೃಷ್ಟಿಯಿಂದ, ಮಾಧ್ಯಮದ ದೃಷ್ಟಿಯಿಂದ ತಮ್ಮ ಮಾರ್ಗವನ್ನು ಬದಲಾಯಿಸಿಕೊಂಡ ಕವಿ 'ಶೇಷಜ್ಯೋತ್ಸ್ನ'ದಲ್ಲಿ ನವ್ಯ ಕಾವ್ಯ ವನ್ನು ನೀಡಿದ್ದಾರೆ.

> ಜೀವನದಲ್ಲಿಲ್ಲದ ಕಾವ್ಯ ಹಾಳೆಯಲ್ಲಿರುತ್ತದೆಯೇ
> ಮೋಡದ ಜಾಡೂ ಇಲ್ಲದೆ ಹನಿ ಬೀಳುವುದು ಹೇಗೆ
> ಸುಂದರ ಭಾವ ಜಗತ್ತನ್ನು ಸೃಷ್ಟಿಸಲಾರದವನು
> ಮುದಿಪದಗಳೊಂದಿಗೆ ಸದಿರಸವಾಡುತ್ತಾನೆ
> ಊಹೆಗೆ ರೆಕ್ಕೆ ಇರುವವನು ಕಡಲನ್ನೂ ದಾಟುತ್ತಾನೆ
> ಬೆಟ್ಟದ ತುದಿಗೂ ಹಾರುತ್ತಾನೆ

'ಶೇಷಜ್ಯೋತ್ಸ್ನ' ಆದ ಮೇಲೆ 'ಮಂಡೇ ಸೂರ್ಯುಡು' (೧೯೭೪), 'ನಾ ದೇಶಂ ನಾ ಪ್ರಜಲು' (೧೯೭೫), 'ಶೀರ್ಪೈ ಪಾರಿ ಪೋಯಿಂದಿ', 'ಗೊರಿಲ್ಲಾ' ಮುಂತಾದ ಹಲವು ಕವನ ಸಂಕಲನಗಳು ಪ್ರಕಟವಾದುವು. ಇವೆಲ್ಲಾ ಸೇರಿ ಶೇಷೇಂದ್ರಶರ್ಮರ

ಸಮಗ್ರ ಕಾವ್ಯ ಸಂಪುಟ 'ಆಧುನಿಕ ಮಹಾಭಾರತಮು' ೧೯೮೫ರಲ್ಲಿ ಹೊರಬಂತು. ಶೇಷೇಂದ್ರಶರ್ಮರ ವಿಶ್ವರೂಪ ದರ್ಶನ 'ಆಧುನಿಕ ಮಹಾಭಾರತ'. ಶರ್ಮರ ಕಾವ್ಯ ಇಂಗ್ಲಿಷ್, ಹಿಂದಿ, ಉರ್ದು, ಕನ್ನಡ, ತಮಿಳು, ಗ್ರೀಕ್ ಮುಂತಾದ ಭಾಷೆಗಳಿಗೆ ಅನುವಾದವಾಗಿದೆ. ಈ ಅನುವಾದಗಳ ಮೂಲಕ ಶೇಷೇಂದ್ರ ಆಂಧ್ರೇತರ ಪ್ರಾಂತ ಗಳಲ್ಲೂ ಸಾಕಷ್ಟು ಪರಿಚಿತರಾಗಿದ್ದಾರೆ. ಅವರ ಕಾವ್ಯದ ಹಿಂದಿ ಮತ್ತು ಉರ್ದು ಅನುವಾದ ಗಳನ್ನು ಓದಿದ ಉತ್ತರ ಭಾರತದ ಅನೇಕ ವಿಮರ್ಶಕರು ಶೇಷೇಂದ್ರರ ಕಾವ್ಯದ ಹೊಸ ತನವನ್ನು ಮೆಚ್ಚಿದ್ದಾರೆ; ಲೇಖನಗಳ ಮೂಲಕ ಅವರನ್ನು ಪರಿಚಯಿಸಿದ್ದಾರೆ.

೨

ರಾಜಸ್ಥಾನ್ ವಿಶ್ವವಿದ್ಯಾಲಯದ ಹಿಂದೀ ವಿಭಾಗದ ಮುಖ್ಯಸ್ಥರಾದ ಡಾ॥ ವಿಶ್ವಂಭರನಾಥ್ ಉಪಾಧ್ಯಾಯ್ ಬರೆದ ಒಂದು ಲೇಖನದ ಕೆಲವು ಭಾಗಗಳ ಮೂಲಕ ಶೇಷೇಂದ್ರ ಶರ್ಮರ ಕಾವ್ಯಸ್ವರೂಪವನ್ನು ಇಲ್ಲಿ ಕೊಟ್ಟಿದೆ ('ಯುಗಕ ಶೇಷೇಂದ್ರ' ಎಂಬ ಪುಸ್ತಕದಿಂದ).

"....ಶೇಷೇಂದ್ರ ಶರ್ಮರಲ್ಲಿ ಒಂದು ನಿಸರ್ಗ ಪ್ರತಿಭೆ ಇದೆ. ಆ ಪ್ರತಿಭೆ ಎಂ ವಜ್ರವನ್ನು ಶೇಷೇಂದ್ರರ ಬುದ್ಧಿ, ದೀರ್ಘಕಾಲಿಕ ಅಧ್ಯಯನದಿಂದ ಮನನದಿಂದ, ಸಾ ಹಿಡಿದು ಮಿಲಮಿಲನೆ ಮೆರೆಯುವಂತೆ ಮಾಡಿತು. ಅಧ್ಯಯನದಿಂದ ಕವಿ ಸುಶಿಕ್ಷಿ ನಾಗುವನೆಂದೂ ಅದರಿಂದ ಪ್ರತಿಭೆಗೆ ಮೆರಗು ಉಂಟಾಗುವುದೇ ಹೊರತು ಧಕ್ಕೆ ಯಾಗುವುದಿಲ್ಲವೆಂದೂ ಅವರಿಗೆ ತಿಳಿದಿದೆ. ಕೇವಲ ಸ್ವೀಯ ಮನೋಭಾವದಲ್ಲೇ ತೊ ಲಾಡುವ ಕವಿ ಪರಿಣತನಾಗಲಾರನು. ಆತನ ಕಾವ್ಯದಲ್ಲಿ ವಿಚಾರಶೀಲತೆಯ ಅಭಾವವ ಹೆಚ್ಚು."

"ಕ್ಲಾಸಿಸಿಜಂ, ರೊಮ್ಯಾಂಟಿಕ್ ಲಕ್ಷಣ, ಸಂಪ್ರದಾಯದಿಂದ ದೀರ್ಘಕಾಲಿ ಆತ್ಮೀಕರಣದಿಂದ ಹಿಂಡಿ ತೆಗೆದ ಸಾರಾಂಶವಿರುವ ನವ್ಯತೆ—ಇವೆಲ್ಲಾ ಶೇಷೇಂದ್ರ ವ್ಯಕ್ತಿತ್ವದಲ್ಲೂ ರಚನೆಗಳಲ್ಲೂ ಕಂಡುಬರುತ್ತವೆ. ಅವರ ಮಾನಸದಲ್ಲಿ ಸಂಶ್ಲಿಷ್ಟ ಕಾ ವ್ಯಾಪಾರ ಕ್ರಿಯಾತ್ಮಕವಾಗುತ್ತದೆ. ಆಗ ನವೀನ, ಪುರಾಣ, ಉದಾತ್ತ, ಉಗ್ರ ಆ ಲಕ್ಷಣಗಳೆಲ್ಲಾ ಬೆರೆತು ಮೊದಲು ಒಂದಾಗುತ್ತವೆ. ಅನಂತರ ಕಾವ್ಯ-ಸೃಜನದ ಕಾ ದಲ್ಲಿ ಈ ಉಪಕರಣಗಳೆಲ್ಲಾ ತಮ್ಮ ತಮ್ಮ ಆಸ್ವಾದನೀಯತೆಯನ್ನು ಅಥವಾ ಆನಂ ವನ್ನು ನೀಡುತ್ತಾ ಕೊನೆಗೆ ತಮಗಿಂತ ಭಿನ್ನವಾದ ಒಂದು ವಿಶಿಷ್ಟ ಆಸ್ವಾದ ಲಕ್ಷ ವನ್ನು ಸೃಷ್ಟಿಸುತ್ತವೆ. ಶೇಷೇಂದ್ರರ ರಚನಾವಿಧಾನ ಬಹಳಮಟ್ಟಿಗೆ ಸ್ವತಃ ಸ್ಫೂರ್ತ ಸ್ವಯಂ ನಿರ್ಮಿತವೂ ಆಗಿದೆ. ಇವರ ಕಾವ್ಯದಲ್ಲಿ ವರ್ಣ್ಯ ವಿಷಯಗಳು ಚಿಂತ ಅನುಭೂತಿ, ವೇದನೆ—ಎಲ್ಲಾ ತಮ್ಮ ತಮ್ಮ ಸ್ಥಾನವನ್ನು, ವಿನ್ಯಾಸವನ್ನು ತಾ ಹುಡುಕಿಕೊಂಡು ಬರುತ್ತವೆ. ಇದರಿಂದ ಶೇಷೇಂದ್ರಶರ್ಮರ ಮನಸ್ಸು ಕಾವ್ಯ ಒಂದು ಸಹಜ ಮಾಧ್ಯಮವಾಗಿದೆ."

"ಸೂಕ್ಷ್ಮವಾಗಿ ನೋಡಿದಾಗ ಶೇಷೇಂದ್ರರ ಕಾವ್ಯದಲ್ಲಿ ಕವಿ ಆತ್ಮವಿಶ್ಲೇ ಮಾಡಿಕೊಳ್ಳುತ್ತಿರುವುದು ಕಂಡುಬರುತ್ತದೆ. ಹೀಗೆ ತನ್ನ ಅಂತರಂಗವನ್ನು ಅಭಿವ್

ಗೊಳಿಸುವಾಗ ತನ್ನ ಮನೋವ್ಯವಹಾರವನ್ನು ಕ್ರಿಯಾತ್ಮಕಗೊಳಿಸಿ ಒಂದು ಸಾಫಲ್ಯಾನುಭೂತಿಯನ್ನು ಪಡೆಯುವಾಗ ಬಾಹ್ಯವಿಷಯುಗಳು ಆತ್ಮಾನುಭೂತಿಯಾಗಿ ಅಭಿವ್ಯಕ್ತವಾಗುತ್ತವೆ. ಇವನ ಕವನಗಳಲ್ಲಿ ಪ್ರತಿಮೆಗಳು, ಪ್ರತೀಕಗಳು, ಅಲಂಕಾರಗಳು, ಉದಾಹರಣೆಗಳು ಕೆಲವು ಹಳೆಯವಾದರೂ ಅವರ ಅನುಭೂತಿಯ ಆಳ, ಆತ್ಮೀಕರಣಕ್ರಿಯೆ, ಪರಿಸ್ಥಿತಿಯನ್ನು ದೃಶ್ಯವಾಗಿ ಮಾರ್ಪಡಿಸುವಲ್ಲಿ ಇರುವ ಶಕ್ತಿ–ಇವುಗಳಿಂದ ಇವರ ರಚನೆಗೆ ನವೀನತೆ, ಆಸ್ವಾದನೀಯತೆ ಸಿದ್ಧಿಸುತ್ತವೆ."

೩

ಶೇಷೇಂದ್ರಶರ್ಮರ ಸಮಗ್ರ ಸಂಪುಟವಾದ 'ಆಧುನಿಕ ಮಹಾಭಾರತ'ಕ್ಕೆ ಕವಿ ಬರೆದ ಮುನ್ನುಡಿಯಿಂದ ಅವರವೇ ಆದ ಕೆಲವು ಅಭಿಪ್ರಾಯಗಳು ತಿಳಿದು ಬರುತ್ತವೆ. ಇದು ಕವಿಯ ಕಾವ್ಯಧೋರಣೆಗೆ ಹಿಡಿದ ಕನ್ನಡಿ. ಮುನ್ನುಡಿಯ ಆಯ್ದ ಭಾಗವನ್ನು ಇಲ್ಲಿ ಕೊಟ್ಟಿದೆ.

"ಮನುಷ್ಯನಕ್ಕೆ ದುಡಿಮೆಯ ಮೂಲಸ್ಥಾನ. ಶ್ರಮ ಮಾನವ ನಾಗರೀಕತೆಯ ಜನ್ಮಸ್ಥಾನ. ಈ ಆಧುನಿಕ ಯುಗದ ಚೇತನಕ್ಕೆ ನೀಡಿದ ಕಾವ್ಯರೂಪವೇ ಆಧುನಿಕ ಮಹಾಭಾರತ. ಮಾನವ ಜೀವನ ಒಂದು ಮಹಾಭಾರತ. ಅರಣ್ಯವಾಸ ಅಜ್ಞಾತವಾಸಗಳೂ ಯುದ್ಧದ ರೂಪಾಂತರಗಳೇ. ಜೀವನವೆಲ್ಲಾ ಮನುಷ್ಯ ಬದುಕಲು ಮಾಡುವ ಹೋರಾಟವೇ ಆಗಿದೆ. ಈ ಜೀವನ ಸಂಗ್ರಾಮದಿಂದ ಓಡಿಹೋಗಲು ಪ್ರಚೋದಿಸುವ ಹೇಡಿತನ ಯಾವಾಗಲೂ ಮನುಷ್ಯನ ಬೆನ್ನು ಹತ್ತಿರುತ್ತದೆ. ಮನುಷ್ಯ ಬದುಕುವುದು, ಬದುಕಲು ಇರುವ ಹಕ್ಕನ್ನು ಸ್ಥಾಪಿಸುವುದು ಮಾನವ ಧರ್ಮ."

"ನಾನು ಯಾವಾಗ ಕತ್ತೆತ್ತಿದರೂ ನನಗಾಗಿ ಅಲ್ಲ, ಆರುಕೋಟಿ ಜನಕ್ಕಾಗಿ ಅಲ್ಲ, ಅರವತ್ತುಕೋಟಿ ಜನಕ್ಕಾಗಿ. ನಾನು ಅನುಭವಿಸುತ್ತಿರುವ ವೇದನೆಯನ್ನೇ ನನ್ನ ದೇಶವೆಲ್ಲಾ ಅನುಭವಿಸುತ್ತಿದೆ. ಮಾನವಕುಲವೆಲ್ಲಾ ಅನುಭವಿಸುತ್ತಿದೆ. ಆದ್ದರಿಂದಲೇ ನನ್ನ ಮನೋಜ್ವಾಲೆ ಈ ದೇಶದ ನಾಲಗೆ. ಅದೇ ಈ ಆಧುನಿಕ ಮಹಾಭಾರತ. ಈ ದೇಶಕ್ಕೆ ನೇಗಿಲು ಪ್ರತೀಕ. ಈ ದೇಶದ ಆಕೃತಿ ನೇಗಿಲಿನ ಆಕೃತಿ. ಇದರ ಜೀವನ ಕಥಾನಾಯಕ ರೈತ. ಆತನೇ ಈ ದೇಶದ ಜೀವನ ದಾನದ ದೊರೆ."

"ತ್ರಿಕರಣಶುದ್ಧಿಯ ಮನುಷ್ಯ ತನ್ನ ಕಥೆಯನ್ನು ಹೇಳಿದರೆ ಸಾಕು. ಅದೇ ತನ್ನ ದೇಶದ ಕಥೆಯಾಗುತ್ತದೆ; ಅದೇ ವಿಶ್ವಮಾನವನ ಕಥೆ ಆಗುತ್ತದೆ. ವಿಶ್ವಮಾನವ ಕಥೆ ಆತ್ಮಕಥೆ ಅಲ್ಲ ಎಂದು ಭಾವಿಸಿ ವಿಶ್ವಮಾನವ ಕಥೆಯನ್ನೇ ಹೇಳುತ್ತೇನೆಂದು ದೊಡ್ಡದಾಗಿ ಕೂಗಾಡುವವನು ಸಫಲವಾಗುವುದಿಲ್ಲ."

"ವ್ಯಾವಹಾರಿಕ ಲೋಕದಲ್ಲಿ ದೇಶಕಾಲಗಳೆಂಬ ತಾಯಿತಂದೆಯರಿಗೆ ಹುಟ್ಟಿದ ಇತಿಹಾಸ ಜ್ಞಾನಕ್ಕೂ ಸಂಗ್ರಾಮಕ್ಕೂ ಇರುವ ಸಂಬಂಧವನ್ನು ನಿರ್ಣಯಿಸುತ್ತದೆ. 'ನ ಕರ್ತಾ ಕಸ್ಯಚಿತ್ ಕಶ್ಚಿತ್ ನಿಯೋಗೇನಾಪಿ ಚೇಶ್ವರಃ, ಸ್ವಭಾವೇ ವರ್ತತೇ ಲೋಕಃ ತಸ್ಯ ಕಾಲಃ ಪರಾಯಣಮ್' (ಕಿಷ್ಕಿಂಧಾಕಾಂಡ, ೨೫ ಸರ್ಗ, ೫ ಶ್ಲೋಕ) ಎಂದಾಗ (ಯಾರೂ ಯಾವುದಕ್ಕೂ ಕರ್ತನಲ್ಲ, ಒಬ್ಬನನ್ನು ನಿಯೋಗಿಸಲು ಈಶ್ವರನೂ ಇಲ್ಲ,

ಲೋಕ ತನ್ನ ಸ್ವಭಾವದಿಂದಲೇ ನಡೆಯುತ್ತದೆ. ಸ್ವಭಾವಕ್ಕೆ ಕಾಲ ಆಧಾರ) ರಾಮಾಯಣ ಇದನ್ನೇ ಹೇಳುತ್ತದೆ."

"ಜೀವನ ಸಂಗ್ರಾಮವನ್ನು ಎದುರಿಸುವ ಶಕ್ತಿಯನ್ನು ಕೊಡುವುದೇ ಉತ್ತಮ ಗ್ರಂಥ. ಕವಿ ಮಾನವನ ಮಾರ್ಗವನ್ನು ತನ್ನ ಅಲಂಕಾರಗಳಿಂದ ಬೆಳಗಿಸುತ್ತಾನೆ. ಅದಕ್ಕೇ ಆಧುನಿಕ ಮಹಾಭಾರತ ಹೀಗೆನ್ನುತ್ತದೆ:

"ಕಾವ್ಯ ಒಂದು ಮೆಸ್ಮರಿಸಂ
ಕವಿಯ ಕಣ್ಣು ಒಂದು ಪ್ರಿಸಂ
ನಾನು ಸೃಷ್ಟಿಸಿದ ಅಲಂಕಾರ
ನಿನ್ನ ಕತ್ತಲೆಗೆ ದೀಪ"

ದುಃಖ ಎನ್ನುವುದು ತ್ಯಾಗ ಅಲ್ಲ. ಯಾವ ತ್ಯಾಗದಿಂದ ಮನುಷ್ಯನಿಗೆ ಆನಂದ ಲಭಿಸುತ್ತದೆಯೋ ಅದೇ ನಿಜವಾದ ತ್ಯಾಗ.

ಮಕ್ಕಳು, ಯುವಕರು ಮತ್ತು ಮಹಿಳೆಯರು—ಎಲ್ಲರೂ ಸರಿಸಮಾನ ವಾಗಿ ಬೆಳೆಸಿಕೊಳ್ಳಬಹುದಾದ ಶಕ್ತಿ ಅಂದರೆ ಅಹಿಂಸೆ.

ಗಾಂಧೀಜಿ

ಗುಂಟೂರು ಶೇಷೇಂದ್ರಶರ್ಮರ—ತೆಲುಗು ಕಾವ್ಯ

ನೀರಾಗಿ ಜಾರಿ ಓಡಿತು

ಪ್ರೊ|| ಟಿ. ವಿ. ಸುಬ್ಬರಾವ್

ಪದ್ಯ ೧

ಕ್ಷೀರಪಥ ಉಷ; ಪ್ರವಾಹದಲ್ಲಿ ಇನ್ನೇನು ಮುಳುಗಿತು ಎನ್ನುವಾಗ ಗುಲ್ಮೊಹರ್ ತನ್ನ ಪ್ರಥಮ ದರ್ಶನ ನೀಡಿ ಹೊಸ ಋತುವಿನ ಆಗಮನ ವನ್ನು ಸಾರಿತು. ಕೆಲವು ನೆನಪುಗಳು ದೂರಾತಿದೂರದಿಂದ ನನ್ನ ರಕ್ತ ಪ್ರವಾಹದಲ್ಲಿ ಕೊಚ್ಚಿ ಬರತೊಡಗಿದವು.

ಈ ನಾಡು ಈ ನುಡಿ ಈ ಕಾಲ ನನ್ನದೆಂದು ಹೇಗೆ ಹೇಳಲಿ? ಇವು ನಾನು ಕೇಳಿಕೊಂಡವಲ್ಲ. ನನ್ನ ಹುಟ್ಟಿನ ಮುನ್ನ ನನ್ನ ಒಪ್ಪಿಗೆ ಪಡೆದು ಕೊಂಡವೂ ಅಲ್ಲ. ನಾನು ಇವುಗಳ ಬಂದಿ.

ಎಷ್ಟು ನಾಲಗೆ, ಎಷ್ಟು ಯುಗ, ಎಷ್ಟು ದೇಶ ದಾಟಿ ಬಂದೆನೋ ಇಂದು ನಮ್ಮ ಊರವನೆಂದು ನನ್ನನ್ನು ಒಳಗೊಂಡಿರುವ ಈ ಪುಟ್ಟ ಹಳ್ಳಿಗೆ, ನನಗೂ ತಿಳಿಯದು, ನಿನಗೂ ತಿಳಿಯದು.

ಈ ದಿನ ನನ್ನ ಕಿವಿಯಲ್ಲಿ ಪಿಸುಗುಟ್ಟುತ್ತಿದೆ. ಹಿಂದೆಂದೊ ಒಂದು ದಿನ ಈ ನನ್ನ ನಾಡು ಒಂದು ಹೂವಾಗಿತ್ತೆಂದು. ಅದರಲ್ಲಿ ನಾನೊಂದು ಮಕರಂದ ಶಿಶುವಾಗಿ ಉಸಿರಾಡಿದೆನೆಂದು

ಒಮ್ಮೊಮ್ಮೆ ಕೊಚ್ಚಿ ಬರುತ್ತವೆ ನನ್ನ ರಕ್ತ ನದೀ ತೀರಗಳಿಗೆ ಪ್ರಾಚೀನ ಶಿಲೋಪಕರಣಗಳು—ಕೊಚ್ಚಿಬರುತ್ತವೆ ಪ್ರಾಚೀನ ಸುಮೇರಿಯಾಗಳು ಮೊಹಂಜದಾರೋಗಳು. ನಾನು ಯಾವ ಕಾಡುಗಳಲ್ಲಿ ಅಂಡಲೆದೆನೋ ಹುಲಿ ಸಿಂಹಗಳ ಹೊಟ್ಟೆಗಳಲ್ಲಿ ಗುಟ್ಟಾಗಿ ನಿದ್ರಿಸುತ್ತಾ—ಯಾವ ಚೆಲುವಿನ ಜಿಂಕೆ ನನ್ನನ್ನು ಚಪ್ಪರಿಸಿತೋ ಹುಲ್ಲುಗಾವಲಲ್ಲಿ ತನ್ನ ಹಸಿದೆ

ರಕ್ತಮಾಂಸಗಳನ್ನು ಸಂತೈಸುತ್ತಾ—ಯಾವ ಅದೃಶ್ಯಾನುಭವಕ್ಕಾಗಿ ಪುರವಾಗಿ ಹರಿಚೆಲ್ಲಿ ಕೊಂಬೆ ಕೈಗಳ ಚಾಚಿದೆನೋ ಎಲೆಬೆರಳ ಮಿಡಿದು ಶೂನ್ಯವ ತಡಕುತ್ತಾ.

ಯಾವ ಪ್ರಾಚೀನ ಪ್ರಜ್ಞಾಸಾಗರದಲ್ಲಿ ತೇಲಿದೆನೋ ನಿರಿಂದ್ರಿಯ ನಿರವಯವ ಕಾಂತಿಕಣವಾಗಿ ಸ್ಪಂದಿಸುತ್ತಾ

ಯಾವ ಘಳಿಗೆಯಲ್ಲಿ ಜೀಕಿದೆನೋ ಕಾಲದಲ್ಲಿ ನೇತಾಡುವ ಬೊಂಬೆಗಳಾದ ಸೂರ್ಯ ಚಂದ್ರರೊಂದಿಗೆ ಅಭೇದ ಅನುಭವಿಸುತ್ತಾ...

ಆ ಎಲ್ಲ ಎಲ್ಲ ನೆನಪು ಕೊಚ್ಚಿ ಬರುತ್ತವೆ ಇಂದಿಗೆ, ನನ್ನ ರಕ್ತ ನದೀ ಪ್ರವಾಹದೊಂದಿಗೆ, ಗುಲ್ಮೊಹರ್ ನೂತನ ಋತುವನ್ನು ಸಾರಿದ ಈ ಶುಭಘಳಿಗೆಗೆ—ಯಾವ ಋತು ಸೃಷ್ಟಿ ನಿರಂತರತೆಯನ್ನು ಸ್ತುತಿಮಾಡುತ್ತಿದೆಯೋ ಆ ಋತುವಿಗೆ.

ನಮ್ಮೂರಿನಲ್ಲಿ ಇಂದು ನನ್ನನ್ನು ಬಲ್ಲವರು ನಾಲ್ವರೇ.

ಭಗ್ನ ಸೇತುವೆ
ಗ್ರಾಮ ಕಾಲುವೆ
ಹಾಳು ದೇಗುಲ
ಹಾಗೂ ಹಳೆ ಕೆರೆಯ ದಡ

ಪದ್ಯ ೨

ಈ ಬದುಕಿನಲ್ಲಿ ನೀನು ಎಷ್ಟು ಬಗೆ ಬಣ್ಣಗಳೊಂದಿಗೆ ಆಡಿಕೊಂಡರೂ ಒಂದು ದಿನ ನಿನ್ನ ಪ್ರಾಚೀನ ಕಪ್ಪಿನಲ್ಲಿ ಕಲಸಿಹೋಗುವ ದೆಸೆವಂತನಾಗಲೇಬೇಕು—ಯಾವ ಕಪ್ಪು ಕತ್ತಲಲ್ಲಿ ನಿನ್ನ ಜೀವಕಾಂತಿಗಳ ಮೂಲಭೂತ ಸಾಮುಗ್ರಿಗಳು ಸ್ಪಂದಿಸುತ್ತಿವೆಯೋ ಆ ಕತ್ತಲಲ್ಲಿ.

ಒಂದು ದಿನ ನನ್ನನ್ನು ನೋಡಿ, ಹಾಡುವ ಹಕ್ಕಿಗಳು ಹಾರಿಹೋಗಲು ನಾನೆಂಥ ಪಾಪಿ ಎಂದು ನೊಂದು ಕುಸಿದೆ.

ಈ ದೇಹಗಳನ್ನು ಬದಲಿಸುತ್ತಾ ಸಂಗ್ರಹಿಸಿದ ಹೊಲಸನ್ನು ಹೊನ್ನ ನಾಣ್ಯಗಳಾಗಿ ಛಾಪಿಸಿ ಪ್ರಪಂಚದ ಪೇಟೆ ಬೀದಿಗಳಲ್ಲಿ ಬಿಡುಗಡೆ ಮಾಡಲಾರೆ. ನಾನು ನನ್ನ ಅಂತರಾಳದಾಳಕ್ಕೆ ಇಳಿಯುತ್ತೇನೆ. ಕಿವಿಯಲ್ಲಿ ತೂರಿ ಗುಂಡಿಗೆಗೆ ಜಿಗಿಯುತ್ತೇನೆ. ಕಣ್ಣಲ್ಲಿ ಹೊಕ್ಕು ಆತ್ಮದೊಳಕ್ಕೆ ಧುಮುಕುತ್ತೇನೆ.

ಎಲ್ಲಿ ಮಾನವ ಮಗುವಾಗಿ ರಸಾಯನ ದ್ರವಗಳ ತೊಗಲು ಚೀಲದಲ್ಲಿರುವನೋ, ಯಾವ ಮೂಲದ್ರವಗಳು ಮೂಲಪದಾರ್ಥವಾದ ಆನಂದಕ್ಕೆ ಉಪನದಿಗಳೋ ಆ ತೀರಗಳಲ್ಲೇ ಉಳಿಯುತ್ತೇನೆ—ಶಿಥಿಲ ನೌಕೆಯಹಾಗೆ...ಆನಂದ ತಪ್ಪದೊಂದಿಗೆ ಆಟವಾಡುತ್ತಾ.

ಅಲ್ಲಿ ಒಂದು ಬಿಳಿ ಹಂಸದ ಕೊರಳನ್ನು ಮೃದುವಾಗಿ ಹಿಂಡುತ್ತಿರುವಂತೆ, ಬೆಳ್ಳಿ ಚಂದ್ರಮನನ್ನು ತದ್ದು ತದ್ದು ಮೃದುವಾಗಿ ಹಿಗ್ಗಿಸುತ್ತಿರುವಂತೆ ಅನಿಸುತ್ತದೆ.

ಅನೇಕಾನೇಕ ಅವ್ಯಕ್ತಾನುಭವಗಳು ನನ್ನ ಕಣ್ಣುಗಳ ಸೂಕ್ಷ್ಮನಾಳಗಳಲ್ಲಿ ವ್ಯಾಪಿಸುತ್ತವೆ. ಲೋಕವೇ ಒಂದು ಹೊಸ ದೃಶ್ಯವಾಗಿ ಬದಲಾಗಿ ಹೋಗುತ್ತದೆ.

ಬಾಯಲ್ಲಿ ಉಸುರು ತುಂಬಿಕೊಂಡ ಮರ ತನ್ನ ಕೆನ್ನೆಯುಬ್ಬಿಸಿ ಎರಡು ಹರೆಗಳಲ್ಲಿ ಒಂದು ಹೂ ಹಿಡಿದು ಶಹನಾಯಿ ನುಡಿಸುತ್ತದೆ.

ಒಂದು ರಾಗ ಬೀಸೊಗೆದು ಬುಲ್ ಬುಲ್ ಇಡೀ ತೋಟವನ್ನೇ ತನ್ನ ಪುಟ್ಟ ರೆಕ್ಕೆಗಳ ಮೇಲೆ ಎತ್ತಿಕೊಂಡು ಹಾರಿಹೋಗುತ್ತದೆ.

ಪದ್ಯ ೩

ನನ್ನ ಸ್ಮೃತಿಯ ಮೇಲೊಂದು ಸ್ತಂಭ ಮುರಿದು ಬಿತ್ತು. ನನ್ನ ಕೊರಳಲ್ಲಿ ಕಂಕೆ ಬೆಳೆಯಿತು. ಅದನ್ನು ಹಸುಗಳು ಮೇದು ವಿಶ್ವದ ಹಸುಗೂಸುಗಳಿಗೆಲ್ಲಾ ಹಾಲೂಡಿದವು. ಕಂಡಗಳ ಕೊರಳಲ್ಲಿ ನನ್ನ ಸ್ವರ ಹಾಡಾಗಿ ಹೊಮ್ಮಿತು. ಆ ಹಾಡುಗಳ ಮೇಲೆ ಹೊನ್ನು ಬಿದ್ದು ಮೈ ಮರೆಯಿತು. ದೇವರು ಕಾಳಿದಾಸನಾಗಿ ಕಣ್ಣೀರಲ್ಲಿ ಕೈತೊಳೆದನು.

ಮೇಜಿನ ಮೇಲೆ ರೋಜಾಗಳ ಸಾಗರದಹಾಗೆ ನನ್ನ ಕಂಬನಿಯನ್ನು ರಾಶಿಹಾಕಿದೆ. ಅದನ್ನು ಕಂಡ ಪಡುವಲ ಹೊನ್ನು ಕಡಲಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿತು.

ಬೆಳಕಿನ ಕಿರಣಗಳು ನನ್ನ ಕನಸುಗಳನ್ನು ಹೊಮ್ಮಗೊಡುತ್ತಿಲ್ಲ. ದೂರ ದಿಗಂತಗಳ ಕತ್ತಲ ನೆಲದಲ್ಲಿ ನಾನವನ್ನು ಬೆಳೆಸುತ್ತೇನೆ. ನನ್ನ ಸಮಾಧಿಗಿಳಿಯುತ್ತೇನೆ.

ಸಮಾಧಿಯನ್ನು ಬಂಗಾರದ ಬಿರುಮಳೆಯಲ್ಲಿ ತೊಳೆದು, ಅದಕ್ಕೆ ಶತಮಾನಗಳ ರೆಕ್ಕೆಗಳನ್ನು ಹಚ್ಚುತ್ತೇನೆ. ಸಂಜೆಗಳ ಕೆಂಪು ತುಂಬಿ ಯಶೋವಂತ ಅಹ್ವಾಹುತಿಗಳನ್ನು ಚೆಲ್ಲುತ್ತೇನೆ.

ನನ್ನ ಕತ್ತ ಕೊಯ್ದು ಕಾಂತಿ ಕುಂತಲಗಳಿಂದ ತುಂಬಿನ ರುಂಡವನ್ನು ರತ್ನಪಾತ್ರೆ ಯಲ್ಲಿಟ್ಟು ಸಮರ್ಪಿಸುತ್ತೇನೆ. ಕೊಯ್ದ ಕೊರಳಿಂದ ಕೆಂಗುಲಾಬಿಗಳುದುರುತ್ತವೆ—ಸಂಜೆಗಳ ಹಾಗೆ, ಹಸುಕಂದಗಳಹಾಗೆ, ಆಲೀವ್ ಚೆಲುವೆಯರ ಹಾಗೆ.

ಪದ್ಯ ೪

ತುಟಿಯೊಡೆಯದಿದ್ದ ಹೂಗಳೆದುರು, ಬಾಯಿಬಿಡದಿದ್ದ ತೈಲಚಿತ್ರಗಳೆದುರು, ಅದೆಷ್ಟೊ ಅವಮಾನಗಳನ್ನು ಈ ಕೋಣೆಯಲ್ಲಿ ಅನುಭವಿಸಿದ ಇದ್ದೊಂದು ದೀಪವೂ ಆರಿಹೋಯಿತು ಕತ್ತಲು ನುಂಗಿದಾಗ ಕೋಣೆ ಕಳವಳಿಸಿತು.

ಆಗ ಒಂದು ಎಲೆ ಉದುರಿದರೂ ಒಂದು ಶತಮಾನ ಉರುಳಿದಂತೆ. ಆ ಕತ್ತಲ ಕಗ್ಗ ಕೆಳಗೆ ಕೊರಳು ಕಿವುಚಿವ ಜಲ ಇದೆಯೋ ಅಥವಾ ನನ್ನ ಮುರಿದುಹೋದ ಕೊರಳಿದೆಯೊ ಯಾವ ಅಲೆಮಾರಿ ಗಾಳಿ ಆಗಮಿಸಿ ಮೇಲೆಬಿದ್ದ ಕಗ್ಗಲ್ಲುರುಳಿಸಿ ನನ್ನ ಗೂಢಗಳನ್ನು ನನ ಹಿಂದಿರುಗಿಸುವುದೋ ಕಾಣೆ....

ಒಂದೊಂದು ಮಳೆಗಾಲಕ್ಕೂ ನನ್ನ ಬಾಳಿನ ಕಣಿವೆ ಬಣ್ಣ ಬದಲಿಸುತ್ತಿದೆ. ಒಂ ಪ್ರವಾಹದಲ್ಲಿ ಎಂದೂ ನಾನು ಎರಡುಬಾರಿ ಈಜಿಲ್ಲ. ಆದರೆ ಈ ಪ್ರಪಂಚ ಇಂದೂ ನನ್ನನ ಹುಟ್ಟಿದಾಗ ಇಟ್ಟ ಹೆಸರಿನಿಂದಲೇ ಕರೆಯುತ್ತಿದೆ. ಅದಕ್ಕೆ ಹರಿಯುವ ತೊರೆಯಲ್ಲಿ ಇರು ನೀರೇ ಇರದೆಂದು ತಿಳಿಯದು.

ಸಂಜೆ ಸಿಗರೇಟು ಸೇದುತ್ತಿದೆ; ಸುರುಳಿ ಸುತ್ತುತ್ತ ನಕ್ಷತ್ರ ಲೋಕಕ್ಕೆ ಜಿಗಿಯುತ್ತಿರ ಹೊಗೆಯುಂಗುರಗಳನ್ನು ತಿರುಗಿ ಸೆಳೆದು ಮತ್ತೆ ಅವನ್ನು ಸಿಗರೇಟಾಗಿಸಲು ಹವಣಿಸುತ್ತದೆ

ಪದ್ಯ ೫

ನನ್ನ ನೆನಪಿನ ಉಪ್ಪೆಯಲ್ಲಿ ನಿನ್ನಿಸುತ್ತಿದ್ದ ದುಃಖಜಲವನ್ನು ಹಕ್ಕಿಗಳು ಕುಡಿಯುತ್ತಿ ಹಸುರು ಬಯಲಲ್ಲಿ ಕುಳಿತ ಬೆಸ್ತರ ಕಂದಮ್ಮಗಳು ತಾವರೆದಂಟಿನ ಕೊಳಲನ್ನು ಊದುತ್ತಿ ವಸಂತ ಸ್ವಪ್ನಗಳ ಮತ್ತಿನಲ್ಲಿ ತೇಲುತ್ತ ಕಾಲುವೆ ಕಾಲುವೆಗಳನ್ನು ಕರೆಯುತ್ತಿವೆ ಮರಗಳ ಮರಗಳು ಆಹ್ವಾನಿಸುತ್ತಿವೆ ಬುಸಿಬಾನಸೊಂದು ನೂಡಿವ ಒಟ್ಟಂಬಯಲ ನರಮಂ ಹಸೋರ್ದೀದ್ಯೋಪಗಳ ತೀವಿತಕ್ಕೆ ಸ್ಪಂದಿಸಿ ಪರ್ತಿಸುತ್ತಿದೆ.

ಮೋಡಗಳನ್ನೇರುತ್ತಾ ಅಳುತ್ತಿದ್ದ ಬಾಲಚಂದ್ರ ಭೂಮಿಯ ಭೂಮ ದೃಶ್ಯಗಳ ಮೇಲೆ ಬೆಳದಿಂಗಳು ಚೆಲ್ಲಿದ. ಕೊಳಲಿಗೆ ಮಾನವ ಸುರಿದ ಜೀವ ಸಾವಿರ ರಾಗಗಳ ಪಾಡುಪಡುತ್ತಿತ್ತು. ಹೂಗಳ ಬಿರುಗಾಳಿಗಳು ಸಂಜೆಯ ಬಿರುಗಾಳಿಗಳು ಅಲ್ಲಿಗೆ ಬಂದು ಬೀಡುಬಿಟ್ಟವು. ಮೊಲೆ ಕೊಟ್ಟನಂತೆ ಮಿರುಗುತ್ತಿರುವ ಕಪ್ಪುದ್ರಾಕ್ಷಿಯಲ್ಲಿ ಹಬ್ಬಿದ ರಕ್ತನಾಳಗಳ ಜೀವ ಮಂಡಲ ನಕ್ಷತ್ರ ಗುಚ್ಛಗಳನ್ನು ಕರೆಯುತ್ತಿತ್ತು 'ಇಳಿದು ಬನ್ನಿ' ಎಂದು.

ಹಿಮವಂತ ಭೂಮಧ್ಯರೇಖೆಗೆ ದೂರದಲ್ಲಿ ಮಲಗಿಸಿ ಹೋದ ಬೆತ್ತಲ ಮಗು ಗಂಗೆ ಮಂಕಳುಹಾಸಿನ ನಡುವೆ ಮುಚ್ಚಿದ ಪುಸ್ತಕದ ಹಾಗೆ ನಿದ್ರಿಸುತ್ತಿತ್ತು. ಸೂರ್ಯನ ಮೊದಲ ಕಿರಣ ತಾಗಿದ್ದೇ ತಡ ನೀರಾಗಿ ಜಾರಿ ಓಡಿತು.

ಅಮಾವಾಸ್ಯೆ ಉಳಿದಿದ್ದ ಚಂದ್ರ ಮುರುಕನ್ನು ಗಕ್ಕನೆ ಬಾಯಿಗೊಗೆದುಕೊಂಡಿತು.

ಪದ್ಯ ೬

ಮುಂಜಾನೆ ಮೈತೊಳೆದ ಒಂದು ತಾವರೆ ಹೂ ಸರಸ್ಸನ್ನೆಲ್ಲಾ ಸ್ಮೃತಿಗಳಿಂದ ಪರಿಮಳ ಭರಿತಗೊಳಿಸುತ್ತಿತ್ತು. ಆದರಿಂದ ಮೂರ್ಛೆಹೋದ ಚಂದ್ರನು ಕೊಳದಲ್ಲಿ ಬಿದ್ದು ಕರಗಿಹೋದ.

ಆ ಮತ್ತಿನಲ್ಲಿ ಸರಸ್ಸು ರಾತ್ರಿಯೆಲ್ಲಾ ತಾರೆಗಳ ಕನಸು ಕಾಣುತ್ತಿತ್ತು. ಚಂದ್ರನನ್ನು ಬಕೆಟ್ಟಿನಲ್ಲಿ ಹಿಡಿಯೋಣೆಂದು ನಾನು ಸರಸ್ಸಿಗೆ ಹೋದೆ. ಆದರೆ ಕೊಳದ ಗಾಢ ಸಮಾಧಿಯನ್ನು ಭಗ್ನಗೊಳಿಸಲು ಮನಸ್ಸೇ ಬರಲಿಲ್ಲ.

ನಕ್ಷತ್ರಗಳಿಂದ, ತಾವರೆಯ ಮೊಗ್ಗುಗಳಿಂದ ಕನಸುಗಳನ್ನು ಶೃಂಗರಿಸಿಕೊಂಡ ದಾರ್ಶನಿಕ ನಂತೆ ಕಂಡಿತು ಆ ಸರಸ್ಸು.

ಬೆರಳುಗಳಿಂದ ಯಾವನೋ ಕೊಳಲು ನುಡಿಸುತ್ತಿದ್ದಾನೆ. ಸ್ವರಗಳು ಬೆಳದಿಂಗಳಲ್ಲಿ ಹೊರಳಾಡುತ್ತಿವೆ ನನ್ನ ರಕ್ತ ಕಣಗಳ ಮೇಲೆ. ಚಂದ್ರಿಕೆಯ ಇಂದ್ರಜಾಲದಲ್ಲಿ ವಸ್ತುಗಳು ಹೇಗೆ ಬದಲಾಗುತ್ತವೆಯೋ ಸೌಂದರ್ಯ ಪರಿವೇಷಗಳನ್ನು ಧರಿಸಿಕೊಂಡು ಎಂದು ನೋಡುತ್ತಾ ನಿಂತಿದ್ದೇನೆ. ಕಣ್ಣುರೆಪ್ಪೆಗಳು ಬೆಳದಿಂಗಳಲ್ಲಿ ನೆಂದು ಉಬ್ಬಿ ಭಾರವಾಗಿವೆ.

ನಾನು ಯಾವಾಗಲೂ ಒಂದು ರಾಗಕ್ಕೆ ಮೇಳವಿಸಿದ ತಂತಿ—ನನ್ನ ನೆನಪುಗಳ ಎಳೆಗರಿಕೆ ಗಳಿಂದ ಮಧುರ ಸಮಾಸಗಳನ್ನು ಹೆಣೆಯುವಂಥ, ಅಜ್ಞಾತ ದಿಗಂತಗಳಲ್ಲಿ ಜನ್ಮವೃತ್ತಾಂತ ವನ್ನು ಕಳೆದುಕೊಂಡಂಥ ಒಂದಾನೊಂದು ರಾಗಕ್ಕೆ ಮೇಳವಿಸಿದ ತಂತಿ ನಾನು.

ರಾಷ್ಟ್ರೀಯ ಸಾಕ್ಷರತಾ ನಿಯೋಗ—ಜನಶಿಕ್ಷಣ ನಿಲಯಗಳು

ನಾಗರಾಜೇಗೌಡ

ವಯಸ್ಕ ಇಂದಿನ ನಾಯಕ. ಅವನ ನಿರ್ಧಾರದ ಮೇಲೆ ಇಂದಿನ
ಪ್ರಗತಿ ನಿಂತಿದೆ. ಅವನ ತಿಳಿವೇ ನಾಡಿನ ಸಂಪತ್ತು. ಅವನ
ಅರಿವೇ ನಮ್ಮ ಅಭ್ಯುದಯ. ಬೇರಾವ ಕೆಲಸವನ್ನಾದರೂ
ಬದಿಗಿಟ್ಟು ಮೊದಲು ವಯಸ್ಕರ ಶಿಕ್ಷಣದ ಕೆಲಸ ಮಾಡದಿದ್ದರೆ
ದೇಶದ ಸ್ಥಿತಿ ನೆಟ್ಟಗಾಗದು. ಇದು ನಮ್ಮ ಮುಂದಿರುವ ಮಹಾ
ಸಮಸ್ಯೆ. ಇದನ್ನು ಮನಗಂಡು ಸರ್ಕಾರ ವಯಸ್ಕರ ಶಿಕ್ಷಣದ
ವ್ಯಾಪ್ತಿಯನ್ನು ವಿಸ್ತರಿಸಿದೆ.

ವಯಸ್ಕರ ಶಿಕ್ಷಣ ಮತ್ತು ಸಾಕ್ಷರತೆಯ ಪ್ರಾಮುಖ್ಯತೆಯ ಬಗ್ಗೆ
ಎಲ್ಲರಿಗೂ ಗೊತ್ತು. ಹೊಸ ರೀತಿಯ ಉಳಿತಾಯದ ಕಾರ್ಯ
ಕ್ರಮಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆ,
ಪರಿಸರ ಮಾಲಿನ್ಯ ತಡೆಗಟ್ಟುವಿಕೆ. ಸರ್ವರಿಗೂ ಪ್ರಾಥಮಿಕ ಶಿಕ್ಷಣ
ಮತ್ತು ಸೃಜನಾತ್ಮಕತೆ ಇವುಗಳ ಅಯಶಸ್ಸಿಗೆ ದೇಶದಲ್ಲಿನ
ಸುಮಾರು ಶೇ. ೬೪ ಅನಕ್ಷರತೆಯೇ ಕಾರಣ. ಸಂದಿಗ್ಧ ಪರಿಸ್ಥಿ
ಯಲ್ಲಿ, ಯಾವುದೇ ಕೌಶಲ್ಯವಿಲ್ಲದ ಮಾನವ ಶಕ್ತಿಯನ್ನು
ಅರೆಕೌಶಲ್ಯ ಮಾನವ ಶಕ್ತಿಯನ್ನಾಗಿ ಹಾಗೂ ಅರೆಕೌಶಲ್ಯ ಮಾನವ
ಶಕ್ತಿಯನ್ನು ಪೂರ್ಣ ಕೌಶಲ್ಯಯುತ ಮಾನವಶಕ್ತಿಯನ್ನಾಗಿ
ಪರಿವರ್ತಿಸುವಲ್ಲಿ ಪ್ರಯತ್ನ ಅತ್ಯಗತ್ಯ.

ವಯಸ್ಕರ ಶಿಕ್ಷಣ ಯೋಜನೆಗಳು

ವಯಸ್ಕರ ಶಿಕ್ಷಣ ಕಾರ್ಯಕ್ರಮ ಕಾಲನಿಗದಿತ ಕಾರ್ಯಕ್ರಮ
ಸುಮಾರು ೩೦ ಮಿಲಿಯನ್ ವಯಸ್ಕ ಅನಕ್ಷರಸ್ಥರನ್ನು ೧೯೯೦
ಹೊತ್ತಿಗೆ ಹಾಗೂ ಉಳಿದ ಸುಮಾರು ೫೦ ಮಿಲಿಯನ್ ವಯಸ
ಅನಕ್ಷರಸ್ಥರನ್ನು ೧೯೯೫ರ ಹೊತ್ತಿಗೆ ಕ್ರಿಯಾತ್ಮಕ ಸಾಕ್ಷ
ರನ್ನಾಗಿಸಲು ಯೋಜನೆ ರೂಪಿಸಿದ್ದು, ಅವುಗಳು ಇಂತಿವೆ:

ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆ, ವಯಸ್ಕರ ಶಿಕ್ಷಣ ಕಾರ್ಯಕ್ರಮ ಕಾರ್ಯಗತಮಾಡುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಧನಸಹಾಯ ಯೋಜನೆ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ರಾಷ್ಟ್ರೀಯ ಸೇವಾ ಯೋಜನೇತರ ವಿದ್ಯಾರ್ಥಿ ಸ್ವಯಂ ಸೇವಕರು ಬೇಸಿಗೆ ರಜಾ ದಿನಗಳಲ್ಲಿ ಬಿಡುವಿನ ವೇಳೆ ಸದುಪಯೋಗ ಪಡಿಸಿಕೊಂಡು ಕಾರ್ಯೋನ್ಮುಖರಾಗುವ ಒಂದು ಸ್ವಯಂ ಸೇವಾ ಕಾರ್ಯಕ್ರಮ 'ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ' ಹಾಗೂ ಶ್ರಮಿಕ ವಿದ್ಯಾಪೀಠಗಳು–ಇವು ಕೇಂದ್ರ ಸರ್ಕಾರದ ಯೋಜನೆಗಳು. ರಾಜ್ಯ ವಯಸ್ಕರ ಶಿಕ್ಷಣ ಕಾರ್ಯಕ್ರಮ ರಾಜ್ಯ ಸರ್ಕಾರದ ಯೋಜನೆ. 'ಅಕ್ಷರಸೇನೆ' ಕರ್ನಾಟಕದ ವಿಶೇಷ ಯೋಜನೆ.

ಹೊಸ ಶಿಕ್ಷಣ ನೀತಿ

ಶೈಕ್ಷಣಿಕ ತಾರತಮ್ಯ ತೊಡೆದು ಹಾಕಲು ಜನತೆ ಅಜ್ಞಾನ ಹಾಗೂ ಶೋಷಣೆಯಿಂದ ಮುಕ್ತರಾಗಬೇಕು. ಇದು ವಯಸ್ಕರ ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬುದನ್ನು ಮನಗಂಡು ೧೯೮೬ರ ಹೊಸ ಶಿಕ್ಷಣ ನೀತಿಯಲ್ಲಿ ವಯಸ್ಕರ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ೧೫-೩೫ ವಯೋಮಿತಿಯ ವಯಸ್ಕರಲ್ಲಿ ಅನಕ್ಷರತೆ ನಿರ್ಮೂಲನೆ ಮಾಡಲು ಹೊಸ ಶಿಕ್ಷಣ ನೀತಿಯಲ್ಲಿ ತೀರ್ಮಾನಿಸಿದೆ.

ಸಾಕ್ಷರತೆ ಮತ್ತು ಅಭಿವೃದ್ಧಿ

ಸಾಕ್ಷರತಾ ಕಾರ್ಯಕ್ರಮ ಅರ್ಥಪೂರ್ಣವಾಗಬೇಕಾದರೆ, ಕಲಿಯುವವರ ದೈನಂದಿನ ಅಗತ್ಯಗಳಿಗೆ ಅನುಗುಣವಾಗಿ ವಯಸ್ಕರ ಶಿಕ್ಷಣ ಇರಬೇಕು. ಇವು ಸಾದೃಶ್ಯವಾಗಿದ್ದು, ಕೌಶಲ್ಯಪೂರ್ಣವಾಗಿರಬೇಕು.

ವಯಸ್ಕರ ಶಿಕ್ಷಣ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ನಡುವೆ ತೀರಾ ಕಡಿದಾದ ಕಂದರವೇರ್ಪಟ್ಟಿದೆ. ಅಭಿವೃದ್ಧಿ ವಯಸ್ಕರ ಶಿಕ್ಷಣವನ್ನು ಅವಲಂಭಿಸಿದೆ. ಅಭಿವೃದ್ಧಿ ಕಾರ್ಯಕ್ರಮಗಳನ್ನು ವಯಸ್ಕರ ಶಿಕ್ಷಣದಲ್ಲಿ ಅಳವಡಿಸಿಕೊಳ್ಳುವ ಹೊರತು ವಯಸ್ಕರ ಶಿಕ್ಷಣ ಯಶಸ್ವಿಯಾಗಲಾರದು. ಆದ್ದರಿಂದ ಅಭಿವೃದ್ಧಿ ಹಾಗೂ ವಯಸ್ಕರ ಶಿಕ್ಷಣ ಒಂದಕ್ಕೊಂದು ಪೂರಕ ಪೋಷಕ. ಇಂದು ವಯಸ್ಕರ ಶಿಕ್ಷಣ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ನಡುವೆ ತೀರ ಸಮೀಪದ ಸಂಬಂಧವೇರ್ಪಡಿಸುವುದು ತೀರ ಅತ್ಯಗತ್ಯ.

ಸುವ್ಯವಸ್ಥಿತ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ರಾಷ್ಟ್ರೀಯ ಗುರಿಗಳಾದ ಬಡತನ ನಿರ್ಮೂಲನ, ಚಿಕ್ಕ ಸಂಸಾರದ ಅಳವಡಿಕೆ, ರಾಷ್ಟ್ರೀಯ ಐಕ್ಯತೆ, ಉತ್ತಮ ಪರಿಸರ, ಮಹಿಳೆಯರ ಸಮಾನತೆ ಮುಂತಾದುವುಗಳೊಂದಿಗೆ ಸಂಬಂಧೀಕರಿಸಲಾಗಿದೆ.

ಹೊಸ ಕಾರ್ಯಕ್ರಮ

ಸಾಮೂಹಿಕ ಸಾಕ್ಷರತಾ ಕಾರ್ಯಕ್ರಮದಲ್ಲಿ ಸಾಕ್ಷರತೆಯೊಂದಿಗೆ ಕ್ರಿಯಾತ್ಮಕ ತಿಳುವಳಿಕೆ ಮತ್ತು ಕೌಶಲ್ಯ, ಸಾಮಾಜಿಕ ಹಾಗೂ ಆರ್ಥಿಕ ನೈಜ ಬದಲಾವಣೆ ಬಗ್ಗೆ ಕಲಿಯುವವರಲ್ಲಿ ಅರಿವು ಮೂಡಿಸುವುದಾಗಿದೆ. ನಿರಕ್ಷರತಾ ನಿರ್ಮೂಲನೆ ಒಂದು

ರಾಷ್ಟ್ರೀಯ ಕಾರ್ಯಕ್ರಮವಾದ್ದರಿಂದ ಎಲ್ಲರೂ ಈ ಕಾರ್ಯಕ್ರಮದಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಳ್ಳಬೇಕು.

ಈ ಮೇಲಿನ ಗುರಿಸಾಧನೆಗಾಗಿ ಪ್ರಸ್ತುತ, ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆ, ರಾಜ್ಯ ವಯಸ್ಕರ ಶಿಕ್ಷಣ ಕಾರ್ಯಕ್ರಮ ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ಧನಸಹಾಯ ಗೊತ್ತುಪಡಿಸಿ ಬಲಪಡಿಸಲಾಗಿದೆ. ಇದರೊಂದಿಗೆ ಹೊಸ ಕಾರ್ಯಕ್ರಮಗಳೂ ಇವೆ.

೧. ಎಲ್ಲಾ ನೆಹರು ಯುವಕ ಕೇಂದ್ರಗಳಿಗೂ ೧೯೭೪–೭೫ ರ ಹೊತ್ತಿಗೆ ಅವರ ಜಿಲ್ಲೆಯ ವ್ಯಾಪ್ತಿಯ ಒಂದು ಕ್ಷೇತ್ರದಲ್ಲಿ ಒಂದು ನೂರು ಕೇಂದ್ರಗಳ ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆ.

೨. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಅವಿಭಾಜ್ಯ ಅಂಗವಾಗಿ ಮಹಿಳೆಯರಿಗೆ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮದ ಪುನರ್ ಪ್ರಾರಂಭ.

೩. ಅಗತ್ಯವಿದ್ದೆಡೆ ಉದ್ಯೋಗಿಗಳಿಗೆ ಸಾಕ್ಷರತೆ ಮತ್ತು ಕೌಶಲ್ಯವೃದ್ಧಿಗೆ ತಕ್ಕ ವ್ಯವಸ್ಥೆ.

೪. ಐ.ಆರ್.ಡಿ.ಪಿ ಮತ್ತು ಎನ್. ಆರ್. ಇ. ಪಿ. ಫಲಾನುಭವಿಗಳಿಗೆ ವಿಶೇಷ ಸಾಕ್ಷರತಾ ಪಠ್ಯಪುಸ್ತಕ ಹಾಗೂ ಇತರೆ ಓದುವ ಪುಸ್ತಕಗಳ ಅಭಿವೃದ್ಧಿ.

೫. ಪರಿಶಿಷ್ಟ ಜಾತಿ: ಪರಿಶಿಷ್ಟವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳ ಜನರಿಗೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ವಯಸ್ಕರ ಶಿಕ್ಷಣದ ಅಂಗವಾಗಿ ಅರಿವು ಮೂಡಿಸುವುದು.

೬. ಕಾರ್ಯಕ್ರಮ ಕಾರ್ಯಗತವಾಗುತ್ತಿರುವ ಬಗ್ಗೆ ಗೊತ್ತುಪಡಿಸಿದ್ದ ದಾಖಲಾತಿ, ಹಾಜರಾತಿ, ಬಳಸಿಕೊಂಡ ಹಣ, ತೃಪ್ತಿದಾಯಕ ಮುಕ್ತಾಯ ಮತ್ತು ಪರಿಣಾಮಕಾರಿ ಸ್ಥಿರೀಕರಣ ಹಾಗೂ ಮುಂದುವರಿದ ಶಿಕ್ಷಣ, ಜತೆಗೆ ಈ ಕಾರ್ಯಕ್ರಮಕ್ಕೆ ಮೂಲಭೂತವಾಗಿ ದೊರೆತ ಸೇವೆಗಳು ಹಾಗೂ ವಯಸ್ಕರ ಶಿಕ್ಷಣದ ಮೂಲಕ ಆದ ಅನುಕೂಲಗಳು ಇವುಗಳಿಗೆ ಸಂಬಂಧಿಸಿದಂತೆ ಪರಿಣಾಮಕಾರಿ ಮೌಲ್ಯಮಾಪನ ಮಾಡಲು ಈ ಕಾರ್ಯನಿರ್ವಾಹಣಾ ವ್ಯವಸ್ಥೆಯಲ್ಲಿ ಅವಕಾಶವಿದೆ. ಅಂತೆಯೇ, ಈ ವ್ಯವಸ್ಥೆಯಲ್ಲಿ ಸಂಬಂಧಪಟ್ಟ ಹಾಗೂ ಆಡಳಿತಾತ್ಮಕ ಅರ್ಹ ಯೋಜನಾ ಸಂಸ್ಥೆ, ರಾಜ್ಯ ಮಟ್ಟದ ಸಂಘಸಂಸ್ಥೆಗಳು, ಯೋಜನೆ, ಕೇಂದ್ರ ಮಟ್ಟ ಹಾಗೂ ವಯಸ್ಕರ ಶಿಕ್ಷಣ ಕಾರ್ಯಕ್ರಮ ಕಾರ್ಯಗತವಾಗುವಲ್ಲಿ ನಿರ್ದೇಶನ ನೀಡಲು ಅವಕಾಶವಿದೆ.

ಮುಂದುವರಿದ ಶಿಕ್ಷಣ :

ವಯಸ್ಕರ ಶಿಕ್ಷಣ ಮುನ್ನಡೆಯಾಗಲು ಮುಂದುವರಿದ ಶಿಕ್ಷಣದ ಕೊರತೆಯೂ ಒಂದು. ಇದನ್ನು ಮನಗಂಡು ಸರ್ಕಾರ ನವಸಾಕ್ಷರರಿಗಾಗಿ ಮುಂದುವರಿದ ಶಿಕ್ಷಣದ

ಬಗ್ಗೆ ಒತ್ತಿ ಹೇಳಿದ್ದು, ಹೊಸ ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ಒಪ್ಪಿಕೊಳ್ಳಲಾಗಿದೆ. ಸಾಮಾಜಿಕ ಕಲಿಕೆಯ ಗುರಿಯಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯ ಅಗತ್ಯಕ್ಕೆ ಹೆಚ್ಚು ಆದ್ಯತೆ. ವಯಸ್ಕರ ಶಿಕ್ಷಣದ ಮೂಲಕ ಕಲಿತವರಿಗೆ ಮಾತ್ರ ಮುಂದುವರಿವ ಶಿಕ್ಷಣ ಸೀಮಿತವಲ್ಲ. ಔಪಚಾರಿಕ ಶಿಕ್ಷಣವಾದ ಪ್ರಾಥಮಿಕ ಶಿಕ್ಷಣ ಪಡೆಯುವವರಿಗೂ ಹೌದು. ಇದಕ್ಕಾಗಿ ನವೀನ ವ್ಯವಸ್ಥೆಯೇ ಬರಲಿದೆ. ಅದುವೇ 'ಜನಶಿಕ್ಷಣ ನಿಲಯ'

ಜನಶಿಕ್ಷಣ ನಿಲಯಗಳು :

ಸುಮಾರು ೫೦೦೦ ಒಟ್ಟು ಜನಸಂಖ್ಯೆಯುಳ್ಳ ಅಕ್ಕಪಕ್ಕದ ಹಳ್ಳಿಗಳಿಗೊಂದು 'ಜನಶಿಕ್ಷಣ ನಿಲಯ'. ಇದು ವಯಸ್ಕರ ಶಿಕ್ಷಣ ಮತ್ತು ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮಗಳೆರಡರ ಸಮ್ಮಿಳನ ಕಾರ್ಯಸ್ಥಾನ. ಜೀವನದಲ್ಲಿ ಬಂದೊದಗಬಹುದಾದ ಸವಾಲುಗಳನ್ನು ಎದುರಿಸುವ ಮನೋಭಾವವನ್ನು ಇಲ್ಲಿ ಬೆಳಸಲಾಗುವುದು.

ಶಾಲಾಕಟ್ಟಡ, ಪಂಚಾಯಿತಿ ಕಟ್ಟಡ, ಸಮುದಾಯ ಕೇಂದ್ರ ಇಲ್ಲಿ 'ಜನಶಿಕ್ಷಣ ನಿಲಯ'ದ ಪ್ರಾರಂಭ. ಪುಸ್ತಕ ಭಂಡಾರ, ಓದುವ ಕೊಠಡಿ, ಚರ್ಚಾ ಮಂಡಲಿ, ಸಾಂಸ್ಕೃತಿಕ ಕಾರ್ಯಚಟುವಟಿಕೆ ಮತ್ತು ಸಮುದಾಯಕ್ಕೊಂದು ದೂರದರ್ಶನದ ಸೆಟ್ಟು ಇವುಗಳಿಗೆ ಸ್ಥಳಾವಕಾಶವಿರಬೇಕು.

ಗ್ರಾಮ ಮಟ್ಟದ ಕಾರ್ಯಕರ್ತರುಗಳಾದ ಗ್ರಾಮೀಣ ಆರೋಗ್ಯ ತಿಳುವಳಿಕಾಧಿಕಾರಿಗಳು, ಅಂಗನವಾಡಿ ಕಾರ್ಯಕರ್ತರು, ಗ್ರಾಮ ಸೇವಕರು ಮುಂತಾದ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಪಾಲ್ಗೊಳ್ಳಲು ಒಂದು ಸಾರ್ವಜನಿಕ ಸಭಾಸ್ಥಾನವನ್ನು ಜನಶಿಕ್ಷಣ ನಿಲಯ ಹೊಂದಿರಬೇಕು. ಇಲ್ಲಿ ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುವಂತಾಗುವುದರ ಜತೆಗೆ ಪ್ರಕ್ರಿಯೆಗೆ ಅವಕಾಶ ಮಾಡಿಕೊಡುವಂತಾಗಬೇಕು.

ರಾಷ್ಟ್ರೀಯ ಗುರಿಗಳಾದ ಉತ್ತಮ ಪರಿಸರ, ಚಿಕ್ಕಕುಟುಂಬದ ಕ್ಲುಪ್ತಮಟ್ಟ, ರಾಷ್ಟ್ರೀಯ ಐಕ್ಯತೆ, ಸಾಂಸ್ಕೃತಿಕ ಚಟುವಟಿಕೆ ಮುಂತಾದುವನ್ನು ಬಲಪಡಿಸಲು ಇಲ್ಲಿಯ ಚರ್ಚಾ ಮಂಡಲಿ ಸಹಕಾರಿಯಾಗಲಿದೆ.

ಗ್ರಾಮ ಶಿಕ್ಷಣ ಸಮಿತಿ :

ಗ್ರಾಮ ಪಂಚಾಯಿತಿ ಸದಸ್ಯರು, ೩–೪ ಜನ ಸ್ಥಳೀಯ ವಿದ್ಯಾವಂತರು, ೧೬ ಕ್ಕೂ ಹೆಚ್ಚು ಸುತ್ತಮುತ್ತಲ ಗ್ರಾಮದ ಮುಖ್ಯರು ಇಲ್ಲಿಯ ಸದಸ್ಯರು. ಪ್ರೇರಕರನ್ನು ಗುರುತಿಸುವುದು, ಸ್ಥಳದ ಆಯ್ಕೆ, ಸ್ಥಳೀಯ ಸಂಪನ್ಮೂಲಗಳ ಕ್ರೋಢೀಕರಣ, ಪ್ರೇರಕನ ಗೌರವಧನಕ್ಕೆ ಶಿಫಾರಸ್ಸು ಮಾಡುವುದು, ಇತರೆ ಅಗತ್ಯ ಮತ್ತು ಮಾರ್ಗದರ್ಶನ ಅದರ ಮೇಲ್ವಿಚಾರಣೆ ಸಮಿತಿಯದು. ಪ್ರೇರಕ ಜನಶಿಕ್ಷಣ ನಿಲಯದ ಕಾರ್ಯದರ್ಶಿ ಪ್ರೇರಕರ ಆಯ್ಕೆಯಲ್ಲಿ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಇವರಿಗೆ ಆದ್ಯತೆಯಿದೆ.

ಅವಿಭಾಜ್ಯ ಅಂಗ :

ಏಳನೇ ಪಂಚವಾರ್ಷಿಕ ಯೋಜನೆಯನ್ವಯ, 'ಜನಶಿಕ್ಷಣ ನಿಲಯಗಳು' ಆರಂಭವಾಗಲಿದ್ದು, ವಯಸ್ಕರ ಶಿಕ್ಷಣ ಯೋಜನೆಯ ಒಂದು ಅವಿಭಾಜ್ಯ ಅಂಗವಾಗಿ ಕಾರ್ಯ ನಿರ್ವಹಿಸಲಿವೆ. ವಯಸ್ಕರ ಶಿಕ್ಷಣ ಯೋಜನೆ ಎಲ್ಲಿ ಕಾರ್ಯಗತವಾಗಿವೆಯೋ ಆ ಕ್ಷೇತ್ರದಲ್ಲಿ ಜನಶಿಕ್ಷಣ ನಿಲಯ ಬರಲಿವೆ. ಜಿಲ್ಲಾ ವಯಸ್ಕರ ಶಿಕ್ಷಣ ಇದರ ಆಡಳಿತಾತ್ಮಕ ಮುಖ್ಯಸ್ಥ. ಈತನಿಗೆ ಅಲ್ಲಿಯ ಯೋಜನಾಧಿಕಾರಿ ಮತ್ತು ಸಹಾಯಕ ಯೋಜನಾಧಿಕಾರಿಗಳು ಸಹಾಯಕರು. 'ಪ್ರೇರಕ' ಜನಶಿಕ್ಷಣ ನಿಲಯದ ಪಾತ್ರಧಾರಿ. ತನ್ನ ವ್ಯಾಪ್ತಿಗೆ ಬರುವ ವಯಸ್ಕರ ಶಿಕ್ಷಣ ಮೇಲ್ವಿಚಾರಣೆಯೊಂದಿಗೆ ಸಮೀಪದ ಹಳ್ಳಿಗಳಿಗೆ ನವ ಸಾಕ್ಷರರು ಓದಬಹುದಾದ ಪುಸ್ತಕಗಳು ಹಾಗೂ ಪತ್ರಿಕೆಗಳನ್ನು ಪೆಟ್ಟಿಗೆ ಹೊತ್ತ ಬೈಸಿಕಲ್ ಮೇಲೆ ಹೋಗಿ ವಿತರಿಸಿ ಚರ್ಚಿಸಿ ವಾಪಸ್ಸು ಪಡೆಯುವ ಜವಾಬ್ದಾರಿ ಪ್ರೇರಕನದು. ಆಕೆ / ಆತನಿಗೆ ತಿಂಗಳಿಗೆ ೨೦೦ ರೂ. ಗೌರವಧನ. ವಾರದಲ್ಲಿ ಮೂರು ದಿನ ಜನಶಿಕ್ಷಣ ನಿಲಯದಲ್ಲಿ ಕಾರ್ಯನಿರ್ವಹಿಸಬೇಕು. ಉಳಿದ ಮೂರು ದಿನ ನವ ಸಾಕ್ಷರರ ಪುಸ್ತಕ ಹಂಚಿಕೆ ಹಾಗೂ ೮–೧೦ ಕೇಂದ್ರಗಳ ಮೇಲ್ವಿಚಾರಣೆ ಇದಕ್ಕಾಗಿ ವಾರ್ಷಿಕ ೪೦೦ರೂ. ಗೌರವಧನ ನೀಡಲಾಗುವುದು. ಪ್ರೇರಕ ಜನಶಿಕ್ಷಣ ನಿಲಯದಲ್ಲಿ ಇಲ್ಲದಿರುವಾಗ ಅಲ್ಲಿಯ ಯಾರಾದರೂ ಸ್ವಯಂಸೇವಕರು ಅದರ ಜವಾಬ್ದಾರಿ ನಿರ್ವಹಿಸಲು ಇಲ್ಲಿ ಅವಕಾಶವಿದೆ.

ಪ್ರೇರಕನ ತರಬೇತಿ :

ವಯಸ್ಕರ ಶಿಕ್ಷಣ ಜೀವನಾದ್ಯಂತ ಶಿಕ್ಷಣಕ್ಕೆ ಅನುವು ಮಾಡಿಕೊಡುವಂತಹದು. ಈ ದಿಸೆಯಲ್ಲಿ 'ಜನಶಿಕ್ಷಣ ನಿಲಯಗಳು' ಸ್ಥಾಪಿತವಾಗುತ್ತಿವೆ. ಇದು ಮುಂದುವರಿದ ಶಿಕ್ಷಣಕ್ಕೆ ಒಂದು ಕೇಂದ್ರಸ್ಥಾನ. ನವಸಾಕ್ಷರರು ಇದರ ಸದುಪಯೋಗ ಪಡೆಯುವಂತೆ ಮಾಡಲು ಪ್ರೇರಕನ ಪಾತ್ರ ಮಹತ್ವಪೂರ್ಣ.

ವಯಸ್ಕರ ಶಿಕ್ಷಣದ ಕೆಲಸ ಯಾವುದೋ ಒಂದಕ್ಕೆ ಸೀಮಿತವಾದುದಲ್ಲ. ಇದು ಇನ್ನೂ ಹೆಚ್ಚಿನದು. ಮುಂದುವರಿಯುವಂತಹದು. ಇದರ ಪೂರ್ಣ ಮೌಲ್ಯ ಉಳಿಯುವುದು ಪರಿಣಾಮಕಾರಿ ತರಬೇತಿಯಿಂದ ಮಾತ್ರ.

ಪುಸ್ತಕ ಭಂಡಾರ ಜ್ಞಾನಭಂಡಾರ. ಇದನ್ನು ಕಾಪಾಡಲು ಮೂಲಭೂತ ಕೌಶಲ್ಯಗಳ ಬಗ್ಗೆ ತಿಳುವಳಿಕೆ, ಜನಶಿಕ್ಷಣ ನಿಲಯದಲ್ಲಿರುವ ಸಾಹಿತ್ಯದಿಂದ ಹೊಸ ಕೌಶಲ್ಯ ವೃದ್ಧಿಪಡಿಸಲು ಮನಒಲಿಸುವ ರೀತಿ ನೀತಿ; ಗುಂಪು ಕೆಲಸ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ವ್ಯವಸ್ಥೆ ಮಾಡಿ ಚರ್ಚಿಸುವ ಅರ್ಹತೆ, ಕತೆ ಹೇಳುವುದು, ನಟನೆ ಮೂಲಕ ಹಾಗೂ ಬರಹದ ಮೂಲಕ ನವಸಾಕ್ಷರರು ತಮ್ಮ ಅನಿಸಿಕೆಗಳನ್ನು ಹೇಳುವಂತೆ ಮಾಡುವುದು, ಸಮುದಾಯ ಹಾಗೂ ನವಸಾಕ್ಷರರಿಗೆ ಸಾರ್ವಜನಿಕವಾದ ಸಮಾಚಾರ ಒಳಗೊಂಡ ಒಂದು ಲಘು ಪ್ರಕಟಣೆ ಹೊರತರುವ ಕೌಶಲ್ಯ–ಈ ವಿಷಯಗಳನ್ನು ಮುಂದುವರಿದ ಶಿಕ್ಷಣ ಕೇಂದ್ರಗಳ ವ್ಯವಸ್ಥೆಯಲ್ಲಿ ನವ ಸಾಕ್ಷರರ ಆಸಕ್ತಿ ಉಳಿಯುವಂತೆ ಮಾಡಲು ಸಾಮೂಹಿಕ ಮಾಧ್ಯಮಗಳನ್ನು ಅಳವಡಿಸಿ

ಕೊಂಡು ತಾಂತ್ರಿಕ ಕೌಶಲ್ಯ ವೃದ್ಧಿಪಡಿಸಲು ವಯಸ್ಕರ ಶಿಕ್ಷಣ ಕಾರ್ಯಕರ್ತರ ತರಬೇತಿಯಲ್ಲಿ ಅಳವಡಿಸಿಕೊಳ್ಳಬೇಕು.

ಕೆಲವು ಸಲಹೆಗಳು :

ವ್ಯಕ್ತಿಯ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯುಂಟು ಮಾಡಲು ಶಿಕ್ಷಣ ಒಂದು ಸಾಧನ. ಇದನ್ನು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ನಿರೂಪಿಸಿದೆ. ಇಲ್ಲಿ ಭಾರತೀಯ ಪುರಾತನ ಸಂಸ್ಕೃತಿ, ಪ್ರಜಾಪ್ರಭುತ್ವ, ಜಾತ್ಯಾತೀತತೆ, ಪುರುಷ ಮಹಿಳೆಯರಲ್ಲಿ ಸರಿ ಸಮಾನತೆ, ಪರಿಸರ ರಕ್ಷಣೆ, ಸಾಮಾಜಿಕ ಆರ್ಥಿಕ ತಾರತಮ್ಯಗಳನ್ನು ತೊಡೆದು ಹಾಕು ವುದು, ಮಿತ ಕುಟುಂಬ ನಿಯಮ ಅಳವಡಿಕೆ, ಮಹಿಳೆಯರ ಸಾಮರ್ಥ್ಯ ಮತ್ತು ವೈಜ್ಞಾನಿಕ ಚಿಂತನೆ ಇವುಗಳನ್ನು ತಪ್ಪದೆ ವಯಸ್ಕರ ಶಿಕ್ಷಣದಲ್ಲಿ ಅಳವಡಿಸಿ ಕೊಳ್ಳಬೇಕು.

ಒಟ್ಟಾರೆ ಹೇಳುವುದಾದರೆ ಅನೌಪಚಾರಿಕ ಶಿಕ್ಷಣವಾದ ವಯಸ್ಕರ ಶಿಕ್ಷಣ, ಔಪಚಾರಿಕ ಶಿಕ್ಷಣವಾದ 'ಶಿಕ್ಷಣ'ದ ಒಂದು ಭಾಗ. ಇದರ ಮೂಲಕ ರಾಷ್ಟ್ರೀಯ ಗುರಿ ಗಳು ಈಡೇರಬೇಕು. ಈ ಮೇಲಿನ ಉದ್ದೇಶಗಳು ಯಾವ ರೀತಿ ಪರಿಣಾಮಕಾರಿ ಯಾಗಿವೆ ಎಂಬುದನ್ನು ಪಠ್ಯವಸ್ತು ಯೋಜನಾಕಾರರು ಮತ್ತು ಸಾಮಗ್ರಿ ತಯಾರಕರು ಮೌಲ್ಯಮಾಪನ ಮಾಡಿ ನೋಡುವುದು ಅಗತ್ಯವಾಗಿರುತ್ತದೆ. ಅಂತೆಯೇ, ರಾಷ್ಟ್ರೀಯ ಅಪೇಕ್ಷಿತ ಕ್ಷೇತ್ರಗಳು ಹಾಗೂ ಮೌಲ್ಯಗಳು ತರಬೇತಿ ವಿಷಯ ಹಾಗೂ ಕಾರ್ಯಗತಿ ಯಲ್ಲಿ ರೂಪಿತವಾಗಬೇಕು.

ಮಹಿಳೆಯರ ಸ್ಥಾನಮಾನ ಮೂಲಭೂತವಾಗಿ ಉತ್ತಮಪಡಿಸಲು ಶಿಕ್ಷಣ ಒಂದು ನಿಯೋಗ. ಈ ಹಿಂದೆ ಮಹಿಳೆಯರಿಗಾಗಿರುವ ಅನ್ಯಾಯ ಸರಿದೂಗಿಸಲು ಇಂದು ಅವರಿಗೆ ಆದ್ಯತೆ ಕೊಡುವುದು ಅನಿವಾರ್ಯ. ವಯಸ್ಕರ ಶಿಕ್ಷಣದ ಕೆಲಸ ಇಷ್ಟು ಮಾತ್ರವಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಇತರೆ ಶೋಷಿತ ವರ್ಗಗಳು ಅಭಿವೃದ್ಧಿ ಕಾರ್ಯಕ್ರಮಗಳ ಸದುಪಯೋಗ ಮಾಡಿಕೊಳ್ಳುವಂತೆ ಮಾಡುವುದೂ ವಯಸ್ಕರ ಶಿಕ್ಷಣದ ಕೆಲಸ. ಆಗ ಮಾತ್ರ ದೇಶದ ಕಾರ್ಯಕ್ರಮಗಳು ಹೆಚ್ಚು ಅರ್ಥ ಪೂರ್ಣ ಹಾಗೂ ಪರಿಣಾಮಕಾರಿ.

ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಬಗ್ಗೆ ಸಲ್ಲದ ಅಪವಾದಗಳು ಹಾಗೂ ನಿಂದನೆಗಳು ತೀರಾ ಆಳದವು. ಆದ್ದರಿಂದ ವಿಶೇಷ ರಕ್ಷಣೆ ಯೊಂದಿಗೆ ಸರಿಯಾದ ವ್ಯಕ್ತಿ ಹಾಗೂ ಸ್ಥಳದ ಆಯ್ಕೆಯೂ ಮುಖ್ಯ. ಪಠ್ಯವಸ್ತು, ಸಾಮಗ್ರಿಗಳು, ತರಬೇತಿ ಹಾಗೂ ಸರಿಯಾದ ಮೇಲ್ವಿಚಾರಣೆ ಈ ಅಂಶಗಳ ಬಗ್ಗೆ ನಿಗವಿರಬೇಕು.

ಜನಶಿಕ್ಷಣ ನಿಲಯಗಳ 'ಪ್ರೇರಕ'ರಿಗೆ ವಿಶೇಷ ತರಬೇತಿ ನೀಡುವಾಗ ಸಂಬಂಧ ಪಟ್ಟ ದಾಖಲೆಗಳನ್ನು ಇಡುವ ಬಗ್ಗೆ, ಕಥೆಯ ಮೂಲಕ ಜನರನ್ನು ಆಕರ್ಷಿಸುವ ರೀತಿ, ಹಾಡುಗಳನ್ನು ರಚಿಸುವುದು, ಗುಂಪು ಚರ್ಚೆ ಏರ್ಪಡಿಸುವುದು, ಸಾಂಸ್ಕೃತಿಕ ಕಾರ್ಯಕ್ರಮಗಳ ಏರ್ಪಾಡು, ನವಸಾಕ್ಷರರ ಆಸಕ್ತಿ ಕೆರಳಿಸುವ ಕ್ಷೇತ್ರ ಪತ್ತೆ ಹಚ್ಚುವ

ಬಗ್ಗೆ ಹಾಗೂ ಹೊಸ ಹೊಸ ವಿಷಯಗಳನ್ನು ಸಂಗ್ರಹಿಸಿ ನವಸಾಕ್ಷರರ ಮುಂದಿಡುವ ರೀತಿ ನೀತಿ ಈ ಅಂಶಗಳಿಗೆ ಆದ್ಯತೆ ನೀಡಬೇಕು.

ಜನಶಿಕ್ಷಣ ನಿಲಯದಲ್ಲಿ ಗುಂಪು ಚರ್ಚೆ ಏರ್ಪಡಿಸಿದಾಗ ಬರಬಹುದಾದ ವೃತ್ತಾಂತಗಳನ್ನು ಊಹಿಸಿ, ಅವುಗಳನ್ನು ಪ್ರಶ್ನಾರ್ಥಕವಾಗಿ ಪ್ರೇರಕನ ತರಬೇತಿಯಲ್ಲಿ ಕೊಟ್ಟು ಚರ್ಚಿಸುವಂತೆ ಮಾಡಿ ಅವುಗಳನ್ನು ಅಭ್ಯಸಿಸುವಂತೆ ಮಾಡುವುದು ಅತ್ಯವಶ್ಯಕ. ಇದರಿಂದ ಪ್ರೇರಕರ ಆತ್ಮಸ್ಥೈರ್ಯ ಹೆಚ್ಚು ಮಾಡಿದಂತಾಗುತ್ತದೆ. ಧ್ವನಿ ಮುದ್ರಿಸಿಕೊಳ್ಳುವ, ದೃಕ್-ಶ್ರವಣ, ಧ್ವನಿ ಸುರುಳಿ, ಕೈಗೊಂಬೆ, ಲಘು ಪ್ರಕಟಣೆಗಳ ಫಲಕ ತಯಾರಿಕೆ, ಫ್ಲಾನಲ್ ಗ್ರಾಫ್‌ಗಳ ಬಳಕೆ ಕುರಿತಂತೆ ತಿಳಿಸಬೇಕು.

ಜನಶಿಕ್ಷಣ ನಿಲಯ ಪ್ರಗತಿ ಪಥದತ್ತ ಸಾಗುವಂತೆ ಮಾಡಲು ಅಗತ್ಯವೆನಿಸಿದ ಎಲ್ಲ ಕೌಶಲ್ಯವನ್ನು ಪ್ರೇರಕನಲ್ಲಿ ತುಂಬುವುದು ಕಷ್ಟದ ಕೆಲಸ. ಪ್ರೇರಕ ವೃತ್ತಿ ನಿರತನಾಗಿದ್ದಾಗ ಪರಿಹಾರ ಪತ್ತೆಹಚ್ಚಿ ಮುನ್ನಡೆಯುವಂತೆ ಮಾಡುವ ಚಾಕಚಕ್ಯತೆ ಆತ ಬೆಳೆಸಿಕೊಳ್ಳಬೇಕು. ಈ ದಿಸೆಯಲ್ಲಿ ಸಾಮೂಹಿಕ ಮಾಧ್ಯಮಗಳಾದ ಬಾನುಲಿ, ದೂರದರ್ಶನ ಹಾಗೂ ದಿನನಿತ್ಯದ ಲಘು ಪ್ರಕಟಣೆಗಳನ್ನು ಮುಂದುವರಿದ ಕಾರ್ಯಕ್ರಮದ ಕಾರ್ಯಕರ್ತರು ಅಳವಡಿಸಿಕೊಂಡು ತನ್ನನ್ನು ತಾನೇ ಒಂದು ಸಾಧನ ಮಾಡಿಕೊಂಡಾಗ ಮಾತ್ರ ನವಸಾಕ್ಷರರನ್ನು ಜೀವನಾದ್ಯಂತ ಶಿಕ್ಷಣಕ್ಕೆ ಅನುವು ಮಾಡಲು ಸಾಧ್ಯ.

ತಾಳ್ಮೆ ಒಂದು ಇದ್ದರೆ ಪರ್ವತವನ್ನೂ ದಾಟಬಹುದು.

ಪ್ರೇಮದ ಬಲಕ್ಕಿಂತ ಉನ್ನತವಾದದ್ದು, ಬಲವಾದದ್ದು ಇನ್ನೊಂದಿಲ್ಲ.

ಗಾಂಧೀಜಿ

ಯುದ್ಧ

ಲೂಯಿಗಿ ಪಿರಾಂಡೆಲೊ

ರಾತ್ರಿ ಎಕ್ಸ್‌ಪ್ರೆಸ್‌ನಲ್ಲಿ ರೋಮ್ ಬಿಟ್ಟ ಪ್ರಯಾಣಿಕರು ಸುಲ್ಮೊನಾದೊಡನೆ ಮುಖ್ಯ ಮಾರ್ಗವನ್ನು ಸೇರುವ ಹಳೆ ನಮೂನೆಯ ಸಣ್ಣ ಲೋಕಲ್‌ನಲ್ಲಿ ತಮ್ಮ ಪ್ರಯಾಣ ಮುಂದು ವರೆಸಲು ಫ್ಯಾಬ್ರಿಯಾನೊದ ಚಿಕ್ಕ ನಿಲ್ದಾಣದಲ್ಲಿ ಬೆಳಗಾಗುವ ತನಕ ನಿಲ್ಲಲೇ ಬೇಕಾಗಿತ್ತು.

ಹೊಗೆ ತುಂಬಿ ಉಸಿರು ಕಟ್ಟಿಸುವ ಎರಡನೆ ದರ್ಜೆ ಬೋಗಿಯಲ್ಲಿ ಇವರು ಆಗಲೇ ಇಡೀ ರಾತ್ರಿಯನ್ನು ಕಳೆದಿದ್ದರು. ಆ ಬೋಗಿಗೆ ಶೋಕಸೂಚಕ ಕಪ್ಪು ಬಟ್ಟೆ ತೊಟ್ಟ ಬಹುತೇಕ ಆಕಾರ ರಹಿತ ಗಂಟೆನಂತಿದ್ದ ದಢೂತಿ ಹೆಂಗಸನ್ನು ನಸುಕಿನಲ್ಲಿ ಹತ್ತಿಸಿದರು. ಏದುಸಿರುಬಿಡುತ್ತಾ ಮುಲುಕುತ್ತಾ ಇದ್ದ ಅವಳನ್ನು ಹೆಣ ಮೋರೆಯ, ನಾಚಿಕೆ ಮತ್ತು ತಳಮಳ ತುಂಬಿದ ಹೊಳೆಯುವ ಕಿರುಗಣ್ಣಿನ ಕುಳ್ಳ ನರಪೇತಲ ಗಂಡ ಹಿಂಬಾಲಿಸಿದ.

ಹೇಗೋ ಅವನು ಸ್ಥಳ ದೊರಕಿಸಿಕೊಂಡು, ತನ್ನ ಹೆಂಡತಿ ಕೂರಲು ಜಾಗ ಕೊಟ್ಟು ಸಹಕರಿಸಿದ ಪ್ರಯಾಣಿಕರಿಗೆ ಸೌಜನ್ಯದಿಂದ ವಂದಿಸಿದ. ನಂತರ ತನ್ನ ಕೋಟಿನ ಕಾಲರನ್ನು ಕೆಳಸರಿಸಲು ಯತ್ನಿಸುತ್ತಿದ್ದ ಹೆಂಡತಿಯ ಕಡೆ ತಿರುಗಿ ನಯವಾಗಿ ವಿಚಾರಿಸಿದ:

"ಆರಾಮಿದೀಯಲ್ಲ ?"

ಅವಳು ಉತ್ತರಿಸುವ ಗೋಜಿಗೇ ಹೋಗದೆ ತನ್ನ ಮುಖ ಮುಚ್ಚು ವಂತೆ ಮತ್ತೆ ಕಾಲರನ್ನು ಕಣ್ಣಿನತನಕ ಎಳೆದುಕೊಂಡಳು.

"ಹೊಲಸು ಪ್ರಪಂಚ", ವಿಷಾದದಿಂದ ನಕ್ಕು ಗಂಡ ಗೊಣಗಿದ.

ಈ ದುರ್ದೈವಿ ಹೆಂಗಸಿಗಾಗಿ ಮರುಗಬೇಕು, ಏಕೆಂದರೆ: ಆಕೆಯ ಒಬ್ಬನೇ ಮಗನನ್ನು ಯುದ್ಧ ಎಳೆದೊಯ್ಯುತ್ತಿರುವುದು, ಇಪ್ಪತ್ತರ ಪ್ರಾಯದ ಹುಡುಗನಿಗಾಗಿ ತಾವಿಬ್ಬರೂ ಇಡೀ ಬದುಕನ್ನೇ ಮುಡುಪಾಗಿಟ್ಟದ್ದು, ಅವನು ವಿದ್ಯಾರ್ಥಿಯಾಗಿ ರೋಮ್‌ಗೆ ಹೋಗಬೇಕಾದಾಗ ಸುಲ್ಮೊನಾದ ತಮ್ಮ ಮನೆಯನ್ನು ತೊರೆದು

ಅವನನ್ನು ಹಿಂಬಾಲಿಸಿದ್ದು, ಅವನು ಯುದ್ಧಕ್ಕೆ ಹೋಗಲು ತಾನಾಗಿಯೇ ಮುಂದಾದಾಗ ಒಪ್ಪಿಗೆಯಿತ್ತದ್ದು, ಏನೇ ಆದರೂ ಕಡೇಪಕ್ಷ ಆರು ತಿಂಗಳವರೆಗೆ ಅವನನ್ನು ಯುದ್ಧ ಭೂಮಿಗೆ ಕಳುಹಿಸುವುದಿಲ್ಲವೆಂಬ ಭರವಸೆ ಪಡೆದದ್ದು, ಈಗ ಇದ್ದಕ್ಕಿದ್ದಂತೆ, ಇನ್ನು ಮೂರು ದಿನಗಳಲ್ಲಿ ಹೊರಡಲಿರುವ ಅವನನ್ನು ಬಂದು ಬೀಳ್ಕೊಡಿ ಎಂದು ತಂತಿ ಬಂದದ್ದು—ಇದನ್ನೆಲ್ಲ ಸಹ-ಪ್ರಯಾಣಿಕರಿಗೆ ವಿವರಿಸುವುದು ತನ್ನ ಕರ್ತವ್ಯ ಎಂದು ಆತನಿಗನ್ನಿಸಿತು.

ಬಹುಶಃ ತನ್ನಂತೆಯೇ ದುರವಸ್ಥೆಯಲ್ಲಿರುವ ಈ ಜನಗಳಲ್ಲಿ ಕನಿಕರದ ಒಂದು ಛಾಯೆಯನ್ನೂ ಮೂಡಿಸಲು ಇಷ್ಟೆಲ್ಲ ವಿವರಣೆಗಳಿಗೂ ಸಾಧ್ಯವಾಗಲಾರದೆಂಬ ದೃಢ ನಂಬಿಕೆಯಿಂದ, ದೊಡ್ಡಕೋಟು ಧರಿಸಿದ್ದ ಆ ಹೆಂಗಸು ನುಲಿಯುತ್ತಾ, ಒದ್ದಾಡುತ್ತಾ, ಆಗಾಗ ಕಾಡು ಪ್ರಾಣಿಯಂತೆ ಗುರುಗುಟ್ಟುತ್ತಿದ್ದಳು.

ವಿಶೇಷ ಗಮನವಿಟ್ಟು ಕೇಳುತ್ತಿದ್ದ ಒಬ್ಬ ಹೇಳಿದ: "ನೀವು ದೇವರಿಗೆ ಅಡ್ಡಬೀಳಬೇಕು. ನಿಮ್ಮ ಮಗ ಯುದ್ಧಭೂಮಿಗೆ ಇದೀಗ ಹೋಗ್ತಿದಾನೆ. ನನ್ನ ಮಗನ್ನ ಮೊಟ್ಟ ಮೊದಲ ದಿನವೇ ಯುದ್ಧಕ್ಕೆ ಕಳಿಸಿಕೊಟ್ಟೆ. ಆಗಲೇ ಎರಡು ಸಾರಿ ಪೆಟ್ಟು ತಿಂದು ವಾಪಸಾಗಿದ್ದ ಅವನನ್ನ ಮತ್ತೆ ಯುದ್ಧಕ್ಕೆ ಕಳ್ಸಿದಾರೆ".

"ನನ್ನ ವಿಷಯ ಹೇಳಲೇ? ನನ್ನ ಇಬ್ರು ಮಕ್ಕಳು, ನಮ್ಮಣ್ಣನ ಮೂರು ಮಕ್ಕಳು ಯುದ್ಧಭೂಮೀಲಿದಾರೆ", ಇನ್ನೊಬ್ಬ ಪ್ರಯಾಣಿಕ ಹೇಳಿದ.

"ಇರಬಹುದು, ಆದರೆ ನಮಗಿರೋನು ಒಬ್ಬನೇ ಮಗ", ಗಂಡ ಸಾಹಸದಿಂದ ನುಡಿದ.

"ಅದ್ಯಾವ ಮಹಾ? ಅತಿ ಮುದ್ದು ಮಾಡಿ ಇರೋ ಒಬ್ಬನೇ ಮಗನನ್ನ ಕೆಡಿಸಬಹುದು. ಆದರೆ ನಿಮಗೆ ಇನ್ನೂ ಬೇರೆ ಮಕ್ಕಳಿದ್ದಿದ್ದರೆ ಅವರನ್ನು ಎಷ್ಟು ಪ್ರೀತಿಸುತ್ತಿದ್ದಿರೋ ಅದಕ್ಕಿಂತ ಹೆಚ್ಚಿಗೆ ಇವನನ್ನ ಪ್ರೀತಿಸಲಿಕ್ಕಾಗೊಲ್ಲ. ಹೆತ್ತವರ ಪ್ರೀತಿ ಅನ್ನೋದು ಚೂರು ಚೂರು ಮಾಡಿ ಮಕ್ಕಳಿಗೆ ಸಮವಾಗಿ ಹಂಚುವ ರೊಟ್ಟಿ ಅಲ್ಲ. ಒಂದಿರಲಿ ಹತ್ತಿರಲಿ, ಅಪ್ಪನಾದೋನು ತನ್ನ 'ಎಲ್ಲಾ' ಪ್ರೀತಿನೂ ಬೇಧಭಾವ ಮಾಡದೆ ಮಕ್ಕಳಿಗೆ ತೋರುಸ್ತಾನೆ. ನನ್ನಿಬ್ಬರು ಮಕ್ಕಳಿಗೂ ನಾನು ವ್ಯಥೆ ಪಡುತ್ತಿದ್ದರೆ, ಒಬ್ಬೊಬ್ಬನಿಗೂ ಅರ್ಧರ್ಧ ಅಲ್ಲ, ಎರಡೆರೆಡರಷ್ಟು...."

"ನಿಜ....ನಿಜ", ಮುಜಗರಗೊಂಡ ಅವಳ ಗಂಡ ನಿಟ್ಟುಸಿರುಗರೆದ, "ಒಂದು ವೇಳೆ (ನಿಮ್ಮ ವಿಷಯದಲ್ಲಿ ಹಾಗಾಗದಿರಲೀಂತ ನಮ್ಮಾಸೆ) ಅಪ್ಪನ ಇಬ್ಬರು ಮಕ್ಕಳು ಯುದ್ಧಭೂಮಿಲಿದಾರೆ ಅಂತ ಇಟ್ಕೊಳ್ಳೋಣ. ಒಬ್ಬ ಹೋದರೂ ಇನ್ನೊಬ್ಬ ಇರ್ತಾನಲ್ಲ, ಸಮಾಧಾನ ಮಾಡೋಕೆ....ಅಂದ ಮೇಲೆ...."

"ಉಹ್ಞು" ಕಿರಿಕಿರಿಯಿಂದ ಇನ್ನೊಬ್ಬ ಹೇಳಿದ, "ಉಳಿದಿರೊ ಮಗನಿಂದ ಇವನಿಗೆ ಸಮಾಧಾನ, ಆ ಉಳಿದಿರೊ ಮಗನಿಗಾಗಿ ಇವನು ಬದುಕಬೇಕು. ಆದರೆ ಒಬ್ಬನೇ ಮಗ ಇರೊ ಅಪ್ಪ, ಮಗ ಸತ್ತರೆ ಅವನೂ ಸತ್ತು ತನ್ನ ಹೊಡಬಾಳು ಮುಗಿಸಬಹುದು. ಈ ಎರಡು ಪರಿಸ್ಥಿತೀಲಿ ಯಾವುದು ಹೆಚ್ಚು ದುಃಖದ್ದು? ನಿಮ್ಮದಕ್ಕಿಂತ ನನ್ನದು ಹೆಚ್ಚು ಗೋಳಿನದು ಅಂತ ಅನಿಸೋದಿಲ್ಲವೆ?"

"ಹುಚ್ಚು", ರಕ್ತವರ್ಣಕ್ಕೆ ತಿರುಗಿದ ಬೂದುಗಣ್ಣು, ಕೆಂಚುಮುಖ, ಬೊಜ್ಜು ಮೈನ ಮತ್ತೊಬ್ಬ ಪ್ರಯಾಣಿಕ ಮಧ್ಯೆ ಬಾಯಿ ಹಾಕಿದ.

ಅವನು ಏದುಸಿರು ಬಿಡುತ್ತಿದ್ದ. ಅವನ ನಿಶಕ್ತ ದೇಹ ಹುದುಗಿಸಿಟ್ಟುಕೊಳ್ಳಲಾರದ ಅದಮ್ಯ ಚೇತನದ ತೊಳಲಾಟ ದೊಡ್ಡಗಣ್ಣುಗಳಿಂದ ಚಿಮ್ಮುವಂತೆ ತೋರುತ್ತಿತ್ತು.

"ಹುಚ್ಚು", ಬಿದ್ದುಹೋಗಿದ್ದ ಮುಂದಿನ ಎರಡು ಹಲ್ಲುಗಳು ಕಾಣದಂತೆ ಕೈಯನ್ನು ಬಾಯಿಂದ ಮುಚ್ಚಲು ಯತ್ನಿಸುತ್ತಾ, ಮತ್ತೆ ಹೇಳಿದ, "ಹುಚ್ಚುಚ್ಚು ನಮ್ಮ ಸ್ವಂತ ಹಿತಕ್ಕಾಗಿ ಮಕ್ಕಳಿಗೆ ಜನ್ಮ ಕೊಡುತ್ತೇವೆಯೇ ?"

ಉಳಿದ ಪ್ರಯಾಣಿಕರು ನೊಂದು ಅವನನ್ನು ದಿಟ್ಟಿಸಿ ನೋಡಿದರು. ಯುದ್ಧ ಪ್ರಾರಂಭವಾದಾಗಿನಿಂದಲೂ ಅಲ್ಲೇ ಮಗನನ್ನು ಬಿಟ್ಟಿರುವ ತಂದೆ ನಿಟ್ಟುಸಿರುಗರೆದ, "ನೀವು ಹೇಳೋದು ಸರಿ. ನಮ್ಮ ಮಕ್ಕಳು ನಮ್ಮವಲ್ಲ, ದೇಶಕ್ಕೆ ಸೇರಿದವು....

"ಬೊಗಳೆ", ಬೊಜ್ಜು ಮೈನ ಪ್ರಯಾಣಿಕ ಛೇಡಿಸಿದ. "ಮಕ್ಕಳಿಗೆ ಜನ್ಮ ಕೊಡುವಾಗ ದೇಶದ ಬಗ್ಗೆ ಯೋಚಿಸ್ತೇವೆಯೆ ? ಮಕ್ಕಳು ಹುಟ್ಟುತ್ತವೆ, ಯಾಕೆಂದರೆ....ಅಲ್ಲ, ಯಾಕೆಂದರೆ ಅವು ಹುಟ್ಟಲೇಬೇಕು. ಹುಟ್ಟಿದ ಮೇಲೆ ನಮ್ಮ ಬದುಕನ್ನೆ ತಮ್ಮ ಜೊತೆ ಸೆಳಕೊಳ್ತವೆ. ಇದೇ ಸತ್ಯ. ಅವರಿಗೆ ನಾವು ಅಂಟಿಕೊಂಡಿರ್ತೇವೆ; ಆದರೆ ನಮಗೆ ಅವರೆಂದಿಗೂ ಅಂಟಿಕೊಳ್ಳೋದಿಲ್ಲ. ಅವರಿಗೆ ಇಪ್ಪತ್ತಾದಾಗ ನಾವು ಆ ವಯಸ್ಸಿನಲ್ಲಿ ಹೇಗಿದ್ದೆವೋ ಅವರೂ ಹಾಗೇ ಇರ್ತಾರೆ. ನಮಗೂ ಅಪ್ಪ ಅಮ್ಮ ಇದ್ದರು. ಜೊತೆಗೆ ಇನ್ನೂ ಏನೇನೋ ಇದ್ದೋ....ಹುಡುಗೀರು, ಸಿಗರೇಟು, ಭ್ರಮೆ, ಹೊಸಹೊಸ ಸಂಬಂಧ....ಆ ಮೇಲೆ ನಮಗೆ ಇಪ್ಪತ್ತಾದಾಗ ಅಪ್ಪ–ಅಮ್ಮ ಬೇಡ ಅಂದ್ರೂ ಯಾವ ಕರೆಗಾಗಿ ಓಗೊಡುತ್ತಿದ್ದೋ, ಆ ದೇಶ. ಈಗ ನಮ್ಮ ವಯಸ್ಸಿನಲ್ಲಿ ದೇಶಪ್ರೇಮ ಇನ್ನೂ ಅಗಾಧವಾಗಿದೆ, ನಿಜ. ಆದರೆ ಅದಕ್ಕಿಂತಲೂ ತೀವ್ರವಾಗಿರೋದು ಮಕ್ಕಳ ಮೇಲಿನ ಪ್ರೇಮ. ತನ್ನ ಮಗನಿಗೆ ಬದಲಾಗಿ ಯುದ್ಧಕ್ಕೆ ತಾನೇ ಹೋಗಲು ಸಾಧ್ಯವಾದರೆ ಸಂತೋಷದಿಂದ ಹೋಗದೇ ಇರೋರು ಇಲ್ಲಿ, ನಮ್ಮಲ್ಲಿ, ಯಾರಾದರೂ ಇದಾರೋ ?"

ಸಮ್ಮತಿಸುವಂತೆ ಎಲ್ಲರೂ ತಲೆಯಾಡಿಸುತ್ತಿದ್ದಾಗ ಸುತ್ತ ಮೌನ ಆವರಿಸಿತು.

ಬೊಜ್ಜು ಮೈನವ ಮುಂದುವರೆಸಿದ: "ಅಂದಮೇಲೆ, ಮಕ್ಕಳಿಗೆ ಇಪ್ಪತ್ತಾದಾಗ ಅವರ ಆಸೆಆಕಾಂಕ್ಷೆಗಳು ಏನೂಂತ ನಾವು ತಿಳಿಬೇಕಲ್ಲವೆ? ಅವರ ವಯಸ್ಸಿನಲ್ಲಿ ದೇಶಪ್ರೇಮ (ಯೋಗ್ಯ ಹುಡುಗರ ಬಗ್ಗೆ ಹೇಳುತ್ತಿದ್ದೀನಷ್ಟೆ) ನಮ್ಮ ಮೇಲಿನ ಪ್ರೇಮಕ್ಕಿಂತ ಹೆಚ್ಚೂಂತ ಅವರಂದುಕೊಳ್ಳೋದು ಸಹಜ ಅಲ್ಲವೆ? ಎಷ್ಟಾದರೂ ಇನ್ನು ಓಡಾಡಲಿಕ್ಕಾಗದೆ ಮನೇಲೆ ಇರಬೇಕಾದ ಮುದಿಯರು ನಾವೂಂತ ಅವರು ತಿಳಕೊಳ್ಳಬೇಕಾದ್ದರಿಂದ, ಅದು ಹಾಗಿರ ಬೇಕಾದ್ದೇ ಸಹಜ ಅಲ್ಲವೆ? ದೇಶ ಉಳೀಬೇಕಾದರೆ, ಹಸಿವಿನಿಂದ ಸಾಯದೆ ನಾವು ಉಳಿಬೇಕಾದರೆ ತಿನ್ನೋ ಅನ್ನದಂತೆ ದೇಶ ಒಂದು ಸ್ವಾಭಾವಿಕ ಅವಶ್ಯಕತೆಯಾದರೆ, ಅದರ ರಕ್ಷಣೆಗೆ ಯಾರಾದರೂ ಹೋಗಲೇಬೇಕು. ಇಪ್ಪತ್ತಾದಾಗ ನಮ್ಮ ಮಕ್ಕಳು ಹೋಗ್ತಾರೆ, ನಾವು ಅಳೋದು ಅವರಿಗೆ ಇಷ್ಟ ಇಲ್ಲ, ಯಾಕೆಂದರೆ ಅವರು ಸತ್ತರೆ ಜ್ವಲಂತ ಸ್ಫೂರ್ತಿ ಸಂತೋಷದಿಂದ ಸಾಯುತ್ತಾರೆ (ನಾನು ಹೇಳ್ತಿರೋದು ಯೋಗ್ಯ ಹುಡುಗರ ಬಗ್ಗೆಯಷ್ಟೆ). ಈಗ ಬದುಕಿನ ವಿಕಾರಗಳನ್ನು

ನೋಡದೆ, ಬಾಳಿನ ಬೇಸರ, ಸಣ್ಣತನ, ಹತಾಶೆಯ ಕಹಿ ಇಲ್ಲದೆ, ಹರೆಯದಲ್ಲಿ ಸಂತೋಷದಿಂದ ಸತ್ತರೆ, ಅವನಿಗಾಗಿ ಕೇಳೋದು ಇನ್ನೇನಿದೆ? ಎಲ್ಲರೂ ಅಳೋದು ನಿಲ್ಲಿಸಬೇಕು, ಎಲ್ಲರೂ ನಗಬೇಕು, ನನ್ನ ಹಾಗೆ....ಅಲ್ಲದಿದ್ದರೆ ಕೊನೆಪಕ್ಷ ದೇವರಿಗೆ ಕೈಮುಗಿಬೇಕು, ನನ್ನ ಹಾಗೆ—ಯಾಕಂದರೆ, ನನ್ನ ಮಗ, ಸಾಯಲಿಕ್ಕೆ ಮುಂಚೆ, ತಾನು 'ಆಶಿಸಬಹುದಾದ ಶ್ರೇಷ್ಠ ರೀತೀಲಿ ಬದುಕನ್ನ ಕೊನೆಗಾಣಿಸುತ್ತ ಸಂತೃಪ್ತಿಯಿಂದ ಸಾಯುತ್ತಿದ್ದೇನೆ' ಎಂದು ಸಂದೇಶ ಕಳಿಸಿದ್ದ. ಅದಕ್ಕೇ ನೀವೇ ನೋಡೋ ಹಾಗೆ ನಾನು ಶೋಕವಸ್ತ್ರನೂ ತೊಡೋದಿಲ್ಲ...."

ಅದನ್ನ ತೋರಿಸುವಂತೆ ತನ್ನ ಹಗುರ ತಿಳಿ ಬಂಗಾರ ಬಣ್ಣದ ಕೋಟನ್ನು ಒದರಿದ. ಅವನ ಬಿದ್ದುಹೋಗಿದ್ದ ಹಲ್ಲಮೇಲಿನ ಬಿಳಿಚಿದ್ದ ತುಟಿ ಅದುರುತ್ತಿತ್ತು, ಕಣ್ಣು ನೀರು ತುಂಬಿ ನಿಶ್ಚಲವಾಗಿತ್ತು. ತಕ್ಷಣವೇ ಗದ್ಗದಿತ ಕೀರಲು ನಗೆಯಲ್ಲಿ ಮಾತು ಮುಗಿಸಿದ.

"ಅದ್ಸರಿ....ಅದ್ಸರಿ", ಉಳಿದವರು ಒಪ್ಪಿದರು.

ಕೋಟು ತೊಟ್ಟು ಮೂಟೆಯಂತೆ ಮುದುಡಿ ಮೂಲೆಯಲ್ಲಿ ಕುಳಿತು ಕೇಳುತ್ತಿದ್ದ ಆ ಹೆಂಗಸು, ಕಳೆದ ಮೂರು ತಿಂಗಳಿಂದ, ಅತೀವ ದುಃಖದಲ್ಲಿರುವ ತನಗೆ ತಕ್ಕಮಟ್ಟಿಗೆ ಸಮಾಧಾನ ನೀಡುವಂತಹದನ್ನು, ತಾಯಿಯಾದವಳು ಮಗನನ್ನು ಸಾವಿಗಷ್ಟೇ ಅಲ್ಲ, ಅಪಾಯದ ಬದುಕಿಗೂ ಕಳುಹಿಸಲು ಹೇಗೆ ಮನಸ್ಸು ಗಟ್ಟಿ ಮಾಡಿಕೊಳ್ಳಬೇಕೆಂಬು ದನ್ನು ತನ್ನ ಯಜಮಾನ ಮತ್ತು ಸ್ನೇಹಿತರ ಮಾತಿನಲ್ಲಿ ಕಂಡುಕೊಳ್ಳಲು ಯತ್ನಿಸಿದ್ದಳು. ಆದರೂ ಹೇಳಿದ್ದರಲ್ಲಿ ಏನನ್ನೂ ಕಾಣದೆ....ತನ್ನ ಭಾವನೆಗಳನ್ನು ಯಾರೂ ಹಂಚಿಕೊಳ್ಳ ಲಾರರಲ್ಲ ಎನ್ನಿಸಿ ಅವಳ ಕೊರಗು ಹೆಚ್ಚಾಗಿತ್ತು.

ಆದರೀಗ ಈ ಪ್ರಯಾಣಿಕನ ಮಾತು ಆಕೆಯನ್ನು ಬೆರಗುಗೊಳಿಸಿದ್ದಲ್ಲದೆ, ಬಹು ಮಟ್ಟಿಗೆ ದಿಗ್‌ಭ್ರಮೆ ಹಿಡಿಸಿತು. ತಪ್ಪು ತನ್ನನ್ನು ಅರ್ಥಮಾಡಿಕೊಳ್ಳದ ಅವರದಲ್ಲ ಆದರೆ ತಮ್ಮ ಮಕ್ಕಳ ಅಗಲುವಿಕೆಯನ್ನಷ್ಟೇ ಅಲ್ಲ, ಅವರ ಅವಸಾನವನ್ನೂ ದುಃಖಿಸ ತಾವಾಗಿಯೇ ಸಮಾಧಾನದಿಂದ ಸಹಿಸಿಕೊಳ್ಳುವ ತಂದೆತಾಯಿಗಳ ಮಟ್ಟಕ್ಕೆ ಏರ ತನ್ನದೇ ಎಂದು ಥಟ್ಟನೆ ಅರಿವಾಯಿತು.

ತನ್ನ ಮಗ ದೊರೆಗಾಗಿ, ದೇಶಕ್ಕಾಗಿ ವೀರನಂತೆ ಸಂತೋಷದಿಂದ, ವಿಷಾದಪಡ ಪ್ರಾಣತೆತ್ತ ಬಗ್ಗೆ ಬೊಜ್ಜು ಮೈನವ ಸಹಪ್ರಯಾಣಿಕರಿಗೆ ವಿವರಿಸುತ್ತಿದ್ದುದನ್ನು ಶಿರ ಮನಸ್ಸಿಟ್ಟು ಕೇಳುವ ಆಸೆಯಿಂದ ಕತ್ತೆತ್ತಿ ಮೂಲೆಯಿಂದ ಬಾಗಿದಳು. ತಾನು ಕನ ನಲ್ಲಿಯೂ ಕಂಡಿರದ, ಇದುವರೆಗೆ ಗೊತ್ತಿರದ ಲೋಕದಲ್ಲಿ ಮುಗ್ಗರಿಸಿದಂತಾಗಿ, ತನ ಮಗನ ಮರಣದ ಬಗ್ಗೆ ಅಷ್ಟು ವಿರಕ್ತಿಯಿಂದ ಮಾತಾಡುವ ಆ ಧೀರ ತಂದೆಯನ ಎಲ್ಲರೂ ಅಭಿನಂದಿಸುವುದನ್ನು ನೋಡಿ, ಆಕೆಗೆ ಬಹಳ ಆನಂದವಾಯಿತು.

ಆಗ ಇದ್ದಕ್ಕಿದ್ದಂತೆ, ಅದುವರೆಗೂ ಮಾತಾಡಿದ್ದನ್ನೆಲ್ಲ ಕೇಳಿಸಿಕೊಂಡೇ ಇರಲಿ ವೆಂಬಂತೆ, ಬಹುತೇಕ ಕನಸಿನಿಂದೆಚ್ಚೆತ್ತಂತೆ, ಆ ಮುದುಕನತ್ತ ತಿರುಗಿ, ಕೇಳಿದಳು:

"ಹಂಗಾದ್ರೆ....ನಿಮ್ಮ ಮಗ ನಿಜವಾಗ್ಲೂ ಸತ್ತೇ ಹೋಗಿಬಿಟ್ನಾ?"

ಎಲ್ಲರೂ ಅವಳನ್ನು ದುರುಗುಟ್ಟಿ ನೋಡಿದರು. ಮುದುಕನೂ ಅವಳ ಕಡೆ ತಿರು ಹನಿದುಂಬಿ ಥುಮುಕುವಂತಿದ್ದ ತನ್ನ ಬೂದು ಮೆಡ್ಡಗಣ್ಣನ್ನು ಅವಳ ಮುಖದ

ಆಳವಾಗಿ ನಾಟಿದ. ಉತ್ತರಿಸಲು ಸ್ವಲ್ಪ ಸಮಯ ಪ್ರಯತ್ನಿಸಿದ ಅವನಿಗೆ ಮಾತೇ ಹೊರಡಲಿಲ್ಲ. ಈ ಪೆದ್ದ, ಅಸಂಬದ್ಧ ಪ್ರಶ್ನೆಯಿಂದ ತನ್ನ ಮಗ ನಿಜವಾಗಿ ಸತ್ತಿದ್ದಾನೆ, ಹೋದ—ಹೋಗೇಬಿಟ್ಟ ಎನ್ನುವುದನ್ನು ಕಟ್ಟಕಡೆಗೆ ಆಕಸ್ಮಿಕವಾಗಿ ಅರಿತವನಂತೆ ಅವಳನ್ನು ನೋಡಿಯೇ ನೋಡಿದ. ಅವನ ಮುಖ ಕುಗ್ಗಿ ಭಯಂಕರವಾಗಿ ವಿರೂಪ ಗೊಂಡಿತು. ನಂತರ ಅವನು ಸರಕ್ಕನೆ ಜೇಬಿನಿಂದ ಕರವಸ್ತ್ರ ಎಳೆದು, ಎಲ್ಲರೂ ಆಶ್ಚರ್ಯ ಚಕಿತರಾಗುವಂತೆ, ನೋವು ತಡೆಯಲಾರದೆ ಹೃದಯವಿದ್ರಾವಕವಾಗಿ ಗಳಗಳನೆ ಅತ್ತುಬಿಟ್ಟ.

ಅನುವಾದ: ಕೆ. ಆರ್. ನಾರಾಯಣ

ಭಾರತದಲ್ಲಿ ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ಬರಬೇಕು. ಈ ಗುರಿಯನ್ನು ಸಾಧಿಸಲು ಮಕ್ಕಳು ಮನಸ್ಸು, ಶರೀರ ಮತ್ತು ಆತ್ಮಶಕ್ತಿಗಳನ್ನು ಬೆಳಸಿಕೊಳ್ಳಲು ಸಾಧ್ಯವಾಗುವ, ಉಪಯುಕ್ತ ಉದ್ಯೋಗವನ್ನು ಅವರಿಗೆ ಕಲಿಸಬೇಕು.

ಪರಭಾಷೆಯ ಶಿಕ್ಷಣ ಮಾಧ್ಯಮ ನಮ್ಮ ಮಕ್ಕಳನ್ನು ಅವರದೇ ಆದ ಭೂಮಿಯಲ್ಲಿ ಪರದೇಶಿಗಳನ್ನಾಗಿ ಮಾಡಿದೆ.

ಕಷ್ಟದ ಜೀವನವೇ ಶಿಸ್ತನ್ನೂ ಕಲಿಸುವ ಶಾಲೆ.

ಗಾಂಧೀಜಿ

ಏಷ್ಯದ ಈ ಮರ ಅಮರ

ಪೀಟರ್ ಸ್ಕೈವನ್

ದಕ್ಷಿಣ ಏಷ್ಯದಲ್ಲಿ ಕಾಣಬರುವ ಮರಗಳಲ್ಲೆಲ್ಲ ಅತಿ ಅಪೂರ್ವವಾದುದೇ ಆಲದ ಮರ. ಇದಕ್ಕೆ ಅದರ ಭಾರಿ ಬೆಳವಣಿಗೆಯೊಂದೇ ಕಾರಣವಾಗಿರದೆ, ಅದರ ಕೊಂಬೆಗಳು ಸುವಿಸ್ತಾರವಾದ ಪ್ರದೇಶವನ್ನು ವ್ಯಾಪಿಸಿ ಅಸಂಖ್ಯಾತ ಜೀವರಾಶಿಗಳಿಗೆ ಸುಡುವ ಸೂರ್ಯನಿಂದ ರಕ್ಷಣೆ ನೀಡುತ್ತದೆ ಎಂಬುದೂ ಕಾರಣವಾಗಿದೆ. ಆಲದ ಮರಕ್ಕೆ ಮಾನವ ಜನಾಂಗದೊಂದಿಗೆ ಬಹು ವರ್ಷಗಳಿಂದ ನಿಕಟವಾದ ಸಂಬಂಧವಿದೆ. ಆಲದ ಮರಗಳ ಕೆಳಗಿನ ನೆರಳು ಪ್ರದೇಶ ಅನೇಕ ಶತಮಾನಗಳಿಂದ, ಜನರು ಒಂದೆಡೆ ಸೇರುವ ಪ್ರಿಯವಾದ ಜಾಗವಾಗಿದೆ; ದೈವಾರಾಧನೆಯ ಕೇಂದ್ರ ಸ್ಥಳವಾಗಿದೆ; ಪ್ರವಾಸಿಗಳ ವಿಶ್ರಾಂತಿ ಧಾಮವಾಗಿದೆ; ವ್ಯಾಪಾರಿಗಳಿಗೆ ತಮ್ಮ ಸರಕುಗಳ ವಿನಿಮಯ ಕೇಂದ್ರವಾಗಿದೆ.

ಸಂಸ್ಕೃತದಲ್ಲಿ ವಟವೃಕ್ಷವೆಂದು ಕರೆಯಲಾಗುವ ಆಲದಮರ ಮೂಲತಃ 'ಮೊರೇಸಿ' ಕುಟುಂಬಕ್ಕೆ ಸೇರಿದೆ. ಇದರಲ್ಲಿ ಎರಡು ಪ್ರಮುಖ ಪ್ರಭೇದಗಳಿವೆ. ಮೊದಲನೆಯದೇ 'ಫೈಕಸ್ ಬೆಂಗಾಲೆನ್ಸಿಸ್'. ಜಗತ್ತಿನಲ್ಲಿ ಬೆಳೆಯುವ ಎಲ್ಲ ಮರಗಳಲ್ಲಿಯೇ ಅತ್ಯಂತ ದೊಡ್ಡದೆನಿಸಿದ ಈ ಜಾತಿಯ ಆಲದ ಮರಗಳು ಭಾರತದಲ್ಲಿ ಹೆಚ್ಚಾಗಿ ಬೆಳೆಯುತ್ತವೆ. ಎರಡನೆಯ ಪ್ರಭೇದವೇ 'ಫೈಕಸ್ ರೆಥ್‌ಸಾ'. ಹೆಚ್ಚು ದೊಡ್ಡದಾಗಿ ಬೆಳೆಯದ ಈ ಜಾತಿಯ ಆಲದ ಮರಗಳು ಹೆಚ್ಚು ಕಂಡುಬರುವುದು ಚೀನದಲ್ಲಿ.

ತನ್ನ ಬೆಳವಣಿಗೆಯ ಅಸಾಮಾನ್ಯ ರೀತಿಯಿಂದಾಗಿ 'ವಿಲಕ್ಷಣ ಅಂಜೂರ'ವೆಂಬ ಹೆಸರನ್ನೂ ಹೊಂದಿದೆ ಆಲದಮರ. ಇದು ಮೂಲತಃ ಪರೋಪಜೀವಿ ಸಸ್ಯ. ಅಪ್ಪು ಸಸ್ಯವಾಗಿ ಹುಟ್ಟಿ, ಮೂಲ ಅಥವಾ ಆತಿಥೇಯ ಸಸ್ಯದಮೇಲೆ ಅಗಾಧವಾಗಿ ಬೆಳೆದು

೧೯೮೭ನೆಯ ನವೆಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾದ 'ದಿ ಇಮ್ಮೋರ್ಟಲ್ ಟ್ರೀ ಆಫ್ ಏಷ್ಯ' ಎಂಬ ಲೇಖನದ ಅನುವಾದ.

ಕ್ರಮೇಣ ಅದನ್ನು ನಾಶಮಾಡಿ ಸ್ವತಂತ್ರ ಜೀವನ ಸಾಗಿಸತೊಡಗುವ ಆಲದಮರದ ಬದುಕು ಕುತೂಹಲಕರವಾಗಿದೆ. ಆತಿಥೇಯ ಸಸ್ಯದ ಕಾಂಡದ ಗುಳಿಯಲ್ಲಿ ಸೇರಿಕೊಂಡ ಬೀಜ, ಅಲ್ಲಿಯ ಆದ್ರತೆಯನ್ನೂ, ಆತಿಥೇಯ ಸಸ್ಯದಿಂದ ಪೋಷಕಾಂಶಗಳನ್ನೂ ಹೀರಿ ಮೊಳಕೆಯೊಡೆಯುತ್ತದೆ. ಆಲದ ಬೀಜಗಳನ್ನು ಆತಿಥೇಯ ವೃಕ್ಷದ ಕಾಂಡ ರುಧ್ರಗಳಲ್ಲಿ ಸೇರಿಸುವ ಕೆಲಸವನ್ನು ಪಕ್ಷಿಗಳೂ ಬಾವಲಿಗಳೂ ಕಪಿಗಳೂ ಮಾಡುತ್ತವೆ.

ಕಾಂಡ ರಂಧ್ರದಲ್ಲಿ ಸೇರಿದ ಫಲವತ್ತಾದ ಮಣ್ಣಿನಲ್ಲಿಯೇ ಮೊಳೆತ ಆಲದ ಸಸಿ ಬೆಳೆಯುತ್ತಿದ್ದಂತೆ ತನ್ನ ಬೇರುಗಳನ್ನು (ಬಿಳಲುಗಳನ್ನು) ಕೆಳಗೆ ಕಳುಹಿಸತೊಡಗುತ್ತದೆ. ಕ್ರಮೇಣ ಈ ಬೇರುಗಳು ನೆಲವನ್ನು ಮುಟ್ಟುತ್ತವೆ. ಈ ಬೇರುಗಳು ಭೂಮಿಯೊಳಗೆ ಆಳವಾಗಿ ಹೋಗುತ್ತವೆ. ಕೆಲವು ಬೇರುಗಳು ಕಾಂಡಗಳಂತೆ ವಿಶಾಲವಾಗಿ ಹರಡಿಕೊಂಡು ಭೂಮಿಯ ಮೇಲ್ಭಾಗದಲ್ಲಿಯೂ ಕಾಣುತ್ತವೆ. ಕೆಲವು ಸಲ ಕಾರಣಾಂತರದಿಂದ ತಾಯಿಕಾಂಡ ಸತ್ತುಹೋದರೆ, ಆಗ ಈ ಬೇರುಗಳೇ ತಾಯಿಕಾಂಡದ ಕೆಲಸ ನಿರ್ವಹಿಸುತ್ತವೆ.

ಆಲದಮರ ನಿತ್ಯಹರಿದ್ವರ್ಣದ ದೊಡ್ಡ ಮರ. ಇದು ನೂರಾರು ವರ್ಷಗಳಕಾಲ ಜೀವಿಸಬಲ್ಲದು. ಎಳೆಯ ವಯಸ್ಸಿನಲ್ಲಿ ಶೀಘ್ರ ಬೆಳವಣಿಗೆ ತೋರಿಸುವ ಆಲದ ಮರದ ಕಾಂಡ ದಪ್ಪವಾಗಿರುತ್ತದೆ. ದೀರ್ಘಕಾಲದ ಬರಗಾಲವನ್ನು ಎದುರಿಸುವ ಶಕ್ತಿಯೂ ಇದಕ್ಕುಂಟು.

ಒಳ್ಳೆಯ ನೆರಳು ವೃಕ್ಷವಾಗಿಯಷ್ಟೇ ಅಲ್ಲದೆ, ಆಲದ ಮರಗಳಿಂದ ಇತರ ಅನೇಕ ಉಪಯೋಗಗಳೂ ಇವೆ. ಈ ಮರದ ಹಾಲನ್ನು ಅನೇಕ ಔಷಧಗಳ ತಯಾರಿಯಲ್ಲಿ ಬಳಸುತ್ತಾರೆ. ಇದರ ಎಲೆಗಳು ಕುರಿಮೇಕೆ ಮೊದಲಾದ ಜಾನುವಾರುಗಳಿಗೆ ಒಳ್ಳೆಯ ಆಹಾರ; ಆನೆಗಳಿಗಂತೂ ಆಲದ ಮರದ ಕೊಂಬೆರೆಂಬೆಗಳು ಶ್ರೇಷ್ಠ ಉಣಿಸು. ಆಲದ ಮರದ ದಿಮ್ಮಿಗಳನ್ನು ಚಿಕ್ಕದೋಣಿಗಳ ನಿರ್ಮಾಣದಲ್ಲಿ ಬಳಸುತ್ತಾರೆ. ಆದರೆ ಕಿಟಕಿ ಬಾಗಿಲುಗಳಿಗೆ, ಪೀಠೋಪಕರಣಗಳಿಗೆ ಇದು ಯುಕ್ತವೆನಿಸಿದ ಮರವಲ್ಲ.

ಆಲದ ಬೀಜಗಳಿಂದಲೇ ವಿಕಾಸ ಹೊಂದಿದಂತೆ ಕಾಣಬರುವ, ಭಾರತೀಯ ಸಮುದಾಯದ ಇತಿಹಾಸವನ್ನು ನಾವೀಗ ಕಾಲ್ಪನಿಕವಾಗಿ ಚಿತ್ರಿಸೋಣ. ಮೊತ್ತಮೊದಲ ಆಲದಮರದಲ್ಲಿ ಕೆಲವು ಪುಷ್ಪಮಂಜರಿ ಪಾತ್ರೆಗಳು ('ಸೈಕೋನಿಯಮ್') ಉಗಮಿಸಿದುವು. ಅನೇಕ ಹೂಗಳ ಸಮುದಾಯವನ್ನು ಆವರಿಸಿ ಬೀಜಗಳನ್ನು ಅಂಡಾಶಯದ ರೀತಿಯಲ್ಲಿ ಮುಚ್ಚಿರುವ ಈ ಪಾತ್ರೆಗಳ ಉದ್ದ ಸುಮಾರು ೧೩ ಮಿ. ಮೀ. ಅದರೊಳಗೆ ಇರುವ ಹೂವುಗಳಲ್ಲಿ ಲಿಂಗವ್ಯವಸ್ಥೆಯಿತ್ತು. ಜೊತೆಗೆ ಅವುಗಳಲ್ಲಿ ಪರಾಗಾಧಾನ ಮಾಡುವಂತಹ ಕೆಲವು ಚಿಕ್ಕ ಕೀಟಗಳೂ ಅಲ್ಲಿದ್ದುವು.

ಪುಷ್ಪಮಂಜರಿಯ ಪಾತ್ರೆಗಳೇ ಕ್ರಮೇಣ ಹಣ್ಣಾದುವು; ಫೆಬ್ರವರಿ–ಮಾರ್ಚ್ ತಿಂಗಳ ನಡುವಣ ಕಾಲದಲ್ಲಿ ಪಕ್ವವಾಗಿ ಉಜ್ವಲ ಕೆಂಪು ಬಣ್ಣವನ್ನು ತಾಳಿದುವು. ಆಗ ಇವುಗಳನ್ನು ಹಕ್ಕಿಗಳು ತಿಂದುವು. ಹೊಟ್ಟೆ ತುಂಬಿಸಿಕೊಂಡು, ಖುಷಿಯಾಗಿ ಹಾರಾಡತೊಡಗಿದ ಒಂದು ಹಕ್ಕಿ, ಹಾರಾಟ ಮುಗಿದಮೇಲೆ ವಿಶ್ರಾಂತಿಗಾಗಿ ಮತ್ತೊಂದುಮರದಮೇಲೆ ಕುಳಿತುಕೊಂಡಿತು. ಆ ಆತಿಥೇಯ ವೃಕ್ಷದ ಕೊಂಬೆಗಳು ಕವಲೊಡೆದ ಕಾಂಡ ಭಾಗದಲ್ಲಿ ಚಿಕ್ಕ ರಂಧ್ರವೊಂದಿತ್ತು. ಇಲ್ಲಿ ಹಕ್ಕಿ ಮಲವನ್ನು ವಿಸರ್ಜಿಸಿತು.

ಉಷ್ಣವಲಯದ ವಾಯುಗುಣ. ಆದ್ದರಿಂದ ಸಹಜವಾಗಿಯೇ ಆ ಕಾಂಡ ರಂಧ್ರದಲ್ಲಿ ಸೇರಿದ ಆಲದ ಬೀಜ ತುಂಬ ಬೇಗ ಮೊಳಕೆಯೊಡೆಯಿತು. ಉದ್ದನೆಯ ನಾರಿನಂತಹ ಬೇರುಗಳನ್ನು ಆತಿಥೇಯ ವೃಕ್ಷದ ಶಾಖೆಯಿಂದ ನೆಲದತ್ತ ಕಳುಹಿಸ ತೊಡಗಿತು. ಆ ಬೇರುಗಳು ಕ್ರಮೇಣ ನೆಲವನ್ನು ತಲುಪಿ ಮಣ್ಣಿನಲ್ಲಿ ಸ್ಥಾಪಿತವಾದುವು. ಇವು ಬಲವಾಗುತ್ತ ದಪ್ಪವಾಗುತ್ತ ಹೋದಂತೆ, ಇತರ ಬೇರುಗಳೂ ಇವುಗಳನ್ನು ಅನುಸರಿಸಿ, ಮೇಲಿನಿಂದ ಕೆಳಕ್ಕೆ ಇಳಿಯತೊಡಗಿದುವು. ಕೆಲಸಮಯದಲ್ಲಿ ಈ ಬೇರುಗಳಿಂದ ಆತಿಥೇಯ ವೃಕ್ಷದ ಸುತ್ತ ಬಲೆಗಳಂಥ ರಚನೆಯುಂಟಾಯಿತು. ಕ್ರಮೇಣ ಅದು ಸಾವನ್ನಪ್ಪಿತು.

ವರ್ಷಗಳು ಉರುಳಿದುವು. ಸುಮಾರು ೬ ಮೀಟರಿಗಿಂತಲೂ ಹೆಚ್ಚು ಎತ್ತರ ಬೆಳೆದ ಆ ಆಲದ ಮರದ ಶಾಖೆಗಳು ಆಗಲೇ ಸುಮಾರು ೫ ಚದರ ಮೀಟರ್ ಪ್ರದೇಶವನ್ನು ವ್ಯಾಪಿಸಿದ್ದುವು. ಎಲೆಗಳಿಂದ ರಚಿತವಾದ ಆ ಮೇಲ್ಚಪ್ಪರ ಭೂಮಿಯ ಆರ್ದ್ರತೆ, ಸೂರ್ಯನಿಂದ ಬಾಷ್ಪೀಕರಣವಾಗದಂತೆ ತಡೆಯುತ್ತಿತ್ತು. ಆಗಾಗ ಬೀಸಿಬರುವ ಮಂದಮಾರುತದಿಂದಾಗಿಯೂ ಅಲ್ಲಿ ಹಿತಕರ ವಾತಾವರಣ ಏರ್ಪಟ್ಟಿತು.

ಕ್ರಮೇಣ ಆ ಮರವನ್ನು ಹಾದುಹೋಗುವ ಒಂದು ಕಾಲುದಾರಿ ಅಲ್ಲಿ ನಿರ್ಮಾಣವಾಯಿತು. ಹೀಗೆ ಮರದ ನೆರಳು ಪ್ರದೇಶ, ಉತ್ತರದ ಮತ್ತು ದಕ್ಷಿಣದ ನಗರಗಳ ನಡುವೆ ಸಂಪರ್ಕ ಉಂಟುಮಾಡುವ ಒಂದು ಕೇಂದ್ರವಾಯಿತು. ಒಂದು ದಿವಸ ಋಷಿಯೊಬ್ಬ ತನ್ನ ಸಹಚರರೊಂದಿಗೆ ಆ ದಾರಿಯಾಗಿ ಬಂದ. ಸ್ವಲ್ಪಕಾಲ ವಿಶ್ರಮಿಸಿಕೊಳ್ಳಲೆಂದು ಅವರು ಅಲ್ಲಿ ತಂಗಿದರು. ತಂಪಾದ ಹವೆ ಹಾಗೂ ಹಸಿರು ಎಲೆಗಳ ಚಪ್ಪರ ಋಷಿಗೆ ತುಂಬ ಪ್ರಿಯವಾಯಿತು. ಅಲ್ಲಿಯೇ ಅವನು ಗುಡಿಯೊಂದನ್ನು ನಿರ್ಮಿಸಿದ. ಗುಡಿಯ ಸುತ್ತಮುತ್ತಣ ಮರದ ಬೇರುಗಳಿಗೂ ಶಾಖೆಗಳಿಗೂ ತೋರಣ ಕಟ್ಟಿದ.

ಆ ದಾರಿಯಾಗಿ ಸಾಗುವ ಪ್ರವಾಸಿಗಳೆಲ್ಲ ಅಲ್ಲಿ ಸ್ವಲ್ಪಕಾಲ ವಿಶ್ರಾಂತಿ ಪಡೆಯತೊಡಗಿದರು. ಅಲ್ಲಿಂದ ಹೊರಡುವ ಮುನ್ನ, ತಮ್ಮ ಮುಂದಿನ ಪ್ರವಾಸ ಸುಖಕರವಾಗುವಂತೆ ಪ್ರಾರ್ಥಿಸಿಕೊಳ್ಳತೊಡಗಿದರು. ಉತ್ತರದ ಕಡೆಯಿಂದ ಬರುವ ವಣಿಕರು ಇಲ್ಲಿ ತಂಗುತ್ತಿದ್ದರು ; ತಾವು ತಂದ ಹಿತ್ತಾಳೆ ಪಾತ್ರೆಪರಡಿಗಳನ್ನು ಮರದ ಕೊಂಬೆಗಳಿಗೆ ಕಟ್ಟಿ ತೂಗಾಡಿಸುತ್ತಿದ್ದರು. ದಕ್ಷಿಣದಿಂದ ಬಂದ ಪ್ರಯಾಣಿಕರು ಆ ಪಾತ್ರೆಗಳನ್ನು ನೋಡಿ ಖರೀದಿಸುತ್ತಿದ್ದರು. ಈ ಸ್ಥಳವನ್ನು ಹಾದುಹೋಗುವ ಪ್ರವಾಸಿಗಳ ಸಂಖ್ಯೆ ಹೆಚ್ಚಿದಂತೆಲ್ಲ, ಇಲ್ಲಿ ಹಣ್ಣುಹಂಪಲುಗಳನ್ನು ಆಹಾರ ಪಾನೀಯಗಳನ್ನು ಮಾರುವ ಜನರೂ ಕಾಣಿಸಿಕೊಂಡರು ; ಅವರು ತಮ್ಮ ಅಂಗಡಿಗಳನ್ನು ತೆರೆದರು. ಹೀಗೆ ಮಾರುಕಟ್ಟೆಯೊಂದರ ನಿರ್ಮಾಣವಾಯಿತು.

ಹೀಗೆ ಆ ಆಲದಮರದ ಕೆಳಗೆ ಆಶ್ರಯ ಪಡೆಯುವ ಒಂದು ಜನಸಮುದಾಯವೇ ಅಲ್ಲಿ ಬೆಳೆಯಿತು. ಸಮೀಪದಲ್ಲೊಂದು ಬಾವಿಯನ್ನೂ ತೋಡಲಾಯಿತು. ಆಲದ ಮರದ ತೊಗಟೆ ಮತ್ತು ಬೇರುಗಳಿಂದ ಒಂದು ಬಗೆಯ ಒರಟಾದ ನಾರನ್ನು ಪ್ರತ್ಯೇಕಿಸಿ ಅದರಿಂದ [illegible] ಕಲಿತುಕೊಂಡರು. ಅವರು ಗಾಡಿಗಳನ್ನೂ

ಶಿಬಿರಗಳನ್ನೂ ಕಟ್ಟುವ ಮುಂದಿಗೆ ಆ ಹಗ್ಗಗಳನ್ನು ಮಾರತೊಡಗಿದರು. ಆಲದಮರದ ಸುತ್ತಮುತ್ತ ಮಣ್ಣು-ಇಟ್ಟಿಗೆಗಳ ಮನೆಗಳು ನಿರ್ಮಾಣವಾದುವು. ಹೀಗೆ ಮರದ ಸುತ್ತ ಒಂದು ನಗರವೇ ಬೆಳೆಯಿತು. ಮಾರುಕಟ್ಟೆಯೂ ಅಭಿವೃದ್ಧಿಹೊಂದಿತು. ತಲೆಮಾರುಗಳು ಸಾಗುತ್ತಿದ್ದಂತೆ ಗುಡಿಯನ್ನು ಹಲವು ಸಲ ಜೀರ್ಣೋದ್ಧಾರ ಮಾಡ ಲಾಯಿತು. ಗುಡಿಗೆ ಸಂಬಂಧಿಸಿದಂತೆ ಕೆಲವು ಐತಿಹ್ಯಗಳು ಬೆಳೆದುವು. ಮರದ ನೆರಳಿ ನಲ್ಲಿ ಸಾಯಂಕಾಲ ವೃದ್ಧರು ಹರಟೆಹೊಡೆಯಲು ಮತ್ತು ಮಕ್ಕಳು ಆಟವಾಡಲು ಸೇರುತ್ತಿದ್ದರು.

ಇಂಥ ಮರವೊಂದರ ಅತ್ಯಂತ ಪ್ರಾಚೀನ ಉಲ್ಲೇಖ ನಮಗೆ ಪರ್ಷಿಯನ್ ಹುಡುಗನೊಬ್ಬನಿಂದ ದೊರೆಯುತ್ತದೆ. ಮಹಾ ಚಕ್ರವರ್ತಿ ಅಲೆಗ್ಸಾಂಡರನ ಕೊನೆಯ ಪ್ರಮುಖ ದಂಡಯಾತ್ರೆಯ ಕಾಲದಲ್ಲಿ, ಕ್ರಿ. ಪೂ. ೩೨೭ ರಲ್ಲಿ, ಇವನು ಭಾರತಕ್ಕೆ ಬಂದಿದ್ದ. ೧೨೦,೦೦೦ ಕ್ಕೂ ಹೆಚ್ಚು ಸಂಖ್ಯೆಯ ಸೈನಿಕರೂ ಅನುಚರರೂ ಇದ್ದ ಅಲೆಗ್ಸಾಂಡರನ ಸೈನ್ಯ, ಸಿಂಧೂನದಿಯನ್ನು ದಾಟಿ ಮುಂದೆ ಬಂದು, ಅಟಕ್ ಸಮೀಪದ ಆಲದಮರದ ನೆರಳಿನಲ್ಲಿ ಆಶ್ರಯ ಪಡೆದಿತ್ತು. ಇಡೀ ಸೈನ್ಯವೇ ಸುಡುವ ಸೂರ್ಯನಿಂದ ರಕ್ಷಣೆ ಪಡೆಯಲು ನೆರವಾದ ಈ ಆಲದಮರವನ್ನು ಹುಡುಗ ಬಣ್ಣಿಸಿದ ದಾಖಲೆಯಿದೆ. ೬೦೦ ಮೀಟರಿನಷ್ಟು ಪರಿಧಿಯ ಪ್ರದೇಶದಲ್ಲಿ ತನ್ನ ಕೊಂಬೆರೆಂಬೆಗಳನ್ನು ಹರಡಿ ೨೦,೦೦೦ ಜನರಿಗೆ ಆಶ್ರಯ ನೀಡಬಲ್ಲ, ಭಾರತದ ಇನ್ನೊಂದು ಆಲದಮರದ ಬಗ್ಗೆಯೂ ದಾಖಲೆ ಯಿದೆ.

ಆಲದಮರಕ್ಕೆ 'ಬನ್ಯನ್' ಎಂಬ ಹೆಸರನ್ನಿಟ್ಟದ್ದು ಬ್ರಿಟಿಷರು. ಈ ಶಬ್ದವನ್ನು ಅವರು ರೂಪಿಸಿದ್ದು 'ಬನಿಯಾ' ಎಂಬ ಶಬ್ದದಿಂದ. ಬನಿಯಾ ಎಂದರೆ ವ್ಯಾಪಾರಿ. ಈ ವ್ಯಾಪಾರಿಗಳು ಪರ್ಷಿಯನ್ ಖಾರಿಯ ಸಮೀಪವಿರುವ ಗೊಂಬ್ರೂನ್ (ಈಗಿನ ಬಂಡರ್ ಅಬ್ಬಾಸ್) ನಗರದಲ್ಲಿ ನಿರ್ದಿಷ್ಟ ವೃಕ್ಷವೊಂದರ ಕೆಳಗೆ ಗುಡಿಯೊಂದನ್ನು ಕಟ್ಟಿದರು ಎನ್ನಲಾಗಿದೆ. ಕ್ರಮೇಣ ಈ ಮರ ಹಿಂದೂ ವ್ಯಾಪಾರಿಗಳಿಗೆ ಪೂಜ್ಯವೆಂದು ಪರಿಣಮಿಸಿತು. ಬ್ರಹ್ಮ ಈ ಮರದಲ್ಲಿ ನೆಲಸಿರುವನೆಂಬುದೇ ಈ ಮರದ ಪಾವಿತ್ರ್ಯಕ್ಕೆ ಕಾರಣ.

ಈಗ ಚೀನೀ ಆಲದಮರದ ಬಗೆಗೆ ಕೊಂಚ ವಿಚಾರಮಾಡೋಣ. ಚೀನೀ ಆಲದ ಮರ ಭಾರತದ ಆಲದಮರಕ್ಕಿಂತ ಒಂದು ವಿಚಾರದಲ್ಲಂತೂ ಅದೃಷ್ಟಶಾಲಿ. ಇದರ ಕಾಂಡ ಹೆಚ್ಚು ಗಟ್ಟಿಯಾಗಿಲ್ಲದಿರುವುದರಿಂದ, ಇದನ್ನು ತೊಲೆಗಳ ತಯಾರಿಗೆ ಬಳಸು ವಂತಿಲ್ಲ. ಅಲ್ಲದೆ 'ಬಿಳಿಮರ'ದ ಭಾಗ ಹೆಚ್ಚಿರುವುದರಿಂದ ಕಿಟಕಿ ಬಾಗಿಲುಗಳ ಚೌಕಟ್ಟಿಗೂ ಇದು ಯುಕ್ತವಾಗಿಲ್ಲ. ಹೆಚ್ಚು ಭಾರವಾಗಿರುವುದರಿಂದ ದೋಣಿಗಳನ್ನು ಕಟ್ಟಲೂ ಚೀನೀ ಆಲದಮರವನ್ನು ಬಳಸಲು ಸಾಧ್ಯವಿಲ್ಲ. ನೆರಳಿನ ಆಶ್ರಯ ನೀಡುತ್ತದೆ ಹಾಗೂ ಬೇರು ಗಳು ಚಿಕ್ಕಪುಟ್ಟ ವೈದ್ಯಕೀಯ ಬಳಕೆಗೆ ಬರುತ್ತದೆ ಎಂಬುದನ್ನು ಬಿಟ್ಟರೆ ಚೀನೀ ಆಲದ ಮರಕ್ಕೆ ಹೆಚ್ಚು ಮಹತ್ವವೇನೂ ಇಲ್ಲ.

ಆದರೆ ಚೀನೀಯರು ಆಲದಮರಗಳಿರುವಲ್ಲೆಲ್ಲ ತಮ್ಮ ಆರಾಧನಮಂದಿರ ಗಳನ್ನು ನಿರ್ಮಿಸಿಕೊಂಡಿದ್ದಾರೆ. 'ಗು ಅಂಗ್ ಝೋ'ನಲ್ಲಿ 'ಆರು ಆಲದಮರಗಳ

ದೇವಾಲಯ' (Temple of the Six Banyan trees) ಎಂಬ ಹೆಸರಿನ ಒಂದು ಆರಾಧನ ಮಂದಿರವೇ ಇದೆ. ಇಲ್ಲಿ ಅನೇಕ ಜನಪ್ರಿಯ ದೇವತೆಗಳ ವಿಗ್ರಹಗಳಿವೆ. ಈ ಮಂದಿರಕ್ಕೆ ೫೦೦೦ ವರ್ಷಗಳಿಗಿಂತಲೂ ದೀರ್ಘಕಾಲದ ಇತಿಹಾಸವಿದೆ ಎನ್ನಲಾಗಿದೆ.

ದಕ್ಷಿಣ ಚೀನದಲ್ಲಿ ಗ್ರಾಮಗಳ ತುದಿ ಭಾಗಗಳಲ್ಲಿ ಹಾಗೂ ಜಿಲ್ಲೆಗಳ ಗಡಿಭಾಗಗಳಲ್ಲಿ ಆಲದ ಸಸಿಗಳನ್ನು ನೆಡುವ ರೂಢಿಯಿದೆ. ಇಂಥ ಸರಹದ್ದು ಪ್ರದೇಶಗಳಲ್ಲಿ, ಚೀನಾದಲ್ಲಿ, ಆಲದಮರಗಳು ಎಷ್ಟು ಅಸಂಖ್ಯಾತವಾಗಿವೆ ಎಂಬುದಕ್ಕೆ ಉದಾಹರಣೆಯಾಗಿ 'ಫುಝೋ' ನಗರವನ್ನೇ ಉಲ್ಲೇಖಿಸಬಹುದು. ಈ ನಗರ 'ಆಲದಮರಗಳ ನಗರ' (Banyan City) ಎಂದೇ ಖ್ಯಾತವಾಗಿದೆ. ಈ ಆಲದಮರಗಳು ಬೇಸಗೆ ಕಾಲದಲ್ಲಿ ಒಳ್ಳೆಯ ನೆರಳನ್ನೂ ಚಳಿಗಾಲದಲ್ಲಿ ಗಾಳಿಗಳಿಂದ ರಕ್ಷಣೆಯನ್ನೂ ನೀಡುತ್ತವೆ. ಈ ಶತಮಾನದ ಆದಿಭಾಗದಲ್ಲಿ ಫಿಂಗ್ ಝಿಕಾಯ್ ಎಂಬ ಖ್ಯಾತ ಚೀನೀ ಕಲಾವಿದ, ಆಲದಮರದ ಕೆಳಗೆ ಕುಳಿತು ಪಟ್ಟಾಂಗ ಹೊಡೆಯುತ್ತಿರುವವರನ್ನೇ ಕೇಂದ್ರವಸ್ತುವಾಗಿಟ್ಟುಕೊಂಡು, ಬಣ್ಣದಲ್ಲಿ, ಅನೇಕ ವ್ಯಂಗ್ಯ ರೇಖಾಚಿತ್ರಗಳನ್ನು ಬರೆದಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಥಾಯ್‌ಲ್ಯಾಂಡಿನಲ್ಲಿ ಕೂಡ ಆಲದಮರಕ್ಕೆ ಪೂಜ್ಯಸ್ಥಾನವಿದೆ. ಅಲ್ಲಿಯ ಜನರ ನಂಬಿಕೆಯಂತೆ, ಆಲದಮರ 'ಫೆಸ್ಟಾರ್' ಎಂಬ ದಯಾಮಯ ದೇವತೆಯ ಆವಾಸಸ್ಥಾನವಾಗಿದೆ. ಆ ದೇವತೆಯ ಪೂರ್ವಾನುಮತಿಯನ್ನು ಪಡೆಯದೆಯೇ, ಥಾಯ್‌ಲ್ಯಾಂಡಿನಲ್ಲಿ ಯಾವುದೇ ಆಲದ ಮರವನ್ನು ಕಡಿಯುವಂತಿಲ್ಲ. ಮರವನ್ನು ಕಡಿಯಬೇಕೆನಿಸಿದಾಗ, ಮರದೆದುರು ಒಂದು ಕೊಡಲಿಯನ್ನು ನಿಲ್ಲಿಸುತ್ತಾರೆ. ಒಂದು ಮೋಂಬತ್ತಿಯನ್ನೂ ಕೆಲವು ಧೂಪದ ಕಡ್ಡಿಗಳನ್ನೂ ಹಚ್ಚಿಡುತ್ತಾರೆ. ಎರಡು ದಿನಗಳೊಳಗೆ, ನಿಲ್ಲಿಸಿದ ಕೊಡಲಿ ಒಂದಿಷ್ಟೂ ಅಲುಗಾಡದೆ ಹಾಗೆಯೇ ಇದ್ದ ಪಕ್ಷದಲ್ಲಿ ಆಲದಮರವನ್ನು ಕಡಿಯಲು ದೇವತೆಯ ವಿರೋಧವೇನೂ ಇಲ್ಲವೆಂದು ಭಾವಿಸಲಾಗುತ್ತದೆ. ಕೊಡಲಿ ಕೆಳಗೆ ಬಿದ್ದ ಪಕ್ಷದಲ್ಲಿ ಆಲದಮರವನ್ನು ಕಡಿಯುವಂತಿಲ್ಲ.

ಹಾಂಗ್ ಕಾಂಗ್‌ನಲ್ಲಿ, ಅಭಿವೃದ್ಧಿ ಉದ್ದೇಶಗಳಿಗಾಗಿ ವಿಕ್ಟೋರಿಯ ಬರಾಕ್ಸ್ ಪ್ರದೇಶವನ್ನು ಮಾರಾಟ ಮಾಡುವ ಮುನ್ನ, ಆ ಭಾಗದಲ್ಲಿದ್ದ ಹಳೆಯ ಆಲದಮರಕ್ಕೆ ಅಪಾಯವಾಗದಂತೆ ಎಚ್ಚರಿಕೆ ವಹಿಸಬೇಕೆಂದು ಸರಕಾರ ಆದೇಶ ನೀಡಿತು. ಆ ಮರದ ಬೇರುಗಳು ಎಷ್ಟು ವಿಸ್ತಾರವಾದ ಪ್ರದೇಶದಲ್ಲಿ ಹರಡಿಕೊಂಡಿದ್ದುವೆಂದರೆ, ಆಲದಮರವಿರುವ ಪ್ರತ್ಯೇಕ ಭೂಭಾಗ, ಬಹಿರಂಗ ಹರಾಜಿನಲ್ಲಿ ೧೦೦೦ ಮಿಲಿಯ ಹಾಂಗ್‌ಕಾಂಗ್ ಡಾಲರ್‌ಗಳಿಗೆ ಖರೀದಿಸಲ್ಪಟ್ಟಿತು (ಒಂದು ಹಾಂಗ್‌ಕಾಂಗ್ ಡಾಲರ್ ಎಂದರೆ ರೂ. ೧.೬೦) ಹೀಗೆ ಈ ಮರ ಜಗತ್ತಿನಲ್ಲಿಯೇ ಅತ್ಯಧಿಕ ಬೆಲೆ ಬಾಳುವ ಮರವೆಂಬ ಖ್ಯಾತಿಯನ್ನು ಪಡೆಯಿತು.

ಈ ಸಂದರ್ಭದಲ್ಲಿ ಉಲ್ಲೇಖಿಸಬಹುದಾದ ಇನ್ನೊಂದು ಆಲದಮರವೆಂದರೆ, ಕಾಂಬೋಡಿಯಾದ ಅಂಗ್‌ಕೋರ್ ವಾಟ್ ದೇವಾಲಯದ ಪುರಾತನ ಅವಶೇಷಗಳ ಸುತ್ತ ಅಸಂಖ್ಯಾತ ಬೇರುಗಳೊಂದಿಗೆ ಬೃಹದಾಕಾರವಾಗಿ ನಿಂತ ದೊಡ್ಡ ಆಲದಮರ. ಈ

ಮರಕ್ಕೆ ಕನಿಷ್ಠ ನಾನ್ನೂರು ವರ್ಷ ಪ್ರಾಯವಾದರೂ ಆಗಿರಬೇಕು. ಅದರ ಬೇರುಗಳು ಗಂಟುಗಂಟಾಗಿವೆ. ಪರಸ್ಪರ ತಿರುಚಿಕೊಂಡಿವೆ. ಈ ಆಲದಮರಕ್ಕೆ ಇಡೀ ದೇವಾಲಯವನ್ನು ಸಂಪೂರ್ಣ ನಾಶಮಾಡುವ ಉದ್ದೇಶವಿರುವಂತೆ ತೋರುತ್ತದೆ.

ಆಲದಮರಗಳ ಗಾತ್ರ, ಸೌಂದರ್ಯ, ಉಪಯುಕ್ತತೆಗಳನ್ನು ನೆನೆದಾಗಲೆಲ್ಲ ಬೆರಗುಂಟಾಗುತ್ತದೆ. ಆಕಾಶದೆತ್ತರ ಬೆಳೆದ ಅವುಗಳ ಶಾಖೆಗಳಿಗಿಂತ ಹೆಚ್ಚಾಗಿ, ಪರಸ್ಪರ ಹೆಣೆದುಕೊಂಡು ನೆಲವನ್ನು ಭದ್ರವಾಗಿ ಹಿಡಿದುಕೊಂಡ ಅವುಗಳ ಬೇರುಗಳೇ, ನಮ್ಮ ಬದುಕಿಗೆ ಕನ್ನಡಿಯಾಗಿರುವಂತೆ ತೋರುತ್ತದೆ. ಈ ನೆಲದೊಂದಿಗೆ ನಮಗಿರುವ ಶಾಶ್ವತ ಸಂಬಂಧವನ್ನು ಈ ಬೇರುಗಳು ತಿಳಿಯಪಡಿಸುತ್ತವೆ, ಪರಸ್ಪರ ಸಾಮರಸ್ಯದಿಂದ ದೊರೆಯುವ ಭದ್ರತಾಭಾವನೆಯನ್ನು ನೆನಪಿಗೆ ತಂದುಕೊಡುತ್ತವೆ.

ಭಾರತದಲ್ಲಿರುವ ಪ್ರಮುಖ ಆಲದಮರಗಳು: ೧) ಕಲ್ಕತ್ತದ ರಾಷ್ಟ್ರೀಯ ಸಸ್ಯೋದ್ಯಾನದಲ್ಲಿರುವ ಆಲದಮರ. ಇದು ಸುಮಾರು ಒಂದು ಎಕರೆಗೂ ಹೆಚ್ಚು ಜಾಗವನ್ನು ಆಕ್ರಮಿಸಿದೆ. ೨) ಕರ್ನಾಟಕ ರಾಜ್ಯದ ತೋಟಗಾರಿಕೆ ಇಲಾಖೆಯ ಅಧೀನದಲ್ಲಿರುವ ರಾಮೋಹಳ್ಳಿ ಹತ್ತಿರದ ಆಲದಮರ. ಇದು ಹೆಸರುವಾಸಿಯಾದ ವಿಹಾರ ಕೇಂದ್ರವಾಗಿದೆ. ೩) ಮದ್ರಾಸಿನ ಅಡಿಯಾರ್‌ನಲ್ಲಿರುವ ದೊಡ್ಡ ಆಲದಮರ. ಇದು ತುಂಬ ಹಳೆಯ ಮರ.

ಕನ್ನಡಕ್ಕೆ : ಶಂಸ ಐತಾಳ

ಮಾನವ ಕುಲವೊಂದು ಮಹಾಸಾಗರ. ಕೆಲವು ಹನಿಗಳು ಹೊಲಸಾದರೆ ಇಡೀ ಸಾಗರ ಹೊಲಸಾಗುವುದಿಲ್ಲ.

ಗಾಂಧೀಜಿ

ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಪ್ರೊ|| ಎ. ಎನ್. ಮೂರ್ತಿರಾವ್

ಮುಂದುವರಿದುದು

ಹೈಸ್ಕೂಲಿನಲ್ಲಿದ್ದಾಗಲೇ ನಾನು ಮತಧರ್ಮದಲ್ಲಿ ನಂಬಿಕೆ ಕಳೆದು ಕೊಂಡಿದ್ದೆನೆ? ವಾಸ್ತವವಾಗಿ ಆಗ ನನ್ನ ಮನಸ್ಸು ಯಾವ ಸ್ಥಿತಿಯಲ್ಲಿತ್ತು ಎಂಬುದನ್ನು ವಿಶ್ಲೇಷಿಸುವುದು ಕಷ್ಟವಾಗುತ್ತಿದೆ. ನನ್ನ ದೇಶ, ನನಗೆ ಹುಟ್ಟಿನಿಂದ ಬಂದ ಮತ—ಇವೆರಡರ ವಿಷಯದಲ್ಲೂ ಅಭಿಮಾನವಿತ್ತು. ದೇಶದ ಮೇಲಿನ ಅಭಿಮಾನವನ್ನು ಉಳಿಸಿಕೊಳ್ಳುವುದೇನೂ ಕಷ್ಟವಾಗಲಿಲ್ಲ. ನನ್ನ ಕಣ್ಣೆದುರಿನ ಭಾರತ ಹೇಗಾದರೂ ಇರಲಿ, ಪ್ರಾಚೀನ ಭಾರತ ಉನ್ನತ ಸ್ಥಿತಿಯಲ್ಲಿತ್ತು—ancient India was better than modern India—ಎಂದು ನಾನು ನಂಬಿದ್ದೆನಷ್ಟೆ. ಬಿ. ಎಂ. ಶ್ರೀಕಂಠಯ್ಯನವರು ಈ ಭಾವನೆಯನ್ನು ಹಾಸ್ಯಕ್ಕೆ ಗುರಿಮಾಡಿದಾಗ ನನಗೆ ಮುಖಭಂಗವಾಯಿತಾದರೂ ನನ್ನ ನಂಬಿಕೆಗೆ ಧಕ್ಕೆ ಬರಲಿಲ್ಲ. ಚರ್ಚಾಕೂಟದಲ್ಲಿ ಪ್ರಾಚೀನ ಭಾರತದ ಪರವಾಗಿ ಉತ್ಸಾಹದಿಂದಲೇ ಮಾತಾಡಿದ್ದೆ. "ಈಗಿನ ಭಾರತದ ವಿಷಯ ಏನು ಹೇಳುತ್ತೀ" ಎಂದು ಯಾರಾದರೂ ಕೇಳಿದ್ದರೆ ಅದಕ್ಕೂ ಉತ್ತರ ಸಿದ್ಧವಾಗಿತ್ತು: "ಇಂದಿನ ಭಾರತ ಕೆಟ್ಟಿದ್ದರೆ ಅದಕ್ಕೆ ಕಾರಣ: ಬ್ರಿಟಿಷರ ಆಳ್ವಿಕೆ. ನಿಜವಾಗಿ ನಾವು 'ಸ್ಪಿರಿಚ್ಯುಯಲ್'; ಅವರು ಕಾಡುಕಪಿಗಳಾಗಿದ್ದಾಗ ನಾವು...." —ಉಳಿದದ್ದನ್ನು ನೀವು ಊಹಿಸಿಕೊಳ್ಳಬಹುದು. ಈ ವಾದ ನೂರು ಸಾರಿ ಕೇಳಿರುವುದಷ್ಟೆ! ಇಡೀ ಭಾರತವೇ ಈ ವಾದದಿಂದ ಸಮಾಧಾನ ಪಡೆಯುತ್ತಿತ್ತು. ನಾನು ನನ್ನ ಸುತ್ತಿನ ವಾತಾವರಣವನ್ನು ಪ್ರಾಮಾಣಿಕವಾಗಿ ಪ್ರತಿಬಿಂಬಿಸುತ್ತಿದ್ದೆ.

ಮತಧರ್ಮದ ವಿಷಯದಲ್ಲಿ ನನ್ನ ಆಗಿನ ದೃಷ್ಟಿಯೇನು? "ಇದು ನನ್ನದು, ಇದರ ವಿಷಯದಲ್ಲಿ ಅಭಿಮಾನವಿರಬೇಕು" ಎಂಬ

ಭಾವನೆ ಸ್ವಲ್ಪ ಇತ್ತೇನೋ. ಅದು ಕರ್ತವ್ಯದೃಷ್ಟಿ. ಹೇಳಿಕೊಳ್ಳುವಂಥ ಶ್ರದ್ಧೆಯೇನೂ ಇರಲಿಲ್ಲ. ಆಗ ನಾನು ನಾಸ್ತಿಕನಾಗಿದ್ದೆ. ಮತಧರ್ಮದಲ್ಲಿ ನಂಬಿಕೆಯೇ ಇರಲಿಲ್ಲ ಎಂದು ಹೇಳಲಾರೆ. ಎಲ್ಲರ ಜೊತೆಯಲ್ಲಿ ನಾನೂ ವಿಶೇಷ ಉತ್ಸವಗಳ ದಿನ ದೇವಾಲಯಕ್ಕೆ ಹೋಗುತ್ತಿದ್ದೆ. ತೀರ್ಥ ಪ್ರಸಾದ ತೆಗೆದುಕೊಳ್ಳುತ್ತಿದ್ದೆ. ಉಪಾಕರ್ಮದ ದಿನ ಕೊತ್ವಾಲ ರಾಮಪ್ಪನ ಬೀದಿಯಲ್ಲಿ ನಮ್ಮ ಮನೆಯ ಹತ್ತಿರದಲ್ಲೇ ಇದ್ದ ದೇವಾಲಯದಲ್ಲಿ ಬ್ರಾಹ್ಮಣರೆಲ್ಲ ಸೇರುತ್ತಿದ್ದರು. ಎಲ್ಲರೂ ಸ್ನಾನ ಮಾಡಿ ಮಡಿ ಪಂಚೆಗಳನ್ನುಟ್ಟು ವಿಭೂತಿ ಇಟ್ಟುಕೊಂಡು ಸಾಮೂಹಿಕವಾಗಿ ಮಂತ್ರ ಹೇಳುತ್ತ ಹೋಮಾದಿಗಳನ್ನು ಮಾಡುತ್ತಿದ್ದರು. ಅವರೆಲ್ಲರೊಡನೆ ನಾನೂ ಸೇರಲೇಬೇಕು. 'ಇದೇನಪ್ಪ ಇದು' ಎಂದು ಬೇಸರಪಟ್ಟುಕೊಳ್ಳದೆ ನಾನೂ ಎಲ್ಲ ನಿಯಮಗಳನ್ನೂ ಪಾಲಿಸುತ್ತಿದ್ದೆ. ಎಲ್ಲರ ಸಡಗರವನ್ನೂ ನೋಡಿ ಸಂತೋಷಪಡುತ್ತಿದ್ದೆ. ಸಾಧಾರಣವಾಗಿ ನಮ್ಮ ಹಬ್ಬಗಳ ಆಚರಣೆಯಲ್ಲಿ ಕಿವಿಗೆ ನಾದ ಮಾಧುರ್ಯದ, ಕಣ್ಣಿಗೆ ಚಿತ್ರಸೌಂದರ್ಯದ ಆಕರ್ಷಣೆ ಇರುತ್ತದೆ. ಅಚ್ಚುಕಟ್ಟಾಗಿ ಏರ್ಪಡಿಸಿದ ವೇದಿಕೆ, ಹೋಮ ಮಾಡಿದಾಗ ಅದರಿಂದ ಹೊರಡುವ ಜ್ವಾಲೆ, ಸುತ್ತಿನ ರಂಗವಲ್ಲಿಯ ಅಲಂಕಾರ, ಪೂಜಾಪಾತ್ರೆಗಳ ಹೊಳಪು, ತಟ್ಟೆಗಳಲ್ಲಿ ಪೇರಿಸಿರುವ ಹೂವು ಹಣ್ಣುಗಳು—ಅಂದು ಕಣ್ಣಿಗೂ ಹಬ್ಬ! ಎಲ್ಲಕ್ಕಿಂತಲೂ ಹೆಚ್ಚಾಗಿ ಹತ್ತಾರು ಜನ ಸೇರಿ ವೇದ ಮಂತ್ರಗಳನ್ನು ಹಾಡುವಾಗ ಗುಡಿಯಲ್ಲಿ ಸುಶ್ರಾವ್ಯವಾದ ಗಂಭೀರವಾದ ನಾದದಿಂದ ತುಂಬಿದಂತಾಗಿ ಅವರ್ಣನೀಯವಾದ ಆನಂದದ ಅನುಭವವಾಗುತ್ತದೆ. ಇದನ್ನೆಲ್ಲ ನೆನೆಯುವುದು ಈಗಲೂ ಹಿತ. ಉಪಾಕರ್ಮದ ಸಂದರ್ಭದಲ್ಲಿ ಹೇಳುವ ಕೆಲವು ಮಂತ್ರಗಳು (ನನಗೆ ಮುಂಜಿಯಾದಾಗ ಅವನ್ನು ಹೇಳಿಕೊಟ್ಟಿದ್ದರು) ಈಗಲೂ ನೆನಪಿನಲ್ಲಿ ಉಳಿದಿದೆ—ಹಾಡುವಾಗ ಉದಾತ್ತ ಅನುದಾತ್ತಗಳ ವಿಷಯದಲ್ಲಿ ಮರವು ಕಾಲಿಟ್ಟಿರಬಹುದಾದರೂ :

ಮಯಿ ಮೇಧಾಂ ಮಯಿ ಪ್ರಜಾಂ ಮಯ್ಯಗ್ನಿಃ ತೇಜೋ ದಧಾತು ।
ಮಯಿ ಮೇಧಾಂ ಮಯಿ ಪ್ರಜಾಂ ಮಯೀಂದ್ರಃ ಇಂದ್ರಿಯಂ ದಧಾತು ।
ಮಯಿ ಮೇಧಾಂ ಮಯಿ ಪ್ರಜಾಂ ಮಯಿ ಸೂರ್ಯಃ ಭ್ರಾಜೋ ದಧಾತು ॥

ಈ ಸ್ತೋತ್ರದ ಅರ್ಥವೂ (ಪುರೋಹಿತರು ಹೇಳಿಕೊಟ್ಟಿದ್ದದ್ದರಿಂದ) ಸ್ವಲ್ಪ ಮಟ್ಟಿಗೆ ತಿಳಿದಿತ್ತು. ಆದರೆ ನನ್ನನ್ನು ಆಕರ್ಷಿಸಿದ್ದು ಅರ್ಥಕ್ಕಿಂತ ಹೆಚ್ಚಾಗಿ ಅದರ ಗಂಭೀರವಾದ ನಾದಮಾಧುರ್ಯ. ವೇದಮಂತ್ರಗಳ ಗೋಷ್ಠಿಗಾನವನ್ನು ಕೇಳಿದಾಗಲೆಲ್ಲ ನನಗೆ "ಇದರಲ್ಲಿ ಬದುಕನ್ನು ಉದ್ಧರಿಸುವ ಗುಣ ಏನೋ ಇದೆ" ಎಂಬ ಭಾವನೆ—ಒಳ್ಳೆಯ ಸಂಗೀತವನ್ನು ಕೇಳಿದಾಗ ಬರುವ ಭಾವನೆ—ಬಂದಿದೆ.

ಅಷ್ಟೊಂದು ಜನ ತಮ್ಮ ತಮ್ಮ ಅಲ್ಪ ವೈಮನಸ್ಯಗಳನ್ನು ಮರೆತು ಸಹಕರಿಸಿ ತಾವು 'ಶ್ರೇಯಸ್ಕರ' ಎಂದು ನಂಬಿದ್ದ ಮತದ ಪ್ರಕ್ರಿಯೆಯೊಂದನ್ನು ಆಚರಿಸುತ್ತಿದ್ದರು; ಅದರಲ್ಲಿ ಭಾಗವಹಿಸುವುದು ನನಗೂ ಪ್ರಿಯವಾಯಿತು. ಇದೆಲ್ಲ ಸರಿ. ಆದರೆ ಅದರಲ್ಲಿ ಸಂತೋಷದಿಂದ ಭಾಗವಹಿಸಿದೆ ಎಂಬ ಮಾತ್ರಕ್ಕೆ ಅವರೆಲ್ಲರಲ್ಲಿದ್ದ ನಂಬಿಕೆ ನನ್ನಲ್ಲೂ ಇತ್ತು

ಎಂದಂತಾಗಲಿಲ್ಲ. ಅದೊಂದು ಪವಿತ್ರ ಕಾರ್ಯ ಎಂಬ ಭಾವನೆಯೇನೂ ನನ್ನಲ್ಲಿರಲಿಲ್ಲ. ಡಿ. ವಿ. ಗುಂಡಪ್ಪನವರು ಒಂದು ಕಡೆ ಉದಾಹರಿಸಿರುವ ಪ್ರಸಂಗವೊಂದನ್ನು ನಾನೂ ಉದಾಹರಿಸಿದರೆ ನನ್ನ ಮನಸ್ಸಿನ ಸ್ಥಿತಿ ಸ್ಪಷ್ಟವಾಗಬಹುದು. ದಾಸಪ್ಪ ಎಂಬವರೊಬ್ಬರು ಮಹಾಮಹೋಪಾಧ್ಯಾಯ ವಿರೂಪಾಕ್ಷಶಾಸ್ತ್ರಿಗಳನ್ನು ಕೇಳಿದರಂತೆ: "ವೇದದಲ್ಲಿ 'ಸುಮೃಡೀಕಾ ಸರಸ್ವತೀ' ಎಂಬ ಮಾತು ಬರುತ್ತದಲ್ಲ, ಅದರ ಅರ್ಥವೇನು ? ಎಂದು. ಆಗ ದಾಸಪ್ಪನವರು ಕಾಲಿಗೆ ಮೆಟ್ಟು ಹಾಕಿಕೊಂಡಿದ್ದರು. ಶಾಸ್ತ್ರಿಗಳು ಸ್ವಲ್ಪ ಕಟುವಾಗಿಯೇ "ಕಾಲಾಗೆ ಮೆಟ್ಟು ಇರುವಾಗ ಬಾಯಾಗೆ ವೇದಾಕ್ಷರ ಬಾರತಕ್ಕದ್ದಲ್ಲ" ಎಂದರು. ದಾಸಪ್ಪನವರು "ಇಂಗ್ಲೆಂಡಿನವರೂ ಜರ್ಮನಿಯವರೂ ಇಂಥ ನಿಯಮಗಳನ್ನು ಪಾಲಿಸದೆ ವೇದವನ್ನು ಓದಿದ್ದಾರಲ್ಲ, ಭಾಷಾಂತರ ಮಾಡಿಕೊಟ್ಟಿದ್ದಾರಲ್ಲ ?" ಎಂದು ಕೇಳಿದರು. ಶಾಸ್ತ್ರಿಗಳ ಉತ್ತರ: "ಇರಬಹುದು. ಆದರೆ ಪೂಜ್ಯಬುದ್ಧಿ ಉಂಟೊ ? ಆ ಬಿಳಿ ಜನಕ್ಕೆ ನಮ್ಮ ವೇದವಾಕ್ಯ ಅರ್ಥವಾಗಬಹುದು ; ಅಥವಾ ಅರ್ಥವಾಯಿತೆಂಬ ಭ್ರಾಂತಿ ಬರಬಹುದು. ಆದರೆ ಪೂಜ್ಯಬುದ್ಧಿ ಉಂಟೊ ?"

ನನಗೆ ವೇದಮಂತ್ರ ಅರ್ಥವೂ ಆಗಿರಲಿಲ್ಲ. ಆ ಕಲಾಪವೆಲ್ಲ ಹಿತವಾಗಿತ್ತು, ಆದರೆ ಪೂಜ್ಯಬುದ್ಧಿ ಇರಲಿಲ್ಲ. ಅಜಂತ ಎಲ್ಲೋರಗಳಿಗೆ ಹೋಗಿ ಅಲ್ಲಿಯ ಚಿತ್ರಗಳನ್ನು ನೋಡಿದಾಗ, ತಾಜಮಹಲನ್ನು ನೋಡಿದಾಗ, ಘನವಾದ ಸಂಗೀತ ಕಚೇರಿಯನ್ನು ಕೇಳಿದಾಗ ಯಾವ ಬಗೆಯ ಆನಂದವಾಗುತ್ತದೆಯೋ ಅದೇ ಬಗೆಯ ಆನಂದವನ್ನು ನಾನು ಉಪಾಕರ್ಮದ ಆಚರಣೆಯಿಂದ ಪಡೆದೆ. ಆದರೆ ಪೂಜ್ಯಬುದ್ಧಿ ಇರಲಿಲ್ಲ. ಅಂದು ನಾನು ಮಾಡಿದ್ದು ಮತಧರ್ಮದ ಉಪಾಸನೆಯಿಲ್ಲ, ಕಲೋಪಾಸನೆ. ಸಂಧ್ಯಾವಂದನೆಯ ವಿಷಯದಲ್ಲಿ ನಾನು ಮಾಡುತ್ತಿದ್ದ ಕೆಲಸವನ್ನು ಹಿಂದೆ ಕಾಣಿಸಿದ್ದೇನೆ. ಅದನ್ನು ನೆನಪಿಗೆ ತಂದುಕೊಂಡರೆ "ನನಗೆ ಕರ್ಮಶ್ರದ್ಧೆ ಯಾವಾಗಲೂ ಇರಲಿಲ್ಲ" ಎನ್ನಿಸುತ್ತದೆ.*

ಕರ್ಮದ ವಿಷಯದಲ್ಲಿ, ಮತ ಸಂಬಂಧವಾದ ಕಲಾಪಗಳ ವಿಷಯದಲ್ಲಿ, ಶ್ರದ್ಧೆಯಿಲ್ಲದಿದ್ದರೂ ಮತಧರ್ಮದ ವಿಷಯದಲ್ಲೂ ದೇವರ ವಿಷಯದಲ್ಲೂ ನಂಬಿಕೆಯಿರುವುದು ಸಾಧ್ಯ. ನನ್ನಲ್ಲಿ ಆ ನಂಬಿಕೆ ಸ್ವಲ್ಪ ಕಾಲ ಇತ್ತು ಎಂದು ತೋರುತ್ತದೆ. ಇಂದ್ರಾಕ್ಷಿ ಶಿವಕವಚಗಳನ್ನು ಪಠಿಸಿದರೆ, ದೀಕ್ಷಿತರು ನಮ್ಮ ತಂದೆಗೆ ಮಾಡಿದಂಥ ಮಂತ್ರಚಿಕಿತ್ಸೆ ಮಾಡಿದರೆ, ಖಾಯಿಲೆ ಕಸಾಲೆಗಳನ್ನು ನಿವಾರಿಸಬಹುದೆಂದು ನಾನು ಹುಡುಗತನದಲ್ಲಿ ನಂಬಿದ್ದೆನಷ್ಟೆ. ಹಾಗೇ ದೇವರನ್ನೂ ನಂಬಿದ್ದೆ ; ಪರೀಕ್ಷೆಯಲ್ಲಿ ಪಾಸಾಗಲೆಂದು ಎಂದೂ

* ಈಗ 'ಬ್ರಾಹ್ಮಣ ಸಂಸ್ಕೃತಿ' ಎಂಬ ಹೆಸರು ಪಡೆದಿರುವ ಸಂಸ್ಕೃತಿ ಈಚೆಗೆ ಬೇಕಾದಷ್ಟು ಟೀಕೆಗೆ ಗುರಿಯಾಗಿದೆ. ಆ ಟೀಕೆಯೆಲ್ಲವನ್ನೂ ನಾನು ಒಪ್ಪಿದವನಲ್ಲ. ಈ ಸಂಸ್ಕೃತಿ, ಜಾತಿಸಮಸ್ಯೆ ಇವೆರಡನ್ನೂ ನಾವು ಐತಿಹಾಸಿಕ ದೃಷ್ಟಿಯಿಂದ ಮತ್ತು ಎಲ್ಲ ಮಾನವರಲ್ಲೂ ಇರುವ ಸಹ-ಜ ಪ್ರವೃತ್ತಿಗಳ ದೃಷ್ಟಿಯಿಂದ, ವಸ್ತುನಿಷ್ಠ ಮನಸ್ಸಿನಿಂದ, ಪರಿಶೀಲಿಸುವುದು ಅವಶ್ಯಕ. ಇಂಥ ಸಮಸ್ಯೆಗಳಿಗೇ ಮೀಸಲಾದ ಬೇರೊಂದು ಪುಸ್ತಕದಲ್ಲಿ ಈ ಪರಿಶೀಲನೆಯನ್ನು ನಡೆಸಬೇಕೆಂದಿದ್ದೇನೆ.

ಗಣಪತಿಯ ಮುಂದೆ ಇಡುಗಾಯಿ ಒಡೆದಿರಲಿಲ್ಲ—ನನ್ನ ಸಹಪಾಠಿಗಳಲ್ಲಿ ಕೆಲವರು ಒಡೆದದ್ದನ್ನು ನೋಡಿದ್ದೆನಾದರೂ. ಆದರೆ ಗುಡಿಯಲ್ಲಿ ದೇವರ ದರ್ಶನ ಮಾಡಿದಾಗ ಮಂಗಳಾರತಿಯ ಮೇಲೆ ಕೈಯಾಡಿಸಿ ಅದನ್ನು ಮುಖಕ್ಕೆ ಒತ್ತಿಕೊಂಡಿದ್ದೇನೆ. ದೇವಸ್ಥಾನದ ಮುಂದೆ ಹೋದಾಗ ಒಂದು ಕ್ಷಣ ನಿಂತು ಕೈಮುಗಿದು ಮುಂದಕ್ಕೆ ಹೋಗುತ್ತಿದ್ದದ್ದೂ ಉಂಟು—ವಿರೂಪಾಕ್ಷಶಾಸ್ತ್ರಿಗಳು ಹೇಳಿದ 'ಪೂಜ್ಯಬುದ್ಧಿ' ಆಗ ಇತ್ತು. ಪಿ. ಯು. ಸಿ.ಯಲ್ಲಿ ಓದುತ್ತಿದ್ದಾಗ ಅದು ಇರಲಿಲ್ಲ. ಯಾವಾಗ ಹೊರಟು ಹೋಯಿತೋ ಹೇಳಲಾರೆ; ಆದರೆ ಹೋದದ್ದಕ್ಕೆ ಕಾರಣವನ್ನು ಹೇಳಬಲ್ಲೆ : ದೇವರು ಕರುಣಾಮಯಿ ಎಂದು ಎಲ್ಲರೂ ಹೇಳುತ್ತಾರೆ. ಅದು ನಿಜವಾದರೆ ಅವನು ನನ್ನ ತಂದೆಗೆ ನಡುವಯಸ್ಸಿನಲ್ಲಿ ಹನ್ನೆರಡು ವರ್ಷ ನರಳಿ ಸಾಯುವ ಕಷ್ಟವನ್ನೇಕೆ ಕೊಟ್ಟ? ನನ್ನ ಅಜ್ಜಿಗೆ ಮಗ ಹಾಗೆ ಸಾಯುವುದನ್ನು ನೋಡುವ ಸಂಕಟವನ್ನೇಕೆ ಕೊಟ್ಟ? ಹಸುಗೂಸು ಮೈಥಿಲಿಗೆ ಮದುವೆಯಾಗಿ ಆರು ತಿಂಗಳೊಳಗೆ ವಿಧವೆಯಾಗುವ ಸಂಕಟವನ್ನೇಕೆ ಕೊಟ್ಟ? ಮುದ್ದೆಭಟ್ಟರ ಸಂಸಾರ ಒಬ್ಬರೂ ಉಳಿಯದಂತೆ ಎರಡು ದಿನಗಳಲ್ಲಿ ತೊಡೆದು ಹೋಯಿತಲ್ಲ, ಅದನ್ನೇಕೆ ತಪ್ಪಿಸಲಿಲ್ಲ? ದೇವರಿದ್ದರೆ ಈ ಸಂಕಟ ಇರಬಾರದು; ಈ ಸಂಕಟವಿದ್ದರೆ ದೇವರು—ಕರುಣಾಮಯನಾದ ದೇವರು—ಇರುವುದು ಸಾಧ್ಯವಲ್ಲ—ಇಷ್ಟು ಸರಳ ನನ್ನ ತರ್ಕ.

ಅದಕ್ಕೆ ತತ್ವ ಸೂಕ್ಷ್ಮಗಳ ಸೋಂಕೇನೂ ಇರಲಿಲ್ಲ. 'ಕರ್ಮ'ದ ಮಾತನ್ನು ಕೇಳಿದ್ದೆನಾದರೂ ಆ ವಾದದ ವಿವರಗಳೇನೂ ನನಗೆ ತಿಳಿದಿರಲಿಲ್ಲ. ಆಗಿನ ಸರಳ ತರ್ಕ ಈಗಲೂ ಉಳಿದಿದೆ; ಅದರ ಜೊತೆಗೆ ಅಲ್ಪ ಸ್ವಲ್ಪ ತತ್ವ ಸೂಕ್ಷ್ಮಗಳೂ ಸೇರಿಕೊಂಡಿವೆ. ಸಂಕಟ ನಮ್ಮ ಕರ್ಮದ ಫಲ ಎನ್ನುವುದಾದರೂ—ನಮಗೆ ಇಂಥ ಭಯಂಕರ ಶಿಕ್ಷೆಯನ್ನೇ, ಕೊಡಬೇಕಾದದ್ದು? ಇಂಗ್ಲಿಷಿನಲ್ಲಿ "Vengeance is mine, saith the Lord" (ಸೇಡು ತೀರಿಸುವುದು ನನ್ನ ಕೆಲಸ ಎಂದು ಹೇಳುತ್ತಾನೆ, ದೇವರು) ಎಂಬ ಮಾತಿದೆ. "ನೀನು ಸೇಡು ತೀರಿಸಿಕೊಳ್ಳುವ ಕೆಲಸಕ್ಕೆ ಕೈಹಾಕಬೇಡ" ಎಂದು ಮಾನವನನ್ನು ಎಚ್ಚರಿಸುವ ಮಾತಾದರೆ, ಅದನ್ನು ಒಪ್ಪಬಹುದು. ಆದರೆ ದೇವರು ಸೇಡು ತೀರಿಸಿಕೊಳ್ಳುತ್ತಾನೆಂದು ಒಪ್ಪಲಾಗುವುದಿಲ್ಲ. ಕರುಣಾಮಯನಾದ ದೇವರಿಗೆ "A tooth for a tooth, an eye for an eye" (ಹಲ್ಲಿಗೆ ಪ್ರತಿಯಾಗಿ ಹಲ್ಲು, ಕಣ್ಣಿಗೆ ಪ್ರತಿಯಾದ ಕಣ್ಣು" ಎನ್ನುವ ಮನೋವೃತ್ತಿಯನ್ನು ಆರೋಪಿಸಬಹುದೆ! ನಮ್ಮ ಹಿಂದೂಧರ್ಮ ಈ ಪ್ರಶ್ನೆಗೆ ಏನು ಸಮಾಧಾನ ಹೇಳುತ್ತದೆಯೋ, ಅದು ನನಗೆ ತಿಳಿದಿರಲಿಲ್ಲ. "ಕರ್ಮದ ಹಿಂದೆ ಕರ್ಮಫಲ ಬಂದೇ ಬರುತ್ತದೆ. ಅದನ್ನೂ ದೇವರು ತಡೆಯಲಾರ" ಎಂಬ ಮಾತನ್ನು ಕೇಳಿದ್ದೆ. ಅದು ನಿಜವಾದರೆ "ದೇವರು ಸರ್ವಶಕ್ತ" ಎಂಬ ಮಾತು ಸುಳ್ಳಾಯಿತಲ್ಲ.

ಅಂತೂ ನಾನು ಎಂಟ್ರೆನ್ಸ್ ಕ್ಲಾಸಿಗೆ ಕಾಲಿಡುವ ವೇಳೆಗೆ ದೇವರ ಅಸ್ತಿತ್ವದ ವಿಷಯದಲ್ಲಿ ಸ್ಪಷ್ಟವಾದ ಅಪನಂಬಿಕೆಯಿತ್ತು. ಅದರ ಅರಿವಾಗುವುದಕ್ಕೆ ಮುಂಚೆಯೇ ಅದು ನನ್ನಲ್ಲಿ ಮನೆಮಾಡಿಕೊಂಡಿತ್ತು. ಉಪನಿಷತ್ತು, ಭಗವದ್ಗೀತೆ ಮುಂತಾದ ಮತಗ್ರಂಥಗಳನ್ನು ಓದಿ ಸಂದೇಹಗಳನ್ನು ಪರಿಹರಿಸಿಕೊಳ್ಳಬೇಕೆಂಬ ಆಸಕ್ತಿಯೂ ಇರಲಿಲ್ಲ.

ನನ್ನ ಓದು ಬಹುಮಟ್ಟಿಗೆ ಇಂಗ್ಲಿಷ್ ಸಾಹಿತ್ಯಕ್ಕೂ ಲೌಕಿಕ ವಿಷಯಗಳಿಗೆ ಸಂಬಂಧ ಪಟ್ಟ ಇಂಗ್ಲಿಷ್ ಪುಸ್ತಕಗಳಿಗೂ ಸೀಮಿತವಾಗಿತ್ತು. ನನ್ನ ಆಸಕ್ತಿ ಉತ್ಸಾಹಗಳು ಕೂಡ ಬಹುಮಟ್ಟಿಗೆ ಲೌಕಿಕ ಜೀವನಕ್ಕೆ ಸಂಬಂಧಪಟ್ಟವು. ಅಂದ ಮೇಲೆ ಮತ ದೇವರು ಇತ್ಯಾದಿಗಳಿಗೆ ಸಂಬಂಧಪಟ್ಟ ವಿಚಾರಗಳು ಮನಸ್ಸಿಗೆ ಬರುತ್ತಿದ್ದದ್ದೇ ಅಪರೂಪ. ಆಗ ನನಗೆ ಆಪ್ತರಾಗಿದ್ದ ಇಬ್ಬರು ಮೂವರು ಸ್ನೇಹಿತರಿಗೆ ಕೂಡ ಮತದ ವಿಷಯದಲ್ಲಿ ಆಸಕ್ತಿಯಿಲ್ಲ. ನಾನು ಓದಿದ ಯಾವುದಾದರೂ ಪುಸ್ತಕದಲ್ಲಿ ದೇವರ ವಿಷಯ ಬಂದಾಗ ನನ್ನಲ್ಲಿ ಮೇಲೆ ಕಾಣಿಸಿರುವ ವಿಚಾರಸರಣಿ ಜಾಗ್ರತವಾಗುತ್ತಿತ್ತು. ಉಳಿದಂತೆ ಮತದ ವಿಷಯದಲ್ಲೂ ದೇವರ ವಿಷಯದಲ್ಲೂ ನನ್ನ ಮನಸ್ಸು ಜಡವಾಗಿತ್ತು.

ಸ್ಥೂಲವಾಗಿ ಹೇಳಬಹುದಾದರೆ ಆಗ ನನ್ನ ಮನಸ್ಸಿನ ಸ್ಥಿತಿ ಹೀಗಿತ್ತು. ನನಗೆ ಹಿಂದೂಮತ ಬೇಕು; ಆದರೆ ಅದರ ವಿಷಯ ತಿಳಿದುಕೊಳ್ಳುವಷ್ಟು ಉತ್ಸಾಹವಾಗಲಿ ಆಸಕ್ತಿಯಾಗಲಿ ಇಲ್ಲ. ನಮ್ಮ ಮತಧರ್ಮದ ಆಚರಣೆಗಳೂ ಬೇಕು, ಅವು ನನಗೆ ಹಿತ; ಆದರೆ ಅವುಗಳ ವಿಷಯದಲ್ಲಿ ಪೂಜ್ಯಬುದ್ಧಿಯಿಲ್ಲ. ನಮ್ಮ ದೇಶದ ವಿಷಯದಲ್ಲಿ ಹೆಮ್ಮೆ; ಆದರೆ ಈಗ ಗುಲಾಮಗಿರಿಯನ್ನು ಜಡವಾಗಿ ಸಹಿಸುತ್ತಿದ್ದೇವಲ್ಲ ಎಂದು ಹಳಿದುಕೊಳ್ಳುವ ಪ್ರವೃತ್ತಿ. "ಈ ಪಾದ್ರಿಗಳು ನಮ್ಮ ಜನರನ್ನು ತಮ್ಮ ಮತಕ್ಕೆ ಸೆಳೆದುಕೊಳ್ಳುತ್ತಿದ್ದಾರಲ್ಲ" ಎಂದು ಕೋಪ; ಆದರೆ ಅವರ ಪವಿತ್ರ ಗ್ರಂಥವನ್ನು ಕುರಿತ ಮೆಚ್ಚಿಕೆ. ನಮ್ಮ ಪವಿತ್ರ ಗ್ರಂಥಗಳ ವಿಷಯದಲ್ಲಿ ಅಭಿಮಾನ; ಆದರೆ ಓದುತ್ತಿದ್ದದ್ದು ಮಾತ್ರ ಬೈಬಲ್. ವಿವೇಕಾನಂದರು ಅಮೆರಿಕದಲ್ಲಿ ಭಾರತದ ಧ್ವಜವನ್ನು ಹಾರಿಸಿದರಲ್ಲ ಎಂದು ಹೆಮ್ಮೆ; ಆದರೆ ಅವರ ಪುಸ್ತಕಗಳನ್ನು ಓದುವಷ್ಟು ಆಸ್ಥೆಯಿಲ್ಲ—"ಅವರನ್ನು ಹೊಗಳುವ ಜನ ಭಾರತದ ವಿಷಯದಲ್ಲಿ ಅಂಧಾಭಿಮಾನ ತಾಳಿದವರು, ನಮ್ಮ ಗುಲಾಮಗಿರಿಯನ್ನು ಮರೆಯಲು ವಿವೇಕಾನಂದರನ್ನು ಸಾಧನವಾಗಿ ಬಳಸುತ್ತಿದ್ದಾರೆ" ಎನ್ನುವ ಮನೋವೃತ್ತಿ. ಅದರಲ್ಲಿ "ನಾನು ಇವರೆಲ್ಲರ ಹಾಗಲ್ಲ. ವಸ್ತುನಿಷ್ಠೆಯನ್ನು ಬೆಳೆಸಿಕೊಂಡಿದ್ದೇನೆ" ಎಂಬ ಅಗ್ಗದ ಶ್ರೇಷ್ಠತಾಭಾವವೂ ಸೇರಿಕೊಂಡಿದ್ದಿರಬಹುದು.

ಇದೇ ನನ್ನ ಮನಸ್ಸಿನಲ್ಲಿ ನಡೆಯುತ್ತಿದ್ದ ಹಿಂದೋಳಲೀಲೆ.

೧೦. ನಾನು 'ದ್ವಿಜತ್ವ'ವನ್ನು ಪಡೆದ ಬಗೆ

'ಎಂಟ್ರೆನ್ಸ್' ಪರೀಕ್ಷೆಯನ್ನು ಪಾಸುಮಾಡಿ ಕಾಲೇಜನ್ನು ಸೇರುವ ವೇಳೆಗೆ ನನ್ನ ಬದುಕಿನಲ್ಲಿ ಬಹಳ ಪರಿಣಾಮಕಾರಿಯಾದ ಮಾರ್ಪಾಟು ನಡೆದಿತ್ತು. ನಾವು—ಬ್ರಾಹ್ಮಣರು—ನಮ್ಮನ್ನು 'ದ್ವಿಜರು' ಎಂದು ಕರೆದುಕೊಳ್ಳುತ್ತೇವೆ. ನಮಗೆ ಎರಡು ಜನ್ಮ. ಮೊದಲ ಜನ್ಮ, ಎಲ್ಲರ ಜನ್ಮದಂತೆ, ಪ್ರಕೃತಿ ಸಿದ್ಧವಾದದ್ದು. ಎರಡನೆಯದು ಸಂಸ್ಕಾರಗಳಿಂದ ಬರುವ ಜನ್ಮ. ಈ ಸಂಸ್ಕಾರಗಳಲ್ಲಿ ಮುಖ್ಯವಾದದ್ದು ಉಪನಯನ; ಆಡುಮಾತಿನಲ್ಲಿ ಹೇಳಬಹುದಾದರೆ 'ಮುಂಜಿ' ಮುಂಜಿಯಾದ ದಿನ ನಮಗೆ (ಅಂದರೆ ಬ್ರಾಹ್ಮಣ ಹುಡುಗರಿಗೆ, ಹುಡುಗಿಯರಿಗಲ್ಲ. ಹೆಂಗಸರಿಗೆ ವೇದಾಧಿಕಾರ ಕೊಡುವುದುಂಟೆ! ಶಾಂತಂ ಪಾಪಂ!!) ಗಾಯಿತ್ರೀಮಂತ್ರವನ್ನು ಉಪದೇಶಿಸುತ್ತಾರೆ. ಅದು ಅತ್ಯಂತ ರಹಸ್ಯವಾದ ಮಂತ್ರ. ಏತಕ್ಕೆ ರಹಸ್ಯವಾಯಿತು ಎಂಬುದೂ ರಹಸ್ಯ, ನಾನು

ಭೇದಿಸಲಾಗದ ರಹಸ್ಯ. ಅದು ಹಾಗಿರಲಿ. ಮುಂಜಿಯಾದ ದಿನದಿಂದ ಥಿಯರಿಯ ಪ್ರಕಾರ ನಾನು ದ್ವಿಜನಾದೆ; ವೇದಾಧಿಕಾರವನ್ನು ಪಡೆದೆ; ಅಂದರೆ: ಜ್ಞಾನಾರ್ಜನೆಗಾಗಿ ಶ್ರಮಿಸುವ ಹಕ್ಕನ್ನು ಪಡೆದೆ. 'ಜ್ಞಾನ' ಎನ್ನುವುದು ವೇದಾಧ್ಯಯನದಿಂದ ಬರುವ ಫಲ. ಆ ಫಲ ನನಗೆ ದೊರಕಿತೆ? ಅದನ್ನು ಪಡೆಯಲು ಆಚರಿಸಬೇಕಾದ ಕರ್ಮಗಳನ್ನು ನಾನು ಆಚರಿಸಿದೆನೆ? ಅರ್ಥಾತ್, ಮುಂಜಿಯಾದ ದಿನದಿಂದ ನಾನು ನಿಜವಾಗಿ ದ್ವಿಜನಾದೆನೆ?

ಸಂಧ್ಯಾವಂದನೆಯ ವಿಷಯದಲ್ಲಿ ನಾನು ಮಾಡುತ್ತಿದ್ದ ಮೋಸವನ್ನು ಹಿಂದೆಯೇ ಒಪ್ಪಿಕೊಂಡಿದ್ದೇನೆ. ಇನ್ನು ವೇದದ 'ಅಧ್ಯಯನ': ಪುರೋಹಿತರು ಮಂತ್ರಗಳ ಉಚ್ಚಾರಣೆಯನ್ನು ಕಲಿಸಿದರೇ ಹೊರತು ಅವುಗಳ ಅರ್ಥವನ್ನು ಖಚಿತವಾಗಿ ಹೇಳಲಿಲ್ಲ. ಉಚ್ಚಾರಣೆಯಲ್ಲೂ ಲೋಪವಿತ್ತು. ಕಿರಿಯ ಜೋಯಿಸರೊಬ್ಬರು "ಯೋ ವಶ್ಶಿವತಮೋರಸಃ" ಎಂದು ಪದ ವಿಭಾಗ ಮಾಡಿದ್ದನ್ನು ಹಿಂದೆ ನೆನೆದುಕೊಂಡಿದ್ದೇನೆ. ಸಂಧ್ಯಾವಂದನೆ, ಮಾಧ್ಯಾಹ್ನಿಕ, ಸ್ವಲ್ಪಕಾಲ ಕಳೆದ ಮೇಲೆ ದೇವತಾರ್ಚನೆ—ಇವುಗಳ ಆಚರಣೆಯಲ್ಲಿ ಸೇರಿದ್ದಷ್ಟು ವೇದಮಂತ್ರಗಳು ಹೊರತು ಬೇರೆ ಯಾವ ಮಂತ್ರಗಳನ್ನೂ ನನಗೆ ಯಾರೂ ಕಲಿಸಲಿಲ್ಲ; ಕಲಿಸಬೇಕೆಂದು ಅವರಿಗೆ ತೋರಲು ಇಲ್ಲ; ತೋರಿದ್ದರೂ ಕಲಿಸಲಾಗುತ್ತಿರಲಿಲ್ಲ—ಅವರಿಗೇ ಏನೂ ಬರುತ್ತಿರಲಿಲ್ಲವಾದ್ದರಿಂದ. ಇದೆಲ್ಲ ಯಾರನ್ನೂ ಹಳಿಯುವ ಮಾತಲ್ಲ. ನಮ್ಮ ಪುರೋಹಿತರು ಪಂಡಿತರಾಗಬೇಕಾದರೆ ಮೈಸೂರಿಗೆ ಹೋಗಿ ಪಾಠಶಾಲೆಗೆ ಸೇರಬೇಕು. ಬಡತನದಿಂದಾಗಿ ಅದು ಸಾಧ್ಯವಲ್ಲ. ಆದ್ದರಿಂದ ಹಳ್ಳಿಯಲ್ಲಿ ದೊರೆತಷ್ಟನ್ನು ಮಾತ್ರ ಕಲಿತರು. ಯಾವ ವಾತಾವರಣದಲ್ಲಿ, ಎಂದಿನ ವಾತಾವರಣದಲ್ಲಿ, ಜಪತಪ ಅಧ್ಯಯನಾದಿಗಳ ಆಚರಣೆ ಸುಲಭವಾಗಿತ್ತೋ, ಕೀರ್ತಿಪ್ರದವಾಗಿತ್ತೋ—ಆ ವಾತಾವರಣ ಈ ಶತಮಾನದ ಆದಿಭಾಗಕ್ಕಿಂತ ಮುಂಚೆಯೇ ಕೊನೆಗಂಡಿತ್ತು. ನನ್ನ ಚಿಕ್ಕಪ್ಪಂದಿರು ಕೂಡ ಆಹ್ನಿಕಗಳ ವಿಷಯದಲ್ಲಿ ಅಷ್ಟೇನೂ ಕಟ್ಟುನಿಟ್ಟಾಗಿರಲಿಲ್ಲ. ಈಗಲೂ ಅಲ್ಲೊಬ್ಬರು ಇಲ್ಲೊಬ್ಬರು ಹಿಂದಿನ ಆಚರಣೆಗಳನ್ನು ಶ್ರದ್ಧೆಯಿಂದ ನಡೆಸಿಕೊಂಡು ಬರುತ್ತಿದ್ದಾರೆಂದು ಬಲ್ಲೆ. ಪ್ರತಿಕೂಲ ಕಾಲದಲ್ಲೂ ತಾವು ನಂಬಿದ ವಿಷಯಗಳಲ್ಲಿ ಶ್ರದ್ಧೆಯನ್ನು ಉಳಿಸಿಕೊಂಡದ್ದಕ್ಕಾಗಿ ಅವರಿಗೆ ಗೌರವ ಸಲ್ಲಬೇಕು—ಆ ನಂಬಿಕೆಯನ್ನು ನಾವು ಒಪ್ಪಲಿ ಬಿಡಲಿ. ಆದರೆ ಒಟ್ಟಿನಲ್ಲಿ ಮತಾಚರಣೆಗಳ ಬೆಲೆ ಇಳಿದಿದೆ. ಆ ಸರಕಿಗೆ ಬೇಡಿಕೆಯೇ ಕಡಮೆಯಾಗಿದೆ. ಪುರೋಹಿತ ಎಂದೂ ಬಡವನಾಗಿಯೇ ಇದ್ದ. ಈಗ ನಿರುದ್ಯೋಗದ ಕತ್ತಿ ಅವನ ತಲೆಯ ಮೇಲೆ ತೂಗಾಡುತ್ತಿದೆ. ಬಹುಶಃ ಇನ್ನು ಮುಂದೆ ಯಾರೂ ತಾವಾಗಿಯೇ ಉದ್ದೇಶಪೂರ್ವಕವಾಗಿ ವೈದಿಕವೃತ್ತಿಯನ್ನು ಆಶ್ರಯಿಸುವುದಿಲ್ಲ; ಬೇರೆ ದಾರಿ ಹಿಡಿಯುವುದು ಅಸಾಧ್ಯವಾದಾಗ ಮಾತ್ರ ಆ ವೃತ್ತಿಗೆ ಬಂದಾರು.

ನಾನು ವೇದಾಧಿಕಾರ ಪಡೆದದ್ದು ಕೇವಲ 'ನಾಮಕಾವಾಸ್ತೆ'. ಬ್ರಾಹ್ಮಣನ ಕನಿಷ್ಠತಮ ಕರ್ತವ್ಯವಾದ ಸಂಧ್ಯಾದಿ ನಿತ್ಯಕರ್ಮಗಳನ್ನು ನಾನು ಮಾಡಲಿಲ್ಲ. ಜಾತಿಗೆ ಸಂಬಂಧಪಟ್ಟ ನಿಯಮಗಳನ್ನು ಪಾಲಿಸಲಿಲ್ಲ. ಅಬ್ರಾಹ್ಮಣರ (ಅವರಲ್ಲೂ ಕ್ರೈಸ್ತರ!) ಮನೆಯಲ್ಲಿ ಟೀ ಕುಡಿದಿದ್ದೆ. ಕೊನೆಗೆ ಊಟಕ್ಕೆ ಕೂತಾಗ ಪರಿಷೇಚನೆ ಮಾಡುವುದು,

ಚಿತ್ರಾಹುತಿ ಇಡುವುದು, ಆಪೋಶನ ತೆಗೆದುಕೊಳ್ಳುವುದು—ಇವನ್ನು ಕೂಡ ಮಂತ್ರ ಹೇಳದೆ ಯಾಂತ್ರಿಕವಾಗಿ ಮಾಡುತ್ತಿದ್ದೆ. ಪುರುಡು ಸೂತಕಗಳನ್ನು ಆಚರಿಸುತ್ತಿರಲಿಲ್ಲ. ಆಚರಣೆಗಳನ್ನು ನಟಿಸಬಹುದಾದ ಕಡೆ, ನಟಿಸಲೇಬೇಕಾದ ಕಡೆ, ನಟಿಸುತ್ತಿದ್ದೆ. ತಲೆಯಲ್ಲಿ ಹಿಂಜುಟ್ಟು ಉಳಿದಿತ್ತು. ಆದರೆ ಕಾಲೇಜಿಗೆ ಸೇರಿದ ವರ್ಷ (ಆ ವೇಳೆಗೆ ಮುಖ ಕೆತ್ತಿಕೊಳ್ಳದೆ ಕ್ಷೌರ ಮಾಡಿಕೊಳ್ಳಬಹುದಾದ ಕತ್ತಿ, 'ಸೇಫ್ಟಿ ರೇಸರ್', ಮಾರಾಟಕ್ಕೆ ಬಂದಿತ್ತು) ನಾನೇ ಮುಖಕ್ಷೌರ ಮಾಡಿಕೊಳ್ಳುವುದು ಆರಂಭವಾಯಿತು. ಮೊದಮೊದಲು ಈ ಭದ್ರಾಕರಣ ರಾತ್ರಿ ೧೦ ಘಂಟೆಯ ಮೇಲೆ ನನ್ನ ರೂಮಿನ ಸುರಕ್ಷಿತ ಆವರಣದಲ್ಲಿ ನಡೆಯುತ್ತಿತ್ತು. ಆದರೆ ದಿನಗಟ್ಟಲೆ ನನ್ನ ಮುಖದ ಮೇಲೆ ಬೆಳೆಯೇ ಕಾಣದಂತಾದ ಮೇಲೆ ಗುಟ್ಟು ರಟ್ಟಾಗಲೇ ಬೇಕಾಯಿತು, ತಾಯಿ ಕಣ್ಣೀರು ಹಾಕಿದರು: ನಾನೇನು ಬ್ರಾಹ್ಮಣನೋ ಹಜಾಮನೋ? ಅಜ್ಜ ಎರಡು ದಿನ ಸುಮ್ಮನಿದ್ದು ನನ್ನ ದುರಾಚಾರವನ್ನು ಜೀರ್ಣಿಸಿಕೊಂಡು "ಕಾಲೇಜಿಗೆ ಸೇರಿದ ಮೇಲೆ ಎಲ್ಲರ ಹಾಗೆ ಇರಬೇಕು ತಾನೆ!" ಎಂದು ನನ್ನ ಪಕ್ಷವನ್ನೇ ವಹಿಸಿದರು. ತಂದೆ "ಇದೊಂದೇ ಇವನಿಗೆ ಬಾಕಿ ಇದ್ದದ್ದು" ಎಂದುಕೊಂಡು ಬಿಸಿಯುಸಿರು ಬಿಟ್ಟರು. ನಾನು ದ್ವಿಜನಾಗಿ ಉಳಿದದ್ದು ಹುಟ್ಟು ಜುಟ್ಟು, ಇವೆರಡರಿಂದ ಮಾತ್ರ—ದ್ವಿಜತ್ವವನ್ನು ಈ ಬಾಹ್ಯ ಲಕ್ಷಣಗಳಿಂದ ನಿರ್ಣಯಿಸಬೇಕಾದರೆ!

ಬ್ರಾಹ್ಮಣಿಕೆಯ ಬಾಹ್ಯ ಲಕ್ಷಣಗಳು ಕಳಚಿಬಿದ್ದಂತೆ ನನ್ನ ಹೈಸ್ಕೂಲು ಸ್ನೇಹಿತರೂ ಕಳಚಿಕೊಂಡು ಹೋದರು—ಎಂಟ್ರೆನ್ಸ್ ಕ್ಲಾಸಿಗೆ ಬರುವ ವೇಳೆಗೆ ನಾನು ಬದುಕಿನಲ್ಲಿ ಹೊಸ ಘಟ್ಟವನ್ನು ತಲಪಿದೆ ಎನ್ನುವುದಕ್ಕೆ ಇದೂ ಒಂದು ಕಾರಣ. ವೆಸ್ಲಿಯನ್ ಸ್ಕೂಲಿನಲ್ಲಿ ನನಗೆ ಅತ್ಯಂತ ಆಪ್ತರಾಗಿದ್ದವರು ಮೂರು ಜನ: ವೈದ್ಯ (ವೆಂಕಟಕೃಷ್ಣಯ್ಯ) ರಾಮಕೃಷ್ಣಶಾಸ್ತ್ರಿ, ಗೋವಿಂದಸ್ವಾಮಿ. ವೈದ್ಯ (ಇದು ನನ್ನ ಗುರು ವೀಯಸ್ಸರು ಅವನಿಗೆ ಇಟ್ಟ ಹೆಸರು) ದೈವಭಕ್ತ, ಕರ್ಮದಲ್ಲಿ ಶ್ರದ್ಧೆಯುಳ್ಳವನು. ಅವನು ಎಸ್. ಎಸ್. ಎಲ್. ಸಿ. ಪಾಸಾದೊಡನೆ ರೈಲ್ವೆ ಇಲಾಖೆಯಲ್ಲಿ ಕೆಲಸಕ್ಕೆ ಸೇರಿಕೊಂಡ; ಯೌವನದಲ್ಲೇ ತೀರಿಕೊಂಡ. ರಾಮಕೃಷ್ಣ ಶಾಸ್ತ್ರಿ ವೈದಿಕ ಮನೆತನದಲ್ಲಿ ಹುಟ್ಟಿದವನು; ಸಂಧ್ಯಾದಿ ಕರ್ಮಗಳನ್ನು ಮಾಡುತ್ತಿದ್ದನಾದರೂ (ನಟಿಸುತ್ತಿದ್ದನೆ?) ಅವನ ಕರ್ಮಶ್ರದ್ಧೆ ಹೇಳಿಕೊಳ್ಳುವಂಥದೇನಲ್ಲ. ಅವನು ಬೆಂಗಳೂರಿಗೆ ಹೋಗಿ ಇಂಜನಿಯರಿಂಗ್ ಕಾಲೇಜಿಗೆ ಸೇರಿದ. ಅವನನ್ನು ನಾನು ಮತ್ತೆ ಕಂಡದ್ದು ಸುಮಾರು ೩೫ ವರ್ಷಗಳು ಕಳೆದ ಮೇಲೆ; ಮಾತಾಡಿದ್ದು ಕೇವಲ ೧೦–೧೫ ನಿಮಿಷಗಳ ಕಾಲ. ಅವನ ಸ್ನೇಹ ೧೯೧೮ಕ್ಕೇ ಕೊನೆಗಂಡಿತು. ಅವನ ಮಗಳು ಶ್ರೀಮತಿ ರತ್ನಮ್ಮ ಮತ್ತು ಆಕೆಯ ಪತಿ ಶ್ರೀ ನಾರಾಯಣಸ್ವಾಮಿ ನನಗೆ ೧೯೬೦ನೆಯ ದಶಕದಲ್ಲಿ ಗುರುತಾದರು; ಅವರಿಗೂ ನಮ್ಮ ಮನೆಯವರೆಲ್ಲರಿಗೂ ನಿಕಟ ಸ್ನೇಹ ಬೆಳೆದಿದೆ.

ಗೋವಿಂದಸ್ವಾಮಿಗೂ ನನ್ನಂತೆ ಓದಿನ ಹುಚ್ಚು ಹಿಡಿದಿತ್ತು. ಆದ್ದರಿಂದ ಅವನೊಡನೆ ಸ್ನೇಹ ಸಲಿಗೆಗಳು ಹೆಚ್ಚಾಗಿ ಬೆಳೆದವು. ಅವನು ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿ ಬಿ.ಎಸ್.ಸಿ. ಆದ ಮೇಲೆ ಮೆಡಿಕಲ್ ಕಾಲೇಜಿಗೆ ಸೇರಿದ. ಕೆಲವು ವರ್ಷ ಅವನ ಸಹವಾಸವೂ ನನಗೆ ತಪ್ಪಿಹೋಯಿತು. ಅದು ಮತ್ತೆ ದೊರೆತ ವಿಷಯ ಮುಂದೆ ಬರುತ್ತದೆ.

ಸ್ನೇಹಿತರು ದೂರವಾದಂತೆ ನನ್ನ ಆಸಕ್ತಿಗಳೂ ಬೇರೆಯಾದವು. ಅಕ್ಕಿಹೆಬ್ಬಾಳಿನ ಜೀವನದಲ್ಲಿ ಆಸಕ್ತಿ ಕಡಮೆಯಾಯಿತು. ನನ್ನನ್ನು ಅಲ್ಲಿಗೇ ಕಳಿಸಿ ಜಮೀನಿನ ಕೆಲಸ ವಹಿಸಿಕೊಡುವ ಯೋಚನೆ ತಾನಾಗಿಯೇ ನಿಂತುಹೋಯಿತು. ಅದರ ಮಾತನ್ನು ಮತ್ತೆ ಎತ್ತಿದ್ದರೂ ನಾನೇ ಅದನ್ನು ವಿರೋಧಿಸುತ್ತಿದ್ದೆ. ಇನ್ನು ಮುಂದೆ ನನ್ನ ಪಾಲಿಗೆ ಅಕ್ಕಿಹೆಬ್ಬಾಳು ವಿಹಾರಸ್ಥಾನವಾಗಬಹುದೇ ಹೊರತು ಕಾರ್ಯಕ್ಷೇತ್ರವಾಗಲಾರದು ಎಂಬುದು ನನಗೆ ಖಚಿತವಾಗಿತ್ತು.

ಎಂಟ್ರೆನ್ಸ್ ಕ್ಲಾಸಿಗೆ ಸೇರಿದ ಮೇಲೆ ಪಠ್ಯವಿಷಯಗಳೂ ಬೇರೆಯಾದವು. ನನಗೆ ಬೇಸರ ತರುತ್ತಿದ್ದ ಗಣಿತಶಾಸ್ತ್ರಕ್ಕೆ ತರ್ಪಣಕೊಟ್ಟು ಕಳಿಸಿದ್ದಾಯಿತು. ನಾಲ್ಕು–ಐದು–ಆರನೆಯ ಫಾರಮ್ಮುಗಳಲ್ಲಿ ನಾವು ಇಂಗ್ಲೆಂಡಿನ ಚರಿತ್ರೆಗೆ ಹೆಚ್ಚು ಗಮನಕೊಟ್ಟೆವಾದರೂ ಭಾರತದ ಚರಿತ್ರೆಯನ್ನೂ ಓದಿದೆವು. ಎಂಟ್ರೆನ್ಸಿನಲ್ಲಿ ಭಾರತದ ಇತಿಹಾಸ ಇದ್ದಂತೆ ನೆನಪಿಲ್ಲ. ಇಂಗ್ಲೆಂಡಿನ ಆರ್ಥಿಕ ಇತಿಹಾಸ ಪಠ್ಯವಾಯಿತು. ಇಂಗ್ಲಿಷ್ ಸಾಹಿತ್ಯಕ್ಕೆ ಹೆಚ್ಚು ಪ್ರಾಮುಖ್ಯ ಬಂತು. ಜೊತೆಗೆ ಲಾಜಿಕ್—ತರ್ಕಶಾಸ್ತ್ರ. ಇದು ಭಾರತೀಯ ತರ್ಕಶಾಸ್ತ್ರವಲ್ಲ. ಗಾಯತ್ರೀ ಮಂತ್ರಕ್ಕೆ ಹೇಗೆ 'ವಿಶ್ವಾಮಿತ್ರ ಋಷಿಃ' ಎನ್ನಬೇಕೋ ಹಾಗೇ ಗ್ರೀಕರ 'ಡಿಡಕ್ಟಿವ್ ಲಾಜಿಕ್'ಗೆ (deductive logic) ಅರಿಸ್ಟಾಟಲ್ ಋಷಿಃ' ಎನ್ನಬೇಕು. ಎಂಟ್ರೆನ್ಸ್ ಪಾಸಾಗಿ ಕಾಲೇಜಿಗೆ ಸೇರಿದೊಡನೆ ಕನ್ನಡಕ್ಕೆ ಬಿದಾಯ ಹೇಳಿ ಫ್ರೆಂಚ್ ತೆಗೆದುಕೊಂಡೆ. ಐಚ್ಛಿಕವಾಗಿ ನಾನು ಆಯ್ದುಕೊಂಡದ್ದು : ೧ ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ; ೨ ತತ್ವಶಾಸ್ತ್ರ—ಭಾರತೀಯ ತತ್ವಶಾಸ್ತ್ರವಲ್ಲ, ಪಾಶ್ಚಾತ್ಯ ತತ್ವಶಾಸ್ತ್ರ ಮತ್ತು ನೀತಿಶಾಸ್ತ್ರ. ತತ್ವಶಾಸ್ತ್ರವನ್ನು ತೆಗೆದುಕೊಂಡದ್ದಕ್ಕೆ ಮುಖ್ಯ ಕಾರಣ ರಾಧಾಕೃಷ್ಣನ್‌ರ ಶಿಷ್ಯನಾಗಬೇಕೆಂಬ ಆಸೆ.

ನಾವು ಎಂದೋ ಮಾಡಿದ ಕೆಲಸವನ್ನು ಕುರಿತು ದಶಕಗಳು ಕಳೆದ ಮೇಲೆ ಯೋಚನೆ ಮಾಡಿದಾಗ ಅವುಗಳಲ್ಲಿ ಯಾವುದೋ ಒಳ ಉದ್ದೇಶವನ್ನು, ಯಾವುದೋ ವಿಶೇಷಾರ್ಥವನ್ನು, ಕಾಣುವಂತಾಗುತ್ತದೆ. ಆ ಉದ್ದೇಶ ಅರ್ಥಗಳು ಕೆಲಸಮಾಡಿದ ಕಾಲದಲ್ಲಿ ವಾಸ್ತವವಾಗಿ ಇದ್ದವೆ? ಅಥವಾ ಅವನ್ನು ಹೊಸ ಅನುಭವ ಪಡೆದ ಮೇಲೆ ಆರೋಪಿಸಿದೆವೊ? ಈ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. ನನಗೆ ಈಗ ಅನ್ನಿಸುತ್ತಿದೆ ಆ ಕಾಲದಲ್ಲಿ ನನ್ನ ಮನಸ್ಸು ಪಶ್ಚಿಮದ ನಾಗರಿಕತೆಗೂ ಸಂಸ್ಕೃತಿಗೂ ಮಾರು ಹೋಗಿತ್ತೇನೊ. ಆದ್ದರಿಂದಲೇ ನಾನು ನಮ್ಮ ಸಂಸ್ಕೃತಿಗೆ ಸಂಬಂಧಪಟ್ಟದ್ದೇನನ್ನೂ ಅಧ್ಯಯನಕ್ಕಾಗಿ ಆರಿಸಿಕೊಳ್ಳಲಿಲ್ಲ, ಎಂದು. ಆಗ ನನ್ನ ಮನಸ್ಸಿನಲ್ಲಿದ್ದ ಹೊಯ್ದಾಟವನ್ನು 'ಹಿಂದೋಳಲೀಲೆ' ಎಂದು ಕರೆದಿದ್ದೇನೆ. ಉಯ್ಯಾಲೆ ಒಂದು ಕಡೆ ಎಷ್ಟು ದೂರ ತೂಗುತ್ತದೆಯೋ ಮತ್ತೊಂದು ಕಡೆಯೂ ಅಷ್ಟೇ ದೂರ ತೂಗುತ್ತದೆ. ನನ್ನ ಹಿಂದೋಳಲೀಲೆ ಈ ನಿಯಮವನ್ನು ಹೇಗೋ ಮುರಿದು ನನ್ನನ್ನೂ ಪಶ್ಚಿಮದ ಕಡೆಗೇ ಹೆಚ್ಚು ದೂರ ಒಯ್ದಿರಬಹುದು. ನಾನು ಕನ್ನಡವನ್ನೂ ಭಾರತೀಯ ತತ್ವಶಾಸ್ತ್ರವನ್ನೂ ಆಯ್ದುಕೊಳ್ಳದಿದ್ದಕ್ಕೆ ಅದೇ ಕಾರಣವಿರಬಹುದು. ಇದು ನನ್ನ ಅನಿಸಿಕೆ, ಅಷ್ಟೆ. ಅದು ಹೇಗೇ ಇರಲಿ, ನನ್ನ ಆಯ್ಕೆಗಾಗಿ ನಾನು ಎಂದೂ ಪಶ್ಚಾತ್ತಾಪ ಪಟ್ಟಿಲ್ಲ. ನಾನು ಹಿಡಿದ ದಾರಿ ನನಗೆ ಅತ್ಯಂತ ಸಂತೋಷಕೊಟ್ಟಿದೆ. ಅಲ್ಲದೆ, ಈಗ ಉಯ್ಯಾಲೆ ಎರಡು ಕಡೆಗೂ ಸಮವಾಗಿಯೇ ತೂಗುತ್ತಿದೆ.

ಅಂತೂ ನಾನು ಹೈಸ್ಕೂಲು ಮತ್ತು ಎಂಟ್ರೆನ್ಸ್ ಕ್ಲಾಸುಗಳಲ್ಲಿದ್ದ ನಾಲ್ಕು ವರ್ಷದ ಅವಧಿ ಮುಗಿಯುವುದರೊಳಗೆ ನನ್ನಲ್ಲಿ—ಬಹುಶಃ ಆ ಕಾಲದ ನೂರಾರು ಯುವಕರಲ್ಲಿ—ದೊಡ್ಡದೊಂದು ಮಾರ್ಪಾಟು ನಡೆದಿತ್ತು. ಪುರಾತನ ಮತಧರ್ಮ ಸಂಪ್ರದಾಯಗಳು "ಇದನ್ನು ದಾಟಬೇಡ" ಎಂದು ಹಾಕಿದ್ದ ಲಕ್ಷ್ಮಣರೇಖೆಯನ್ನು ಕೆಲವು ಕಡೆಗಳಲ್ಲಾದರೂ ನಾನು ಎಂದೋ ದಾಟಿದ್ದೆ. ಈ ಸಂದರ್ಭದಲ್ಲಿ ಲಕ್ಷ್ಮಣರೇಖೆ ನಿಜವಾಗಿ ರೇಖೆಯಲ್ಲ; ಅದೊಂದು ವಾರಸುದಾರರಿಲ್ಲದ ಪ್ರಾಂತ, no man's land. ಅದರ ಈ ಅಂಚಿನಲ್ಲೂ ಮಧ್ಯದಲ್ಲೂ ಆ ಅಂಚಿನಲ್ಲೂ ಅನಿಶ್ಚಿತ ಗತಿಯಿಂದ ಕನಸು ಕಾಣುತ್ತ ತಿರುಗುತ್ತಿದ್ದೆ; ಕಣ್ಣು ಬಿಡುವ ವೇಳೆಗೆ ಆ ಪ್ರಾಂತವನ್ನು ದಾಟಿದ್ದಾಗಿತ್ತು. ವಾಸ್ತವವಾಗಿ ನಾನು ದ್ವಿಜನಾದದ್ದು ಆ ಪ್ರಾಂತವನ್ನು—ಆ no man's land ಅನ್ನು—ದಾಟಿದಾಗ. ರೂಪಕವನ್ನು ಬದಲಾಯಿಸಿ ಹೇಳಬಹುದಾದರೆ: ಅಕ್ಕಿಹೆಬ್ಬಾಳಿನಲ್ಲಿ ನೆಲಸುವ ಆಸೆ, ಮತಶ್ರದ್ಧೆ, ಜಾತಿಶ್ರದ್ಧೆ, ದೈವಶ್ರದ್ಧೆ, ಇತ್ಯಾದಿಗಳ ಗರ್ಭದಿಂದ ಹೊರ ಬಂದೆನಾದ್ದರಿಂದ 'ದ್ವಿಜ'ನಾದ—ಹಿಂದಿನವರು ಆ ಪದಕ್ಕೆ ಕೊಟ್ಟಿದ್ದ ಅರ್ಥದಲ್ಲಲ್ಲ ವಾದರೂ.

ಭಾರತೀಯ ಭಾಷೆ (ಕನ್ನಡ, ಸಂಸ್ಕೃತ) ಇತಿಹಾಸಗಳನ್ನು ಬಿಟ್ಟದ್ದು 'ಪುನರಾಗಮನಾಯ', (ಮತ್ತೆ ಅವಕ್ಕೆ ಹಿಂದಿರುಗುವುದಕ್ಕೆ) ಎನ್ನುವಂತಾಗಿದೆ. ಅವೆಲ್ಲವನ್ನೂ ಬಿಟ್ಟೆ ಎನ್ನುವುದೇನೂ ಹೆಮ್ಮೆ ಪಡಬೇಕಾದ ವಿಷಯವಲ್ಲ. ಬಿಡುವುದು ಕೇವಲ ನಕಾರಾತ್ಮಕ ಕ್ರಿಯೆ. ಅದಷ್ಟು ಮಾತ್ರವಾದರೆ ದ್ವಿಜತ್ವ ಸಿದ್ಧಿಸುವುದಿಲ್ಲ. ದ್ವಿಜನಿಗೆ ವೇದಾಧ್ಯಯನ ಅವಶ್ಯವಾದ ಕಾರ್ಯವಷ್ಟೆ. ನಾನು ಆ ನಾಲ್ಕು ವರ್ಷಗಳಲ್ಲಿ 'ಋಗ್ವೇದೋಽಥ ಯಜುರ್ವೇದಸ್ಸಾಮವೇದೋಽಹ್ಯಥರ್ವಣಃ'—ಈ ನಾಲ್ಕು ವೇದ ಗಳನ್ನೇನೂ ಓದದಿದ್ದರೂ ಬೇರೊಂದು ಬಗೆಯ ವೇದಾಧ್ಯಯನವನ್ನು ಆರಂಭಿಸಿದ್ದೆ. 'ವೇದ' ಎಂದರೆ ಜ್ಞಾನ—ಅದು ಯಾವ ಬಗೆಯದೇ ಆಗಲಿ; ಯಾವ ಭಾಷೆಯಿಂದ, ಯಾವ ಗ್ರಂಥದಿಂದ, ಯಾವ ಅನುಭವದಿಂದ, ಪಡೆದದ್ದೇ ಆಗಲಿ. ಈ ವಿಶಾಲಾರ್ಥದ ವೇದ ಇತರರಿಗೆ ತಿಳಿಯದಂತೆ ಬಚ್ಚಿಡಬೇಕಾದ ರಹಸ್ಯವಲ್ಲ, ಭೇದಿಸಿ ಬಯಲಿಗೆಳೆದು ಎಲ್ಲರ ಗಮನಕ್ಕೂ ತರಬೇಕಾದ ರಹಸ್ಯ; ತನಗಿಂತ ಗಹನವಾದ ರಹಸ್ಯದ ಕಡೆಗೆ ಬೆರಳು ತೋರಿಸಿ ನಮ್ಮನ್ನು ಅಲ್ಲಿಗೆ ಸೆಳೆಯುವ ರಹಸ್ಯ. ಈ ರಹಸ್ಯವನ್ನು ಭೇದಿಸಲು ನೆರವಾಗುವುದೆಂದರೆ ಕೇವಲ ಸಂಪ್ರದಾಯದ ಅನುಸರಣೆಯಲ್ಲ; ಅನುಭವದ ವಿಶ್ಲೇಷಣೆ. ಇದರ ಅಧ್ಯಯನದಲ್ಲಿ ನಮಗೆ ಶ್ರುತಿಪ್ರಮಾಣ—ಆಪ್ತವಾಕ್ಯ ಪ್ರಮಾಣಗಳು ಸಾಕೆನ್ನಿಸುವುದಿಲ್ಲ. ಅನುಭವದ ಮೇಲೂ ನಮಗೆ ಹಿಂದಿನಿಂದ ಬಂದ ಅಭಿಪ್ರಾಯಗಳ ಮೇಲೂ ನಮ್ಮ ವಿಚಾರಶಕ್ತಿಯನ್ನು ಆಡಿಸುವುದು ಮುಖ್ಯವಾಗುತ್ತದೆ.

ಎರಡು ಮೂರು ಸಾವಿರ ವರ್ಷಗಳ ಹಿಂದೆ ಇಂದಿನ ಮಾನವಿಕಶಾಸ್ತ್ರಗಳೂ (ಅರ್ಥಶಾಸ್ತ್ರ ರಾಜ್ಯಶಾಸ್ತ್ರ ಇತ್ಯಾದಿ) ಭೌತಶಾಸ್ತ್ರಗಳೂ ಬೆಳೆದಿರಲಿಲ್ಲವಾದ್ದರಿಂದ 'ವೇದ' ವೊಂದೇ ಜ್ಞಾನವಾಗಿತ್ತು. ಈಗ ಲೌಕಿಕ ಜೀವನಕ್ಕೆ ಸಂಬಂಧಪಟ್ಟಂತೆ ಅರ್ಥಶಾಸ್ತ್ರ ರಾಜ್ಯಶಾಸ್ತ್ರ, ನೀತಿಶಾಸ್ತ್ರ, ಜೀವಶಾಸ್ತ್ರ ಮುಂತಾದುವೆಲ್ಲ ಬೆಳೆದಿವೆ, ಬೆಳೆಯುತ್ತಲೂ ಇವೆ. ಇವೆಲ್ಲಕ್ಕೂ ವೇದ ಎಂಬ ಹೆಸರು ಸಲ್ಲಬಹುದು. ಹಿಂದಿನ 'ವೇದ' ಅಳಿ

ತಕ್ಕದ್ದಲ್ಲ: ಈ ಹೊಸ ವೇದದಲ್ಲಿ ಅದೂ ಒಂದು ಭಾಗವಾಗತಕ್ಕದ್ದು. 'ವೇದ' ಎಂಬ ಪದಕ್ಕೆ ಈ ವಿಶಾಲವಾದ ಅರ್ಥವನ್ನು ಕೊಟ್ಟರೆ, ಹಿಂದಿನ ಚತುರ್ವೇದಗಳನ್ನು ಮಾತ್ರ ಅಧ್ಯಯನ ಮಾಡಿದವನು 'ವೇದಪಾರಂಗತ' ನಾಗಲಾರ. 'ತತೋಭೂಯ ಇವ ತೇ ತಮೋ (ಪ್ರವಿಶಂತಿ) ಯ ಉ ವಿದ್ಯಾಯಾಂ ರತಾಃ'* ಎಂಬ ಉಪನಿಷದ್ವಾಕ್ಯ ಅವನ ವಿಷಯದಲ್ಲಿ ಸತ್ಯವಾದೀತು, 'ವೇದವೇ ಎಲ್ಲ ಜ್ಞಾನ' ಎನ್ನುವುದಕ್ಕೆ ಬದಲಾಗಿ 'ಎಲ್ಲ ಜ್ಞಾನವೂ ವೇದ' ಎನ್ನುವುದು ಸತ್ಯಕ್ಕೆ ಹತ್ತಿರವಾದ ಮಾತು. ಈ ವೇದದ ಅಧ್ಯಯನದಲ್ಲಿ 'ಪಾರಂಗತತೆ' ಸಾಧ್ಯವೇ ಅಲ್ಲ— ಜ್ಞಾನಕ್ಕೆ ಎಲ್ಲೆಗಳಿಲ್ಲವಾದ್ದರಿಂದ.

ನಾನು ಕಾಲೇಜಿಗೆ ಸೇರಿ ನೀತಿಶಾಸ್ತ್ರ ರಾಜ್ಯಶಾಸ್ತ್ರ ಇತ್ಯಾದಿಗಳ ಅಧ್ಯಯನವನ್ನು ಆರಂಭಿಸಿದ್ದರಿಂದ ನಿಜವಾಗಿ ವೇದಾಧ್ಯಯನವನ್ನು ಆರಂಭಿಸಿದಂತಾಯಿತು; ನನಗೆ ದ್ವಿಜತ್ವ ಸಿದ್ಧಿಸಿದಂತಾಯಿತು. ಈ ದ್ವಿಜತ್ವ ಜಾತಿಮತಗಳ ಕಟ್ಟಿಲ್ಲದೆ ಎಲ್ಲರಿಗೂ ಸಿದ್ಧಿಸ ಬಹುದಾದದ್ದು.

ಕಾಲೇಜಿಗೆ ಸೇರಿದ ವರ್ಷದಲ್ಲೇ ಸೇರುವುದಕ್ಕೆ ಕೆಲವು ತಿಂಗಳು ಮುಂಚೆಯೇ, ನನ್ನ ಬದುಕಿನಲ್ಲಿ ಬಹು ಮುಖ್ಯವಾದ ಹೊಸ ಘಟನೆಯೊಂದು ಒದಗಿ ಬಂತು. ಮುಂದಿನ ಅಧ್ಯಾಯ ಅದನ್ನು ಕುರಿತದ್ದು.

೧೧. ಸುಲಗ್ನಾ ಸಾವಧಾನಾ

ನಮ್ಮಲ್ಲಿ 'ವಿವಾಹಮಹೋತ್ಸವಾಹ್ವಾನ ಪತ್ರಿಕೆ'ಗಳ ಒಕ್ಕಣೆ ಸಾಮಾನ್ಯವಾಗಿ ಹೀಗಿರುತ್ತದೆ: "ಚಿ. ಸೌ. ಹ. ಕುಂ. ಶೋ. (ಚಿರಂಜೀವಿ ಸೌಭಾಗ್ಯವತಿ ಹರಿದ್ರಾ ಕುಂಕುಮ ಶೋಭಿತೆ) ಇಂಥ ಕನ್ಯಾರತ್ನವನ್ನು ಚಿ. ಇಂಥ ವರನಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ನೆರವೇರಿಸಲು ಗುರುಹಿರಿಯರು ನಿಶ್ಚಯಿಸಿರುತ್ತಾರೆ." (ಇಂಥ ಲಗ್ನಪತ್ರಿಕೆಯೊಂದನ್ನು ನೋಡಿ ಹಾಸ್ಯಕ್ಕಾಗಿ ಆತ್ಮಾನುಕಂಪವನ್ನು ನಟಿಸಿ "ಕನ್ಯೆ ಮಾತ್ರ 'ರತ್ನ', ನಾವು ರತ್ನವಲ್ಲವೊ? ನಮಗೆ ಹೀಗೇಕೆ ಅವಮಾನ ಮಾಡುತ್ತಾರೆ?" ಎಂದು ನನ್ನ ಸ್ನೇಹಿತರೊಡನೆ ಆಕ್ಷೇಪಿಸಿದ್ದು ನೆನಪಿಗೆ ಬರುತ್ತಿದೆ. ಆಮೇಲೆ ಅನ್ನಿಸಿತು: ಅದು ಅಪಮಾನದ ಮಾತಲ್ಲ, ನಮ್ಮ ('ವರ'ಗಳ) ಔನ್ನತ್ಯವನ್ನು ನೆನಪಿಸುವ ಮಾತು. ನಾವು ರತ್ನವಲ್ಲ, ರತ್ನವನ್ನು ವಕ್ಷಸ್ಥಲದಲ್ಲಿ ಧರಿಸುವ ಲಕ್ಷ್ಮೀನಾರಾಯಣ! ಉರಃಸ್ಥದಾರೋ ಭಗವಾನ್ ರಮೇಶಃ!) 'ಗುರುಹಿರಿಯರು ನಿಶ್ಚಯಿಸಿರುತ್ತಾರೆ' ಎನ್ನುವುದು ಕೇವಲ ಮರ್ಯಾದೆಯ ಮಾತಲ್ಲ. ಈಗಲೂ ಮದುವೆಯನ್ನು ನಿಶ್ಚಯಿಸು

* ಈಶೋಪನಿಷತ್ತಿನ ೯ನೆಯ ಮಂತ್ರ. ಅದರ ಪೂರ್ಣರೂಪ ಹೀಗೆ:

ಅಂಧಂ ತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ ॥

[ಅವಿದ್ಯೆಯನ್ನು ಉಪಾಸಿಸುವವರು ಕುರುಡುಗತ್ತಲೆಯನ್ನು ಪ್ರವೇಶಿಸುತ್ತಾರೆ. ವಿದ್ಯೆಯೊಂದರಲ್ಲೇ ಲೋಲರಾದವರು ಇನ್ನೂ ಹೆಚ್ಚು ಎನ್ನಿಸುವ ಕತ್ತಲನ್ನು ಪ್ರವೇಶಿಸುತ್ತಾರೆ.]

ನವರು ಸ್ವಲ್ಪ ಮಟ್ಟಿಗಾದರೂ ಅವರೇ. ಮೊನ್ನೆಮೊನ್ನೆಯವರೆಗೂ ನಮ್ಮ ಯುವಕ ಯುವತಿಯರು ಮದುವೆ 'ಮಾಡಿಕೊಳ್ಳು'ತ್ತಿರಲಿಲ್ಲ; ಗುರುಹಿರಿಯರು ಮದುವೆ 'ಮಾಡಿಸು'ತ್ತಿದ್ದರು. ೧೯೧೦ರ ಸುಮಾರಿನಲ್ಲಂತೂ ಈ ಮಾತು ನೂರಕ್ಕೆ ನೂರರಷ್ಟು ಸತ್ಯವಾಗಿತ್ತು. ಮದುಮಕ್ಕಳು (ಅವರು ನಿಜವಾಗಿಯೂ ಮಕ್ಕಳೇ; ಯುವಕ ಯುವತಿಯರಲ್ಲ!) ತಮ್ಮ ಹಿತ ಗುರುಹಿರಿಯರ ಕೈಯಲ್ಲಿ ಸುರಕ್ಷಿತವಾಗಿರುತ್ತದೆಂದು ನಂಬಿದ್ದರು. ಅಲ್ಲದೆ ಅವರ ಹಿತರಕ್ಷಣೆಗಾಗಿ ಜಾತಕ ನೋಡಿಸುವ ಪದ್ಧತಿ ಬೇರೆ ಇತ್ತಲ್ಲ; ಗ್ರಹಗಳ ಸಾಕ್ಷ್ಯಕ್ಕಿಂತ ಅರಿಯದ ಮಕ್ಕಳ ಇಚ್ಛೆ ದೊಡ್ಡದೆ? ಮದುವೆಗೆ ಸಂಬಂಧಪಟ್ಟ ಯಾವ ಹಂತದಲ್ಲೂ ವಧೂವರರಾಗುವವರ ಅಭಿಪ್ರಾಯವನ್ನು ಕೇಳಬೇಕೆಂಬ ಯೋಚನೆ ಯಾರಿಗೂ ಬರುತ್ತಿರಲಿಲ್ಲ. ನನ್ನ ಕಸಿನ್ ದೊಡ್ಡ ನರಸಿಂಹಮೂರ್ತಿಯ ಮದುವೆಯ ವಿಷಯವನ್ನೂ ಮೈಥಿಲಿಯ ಮದುವೆಯ ವಿಷಯವನ್ನೂ ಹಿಂದೆ ಪ್ರಸ್ತಾಪಿಸಿದ್ದೇನಷ್ಟೆ. ಅವರಿಬ್ಬರೂ ಧಾರೆಯ ದಿನದ ಶುಭದರ್ಶನವಾಗುವವರೆಗೆ ತಾವು ಮದುವೆಯಾದವರನ್ನು ನೋಡಿಯೇ ಇರಲಿಲ್ಲ; ಅವರು ಯಾವ ಊರಿನವರು ಏನುಕಥೆ ಎಂಬುದೂ ಅವರಿಗೆ ತಿಳಿದಿರಲಿಲ್ಲ. ಸುಮಂಗಲಿಯರು 'ದಯಮಾಡಿಸಯ್ಯ ದಾನವಾಂತಕ' ಎಂದೋ, 'ಹಸೆಗೆದ್ದು ಬಾರೆ, ಬಿಸಜಾಕ್ಷಿ ನೀರೆ' ಎಂದೋ ಹಾಡಿದಾಗ ಹೋಗಿ ಹಸೆಯ ಮೇಲೆ ಕೂರಬೇಕು—ಇಷ್ಟೇ ಅವರಿಗೆ ತಿಳಿದಿದ್ದ ವಿಷಯ.

ಪಟ್ಟಣಗಳಲ್ಲಿ ೧೯೧೮ರ ವೇಳೆಗೆ ಪರಿಸ್ಥಿತಿ ಸ್ವಲ್ಪ ಬದಲಾಯಿಸಿತ್ತು. ಆಗಲೂ ಮುಂದೊಡಗು (initiative) ಗುರುಹಿರಿಯರದ್ದೇ. ಬೀಗರಾಗುವವರೊಡನೆ ಮಾತುಕಥೆ, ಜಾತಕಗಳನ್ನು ಹೋಲಿಸುವುದು, ಮುಂತಾದ್ದೆಲ್ಲ ಹಿರಿಯರ ಕೆಲಸ. ಈ ಪೀಠಿಕಾಪ್ರಕರಣಗಳೆಲ್ಲ ಮುಗಿದ ಮೇಲೆ ಹುಡುಗ ಹುಡುಗಿಯನ್ನು ನೋಡಬೇಕು ಎನ್ನುವ ಮಟ್ಟಿಗೆ ಸುಧಾರಣೆ ನಡೆದಿತ್ತು; ನೋಡಿದ ಮೇಲೆ ಅವನಿಗೆ (ಅವನಿಗೆ ಮಾತ್ರ, ಕನ್ಯಾರತ್ನ ಎಂದು ಹೊಗಳಿಸಿಕೊಳ್ಳುವ ಹೆಣ್ಣಿಗಲ್ಲ!) ಬೇಕು ಬೇಡ ಎನ್ನುವ ಹಕ್ಕಿದೆ ಎಂಬುದನ್ನು ಹಿರಿಯರು ಒಪ್ಪಿದಂತಿತ್ತು. ನಮ್ಮ ಮನೆಯಲ್ಲಂತೂ ನನಗೆ ಆ ಹಕ್ಕು ಸಲ್ಲತಕ್ಕದ್ದೆಂಬ ವಿಷಯದಲ್ಲಿ ಯಾವ ಸಂದೇಹವೂ ಇರಲಿಲ್ಲ. ೧೯೧೮–೧೯ರ ವೇಳೆಗೆ ಮನೆಯಲ್ಲಿ ನನ್ನ 'ಸ್ಟೇಟಸ್' (status) ಏರಿತ್ತು; ಸಂಪ್ರದಾಯವನ್ನು ಟೀಕಿಸಿ ನನ್ನ ಅಭಿಪ್ರಾಯಗಳನ್ನು ಹಿಂಜರಿಕೆಯಿಲ್ಲದೆ 'ಏನ ಬಲ್ಲಿರಿ ನೀವು ನೆನೆ ಸುಜ್ಞಾನ ಮೂರುತಿ ನಾನು' ಎಂಬ ಧೋರಣೆಯಲ್ಲಿ ಮಂಡಿಸುತ್ತಿದ್ದೆ—ತಂದೆಯ ಎದುರಿಗಲ್ಲದಿದ್ದರೂ! "ಈ ನರಸಿಂಹಮೂರ್ತಿ ಮೊಂಡ. ಯಾರ ಮಾತನ್ನೂ ಕೇಳುವುದಿಲ್ಲ. ತನ್ನ ಮಾತೇ ಮಾತು. ಕತ್ತು ಸಿಕ್ಕದಿದ್ದರೆ ಕಾಲಿಗೆ, ಕಾಲು ಸಿಕ್ಕದಿದ್ದರೆ ಕತ್ತಿಗೆ—ಅಂತೂ ಏನಾದರೂ ಕೊಕ್ಕೆ ಹಾಕುತ್ತಲೇ ಇರುತ್ತಾನೆ"—ಇದು, ನನ್ನ ಸಂದೇಹ ಅಪನಂಬಿಕೆಗಳನ್ನು ಮೆರಸಿದ್ದರಿಂದಾಗಿ ನಾನು ಗಳಿಸಿದ್ದ ಕೀರ್ತಿ! ಅದು ನನಗೆ ಹಿತವಾಗಿತ್ತು. ನಾನು ಸರ್ವಜ್ಞ ಎಂದುಕೊಳ್ಳುವಷ್ಟು ದೂರ ಹೋಗಿರಲಿಲ್ಲವೇನೋ ಆದರೆ "ನಾನು ಹಳ್ಳಿಯ ಗೊಡ್ಡುಗಳಂತಲ್ಲ, ಅರ್ಥವಿಲ್ಲದ ಪದ್ಧತಿಗಳಿಗೆ ಸೊಪ್ಪು ಹಾಕುವವನಲ್ಲ" ಎಂಬ ಅಹಂಕಾರಕ್ಕೇನೂ ಅಭಾವವಿರಲಿಲ್ಲ.

ಮುಂದುವರಿಯುವುದು

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಯುದ್ಧ ಮತ್ತು ಶಾಂತಿ

ಅನುವಾದ
ಪ್ರೊ|| ದೇಜಗೌ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಅಷ್ಟು ಹೊತ್ತಿಗೆ ಪಿಯರಿ ಮಂಕು ಬೆಳಕಿಗೆ ಹೊಂದಿಕೊಂಡಿದ್ದನು. ಆ ಬೆಳಕಿನಲ್ಲಿ ಬಂದವನು ಕುಳ್ಳನೆಂದು ಕಂಡಿತು. ಬೆಳಕಿನಿಂದ ಕತ್ತಲೆಗೆ ಬಂದ ಆ ವ್ಯಕ್ತಿ ತುಸು ನಿಂತು, ಎಚ್ಚರಿಕೆಯಾಗಿ ಹೆಜ್ಜೆ ಇಡುತ್ತ ಮೇಜನ್ನು ಸಮೀಪಿಸಿ, ಅದರ ಮೇಲೆ ತನ್ನ ಅಲ್ಪಾಕೃತಿಯ ತೊಗಲುಗವಸಿನ ಕೈಗಳನ್ನಿರಿಸಿದನು.

ಆ ಕುಳ್ಳ ಧರಿಸಿದ್ದ ತೊಗಲಿನ ಬಿಳಿಯ ಮುಂಗವಚ ಅವನ ಎದೆಯನ್ನು ಕಾಲುಗಳ ಅತ್ಯಲ್ಪಭಾಗವನ್ನು ಮುಚ್ಚಿದ್ದುವು. ಎತ್ತರವಾದ ಬಿಳಿಯ ಕಂಠಾಭರಣವುಳ್ಳ ಹಾರ ಅವನ ಕೊರಳಲ್ಲಿ ರಂಜಿಸುತ್ತಿತ್ತು. ಕೆಳಗಿನಿಂದ ಹೊತ್ತಿಸಿದಂತಿದ್ದ ಬೆಳಕಿನಲ್ಲಿ ಅವನ ಕೋಲುಮುಖದ ಬಾಹ್ಯ ರೇಖೆಗಳು ಕಾಣಿಸುತ್ತಿದ್ದುವು.

'ಇಲ್ಲಿಗೇಕೆ ನೀವು ಬಂದಿದ್ದೀರಿ?' ಎಂದು ಹೊಸಬ ಸಪ್ಪುಳದ ಹಾದಿಯನ್ನು ಹಿಡಿದು ಪಿಯರಿಯ ಕಡೆಗೆ ತಿರುಗಿಕೊಂಡು ಪ್ರಶ್ನಿಸಿದನು. 'ಜ್ಯೋತಿಯ ಸತ್ಯವನ್ನೆ ನಂಬದಿರುವ, ಜ್ಯೋತಿಯನ್ನೇ ಕಾಣದಿರುವ ನೀವು ಇಲ್ಲಿಗೇಕೆ ಬಂದಿದ್ದೀರಿ? ನಮ್ಮಿಂದ ನಿಮಗೇನು ಆಗಬೇಕಾಗಿದೆ? ವಿವೇಕವೆ? ಧರ್ಮವೆ? ಆತ್ಮೋನ್ನತಿಯೆ?'

ಬಾಗಿಲು ತೆರೆದು ಅಪರಿಚಿತ ಒಳಗೆ ಅಡಿಯಿಟ್ಟಾಗ, ಬಾಲ್ಯ ಕಾಲದ ತಪ್ಪೊಪ್ಪಿಗೆಯ ಸಂದರ್ಭದಲ್ಲಿ ಅನುಭವಿಸಿದ್ದಂತೆ ಭಯಭಕ್ತಿಯ ಪೂಜ್ಯ ಭಾವನೆ ಪಿಯರಿಯ ಮನಸ್ಸಿನಲ್ಲುದಿಸಿತು. ಸಾಮಾಜಿಕವಾಗಿ ತೀರ ಅಪರಿಚಿತನಾದ ವ್ಯಕ್ತಿಯ ಸಮ್ಮುಖದಲ್ಲಿದ್ದರೂ, ಮಾನವ ಭ್ರಾತೃತ್ವದ ಮೂಲಕ ಅವನು ತನ್ನ ಸನಿಹದಲ್ಲಿದ್ದಂತೆ ಪಿಯರಿಗೆ ಭಾಸವಾಯಿತು. ರ್‍ಹೆಟರ್ ಕಡೆಗೆ (ಭ್ರಾತೃತ್ವ ಮಂಡಲಿಗೆ ಪ್ರವೇಶವನ್ನು ಕೋರುವ ಅಭ್ಯರ್ಥಿಯನ್ನು ಅಣಿಗೊಳಿಸುವ ಸಹೋದರನಿಗೆ ಆ ಹೆಸರು ಅನ್ವಯಿಸುತ್ತದೆ.) ಅವನು ಚಲಿಸುತ್ತಿದ್ದಾಗ ಅವನ ಎದೆ ಬಡಿದುಕೊಳ್ಳುತ್ತಿತ್ತು, ಉಸಿರಾಟ ಮುಂದವಾಗಿತ್ತು. ಹತ್ತಿರ ಸಾರಿದಾಗ, ಅವನು ರ್‍ಹೆಟರ್‌ನಲ್ಲಿ ಸ್ಮೊಲ್ಯನೀನೊವ್‌ನನ್ನು ಗುರುತಿಸಿದನು. ಹೊಸಬ ತನ್ನ ಪರಿಚಿತ ವ್ಯಕ್ತಿಯೆಂದು ತಿಳಿದಾಗ ಅವನ ಗರ್ವಕ್ಕೆ ಪೆಟ್ಟುಬಿದ್ದಂತಾಯಿತು. ಅವನೊಬ್ಬ ಸೋದರ, ಅಂತೆಯೇ ಧಾರ್ಮಿಕ ಗುರು ಎಂದು ಸ್ವೀಕರಿಸಲು ಪ್ರಯತ್ನಿಸಿದನು. ಬಹಳ ಹೊತ್ತು ಅವನ ಬಾಯಿಂದ ಒಂದು ಮಾತೂ ಹೊರಡಲಿಲ್ಲ. ರ್‍ಹೆಟರ್ ತನ್ನ ಪ್ರಶ್ನೆಯನ್ನು ಪುನರಾವೃತ್ತಿಸಿದನು.

'ಹೌದು....ನಾನು....ನಾನು ಆತ್ಮೋನ್ನತಿಯನ್ನು ಬಯಸಿದ್ದೇನೆ' ಎಂದು ಪಿಯರಿ ಕಷ್ಟದಿಂದ ನುಡಿದನು.

'ಸರಿ. ಹಾಗಾದರೆ, ನಿಮ್ಮ ಗುರಿಯನ್ನು ಮುಟ್ಟಲು ನಮ್ಮ ಪವಿತ್ರ ಪಂಥದಿಂದ ನೀವು ನಿರೀಕ್ಷಿಸಿಕೊಂಡಿರುವ ಸಾಧನ ಸಂಸ್ಕಾರಗಳ ಬಗ್ಗೆ ನೀವೇನಾದರೂ ಯೋಚಿಸಿದ್ದೀರಾ?' ಎಂದು ಸ್ಮೊಲ್ಯನೀನೊವ್ ಅವಸರವಸರವಾಗಿ ಪ್ರಶ್ನಿಸಿದನು.

'ನಾನು....ಮಾರ್ಗದರ್ಶನ .. ಸಹಾಯ ....ಆತ್ಮೋನ್ನತಿಗಾಗಿ....ನಂಬಿಕೊಂಡಿದ್ದೇನೆ' ಎಂದು ಪಿಯರಿ ಕಂಪಿತ ಧ್ವನಿಯಲ್ಲಿ ನುಡಿದನು. ರಷ್ಯನ್ ಭಾಷೆಯಲ್ಲಿ ಅಮೂರ್ತ ಭಾವನೆಗಳನ್ನು ಅಭಿವ್ಯಕ್ತಪಡಿಸುವ ಅಭ್ಯಾಸವಿಲ್ಲದ್ದರಿಂದ, ಜತೆಗೆ ಭಾವೋದ್ರೇಕವೊದಗಿ ಅವನಿಗೆ ಮಾತಾಡುವುದೆ ಕಷ್ಟವಾಯಿತು.

'ನಿಮ್ಮ ಪ್ರಕಾರ ಫ್ರೀಮೇಸನ್ರಿ ಎಂದರೇನು?'

'ಧಾರ್ಮಿಕ ಉದ್ದೇಶವುಳ್ಳ ಮಾನವರ ಸೌಭ್ರಾತೃತ್ವ ಮತ್ತು ಸಮಾನತೆಗ ಫ್ರೀಮೇಸನ್ರಿ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ' ಎಂದು ಪಿಯರಿ ನುಡಿದ ಆ ಸಂದರ್ಭದ ಗಾಂಭೀರ್ಯಕ್ಕೆ ತಕ್ಕಂಥ ಪದಸಾಮಗ್ರಿಯ ಕೊರತೆಯಿಂದಾಗಿ ಅ ನಾಚಿಕೆಗೀಡಾದನು.

'ಭೇಷ್. ನಿಮ್ಮ ಗುರಿ ಸಾಧನೆಯ ಮಾರ್ಗವನ್ನು ಮತದಲ್ಲಿ ಕಂಡುಕೊಳ್ ಪ್ರಯತ್ನಿಸಿದ್ದೀರೇನು?' ಎಂದು ಅವನ ಉತ್ತರದಿಂದ ತೃಪ್ತನಾದ ರ್‍ಹೆಟರ್ ಪ್ರಶ್ನಿಸಿದ

'ಇಲ್ಲ, ಅದು ಸರಿಯಲ್ಲವೆಂಬುದು ನನ್ನ ಭಾವನೆ. ಅದರಿಂದಾಗಿ ನಾನದ ಅನುಸರಿಸಲಿಲ್ಲ' ಎಂದು ಪಿಯರಿ ಮೆಲ್ಲಗೆ ನುಡಿದನು. ಅವನ ಮಾತು ಕೇಳಿಸಲಿಲ್ಲವ ಅದನ್ನು ಪುನರಾವೃತ್ತಿಸುವಂತೆ ರ್‍ಹೆಟರ್ ಕೋರಿಕೊಂಡನು. 'ನಾನೊಬ್ಬ ನಾ ನಾಗಿದ್ದೆ' ಎಂದು ಪಿಯರಿ ಉತ್ತರಿಸಿದನು.

'ಸತ್ಯ ಶೋಧನೆಯ ಉದ್ದೇಶವೇನು? ಅದರ ನಿಯಮಗಳನ್ನು ಬದು ಕಾರ್ಯಗತಗೊಳಿಸುವ ಸಲುವಾಗಿ ಅಲ್ಲವೆ? ಆದ್ದರಿಂದ ನೀವು ವಿವೇಕದಿಂದ ಧ ನ್ನನುಸರಿಸಬೇಕು. ಇದೇ ತಾನೆ ನಿಮ್ಮ ಗುರಿ?' ಎಂದು ರ್‍ಹೆಟರ್ ನುಡಿದನು.

'ಹೌದ್ಹಾದು' ಎಂದು ಪಿಯರಿ ಸಮ್ಮತಿ ಸೂಚಿಸಿದನು.

ರ್‍ಹೆಟರ್ ತನ್ನ ಗಂಟಲನ್ನು ಸರಿಪಡಿಸಿಕೊಂಡು, ಗವಸಿನ ಕೈಗಳನ್ನು ತನ್ನ ಮೇಲೆ ಕ್ರಾಸಿಯಾಕಾರದಲ್ಲಿ ಜೋಡಿಸಿಕೊಂಡು, ಪ್ರವಚನ ಪ್ರಾರಂಭಿಸಿದನು. 'ನಾ ನಮ್ಮ ಪಂಥದ ಮುಖ್ಯೋದ್ದೇಶವನ್ನು ವಿಶದಪಡಿಸಬೇಕಾಗಿದೆ. ನಿಮ್ಮ ಗುರಿ ಉದ್ದೇಶದೊಡನೆ ಹೊಂದಾವಣಿಕೆಯಾಗುವುದಾದರೆ, ನೀವು ನಮ್ಮ ಭ್ರಾತೃ ಮ ಯನ್ನು ಸೇರಿಕೊಳ್ಳಬಹುದು. ಕೆಲವು ಗುಹ್ಯ ವಿಚಾರಗಳ ರಕ್ಷಣೆ ಮತ್ತು ಮುಂದಿನ ಪೀ ಅವುಗಳ ವರ್ಗಾವಣೆಯೇ ನಮ್ಮ ಪಂಥದ ಪ್ರಪ್ರಥಮ ಪ್ರಮುಖ ಉದ್ದೇಶ. ಈ ವಿಚಾರಗಳೇ ನಮ್ಮ ಪಂಥದ ಸುಭದ್ರ ತಳಹದಿ; ಯಾವ ಮಾನವ ಶಕ್ತಿಯೂ ಅ ನಾಶಪಡಿಸಲಾರದು. ಆ ರಹಸ್ಯ ಯುಗಯುಗಗಳಿಂದ, ಮೊಟ್ಟಮೊದಲನೆಯ ಮ ನಿಂದ ಈ ತನಕ ಹರಿದು ಬಂದಿದೆ; ಮನುಕುಲದ ಭವಿಷ್ಯ ಸಹ ಅದನ್ನೇ ಅವಲಂ ದೃಢ ಸಂಕಲ್ಪದ ಸುದೀರ್ಘ ಆತ್ಮಶೋಧನೆಯಿಂದಲ್ಲದೆ ಈ ರಹಸ್ಯ ಗ್ರಹಿಕೆ ವುದಿಲ್ಲ, ಸಾಕ್ಷಾತ್ಕಾರವಾಗುವುದಿಲ್ಲ. ಈ ರಹಸ್ಯವನ್ನು ಭೇದಿಸಿರುವ ಪೂರ್ವಿಕರು ಕೊಟ್ಟಿರುವ ಪದ್ಧತಿಯ ಮೂಲಕ ಸಾಧ್ಯವಾದ ಮಟ್ಟಿಗೂ ನಮ್ಮ ಸದಸ್ಯರ ಹ ಗಳನ್ನು ಪರಿಷ್ಕರಿಸಿ, ಅವರ ಚೇತನವನ್ನು ಶುದ್ಧೀಕರಿಸಿ, ಅರಿವನ್ನು ಪ್ರಚೋ ರಹಸ್ಯ ಸಾಕ್ಷಾತ್ಕಾರಕ್ಕೆ ಅವರನ್ನು ಅಣಿಗೊಳಿಸುವುದೇ ನಮ್ಮ ಎರಡನೆಯ ಗುರಿ

'ನಮ್ಮ ಸದಸ್ಯರನ್ನು ಶುದ್ಧಿಗೊಳಿಸಿ, ಅವರಲ್ಲಿ ನವಚೈತನ್ಯವನ್ನು ತ ಮೂಲಕ ಇಡೀ ಮನುಕುಲದ ಆತ್ಮೋನ್ನತಿಯನ್ನು ಸಾಧಿಸುವುದೇ ಮೂ ಉದ್ದೇಶ. ನಮ್ಮ ಸದಸ್ಯರ ಮೂಲಕ ಧರ್ಮ ಶ್ರದ್ಧೆಯ ಮತ್ತು ಸಚ್ಚಾ ನಿದರ್ಶನವನ್ನೊದಗಿಸಿ, ಜಗತ್ತನ್ನು ಅಲುಗಾಡಿಸುತ್ತಿರುವ ಕೇಡನ್ನು ತವಿಸಲು ಸರ್ವಶಕ್ತಿಯನ್ನು ವಿನಿಯೋಗಿಸುತ್ತೇವೆ. ಈ ಬಗ್ಗೆ ನೀವು ಆಲೋಚನೆ ನಡೆ ಮತ್ತೆ ಇಲ್ಲಿಗೆ ಬರುತ್ತೇನೆ.'

'ಜಗತ್ತನ್ನು ಅಲುಗಾಡಿಸುತ್ತಿರುವ ಕೇಡನ್ನು ತಪ್ಪಿಸಲು....' ಎಂಬ ಮಾತುಗಳನ್ನು ಪಿಯುರಿ ಪುನರುಚ್ಚರಿಸಿದನು. ಆ ದಿಶೆಯಲ್ಲಿ ಮುಂದೆ ಕೈಗೊಳ್ಳಬಹುದಾದ ಕಾರ್ಯಕ್ರಮದ ಕಲ್ಪನೆ ಅವನ ಮನಸ್ಸಿನಲ್ಲಿ ಮೂಡಿತು. ಹದಿನೈದು ದಿನಗಳ ಹಿಂದೆ ತಾನೆಂತಿದ್ದನೋ ಅಂಥ ಜನರನ್ನು ಕಲ್ಪಿಸಿಕೊಂಡು, ಅವರ ಮುಂದೆ ಆತ್ಮೋನ್ನತಿ ಸಾಧನೆಯ ಮಾರ್ಗವನ್ನು ಕುರಿತು ಉಪನ್ಯಾಸ ನೀಡಿದನು. ತನ್ನ ನಡೆನುಡಿಗಳ ಮೂಲಕ ನೀತಿಭ್ರಷ್ಟನತದ್ರಷ್ಟ ಜನರಿಗೆ ಸಹಾಯ ಮಾಡುವುದಾಗಿ ಪೀಡಕರಿಗೆ ಬಲಿಪಶುಗಳಾಗಿರುವ ದೀನರನ್ನು ಅವರಿಂದ ಪಾರುಮಾಡುವುದಾಗಿ ಅವನು ಕಲ್ಪಿಸಿಕೊಂಡನು. ರ್‌ಹಿಟರ್ ವಿವರಿಸಿದ ಮೂರು ಉದ್ದೇಶಗಳ ಪೈಕಿ ಕೊನೆಯದಾದ ಮನುಕುಲದ ಉದ್ಧಾರ ಪಿಯುರಿಗೆ ತುಂಬ ಹಿಡಿಸಿತು. ರ್‌ಹಿಟರ್ ಸೂಚಿಸಿದ ಪ್ರಮುಖ ರಹಸ್ಯ ಅವನ ಕುತೂಹಲವನ್ನು ಕೆರಳಿಸಿತಾದರೂ, ಅದು ಅತ್ಯಂತ ಅಗತ್ಯವೆಂದು ಅವನಿಗೆ ತೋರಲಿಲ್ಲ. ತನ್ನನ್ನು ಶುದ್ಧೀಕರಿಸಿಕೊಂಡು, ಆತ್ಮೋನ್ನತಿಯನ್ನು ಸಾಧಿಸುವ ಎರಡನೆಯ ಗುರಿಯಲ್ಲಿಯೂ ಅವನಿಗೆ ಆಸಕ್ತಿ ಮೂಡಲಿಲ್ಲ. ಏಕೆಂದರೆ, ತಾನು ಹಿಂದಿನ ದೋಷಗಳಿಂದ ಸಂಪೂರ್ಣ ಮುಕ್ತನಾಗಿ, ಒಳ್ಳೆಯದಾದದ್ದನ್ನೆಲ್ಲ ಸಾಧಿಸಲು ಸಿದ್ಧನಾಗಿದ್ದುದರಿಂದ ಅವನ ಮನಸ್ಸು ಮೊದಲೇ ಧಾರ್ಮಿಕ ಸಂತೋಷದಲ್ಲಿ ಮುಳುಗಿತ್ತು.

ಸಾಲೊಮನ್ ದೇವಾಲಯದ ಸಪ್ತಸೋಪಾನಗಳಿಗೆ ತಾಳೆಯಾಗುವಂತಿದ್ದ ಸಪ್ತಧರ್ಮಸೂತ್ರಗಳನ್ನು ಆ ಸಾಧಕನಿಗೆ ಉಪದೇಶಿಸುವ ಸಲುವಾಗಿ ಅರ್ಧ ಗಂಟೆಯ ನಂತರ ರ್‌ಹಿಟರ್ ಮತ್ತೆ ಬಂದನು. ಆ ಧರ್ಮಸೂತ್ರಗಳ ಆಚರಣೆ ಪ್ರತಿಯೊಬ್ಬ ಫ್ರೀಮೇಸನ್ನನ ಕರ್ತವ್ಯವಾಗಿತ್ತು. ಆ ಧರ್ಮ ಸೂತ್ರಗಳಿವು: ೧. ಸ್ವಂತ ವಿವೇಚನೆ; ಪಂಥದ ರಹಸ್ಯಗಳನ್ನು ರಕ್ಷಿಸಬೇಕಾದ ಅಗತ್ಯ. ೨. ಪಂಥದ ಹಿರಿಯರಿಗೆ ವಿಧೇಯತೆ. ೩. ನೀತಿ ತತ್ತ್ವ. ೪. ಮಾನವ ಪ್ರೇಮ. ೫. ಧೈರ್ಯ. ೬. ಔದಾರ್ಯ. ೭. ಮರಣ ಪ್ರೇಮ.

'ಸಪ್ತಮ ಸೂತ್ರದ ಪ್ರಕಾರ, ನೀವು ಆಗಾಗ್ಗೆ ಮರಣದ ಬಗ್ಗೆ ಆಲೋಚಿಸುತ್ತಿರಬೇಕು, ಅದು ಭಯಂಕರ ಶತ್ರುವಲ್ಲವೆಂದು ಪರಿಭಾವಿಸುತ್ತಿರಬೇಕು, ಧಾರ್ಮಿಕ ಶ್ರಮದಿಂದ ಬಳಲಿರುವ ಆತ್ಮವನ್ನು ಯಾತನಾಮಯವಾದ ಜೀವನದಿಂದ ಪಾರುಮಾಡುವ ಮತ್ತು ಅದನ್ನು ಶಾಂತಿ ಸುಖಗಳ ನೆಲೆಗೊಯ್ಯುವ ಗೆಳೆಯನೆಂದು ತಿಳಿಯಬೇಕು' ಎಂದವನು ಬೋಧಿಸಿದನು.

'ಆಗಲಿ' ಎಂದು ಪಿಯುರಿ ನುಡಿದನು. ಅವನ ಏಕಾಂತ ಧ್ಯಾನಕ್ಕೆ ಇಂಬುಮಾಡಿಕೊಟ್ಟು ರ್‌ಹಿಟರ್ ಹೊರಗೆ ಹೋದನು. 'ಅದು ಹಾಗೆಯೇ ಆಗಬೇಕು. ಇನ್ನು ನನ್ನ ಬದುಕಿನ ಬಗ್ಗೆ ಮಮಕಾರವನ್ನು ತ್ಯಜಿಸಲಾರದಷ್ಟು ದುರ್ಬಲನಾಗಿದ್ದೇನೆ ನಾನು. ಆದರೆ ಅರ್ಥ ನಿಧಾನವಾಗಿ ನನಗೆ ಗೋಚರವಾಗುತ್ತಿದೆ.' ಬೆರಳುಗಳಿಂದ ಎಣಿಸುತ್ತ ಉಳಿದ ಐದು ಸೂತ್ರಗಳನ್ನು ಪಿಯುರಿ ನೆನಪಿಗೆ ತಂದುಕೊಂಡನು. ಧೈರ್ಯ, ಔದಾರ್ಯ, ನೀತಿ ನಿಯಮ, ಮಾನವ ಪ್ರೀತಿ ಮತ್ತು ವಿಧೇಯತೆಗಳು ಆ ಹೊತ್ತಿಗಾಗಲೇ ತನ್ನ ಚೇತನದ ಭಾಗವಾಗಿರುವುದಾಗಿ ಅವನು ಆಲೋಚಿಸಿದನು. ವಿಧೇಯತೆ ಬರಿಯ ಧರ್ಮ ಸೂತ್ರವಾಗಿರದೆ, ಅದು ಆನಂದದ ರಹಸ್ಯವೆಂದೇ ಬಗೆದನು. (ತನ್ನ ಸ್ವಚ್ಛಂದ ಪ್ರವೃತ್ತಿ

ಯಿಂದ ಬಿಡುಗಡೆ ಹೊಂದಿ, ನಿಸ್ಸಂದಿಗ್ಧ ಸತ್ಯವನ್ನು ಬಲ್ಲ ಹಿರಿಯರಿಗೆ ಮಣಿಯುವಲ್ಲಿ ಅವನು ಹರ್ಷಭರಿತನಾಗಿದ್ದನು.) ಏಳನೆಯ ಸೂತ್ರವನ್ನವನು ಮರೆತನು. ಪ್ರಯತ್ನ ಪಟ್ಟರೂ ಅದವನ ನೆನಪಿಗೆ ಬರಲಿಲ್ಲ.

ಮೂರನೆಯ ಸಾರಿ ರ್‍ಹಿಟರ್ ಅವಸರವಸರವಾಗಿ ಬಂದು, ಅವನ ಧ್ಯೇಯ ಸಾಧನೆಯ ದೃಢಸಂಕಲ್ಪದ ಬಗ್ಗೆ ಮತ್ತು ಅವನಿಂದ ನಿರೀಕ್ಷಿಸಬಹುದಾದ ಸಕಲ ಕರ್ತವ್ಯ ಗಳ ಪಾಲನೆಯ ಬಗ್ಗೆ ವಿಚಾರಿಸಿದನು.

'ಎಲ್ಲಕ್ಕೂ ನಾನು ಸಿದ್ಧ' ಎಂದು ಪಿಯರಿ ನುಡಿದನು.

'ಶಬ್ದಗಳ ಮೂಲಕ ಮಾತ್ರವಲ್ಲ, ಅನ್ಯಮಾರ್ಗಗಳ ಮೂಲಕವೂ ನಮ್ಮ ಪಂಥ ಉಪದೇಶ ನೀಡುತ್ತದೆಂದು ನಾನು ಈ ಸಂದರ್ಭದಲ್ಲಿ ನಿನಗೆ ತಿಳಿಸಬೇಕಾಗಿದೆ. ಧರ್ಮ ವಿವೇಕಗಳನ್ನು ಹುಡುಕುವ ಪ್ರಾಮಾಣಿಕ ಸಾಧಕನ ಮನಸ್ಸಿನ ಮೇಲೆ ಶಬ್ದಗಳಿಗಿಂತ ಅನ್ಯಮಾರ್ಗ ಹೆಚ್ಚು ಪರಿಣಾಮ ಬೀರುತ್ತದೆ. ನಿಮ್ಮ ಹೃದಯ ಶ್ರದ್ಧಾನಿಷ್ಠೆಗಳಿಂದ ಕೂಡಿರುವುದಾದರೆ, ಈ ಕುಹರದಲ್ಲಿ ನೀವು ನೋಡುತ್ತಿರುವ ವಸ್ತುಗಳೇ ಈ ಹೊತ್ತಿಗೆ ಶಬ್ದಾತೀತವಾದ ದರ್ಶನವನ್ನು ಸೂಚಿಸಿರಬೇಕು. ಮುಂದಿನ ದೀಕ್ಷಾ ಸಮಯದಲ್ಲಿಯೂ ನೀವು ಇದೇ ರೀತಿಯ ಬೆಳಕನ್ನು ಕಾಣುವಿರಿ. ಗೂಢಲಿಪಿಗಳ ಮೂಲಕ ಉಪದೇಶ ನೀಡುತ್ತಿದ್ದ ಪುರಾತನ ಸಮಾಜಗಳನ್ನು ನಮ್ಮ ಪಂಥ ಅನುಸರಿಸುತ್ತದೆ. ಇಂದ್ರಿಯ ಗ್ರಾಹ್ಯವಲ್ಲದ ವಿಚಾರಗಳ, ಆದರೆ ಸಂಕೇತವನ್ನು ಹೋಲುವ ಗುಣಗಳುಳ್ಳ ಲಾಂಛನವೇ ಗೂಢಲಿಪಿ' ಎಂದು ರ್‍ಹಿಟರ್ ತನ್ನ ಮಾರ್ಗದ ಸಾಧನಾ ವಿಧಾನವನ್ನು ವಿವರಿಸಿದನು.

ಗೂಢಲಿಪಿಯ ವಿಷಯ ಪಿಯರಿಗೆ ಗೊತ್ತಿತ್ತು; ಆದರೆ ಆ ಬಗ್ಗೆ ಮಾತಾಡಲು ಅವನಿಗೆ ಧೈರ್ಯ ಬರಲಿಲ್ಲ. ಮೌನವಾಗಿ ರ್‍ಹಿಟರ್‌ನ ಮಾತು ಆಲಿಸಿದನು; ತನ್ನ ಉಗ್ರ ಪರೀಕ್ಷೆ ಪ್ರಾರಂಭವಾಗಲಿದೆಯೆಂಬುದನ್ನು ಅವನ ಮಾತಿನಿಂದ ಗ್ರಹಿಸಿದನು.

'ನೀವು ನಿರ್ಧರಿಸಿಕೊಂಡಿದ್ದೀ ಆದರೆ, ದೀಕ್ಷಾ ವಿಧಿಯನ್ನು ನಾನು ಪ್ರಾರಂಭಿಸ ಬೇಕು' ಎಂಗು ರ್‍ಹಿಟರ್ ಅವನ ಹತ್ತಿರ ಸರಿದನು. 'ನಿಮ್ಮ ಔದಾರ್ಯದ ಗುರುತಾಗಿ ನಿಮ್ಮೆಲ್ಲ ಅಮೂಲ್ಯ ವಸ್ತುಗಳನ್ನಿಲ್ಲಿ ಕೊಡಿ.'

'ಅಂಥಾದ್ದೇನೂ ಈಗ ನನ್ನಲ್ಲಿಲ್ಲ' ಎಂದು ಪಿಯರಿ ಉತ್ತರಿಸಿದನು. ತನ್ನಲ್ಲಿದ್ದು ದನ್ನೆಲ್ಲ ರ್‍ಹಿಟರ್ ಕೇಳುತ್ತಿದ್ದಿರಬಹುದೆಂದು ಅವನು ಊಹಿಸಿಕೊಂಡನು.

'ಏನಿದ್ದರದು, ಗಡಿಯಾರ, ಹಣ, ಉಂಗುರ....'

ಪಿಯರಿ ಒಡನೆಯೆ ಥೈಲಿಯನ್ನು ಗಡಿಯಾರವನ್ನು ಹೊರದೆಗೆದನು. ತನ ದಪ್ಪನೆಯ ಬೆರಳಿಂದ ಮದುವೆಯುಂಗುರವನ್ನು ತೆಗೆಯಲು ತುಸು ಹೊತ್ತು ಹಿಂ ಮುಂದೆ ನೋಡಿದನು. ಕೊನೆಗೆ ಅದನ್ನೂ ತೆಗೆದಾಗ, 'ನಿಮ್ಮ ವಿಧೇಯತೆಯ ಕುರುಹಾ ಬಟ್ಟೆ ಬಿಚ್ಚಿ' ಎಂದು ರ್‍ಹಿಟರ್ ನುಡಿದನು.

ಪಿಯರಿ ತನ್ನ ಕೋಟನ್ನು ಸೊಂಟ ಕವಚವನ್ನು ಬಿಚ್ಚಿದನು. ಎಡಗಾಲಿ ಬೂಟನ್ನು ಕಳಚಿದನು. ಮೇಸನ್ ಪಿಯರಿಯ ವಾಮವಕ್ಷದಿಂದ ಷರಟನ್ನು ಬಿಡಿಸಿದನ ಕೆಳಗೆ ಬಗ್ಗಿ ಎಡಗಾಲಿನ ಷರಾಯಿಯನ್ನು ಮೊಣಕಾಲಿನ ತನಕ ಎತ್ತಿದನು. ಆ ತೊಂದರೆ ಕಷ್ಟವನ್ನು ತಪ್ಪಿಸುವ ಸಲುವಾಗಿ, ಪಿಯರಿ ಬಲಗಾಲಿನ ಬೂಟನ್ನು ಬೇಗ ಕಳಚಲ

ವಾದನು, ಬಲಗಾಲಿನ ಷರಾಯಿಯನ್ನು ಮಡಿಚತೊಡಗಿದನು. ಮೇಸನ್ ಅದು ಅಗತ್ಯ ವಿಲ್ಲವೆಂದು ಹೇಳಿ, ಎಡಗಾಲಿಗೊಂದು ಚಪ್ಪಲಿಕೊಟ್ಟನು. ಶಿಶುಸದೃಶವಾದ ಗಾಬರಿ, ಸಂದೇಹ ಮತ್ತು ಆತ್ಮಧಿಕ್ಕಾರಗಳಿಂದ, ಕೈಗಳನ್ನಿಳಿಬಿಟ್ಟು, ಕಾಲುಗಳನ್ನು ಹರಡಿ, ತನ್ನ ಸೋದರ ರ್ಹಿಟರ್‌ನ ಮುಂದೆ ಪಿಯುರಿ ನಿಂತುಕೊಂಡು, ಅವನ ಮುಂದಿನ ಆಜ್ಞೆಗಾಗಿ ಕಾದನು.

'ಈಗ ನಿಷ್ಕಾಪಟ್ಯದ ಕುರುಹಾಗಿ ನೀವು ನಿಮ್ಮ ಪ್ರಮುಖ ಮನೋದೌರ್ಬಲ್ಯ ವನ್ನು ತಿಳಿಸಿ' ಎಂದು ರ್ಹಿಟರ್ ಕೇಳಿದನು.

'ನನ್ನ ಮನೋದೌರ್ಬಲ್ಯವೆ? ಅವು ರಾಶಿ ರಾಶಿಯಾಗಿದ್ದುವು' ಎಂದು ಪಿಯುರಿ ಉತ್ತರಿಸಿದನು.

'ಧರ್ಮಚ್ಯುತರಾಗಲು ಹೆಚ್ಚು ಕಾರಣವಾದ ದೌರ್ಬಲ್ಯವನ್ನು ಸ್ಪಷ್ಟಪಡಿಸಿ!

ಉತ್ತರವನ್ನು ರೂಪಿಸಿಕೊಳ್ಳುವ ಸಲುವಾಗಿ ಪಿಯುರಿ ತಡೆದನು. 'ವೈನ್? ಹೊಟ್ಟೆ ಬಾಕತನ? ಸೋಮಾರಿತನ? ಸಿಡುಕು? ಕೋಪ? ಉದ್ರೇಕ? ಹೆಣ್ಣು? ಯಾವುದಕ್ಕೆ ಪ್ರಥಮ ಸ್ಥಾನ ಕೊಡಬೇಕೆಂಬುದು ತಿಳಿಯದೆ ಅವನು ತನ್ನೆಲ್ಲ ದುರ್ಗುಣಗಳನ್ನು ಜ್ಞಾಪಿಸಿಕೊಂಡನು. 'ಹೆಣ್ಣು' ಎಂದವನು ತಗ್ಗಿದ ಸ್ಪಷ್ಟವಾಗಿ ಕೇಳಿಸದ ದನಿಯಲ್ಲಿ ನುಡಿದನು.

ಈ ಉತ್ತರದ ನಂತರ ಮೇಸನ್ ಬಹು ಹೊತ್ತು ಚಲಿಸದೆ, ಮಾತಿಲಿಯಾಗಿ ನಿಂತಿದ್ದನು. ಕೊನೆಗೆ ಪಿಯುರಿಯ ಬಳಿಸಾರಿ, ಮೇಜಿನ ಮೇಲಿದ್ದ ಕೈಚೌಕವನ್ನೆತ್ತಿ ಕೊಂಡು, ಮತ್ತೆ ಅವನ ಕಣ್ಣುಗಳನ್ನು ಕಟ್ಟಿದನು. 'ಕೊಟ್ಟ ಕೊನೆಯದಾಗಿ ನಿನಗೆ ಹೇಳುತ್ತಿದ್ದೇನೆ–ನಿನ್ನ ಸಂಪೂರ್ಣ ಲಕ್ಷ್ಯ ನಿನ್ನಲ್ಲಿಯೇ ಕೇಂದ್ರೀಕೃತವಾಗಿರಲಿ, ನಿಮ್ಮ ಇಂದ್ರಿಯಗಳಿಗೆ ಕಡಿವಾಣ ಹಾಕಿ; ಮನೋವಿಕಾರದಲ್ಲಲ್ಲ, ನಿಮ್ಮ ಶುದ್ಧ ಹೃದಯದಲ್ಲಿ ಆನಂದವನ್ನನುಭವಿಸಲು ಪ್ರಯತ್ನಿಸಿ. ಆನಂದದ ಮೂಲ ಅಂತರಂಗದಲ್ಲಿದೆಯೇ ಹೊರತು, ಬಾಹ್ಯದಲ್ಲಿಲ್ಲ....'

ಪಿಯುರಿ ಆ ಮೊದಲೇ ಚೈತನ್ಯಕಾರಿ ಆನಂದದ ಸುರ ಸುಖವನ್ನನುಭವಿಸಲು ತೊಡಗಿದ್ದನು. ಅದೀಗ ಅವನ ಸಮಸ್ತ ಚೇತನದಲ್ಲೆಲ್ಲ ಪ್ರವಹಿಸತೊಡಗಿತು.

ಅಧ್ಯಾಯ ೪

ಇದಾದ ನಂತರ ಪಿಯುರಿಯಿದ್ದ ಕತ್ತಲೆ ಕೋಣೆಗೆ ರ್ಹಿಟರ್‌ಗೆ ಬದಲು, ಅವನ ಹೊಣೆಗಾರ ವಿಲ್ಲರ್‌ಸ್ಕಿ ಬಂದನು. ದನಿಯಿಂದಲೇ ಪಿಯುರಿ ಅವನನ್ನು ಗುರುತಿಸಿದನು. ಅವನ ದೃಢಸಂಕಲ್ಪ ಪರೀಕ್ಷೆಯ ನೂತನ ಪ್ರಶ್ನೆಗಳಿಗೆ ಪಿಯುರಿ 'ಹೌದು, ಹೌದು ನನ್ನ ಸಮ್ಮತಿಯಿದೆ' ಎಂದು ಉತ್ತರವಿತ್ತನು. ಪ್ರಕಾಶಮಾನ ವಾದ ಹಸುಗೂಸಿನ ಮಂದಹಾಸ ಅವನ ಮುಖದ ಮೇಲೆ ಥಳಥಳಿಸುತ್ತಿತ್ತು. ವಿಶಾಲ ವಾದ ಅವನ ವಕ್ಷ ಬೆತ್ತಲೆಯಾಗಿತ್ತು. ಒಂದು ಕಾಲಿಗೆ ಚಪ್ಪಲಿ, ಮತ್ತೊಂದು ಕಾಲಿಗೆ ಬೂಟು ಧರಿಸಿದ್ದ ಕಾರಣದಿಂದಾಗಿ ಅವನ ಹೆಜ್ಜೆ ಮಟ್ಟಸವಾಗಿರಲಿಲ್ಲ. ಅವನು ಅಂಜು ತ್ತಂಜುತ್ತ ಹೆಜ್ಜೆ ಹಾಕುವಾಗ, ವಿಲ್ಲರ್‌ಸ್ಕಿಯ ಕತ್ತಿ ಅವನ ಬೆತ್ತಲೆ ಎದೆಯನ್ನು ಸ್ಪರ್ಶ

ಸಿತ್ತು. ಹಿಂದುಮುಂದಾಗಿ ಬಳಸುತ್ತಿದ್ದ ಓಣಿಗಳಲ್ಲಿ ಅವನನ್ನು ನಡೆಸಿಕೊಂಡು, ಮಂಡಲಿಯ ಕುಟೀರದ ಬಾಗಿಲಿಗೆ ಕರೆತರಲಾಯಿತು. ವಿಲ್ಲರ್‌ಸ್ಕಿ ಕೆಮ್ಮಲು, ಕೊಡತಿ ಯೇಟು ಬಿದ್ದು ಬಾಗಿಲು ತೆರೆದುವು. (ಇನ್ನೂ ಪಿಯರಿಯ ಕಣ್ಣು ಕಟ್ಟಿತ್ತು) ಅವನು ಯಾರು ? ಎಲ್ಲಿ, ಯಾವಾಗ ಹುಟ್ಟಿದ್ದು ? ಇವೇ ಮೊದಲಾದ ಪ್ರಶ್ನೆಗಳನ್ನು ಮಂದ್ರ ಧ್ವನಿಯೊಂದು ಕೇಳಿತು. ಮತ್ತೆ ಅವನನ್ನು ಬೇರೆಲ್ಲಿಗೋ ಕರೆದೊಯ್ಯಲಾಯಿತು. ಯಾತ್ರೆಯ ಶ್ರಮ, ಪವಿತ್ರ ಸ್ನೇಹ, ವಿಶ್ವದ ಚಿರಂತನ ಶಿಲ್ಪಿ—ಇವೇ ಮೊದಲಾದ ವಿಷಯ ಗಳಿಗೆ ಮತ್ತು ಶ್ರಮ ಮತ್ತು ಅಪಾಯಗಳನ್ನೆದುರಿಸಲು ಬೇಕಾದ ಧೈರ್ಯಕ್ಕೆ ಸಂಬಂಧಿ ಸಿದ ರೂಪಕಕಥೆಗಳನ್ನು ದಾರಿಯುದ್ದಕ್ಕೂ ಅವನಿಗೆ ಹೇಳಲಾಗುತ್ತಿತ್ತು. ಅಲೆದಾಟದ ಸಮಯದಲ್ಲಿ ಕತ್ತಿಕೊಡತಿಗಳ ಬಡಿತದೊಡನೆ, ತನ್ನನ್ನು ಸಾಧಕನೆಂದು, ದೀಕ್ಷಾವಿಧಿಯ ಅಭ್ಯರ್ಥಿಯೆಂದು, ಯಾತನಾಸಹಿಷ್ಣುವೆಂದು ಕರೆಯುತ್ತಿದ್ದುದನ್ನು ಪಿಯರಿ ಗಮನಿಸಿ ದನು. ಯಾವುದೋ ಉದ್ದಿಷ್ಟ ಸ್ಥಾನಕ್ಕೆ ಕರೆದೊಯ್ಯುವಾಗ ಮಾರ್ಗದರ್ಶಿಗಳ ಚರ್ಯೆ ಯಲ್ಲಿ ಅನಿಶ್ಚಯತೆ ಸಂದೇಹಗಳನ್ನವನು ಗುರುತಿಸಿದನು. ಅವರ ಪಿಸುದನಿಯಿಂದ ಅವರೊಳಗೆ ವಿವಾದವಿದ್ದಂತೆ ತೋರಿತು. ಯಾವುದೋ ರತ್ನಗಂಬಳಿಯ ಮೇಲೆ ಅವನನ್ನು ನಡೆಸಿಕೊಂಡು ಹೋಗಬೇಕೆಂದು ಅವರಲ್ಲೊಬ್ಬ ವಾದಿಸುತ್ತಿದ್ದನು. ಆಮೇಲೆ ಅವರು ಅವನ ಬಲಗೈಯನ್ನು ಹಿಡಿದು ಯಾವುದೋ ವಸ್ತುವಿನ ಮೇಲಿರಿಸಿದರು ; ಮತ್ತೊಂದು ಕೈಗೆ ಒಂದು ಜೊತೆ ಕೈವಾರವನ್ನು ಕೊಟ್ಟು, ಅದನ್ನು ವಾಮವಕ್ಷಕ್ಕೊತ್ತಿ ಹಿಡಿದು ಕೊಳ್ಳುವಂತೆ ಹೇಳಿದರು ; ಬೇರೊಬ್ಬ ಗಟ್ಟಿಯಾಗಿ ಓದುತ್ತಿದ್ದ. ಪಂಥದ ಕಾನೂನಿಗೆ ನಿಷ್ಠೆಯಿಂದಿರುವ ಪ್ರತಿಜ್ಞೆಯನ್ನು, ಪುನರುಚ್ಚರಿಸುವಂತೆ ತಿಳಿಸಿದರು. ಮೋಂಬತ್ತಿ ಗಳನ್ನು ನಂದಿಸಿ ಯಾವುದೋ ದ್ರಾವಣದ ಹಣತೆಯನ್ನು ಹಚ್ಚಲಾಯಿತು. ವಾಸನೆ ಯಿಂದಲೇ ಅದು ದ್ರಾವಣದ ಹಣತೆಯೆಂದು ಪಿಯರಿಗೆ ಗೊತ್ತಾಯಿತು. ಬೆಳಕು ಮಂಕಾಗಿದೆಯೆಂದು ಮಾರ್ಗದರ್ಶಿಗಳು ಅವನಿಗೆ ಹೇಳಿದರು. ಅವನ ಕಣ್ಣುಕಟ್ಟನ್ನು ಬಿಚ್ಚಲಾಯಿತು. ಕನಸಿನಲ್ಲೆಂಬಂತೆ ಅವನು ಮಬ್ಬು ಬೆಳಕಿನಲ್ಲಿ ತನ್ನ ಮುಂದೆ ನಿಂತಿದ್ದ ಹಲವು ವ್ಯಕ್ತಿಗಳ ಮೇಲೆ ಕಣ್ಣಾಡಿಸಿದನು. ಮುಂದೆ ನಿಂತಿದ್ದವರು ರೈಟರ್‌ನಂತೆ ಮುಂಗವಚ ಧರಿಸಿದ್ದರು. ಅವನ ಎದೆಗೆ ಹಿಡಿದ ಕತ್ತಿಗಳನ್ನು ಕೈಗಳಲ್ಲಿ ಹಿಡಿದುಕೊಂಡಿ ದ್ದರು. ರಕ್ತದ ಕಲೆಗಳಿದ್ದ ಬಿಳಿಯ ಷರಟನ್ನು ತೊಟ್ಟಿದ್ದ ವ್ಯಕ್ತಿಯೊಬ್ಬ ಅವರ ನಡುವೆ ನಿಂತಿದ್ದನು. ಅವನನ್ನು ನೋಡಿದ ಪಿಯರಿ ಕತ್ತಿಗಳಿಂದ ಚುಚ್ಚಲೆನ್ನುವಂತೆ ತನ್ನ ಎದೆಯನ್ನು ಮುಂದೆ ಚಾಚಿದನು. ಆದರೆ ಕತ್ತಿಗಳನ್ನು ಹಿಂದಕ್ಕೆ ಸೆಳೆದುಕೊಂಡು, ಮತ್ತೆ ಅವನ ಕಣ್ಣುಗಳನ್ನು ಕಟ್ಟಲಾಯಿತು.

‘ಈಗ ನೀನು ಮಬ್ಬು ಬೆಳಕು ನೋಡಿದ್ದೀಯೆ’ ಎಂದೊಂದು ಧ್ವನಿ ನುಡಿಯಿತು. ಮತ್ತೆ ಮೋಂಬತ್ತಿಗಳನ್ನು ಹಚ್ಚಲಾಯಿತು. ತುಂಬು ಬೆಳಕನ್ನು ನೋಡಬಹುದೆಂದು ಅವನಿಗೆ ತಿಳಿಸಲಾಯಿತು. ಕಣ್ಣುಕಟ್ಟನ್ನು ಮತ್ತೆ ತೆಗೆಯಲಾಯಿತು. ‘ಜಗತ್ತಿನ ವೈಭವದ ಗತಿಯೇ ಹೀಗೆ’ ಎಂದು ಹತ್ತಕ್ಕಿಂತ ಹೆಚ್ಚು ಧ್ವನಿಗಳು ಕೂಗಿಕೊಂಡುವು.

ಪಿಯರಿ ಕ್ರಮೇಣ ಪೂರ್ವಸ್ಥಿತಿಯನ್ನು ಪಡೆದು ಕೋಣೆಯಲ್ಲಿಲ್ಲ ಮತ್ತು ಒಳ ಗಿದ್ದ ಜನರ ಕಡೆಗೆ ದೃಷ್ಟಿ ಹರಿಸಿದನು. ಕಪ್ಪು ಬಟ್ಟೆ ಹರಡಿದ್ದ ದೊಡ್ಡ ಮೇಜಿನ ಸುತ್ತ

ಹನ್ನೆರಡು ಜನ ಕುಳಿತಿದ್ದರು. ಅವನಿಗೆ ಮೊದಲೇ ಪರಿಚಯವಾಗಿದ್ದ ಉಡುಪನ್ನವರು ಧರಿಸಿದ್ದರು. ಅವರಲ್ಲಿ ಕೆಲವರನ್ನು ಪಿಯರಿ ಪೀಟರ್ಸ್‌ಬರ್ಗ್ ಸಮಾಜದಲ್ಲಿ ಸಂಧಿಸಿದ್ದನು. ಅವನಿಗೆ ಗೊತ್ತಿರದ ಯುವಕನೊಬ್ಬ ಅಧ್ಯಕ್ಷಸ್ಥಾನದಲ್ಲಿ ಕುಳಿತಿದ್ದನು. ಅವನ ಕೊರಳಲ್ಲಿ ವಿಚಿತ್ರವಾದೊಂದು ಶಿಲುಬೆ ನೇತಾಡುತ್ತಿತ್ತು. ಎರಡು ವರ್ಷಗಳ ಹಿಂದೆ ಅನ್ನಾಪಾವ್ ಲೊವ್ನಳ ಮನೆಯಲ್ಲಿ ನೋಡಿದ್ದ ಇಟಾಲಿಯಾ ಮಠಾಧಿಪತಿ ಅವನ ಬಲಭಾಗದಲ್ಲಿ ಮಂಡಿಸಿದ್ದನು. ಮುಂಚೆ ಕುರಾಗಿನ್‌ರಿಗೆ ಪಾಠ ಹೇಳಿಕೊಡುತ್ತಿದ್ದ ಸ್ವಿಸ್ ಉಪಾ ಧ್ಯಾಯನೂ ಮತ್ತೊಬ್ಬ ಗಣ್ಯವ್ಯಕ್ತಿಯೂ ಅಲ್ಲಿ ಹಾಜರಿದ್ದರು. ಅಧ್ಯಕ್ಷನ ಕೈಯ ಲ್ಲೊಂದು ಕೊಡತಿಯಿತ್ತು. ಎಲ್ಲರೂ ಗಂಭೀರ ಮೌನದಿಂದ ಅವನ ಮಾತುಗಳನ್ನಾಲಿಸು ತ್ತಿದ್ದರು. ಗೋಡೆಯಲ್ಲಿ ನಕ್ಷತ್ರಾಕಾರದ ದೀಪವಿತ್ತು. ಮೇಜಿನ ಒಂದು ಪಕ್ಕದಲ್ಲಿ ಹಲವು ಚಿತ್ರಗಳನ್ನು ಬಿಡಿಸಿದ್ದ ಸಣ್ಣ ರತ್ನಗಂಬಳಿಯೊಂದಿತ್ತು; ಮತ್ತೊಂದು ಪಕ್ಕದಲ್ಲಿ ಪವಿತ್ರ ಪೀಠವನ್ನು ಹೋಲುತ್ತಿದ್ದ ವಸ್ತುವೊಂದರ ಮೇಲೆ ತಲೆಬುರುಡೆ ಬೈಬಲ್ಲುಗಳಿ ದ್ದುವು. ಅದರ ಸುತ್ತ ಚರ್ಚುಗಳಲ್ಲಿ ಬಳಸುತ್ತಿದ್ದ ಏಳು ದೊಡ್ಡ ಮೋಂಬತ್ತಿಗಳಿದ್ದುವು. ಸಹೋದರರಲ್ಲಿಬ್ಬರು ಅವನನ್ನು ಪೀಠದ ಬಳಿ ಕರೆದೊಯ್ದು, ಆರಾಧನಾ ಮಂದಿರದ ದ್ವಾರಗಳಲ್ಲಿ ಸಾಷ್ಟಾಂಗ ನಮಸ್ಕಾರ ಮಾಡಬೇಕೆಂದು ಅವನಿಗೆ ತಿಳಿಸಿ, ಅವನ ಕಾಲು ಗಳನ್ನು ಸಮಕೋನದಲ್ಲಿರಿಸಿ, ಕೆಳಗೆ ಮಲಗುವಂತೆ ಆಜ್ಞಾಪಿಸಿದರು.

'ಅವನ ಕೈಗೆ ಮೊದಲು ಕರಣೆ ಕೊಡಬೇಕು' ಎಂದು ಸಹೋದರರಲ್ಲೊಬ್ಬ ಪಿಸುಗುಟ್ಟಿದನು.

'ಓ, ದಯೆಯಿಟ್ಟು ಸದ್ದು ಮಾಡದಿರು' ಎಂದು ಮತ್ತೊಬ್ಬ ನುಡಿದನು.

ಪಿಯರಿ ಗೊಂದಲಕ್ಕೀಡಾಗಿ, ವಿಧೇಯತೆಯಿಂದ ವರ್ತಿಸದೆ, ಸಮೀಪ ದೃಷ್ಟಿ ದೋಷದ ಕಣ್ಣುಗಳಿಂದ ಸುತ್ತ ನೋಡಿದನು. ಒಡನೆಯೆ ಅವನ ಚಿತ್ತೋಶದಲ್ಲಿ ಸಂಶಯಗಳು ಲಗ್ಗೆ ಹೂಡಿದುವು. 'ನಾನೆಲ್ಲಿದ್ದೇನೆ? ನಾನೇನು ಮಾಡುತ್ತಿದ್ದೇನೆ? ಅವರು ನನ್ನನ್ನು ನೋಡಿ ನಗುತ್ತಿಲ್ಲವೆ? ಇದೆಲ್ಲವನ್ನು ನೆನೆಸಿಕೊಂಡರೆ ನನಗೆ ನಾಚಿಕೆ ಯಾಗಬೇಡವೆ?' ಈ ಸಂಶಯಗಳು ಅವನನ್ನು ಸೆರೆಹಿಡಿದದ್ದು ಒಂದು ಕ್ಷಣ ಮಾತ್ರ. ತನ್ನ ಸುತ್ತಮುತ್ತಲಿದ್ದ ಗಂಭೀರ ವದನಗಳ ಕಡೆಗೆ ಅವನು ದೃಷ್ಟಿ ಹಾಯಿಸಿದನು. ಅರ್ಧ ಮಾರ್ಗದಲ್ಲಿ ತಾನು ನಿಲ್ಲಬಾರದೆಂದು ಅವನು ನಿಶ್ಚಯಿಸಿಕೊಂಡನು. ತನ್ನ ಸಂದೇಹ ಪ್ರವೃತ್ತಿಯ ಬಗ್ಗೆ ಅವನು ದಿಗ್ಭ್ರಮೆಗೊಂಡನು. ತನ್ನ ಮುನ್ನಿನ ಭಕ್ತಿ ಭಾವನೆಯನ್ನು ಕೆರಳಿಸಲು ಪ್ರಯತ್ನಿಸಿ, ದೇವಾಲಯದ ಬಾಗಿಲುಗಳ ಮುಂದೆ ಅಡ್ಡ ಬಿದ್ದನು. ಅವನ ಶ್ರದ್ಧಾಭಕ್ತಿ ಹಿಂದಿಗಿಂತ ತೀವ್ರವಾಗಿತ್ತು. ಸ್ವಲ್ಪ ಹೊತ್ತು ಹಾಗೆಯೇ ಮಲಗಿದ್ದ ನಂತರ ಅವನನ್ನು ಎಬ್ಬಿಸಲಾಯಿತು. ಇತರರು ಧರಿಸಿದ್ದಂಥ ತೊಗಲಿನ ಬಿಳಿಯ ಮುಂಗವಚವನ್ನು ಅವನಿಗೆ ತೊಡಿಸಲಾಯಿತು. ಮೂರು ಜೊತೆ ಗವಸು ಗಳನ್ನು ಒಂದು ಕರಣೆಯನ್ನು ಅವನಿಗೆ ಕೊಡಲಾಯಿತು. ತದನಂತರ ಮಹಾನಾಯಕ ಅವನಿಗೆ ಉಪದೇಶ ನೀಡಿದನು. ಶಕ್ತಿ ಮತ್ತು ಪಾವಿತ್ರ್ಯವನ್ನು ಸಂಕೇತಿಸುವ ಮುಂಗವಚದ ಬಿಳಿಮೆ ಮಾಸದಂತೆ ಎಚ್ಚರಿಕೆಯಿಂದಿರಬೇಕೆಂದು ಅವನು ನುಡಿದನು. ಕರಣೆಯ ಮೂಲಕ ಅವನ ಹೃದಯದ ಪಾಪವನ್ನು ತೊಳೆಯಲು ಮತ್ತು ಅತ್ಯಾಸಕ್ತಿ

ಯಿಂದ ನೆರೆಯುವರ ಹೃದಯವನ್ನು ಮಾರ್ದವಗೊಳಿಸಲು ಶ್ರಮಿಸಬೇಕೆಂದು ಅವನು ಪಿಯರಿಗೆ ಬೋಧಿಸಿದನು. ಗಂಡಸರು ಬಳಸುವ ಗವಸುಗಳ ಮೊದಲನೆಯ ಜೊತೆಯ ಅರ್ಥ ಪಿಯರಿಗೆ ಗ್ರಹಿಕೆಯಾಗುವುದಿಲ್ಲವೆಂದೂ, ಗ್ರಹಿಕೆಯಾಗದಿದ್ದರೂ ಅವನ್ನು ಜೋಪಾನವಾಗಿಟ್ಟಿರಬೇಕೆಂದೂ ಅವನು ತಿಳಿಸಿದನು. ಸಭೆಗಳಿಗೆ ಹೋಗುವಾಗ ಎರಡನೆಯ ಜೊತೆಯನ್ನು ಧರಿಸಬೇಕೆಂದು ಅವನಿಗೆ ಸ್ಪಷ್ಟಪಡಿಸಿದನು. ಮೂರನೆಯ ಜತೆ ಹೆಂಗಸರು ಬಳಸುವಂಥದು. 'ಪ್ರಿಯ ಸೋದರ, ಈ ಹೆಂಗಸರ ಗವಸುಗಳು ಸಹ ನಿಮ್ಮ ಬಳಿ ಇರತಕ್ಕದ್ದು. ಎಲ್ಲರಿಗಿಂತ ಮಿಗಿಲಾಗಿ ನೀವು ಗೌರವಿಸುವ ಮಹಿಳೆಗೆ ಅವನ್ನು ನೀಡಿ. ಈ ಸೌಭ್ರಾತೃ ಮಂಡಲಿಯಲ್ಲಿ ನೀವು ಆರಿಸಿಕೊಳ್ಳುವ ಯೋಗ್ಯ ಸಂಗಾತಿಯ ಸಲುವಾಗಿ ನೀವು ಪ್ರತಿಜ್ಞೆ ಸ್ವೀಕರಿಸಬೇಕಾದ ಹೃದಯ ಶುದ್ಧಿಯ ಪ್ರತೀಕವಾಗಿ ಈ ಕಾಣಿಕೆಯಿದೆ' ಎಂದವನು ನುಡಿದನು. ತುಸು ತಡೆದು ಅವನು ಮತ್ತೆ ಮಾತು ಮುಂದುವರಿಸಿದನು: 'ಪ್ರಿಯ ಸೋದರ, ಈ ಗವಸುಗಳು ಅಪವಿತ್ರ ಕೈಗಳನ್ನು ಸಿಂಗರಿಸಕೂಡದು. ಈ ಬಗ್ಗೆ ನೀವು ಜಾಗರೂಕರಾಗಿರಿ' ತನ್ನ ಕೊನೆಯ ಮಾತುಗಳಿಂದ ಮಹಾನಾಯಕ ಕಳವಳಗೊಂಡಂತೆ ಪಿಯರಿಗೆ ತೋರಿತು. ಪಿಯರಿ ಮತ್ತಷ್ಟು ಗಾಬರಿಗೊಂಡನು. ಅವನ ಮುಖ ಹಸುಗೂಸಿನೋಪಾದಿಯಲ್ಲಿ ವಿವರ್ಣವಾಯಿತು; ಅವನ ಕಣ್ಣುಗಳಲ್ಲಿ ನೀರು ತುಳುಕಿತು. ಕಳವಳದಿಂದ ಸುತ್ತಲೂ ಕಣ್ಣು ಹೊರಳಿಸಿದನು. ವಿಚಿತ್ರವಾದ ಮೌನ ಆವರಿಸಿತು.

ಸೋದರರಲ್ಲೊಬ್ಬ ಆ ಮೌನವನ್ನು ಮುರಿದು, ಪಿಯರಿಯನ್ನು ಜಮಖಾನೆಯ ಬಳಿಗೆ ಕರೆದೊಯ್ದನು. ಅವನು ಹಸ್ತಪ್ರತಿಯೊಂದನ್ನು ಕೈಗೆತ್ತಿಕೊಂಡು ಜಮಖಾನದಲ್ಲಿ ಬಿಡಿಸಿದ್ದ ಎಲ್ಲ ಚಿತ್ರಗಳ ವಿವರಣೆಯನ್ನು ಓದತೊಡಗಿದನು: ಸೂರ್ಯ, ಚಂದ್ರ, ಸುತ್ತಿಗೆ, ಕಂಬ, ಲಂಬಸೂತ್ರ, ಕರಣೆ, ಒರಟುಗಲ್ಲು, ಚೌಕಶಿಲೆ, ಮೂರು ಕಿಟಕಿಗಳು ಮೊದಲಾದುವು. ಅನಂತರ ಪಿಯರಿಗೊಂದು ಸ್ಥಾನ ಗೊತ್ತುಪಡಿಸಲಾಯಿತು. ಮಂಡಲಿ ಕುಟೀರದ ಚಿಹ್ನೆಗಳನ್ನವನಿಗೆ ತೋರಿಸಲಾಯಿತು. ಸಂಕೇತ ಪದವನ್ನು ಹೇಳಿಕೊಡಲಾಯಿತು. ಕೊನೆಗೆ ಕುಳಿತುಕೊಳ್ಳಲು ಅವನಿಗೆ ಅನುಮತಿ ದೊರೆಯಿತು. ಮಹಾನಾಯಕ ಲಿಖಿತ ಶಾಸನವನ್ನು ವಾಚಿಸಿದನು. ಅವು ಬಹು ದೀರ್ಘವಾಗಿದ್ದುವು. ಹರ್ಷ, ಕಳವಳ, ಗೊಂದಲಗಳಿಂದಾಗಿ ಪಿಯರಿ ವಾಚನವನ್ನು ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಲಿಖಿತ ಶಾಸನದ ಕೊನೆಯ ಮಾತುಗಳನ್ನು ಮಾತ್ರ ಅವನು ಗ್ರಹಿಸಿಕೊಂಡನು; ಅವನ ನೆನಪಿನಲ್ಲುಳಿದದ್ದೂ ಅಷ್ಟೇ.

'ನಮ್ಮ ದೇವಾಲಯಗಳಲ್ಲಿ ನಾವು ಧರ್ಮ ಅಧರ್ಮಗಳು ಹೊರತಾಗಿ ಯಾವ ವಿಧವಾದ ವ್ಯತ್ಯಾಸಗಳನ್ನೂ ಸಹಿಸಲಾಗದು' ಎಂದು ಮಹಾನಾಯಕ ವಾಚಿಸಿದನು. 'ಸಮಾನತೆಯನ್ನು ಭಂಗಗೊಳಿಸುವ ಯಾವ ಭೇದವನ್ನೂ ಪುರಸ್ಕರಿಸದಂತೆ ಜಾಗರೂಕವಾಗಿರು. ತೊಂದರೆಯಲ್ಲಿರುವ ಸೋದರ ಎಲ್ಲಿಯೇ ಇರಲಿ, ತಳುವದೆ ಅವನ ನೆರವಿಗಾಗಿ ಧಾವಿಸಬೇಕು. ದಾರಿತಪ್ಪಿದವನಿಗೆ ವಿವೇಕ ಹೇಳಬೇಕು; ಬಿದ್ದವನನ್ನು ಮೇಲೆತ್ತಬೇಕು. ನಿನ್ನ ಸೋದರನ ಮೇಲೆ ಹಗೆತನವನ್ನಾಗಲಿ, ದ್ವೇಷವನ್ನಾಗಲಿ ಸಾಧಿಸಬೇಡ. ದಯೆಯಿರಲಿ, ಸೌಜನ್ಯವಿರಲಿ. ಪ್ರತಿಯೊಂದು ಹೃದಯದಲ್ಲಿಯೂ ಧರ್ಮಜ್ಯೋತಿಯನ್ನು

ಪುಟಗೊಳಿಸಿ, ನೆರೆಯವನೊಂದಿಗೆ ನಿನ್ನ ಸುಖವನ್ನು ಹಂಚಿಕೊ. ಆನಂದದ ಪಾವಿತ್ರ್ಯವನ್ನು ಮಾತ್ಸರ್ಯ ಮಸುಕಿಸದಿರಲಿ. ನಿನ್ನ ಶತ್ರುವನ್ನು ಕ್ಷಮಿಸು, ಸೇಡನ್ನು ತ್ಯಜಿಸು, ಅವನಿಗೆ ಒಳ್ಳೆಯದನ್ನೆ ಎಸಗು. ಹೀಗೆ ಅತ್ಯುಚ್ಚ ಶಾಸನವನ್ನು ಕಾರ್ಯಗತಗೊಳಿಸುವ ಮೂಲಕ, ನೀನು ಕಳೆದುಕೊಂಡಿರುವ ಗತವೈಭವದ ಹಿರಿಮೆ ಮತ್ತೆ ನಿನಗೆ ದಕ್ಕುತ್ತದೆ.'

ಅವನು ಉಪದೇಶವನ್ನು ಮುಗಿಸಿ, ಮೇಲೆದ್ದು, ಪಿಯರಿಯನ್ನಪ್ಪಿಕೊಂಡು ಚುಂಬಿಸಿದನು. ಎಲ್ಲ ಕಡೆಗಳಿಂದ ಧಾರಾಕಾರವಾಗಿ ವರ್ಷಿಸಿದ ಅಭಿನಂದನೆ ಮತ್ತು ಶುಭಾಶಯಗಳಿಗೆ ಉತ್ತರವಾಗಿ ಏನು ಹೇಳಬೇಕೊ ತಿಳಿಯದೆ, ಅವನು ಸಂತೋಷಾಶ್ರು ನಯನನಾಗಿ ಸುತ್ತಲೂ ದಿಟ್ಟಿಸಿದನು. ಪರಿಚಿತ ಅಪರಿಚಿತ ವ್ಯಕ್ತಿಗಳಲ್ಲೆಲ್ಲ ಅವನು ಸೋದರನನ್ನು ಮಾತ್ರ ಗುರುತಿಸಿದನು. ಅವರೊಡನೆ ಕಾರ್ಯೋದ್ಯುಕ್ತನಾಗುವ ಆತುರದಿಂದ ತಪಿಸುತ್ತಿದ್ದನು.

ಮಹಾನಾಯಕ ಸುತ್ತಿಗೆಯಿಂದ ಸದ್ದು ಮಾಡಿದನು. ಎಲ್ಲ ಮೇಸನ್ನರೂ ತಂತಮ್ಮ ಜಾಗಗಳಲ್ಲಿ ಕುಳಿತರು. ಅವರಲ್ಲೊಬ್ಬ ವಿನಯಶ್ರೀಯ ಆವಶ್ಯಕತೆಯ ಬಗ್ಗೆ ಒಂದು ವ್ಯಾಖ್ಯಾನವನ್ನು ವಾಚಿಸಿದನು.

ಅಂತಿಮ ಕರ್ತವ್ಯವನ್ನು ಮುಗಿಸುವುದೆಂದು ಮಹಾನಾಯಕ ಸೂಚಿಸಿದನು. 'ಭಿಕ್ಷೆಯ ಸಂಗ್ರಹಕಾರ' ಎಂಬ ಬಿರುದು ಪಡೆದಿದ್ದ ಹಿರಿಯ ಗಣ್ಯನೊಬ್ಬ ಭಿಕ್ಷೆಗಾಗಿ ಸೋದರರ ಹತ್ತಿರ ಹೋದನು. ತನ್ನಲ್ಲಿದ್ದುದನ್ನೆಲ್ಲ ಕೊಟ್ಟುಬಿಡಲು ಪಿಯರಿ ಯೋಚಿಸಿದನು. ಆದರೆ ಆ ಹವಣು ಅಹಂಕಾರವಾಗಿ ತೋರಬಹುದೆಂಬ ಕಾರಣದಿಂದ ಇತರರು ಕೊಟ್ಟಷ್ಟೆ ಹಣವನ್ನು ಸಲ್ಲಿಸಿದನು.

ಸಭೆ ಮುಕ್ತಾಯಗೊಂಡಿತು. ಹತ್ತಾರು ವರ್ಷಗಳ ಸುದೀರ್ಘ ಪ್ರಯಾಣದಿಂದ ಹಿಂದಿರುಗಿದವನಂತೆ, ಸಂಪೂರ್ಣವಾಗಿ ಪರಿವರ್ತನೆಗೊಂಡವನಂತೆ, ತನ್ನ ಮುನ್ನಿನ ಅಭ್ಯಾಸಗಳನ್ನು ಹಾಗೂ ಜೀವನ ವಿಧಾನವನ್ನು ಬಹು ಹಿಂದೆಯೇ ವಿಸರ್ಜಿಸಿದವನಂತೆ ಪಿಯರಿ ಮನೆ ತಲುಪಿದಾಗ ಸಮಾಧಾನದ ನಿಟ್ಟುಸಿರೆಳೆದನು.

ಅಧ್ಯಾಯ ೫

ಭ್ರಾತೃಮಂಡಲಿಯ ಸದಸ್ಯತ್ವವನ್ನು ಸ್ವೀಕರಿಸಿದ ಮರುದಿನ ಪಿಯರಿ ಪುಸ್ತಕವೊಂದನ್ನು ಓದುತ್ತ, ಚಚ್ಚೌಕದ ಅರ್ಥವನ್ನು ಗ್ರಹಿಸಲು ಪ್ರಯತ್ನಿಸುತ್ತಿದ್ದನು. ಅದರ ಒಂದು ಬಾಹು ಭಗವಂತನನ್ನೂ, ಮತ್ತೊಂದು ನೈತಿಕ ಸತ್ತೆಯನ್ನೂ, ಮೂರನೆಯದು ಭೌತ ವಸ್ತುಗಳನ್ನೂ, ನಾಲ್ಕನೆಯದು ಇವುಗಳ ಸಂಯೋಗವನ್ನೂ ಸಂಕೇತಿಸುತ್ತವೆಂದು ಅವನು ಮನದಟ್ಟು ಮಾಡಿಕೊಂಡನು. ಆಗಿಂದಾಗ್ಗೆ ಅವನ ಗಮನ ಪುಸ್ತಕ ಮತ್ತು ಚಚ್ಚೌಕಗಳ ಕಡೆಗೆ ಹರಿಯುತ್ತಿತ್ತು. ತನ್ನ ಜೀವನ ವಿಧಾನದ ನೂತನ ಲಕ್ಷ್ಯೆಯನ್ನವನು ತನ್ನ ಕಲ್ಪನೆಯಲ್ಲಿ ರೂಪಿಸಿಕೊಂಡನು. ದ್ವಂದ್ವಯುದ್ಧದ ಸುದ್ದಿ ಚಕ್ರವರ್ತಿಯ ಕಿವಿಗೆ ಬಿದ್ದಿತ್ತೆಂದೂ, ಆದ್ದರಿಂದ ಪೀಟರ್ಸ್‌ಬರ್ಗ್ ಬಿಡುವುದೇ ಕ್ಷೇಮವೆಂದೂ ಹಿಂದಿನ ದಿನ ಸಂಜೆ ಮಂಡಲಿಯ ಕುಟೀರದಲ್ಲಿದ್ದಾಗ ಅವನಿಗರಿವಾಗಿತ್ತು. ದಕ್ಷಿಣದಲ್ಲಿದ್ದ ತನ್ನ ತೋಟ

ತುಡಿಕೆಗಳಲ್ಲಿ ಕೆಲವು ದಿನ ತಂಗಿದ್ದು, ಜೀತದಾಳುಗಳ ಯೋಗಕ್ಷೇಮದ ಕಡೆಗೆ ಗಮನ ಕೊಡುವುದೆಂದು ಪಿಯರಿ ನಿರ್ಧರಿಸಿಕೊಂಡನು. ತನ್ನ ಹೊಸ ಬದುಕಿನ ಬಗ್ಗೆ ಯೋಜನೆಗಳನ್ನು ರೂಪಿಸಿಕೊಳ್ಳುತ್ತಿರುವಷ್ಟರಲ್ಲಿ ರಾಜಕುಮಾರ ವಸಿಲಿ ಹಠಾತ್ತನೆ ಅವನ ಕೋಣೆಯಲ್ಲಿ ಕಾಣಿಸಿಕೊಂಡನು.

'ಮಾಸ್ಕೋದಲ್ಲಿ ನೀನೇನು ಮಾಡಿ ಬಂದೆ, ದೊರೆ? ನನ್ನ ಮಗಳು ಹೆಲೆನ್‌ಳ ಜತೆ ಏಕೆ ಕಲಹಕಾದೆ? ನೀನು ಭ್ರಾಂತಿ ಪೀಡಿತನಾಗಿರುವಂತೆ ತೋರುತ್ತದೆ' ಎಂದು ನುಡಿಯುತ್ತ ವಸಿಲಿ ಕೋಣೆಯನ್ನು ಪ್ರವೇಶಿಸಿದನು. 'ಆ ಸಮಾಚಾರವೆಲ್ಲ ನನ್ನ ಗಮನಕ್ಕೆ ಬಂದಿದೆ. ಯಹೂದ್ಯರ ಮುಂದೆ ಕ್ರಿಸ್ತನೆಂತು ಮುಗ್ಧನಾಗಿದ್ದನೋ, ಅಂತೆಯೇ ನಿನ್ನ ವಿಚಾರದಲ್ಲಿ ಹೆಲೆನ್ ಶುದ್ಧ ಮನಸ್ಕಳಾಗಿದ್ದಾಳೆಂದು ಸ್ಪಷ್ಟವಾಗಿ ಹೇಳಬಲ್ಲೆ.'

ಪಿಯರಿ ಉತ್ತರ ನೀಡಲು ಸಿದ್ಧವಾಗುತ್ತಿರುವಷ್ಟರಲ್ಲಿ ರಾಜಕುಮಾರ ವಸಿಲಿ ಮಾತು ಮುಂದುವರಿಸಿದನು. 'ನಾನು ನಿನ್ನ ಹಿತಚಿಂತಕ ಗೆಳೆಯನೆಂದು ತಿಳಿದು ನನ್ನ ಬಳಿ ನೇರವಾಗಿ ಬರಬಹುದಿತ್ತಲ್ಲ. ಆ ಸಂಗತಿಯ ಎಲ್ಲ ಮಗ್ಗುಲುಗಳೂ ನನಗೆ ತಿಳಿದಿವೆ. ಕೇವಲ ಆತ್ಮಾಭಿಮಾನದಿಂದ ಹಿಂದು ಮುಂದೆ ನೋಡದೆ ನೀನು ವರ್ತಿಸಿರುವಂತೆ ತೋರುತ್ತದೆ. ಆ ಬಗ್ಗೆ ನಾವು ಚರ್ಚಿಸಬೇಕಾಗಿಲ್ಲ. ಸಮಾಜದ ದೃಷ್ಟಿಯಲ್ಲಿ ಮಾತ್ರವಲ್ಲ, ಕೋರ್ಟಿನ ಕಡೆಯಿಂದ ಅವಳ ಮತ್ತು ನನ್ನ ಸ್ಥಾನಮಾನಗಳಿಗೊದಗುವ ಅಪಾಯವನ್ನು ಕುರಿತು ನೀನು ಯೋಚಿಸಿದ್ದೀಯಾ?' ಎಂದವನು ಮೆಲುದನಿಯಲ್ಲಿ ನುಡಿದನು. 'ಅವಳು ಮಾಸ್ಕೋದಲ್ಲಿ ವಾಸಿಸುತ್ತಿದ್ದಾಳೆ. ನೀನಿಲ್ಲಿದ್ದೀಯೆ.' ಅವನು ಪಿಯರಿಯ ಕೈಗಳನ್ನು ಹಿಡಿದುಕೊಂಡು 'ಇದೆಲ್ಲ ತಪ್ಪು ತಿಳಿವಳಿಕೆಯ ಫಲವೆಂಬುದನ್ನು ಮರೆಯಬೇಡ, ಮಗು. ಕೂಡಲೇ ಅವಳಿಗೊಂದು ಪತ್ರ ಬರೆಯೋಣ. ಅವಳಿಲ್ಲಿಗೆ ಬರಲಿ. ಎಲ್ಲ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸೋಣ. ಹಾಗೆ ಮಾಡಲಿಲ್ಲ, ಮುಂದೆ ನೀನು ತುಂಬ ತೊಂದರೆಗೀಡಾಗಬೇಕಾಗುತ್ತದೆಂಬುದನ್ನು ಮರೆಯಬೇಡ' ಎಂದು ವಿಶದಪಡಿಸಿದನು.

ರಾಜಕುಮಾರ ವಸಿಲಿ ಅರ್ಥಪೂರ್ಣವಾಗಿ ಪಿಯರಿಯ ಕಡೆಗೆ ದೃಷ್ಟಿಹರಿಸಿದನು. 'ವಿಶ್ವಾಸಾರ್ಹವಾದ ಕಡೆಗಳಿಂದ ನನಗೆ ಸುದ್ದಿ ಬಂದಿರುವ ಪ್ರಕಾರ ವಿಧವಾ ಚಕ್ರವರ್ತಿನಿಯೇ ಇಡೀ ವ್ಯವಹಾರದ ಬಗ್ಗೆ ತೀವ್ರಾಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಹೆಲೆನ್‌ಳ ಬಗ್ಗೆ ಅವರಿಗೆ ತುಂಬ ಮರುಕವಿದೆ. ಇದೆಲ್ಲ ನಿನಗೆ ತಿಳಿದಿದೆ ತಾನೆ?'

ತನ್ನ ಅಭಿಪ್ರಾಯವನ್ನು ತಿಳಿಸಲು ಪಿಯರಿ ಹಲವು ಸಲ ಪ್ರಯತ್ನಿಸಿದನು. ಆದರೆ ಅವನು ಬಾಯಿ ಬಿಡಲು ಸಹ ವಸಿಲಿ ಅವಕಾಶ ಕೊಡಲಿಲ್ಲ. ಜತೆಗೆ ತಿರಸ್ಕೃತಿಯ ಅಸಮ್ಮತಿಯ ಧಾಟಿಯಲ್ಲಿ ತನ್ನ ಮಾವನಿಗೆ ಉತ್ತರ ನೀಡಬೇಕೆಂದು ಅವನು ನಿರ್ಧರಿಸಿಕೊಂಡಿದ್ದುದರಿಂದ ಮಾತಾಡಲಂಜಿದನು. ಮೇಲಾಗಿ 'ದಯೆ ಸೌಜನ್ಯಗಳಿರಲಿ' ಎಂಬ ಸೌಭ್ರಾತೃ ಪಂಥದ ಶಾಸನೋಕ್ತ ಮಾತುಗಳು ಅವನ ನೆನಪಿಗೆ ಬಂದುವು. ಅವನು ಮಿಟ ಮಿಟ ನೋಡಿದ; ಮುಖ ಕೆಂಪೇರಿತು; ಮೇಲೆದ್ದ; ಮತ್ತೆ ಕುಳಿತ. ಎದುರಿಗಿದ್ದವನು ಯಾರೇ ಆಗಲಿ, ಅವನು ನಿರೀಕ್ಷಿಸದ, ಅಪ್ರಿಯವಾದ ಸಂಗತಿಯನ್ನು ಅವನ ಮುಖಕ್ಕೆ ಹೇಳಿಬಿಡುವ, ತನ್ನ ಜೀವನದಲ್ಲಿಯೇ ಎಂದೂ ಮಾಡಿರದ, ಅತ್ಯಂತ ಕಠಿನ

ವಾದ ಕಾರ್ಯವನ್ನೆಸಗಲು ಅವನ ಮನಸ್ಸು ಹೋರಾಟ ನಡಸಿತ್ತು. ವಸಿಲಿಯ ಅವಿಚಾರದ ಸ್ವಪ್ರತಿಷ್ಠೆಯ ಮಾತುಗಳಿಗೆ ಯಾವಾಗಲೂ ಅವನು ಶರಣಾಗುತ್ತಿದ್ದನೇ ಹೊರತು, ಪ್ರತಿಭಟಿಸುತ್ತಿರಲಿಲ್ಲ. ಈಗ ಅವನನ್ನು ವಿರೋಧಿಸಲು ಪಿಯುರಿ ಅಸಮರ್ಥ ನಾಗಿದ್ದನು. ವಸಿಲಿ ಈಗ ಏನು ಹೇಳಿದ್ದನೊ, ತನ್ನ ಭವಿಷ್ಯ ಅದನ್ನವಲಂಬಿಸಿದೆಯೆಂಬ ಅವನ ಮಾತನ್ನು ಸಹ ಪಿಯುರಿ ಗಮನಿಸಿದನು. ತಾನು ಹಳೆಯ ಮಾರ್ಗವನ್ನನುಸರಿಸು ವುದೆ, ಅಥವಾ ಮೇಸನ್‌ರು ತೋರಿಸಿದ್ದ ಆಕರ್ಷಕವಾದ ನೂತನ ಪಥವನ್ನನುಸರಿಸು ವುದೆ ಎಂಬ ಯೋಚನೆಯೂ ಅವನ ಮನಸ್ಸಿನಲ್ಲಿ ಮೂಡಿತು. ನೂತನ ಮಾರ್ಗಾನು ಸರಣೆಯಿಂದ, ತಾನು ಮರುಹುಟ್ಟು ಪಡೆದಂತಾಗಿ, ಹೊಸ ಬದುಕನ್ನನುಭವಿಸಬಹು ದೆಂದು ಅವನು ಯೋಚಿಸಿದನು.

'ಈಗ ಮಗು, "ಹೌದು" ಅಂತ ಹೇಳಿಬಿಡು. ನಾನೇ ಅವಳಿಗೆ ಪತ್ರ ಬರೆಯುತ್ತೇನೆ. ಅವಳನ್ನು ಸಂತೋಷದಿಂದ ಸ್ವಾಗತಿಸೋಣ' ಎಂದು ವಸಿಲಿ ನುಡಿದನು.

ರಾಜಕುಮಾರ ವಸಿಲಿ ವಿನೋದದ ಮಾತುಗಳನ್ನು ಮುಗಿಸುವ ಮುಂಚೆಯೇ ಪಿಯುರಿ ಅವನ ಕಡೆ ನೋಡದೆಯೆ, ತನ್ನ ತಂದೆಯನ್ನು ನೆನಪಿಗೆ ತರುವಷ್ಟು ಉಗ್ರನಾಗಿ, 'ರಾಜಕುಮಾರರೆ, ನಾನು ನಿಮ್ಮನ್ನಿಲ್ಲಿಗೆ ಕರಸಲಿಲ್ಲ. ದಯೆಯಿಟ್ಟು ಇಲ್ಲಿಂದ ಹೊರಡಿ!' ಎಂದು ಮೆಲುದನಿಯಲ್ಲಿ ನುಡಿದು, ಮೇಲೆ ಜಿಗಿದು, ಬಾಗಿಲು ತೆರೆದು, ದಾರಿ ತೋರಿಸಿದನು.

'ಹೊರಡಿ !' ಎಂದವನು ಮತ್ತೆ ತನಗೆಯೆ ಬೆರಗಾಗುವಂತೆ ಕೂಗಿಕೊಂಡನು; ರಾಜಕುಮಾರ ವಸಿಲಿಯ ಮುಖ ಪ್ರದರ್ಶಿಸುತ್ತಿದ್ದ ಭಯಗೊಂದಲಗಳನ್ನು ಕಂಡು ಅವನು ಹರ್ಷಗೊಂಡನು.

'ಏನಾಗಿದೆ, ನಿನಗೆ ಖಾಯಿಲೆಯೇನು ?'

'ಹೊರಡಿ !' ಎಂಬ ನಡುಕದನಿ ಮತ್ತೆ ಗರ್ಜಿಸಿತು. ಯಾವೊಂದು ವಿವರಣೆಯೂ ಸಿಗದೆ, ವಸಿಲಿ ಹೊರಗೆ ಹೊರಡಬೇಕಾಯಿತು.

ಒಂದು ವಾರದ ನಂತರ, ತನ್ನ ಹೊಸ ಗೆಳೆಯರ ಮತ್ತು ಮೇಸನ್ನರ ಶುಭಾಶಯ ವನ್ನು ಪಡೆದು, ದಾನಧರ್ಮಗಳಿಗೆಂದು ಅವರಲ್ಲಿ ದೊಡ್ಡ ಮೊತ್ತವೊಂದನ್ನು ಇರಿಸಿ, ಪಿಯುರಿ ತನ್ನ ತೋಟ ತುಡಿಕೆಗಳಿಗೆ ತೆರಳಿದನು. ಅವನ ನವ ಸೋದರರು ಕೀವ್ ಮತ್ತು ಒಡೆಸ್ಸಗಳ ಮೇಸನ್ನರಿಗೆ ಕಾಗದಗಳನ್ನು ಬರೆದುಕೊಟ್ಟಿದ್ದಲ್ಲದೆ, ಅವನ ಹೊಸ ಕಾರ್ಯೋದ್ಯಮದಲ್ಲಿ ಮಾರ್ಗದರ್ಶನ ನೀಡುವುದಾಗಿ ವಾಗ್ದಾನ ಮಾಡಿದರು.

ಅಧ್ಯಾಯ ೬

ಪಿಯುರಿ ಮತ್ತು ಡೋಲೊಖೊವ್ ನಡುವಣ ದ್ವಂದ್ವಯುದ್ಧದ ಸುದ್ದಿಯನ್ನು ಹರಡದಂತೆ ಮುಚ್ಚಿಡಲಾಯಿತು. ಆ ಸಮಯದಲ್ಲಿ ದ್ವಂದ್ವಯುದ್ಧದ ವಿರುದ್ಧವಾಗಿ ಚಕ್ರವರ್ತಿ ಕಠಿನವಾಗಿದ್ದರೂ, ಹೋರಾಟಗಾರರಾಗಲಿ, ಅವರ ದ್ವಿತೀಯರಾಗಲಿ ಸಂಕಟಕ್ಕೊಳಗಾಗಲಿಲ್ಲ. ಸತಿಯ ಬಗೆಗಿನ ಪಿಯುರಿಯ ವೈಮನಸ್ಯದಿಂದ ದ್ವಂದ್ವಯುದ್ಧದ ಪ್ರಚಾರ ಸ್ಥಿರೀಕರಣಗೊಂಡು, ಹಾದಿಬೀದಿಯ ಸುದ್ದಿಯಾಗಿತ್ತು. ನ್ಯಾಯಬಾಹಿರ

ಪುತ್ರನಾಗಿ ಸಮಾಜದ ಕೃಪಾಪೂರಿತ ಅನುಗ್ರಹಕ್ಕೆ ಪಾತ್ರನಾಗಿದ್ದ, ರಷ್ಯಾದಲ್ಲಿಯೇ ಉತ್ತಮವರನೆಂದು ಪ್ರಶಂಸೆಗೆ ಅಚ್ಚುಮೆಚ್ಚಿಗೆ ಭಾಜನನಾಗಿದ್ದ, ಪಿಯರಿಯ ಬೆಲೆ ಮದುವೆಯನಂತರ ಇಳಿದುಹೋಗಿತ್ತು. ಮದುವೆಯ ವಯಸ್ಸಿನ ಕನ್ಯೆಯರು ಮತ್ತು ಅವರ ತಾಯಂದಿರು ಅವನನ್ನು ಸಂಪೂರ್ಣವಾಗಿ ಕಡೆಗಣಿಸಿದ್ದರು. ಸಮಾಜದ ಪ್ರೀತಿಯನ್ನು ಗಳಿಸುವ ವಿಧಾನ ಅವನಿಗೆ ಗೊತ್ತಿರಲಿಲ್ಲ; ಅದು ಅವನಿಗೆ ಇಷ್ಟವಾದದ್ದೂ ಅಲ್ಲ. ಆದ್ದರಿಂದ ಇತ್ತೀಚೆಗೆ ನಡೆದ ಘಟನೆಗೆ ಸಮಾಜ ಅವನನ್ನು ಈಡು ಮಾಡಿತ್ತು. ಮತಿವಿಕಲನಾದ ಮಾತ್ಸರ್ಯಗ್ರಸ್ತನೆಂದೂ, ತನ್ನ ತಂದೆಯಂತೆ ರಕ್ತದಾಹದ ಕೋಪಾವೇಶದಿಂದ ಬುದ್ಧಿ ವಿಕಲ್ಪವಾದವನೆಂದೂ ಅವನನ್ನು ಜನ ದೂರುತ್ತಿದ್ದರು. ಪಿಯರಿಯ ನಿರ್ಗಮನಾನಂತರ ಹೆಲೆನ್ ಪೀಟರ್ಸ್‌ಬರ್ಗ್‌ಗೆ ಹಿಂದಿರುಗಿದಾಗ, ಅತ್ಯಂತ ಪ್ರೀತಿಯಿಂದಷ್ಟೆ ಅಲ್ಲ, ಅವಳಿಗೊದಗಿದ ವಿಪತ್ತಿನಿಂದಾಗಿ, ತುಂಬ ಗೌರವದಿಂದ ಅವಳ ಪರಿಚಯಸ್ಥರೆಲ್ಲ ಸ್ವಾಗತಿಸಿದರು. ಮಾತುಕತೆ ತನ್ನ ಗಂಡನ ಕಡೆಗೆ ತಿರುಗಿದಾಗ ಅವಳು ಅತ್ಯಂತ ಸಂಯಮದಿಂದ ಹಾಗೂ ಗಂಭೀರ ಮನೋಧರ್ಮದಿಂದ ವರ್ತಿಸುತ್ತಿದ್ದಳು. ವ್ಯವಹಾರಾನುಭವದಿಂದ ಸಂಪಾದಿಸಿದ್ದ ಆ ಮನೋಧರ್ಮದ ಪ್ರಾಮುಖ್ಯವೂ ಅವಳಿಗರ್ಥವಾಗಿರಲಿಲ್ಲ. ತನ್ನ ಕಷ್ಟಕ್ಲೇಶಗಳನ್ನು ಗೊಣಗಿಲ್ಲದೆ ಸಹಿಸಲು ನಿರ್ಧರಿಸಿಕೊಂಡಿದ್ದಂತೆ ತನ್ನ ಗಂಡ ದೇವರೇ ತನ್ನ ಮೇಲೆ ಹೊರಿಸಿದ ಶಿಲುಬೆಯೆಂಬಂತೆ ಅವಳ ಆ ಮನೋಧರ್ಮದಿಂದ ವ್ಯಕ್ತವಾಗುತ್ತಿತ್ತು. ರಾಜಕುಮಾರ ವಸಿಲಿ ತನ್ನ ಅಭಿಪ್ರಾಯವನ್ನು ಬಹಿರಂಗವಾಗಿ ಪ್ರಕಟಿಸುತ್ತಿದ್ದನು. ಪಿಯರಿಯ ಹೆಸರನ್ನು ನಮೂದಿಸಿದಾಗೆಲ್ಲ ಅವನು ತನ್ನ ಭುಜ ಎಗರಿಸಿ, ತನ್ನ ಹಣೆಯ ಕಡೆಗೆ ಕೈತೋರಿಸಿ, 'ಅವನ ತಲೆ ತುಸು ಕೆಟ್ಟಿದೆ. ನನಗೆ ಯಾವಾಗಲೋ ಗೊತ್ತಿತ್ತು' ಎಂದು ಟೀಕಿಸುತ್ತಿದ್ದನು.

'ಮೊದಲಿಂದ ನಾನು ಹೇಳುತ್ತಿದ್ದೆ' ಎಂದು ಅನ್ನಾ ಪಾವ್‌ಲೋವ್ನ ಪಿಯರಿಯ ಹೆಸರೆತ್ತಿಕೊಂಡು 'ಆ ಬುದ್ಧಿಯಿಲ್ಲದ ಹುಡುಗ ಈ ಕಾಲದ ನೀಚಭಾವನೆಗಳನ್ನು ಕಲಿತು ಕೆಟ್ಟುಹೋಗಿದ್ದಾನೆಂದು ಎಲ್ಲರಿಗಿಂತ ಮುಂಚೆ ಮೊದಲಿಂದಲೂ ಹೇಳುತ್ತ ಬಂದಿದ್ದೇನೆ.' ಎಂದು ಘೋಷಿಸಿದಳು. (ತನ್ನ ಆದ್ಯತೆಯನ್ನವಳು ಒತ್ತಿ ಹೇಳುತ್ತಿದ್ದಳು) 'ಪ್ರತಿಯೊಬ್ಬರೂ ಅವನ ಬಗ್ಗೆ ಮರುಳುಗೊಂಡಿದ್ದಾಗ, ಅವನು ವಿದೇಶದಿಂದ ಹಿಂದಿರುಗಿದ ಸಂದರ್ಭದಲ್ಲಿ ನಾನು ಏರ್ಪಡಿಸಿದ್ದ ಸಾಯಂಕಾಲದ ಗೋಷ್ಠಿಯಲ್ಲಿ ಅವನು ಫ್ರೆಂಚ್ ಕ್ರಾಂತಿಕಾರ ಮರತ್‌ನಂತೆ ವರ್ತಿಸಿದಾಗಲೇ ನನ್ನ ಅಶ್ರದ್ಧೆಯನ್ನು ವ್ಯಕ್ತಪಡಿಸಿದ್ದೆ. ನಾನಾಗಲೇ ಈ ಮದುವೆಯನ್ನು ವಿರೋಧಿಸಿದ್ದೆ; ಮುಂದೇನಾಗುತ್ತದೆಂಬುದನ್ನೆಲ್ಲ ಕಣಿನುಡಿದಿದ್ದೆ.'

ಬಿಡುವಿದ್ದಾಗಲೆಲ್ಲ ಆಗಾಗ್ಗೆ ಅನ್ನಾ ಸಂಜೆ ಗೋಷ್ಠಿಗಳನ್ನು ಏರ್ಪಡಿಸುತ್ತಿದ್ದಳು. ಅಂಥ ಗೋಷ್ಠಿಗಳನ್ನು ಏರ್ಪಡಿಸುವುದರಲ್ಲಿ ಅವಳು ನಿಪುಣೆಯಾಗಿದ್ದಳು. ಅಂಥ ಗೋಷ್ಠಿಗಳಲ್ಲಿ ಅತ್ಯುತ್ಕೃಷ್ಟ ಸಮಾಜದ ಕೆನೆಯನ್ನು, ಪೀಟರ್ಸ್‌ಬರ್ಗ್ ನಗರದ ಬೌದ್ಧಿಕ ಸಾರಸತ್ವದ ಪರಿಮಳವನ್ನು ಕಾಣಬಹುದೆಂದು ಅವಳೇ ಸಾರುತ್ತಿದ್ದಳು. ಸಮಾಜದ ಸುಸಂಸ್ಕೃತ ವ್ಯಕ್ತಿಗಳ ಆಯ್ಕೆಯ ಜತೆಗೆ, ತನ್ನ ಸತ್ಕಾರ ಕೂಟಗಳಲ್ಲಿ ಅವಳು ಯಾವಾಗಲೂ ಹೊಸ ಹೊಸ ಮುಖಗಳನ್ನು ಪರಿಚಯ ಮಾಡಿಕೊಡುತ್ತಿದ್ದಳು.

ಸಂಪ್ರದಾಯಬದ್ಧವಾದ ಪೀಟರ್ಸ್‌ಬರ್ಗ್ ಆಸ್ಥಾನಿಕ ಸಮಾಜದ ರಾಜಕೀಯ ಶಾಖ ಮಾಪಕದ ಪರಿಸ್ಥಿತಿಯ ಸುಸ್ಪಷ್ಟ ನಿರ್ದಿಷ್ಟ ಸೂಚನೆ ಮತ್ತೆಲ್ಲಿಯೂ ದೊರೆಯುವಂತಿರ ಲಿಲ್ಲ.

೧೮೦೬ ನೆಯ ಸಂವತ್ಸರದ ಕೊನೆಯಲ್ಲಿ, ಜೇನ ಮತ್ತು ಔರ್‌ಸ್ಟ್ರಾದ್ ಕದನಗಳಲ್ಲಿ ಪ್ರಷ್ಯಾಸೈನ್ಯ ನೆಪೋಲಿಯನ್ನನ ಕೈಯಲ್ಲಿ ಅನುಭವಿಸಿದ ಅಪಾರ ಹಾನಿಯ, ಹಾಗೂ ಹಲವು ಪ್ರಷ್ಯನ್ ದುರ್ಗಗಳು ಶರಣಾಗತಿ ಹೊಂದಿದ ಸುದ್ದಿ ತಲುಪಿದಾಗ, ರಷ್ಯಾ ಸೈನ್ಯಗಳು ಪ್ರಷ್ಯಾವನ್ನು ಪ್ರವೇಶಿಸಿ, ನೆಪೋಲಿಯನ್ನನೊಡನೆ ಎರಡನೆಯ ಯುದ್ಧ ಪ್ರಾರಂಭವಾಗುತ್ತಿದ್ದಾಗ ಅನ್ನಾಪಾವ್‌ಲೋವ್ನ ಸಂಜೆಗೋಷ್ಠಿಯನ್ನು ಏರ್ಪಡಿಸಿದ್ದಳು. ಪರಿತ್ಯಕ್ತೆ ಲಾವಣ್ಯವತಿ ಹೆಲೆನ್, ಮಾರ್ಟಿಮಾರ್ಟ್, ಆದೆ ತಾನೆ ವಿಯನ್ನಾದಿಂದ ಹಿಂದಿರುಗಿದ್ದ ರಾಜಕುಮಾರ ಹಿಪ್ಪೊಲೈಟ್, ಇಬ್ಬರು ರಾಯಭಾರಿಗಳು, ಹಿರಿಯ ಸೋದರತ್ತೆ, ಪ್ರತಿಭಾಶಾಲಿಯೆಂದು ದಿವಾನಖಾನೆಯಲ್ಲಿ ಪರಿಚಯವಾಗಿದ್ದ ಯುವಕ, ಹೊಸದಾಗಿ ರಾಜಪರಿವಾರವನ್ನು ಸೇರಿದ್ದ ಮಹಿಳೆ ಮತ್ತು ಅವಳ ತಾಯಿ, ಅಂತೆಯೇ ಹಲವು ಅಲ್ಪ ಗಣ್ಯವ್ಯಕ್ತಿಗಳು ಅತ್ಯುತ್ಕೃಷ್ಟ ಸಮಾಜದ ಪರಿಮಳಯುಕ್ತ ಕೆನೆಯಂತಿ ದ್ದರು.

ಆ ಸಂಜೆ ತನ್ನ ಅತಿಥಿಗಳ ಮುಂದೆ ಪ್ರದರ್ಶಿಸಿದ ಹೊಸತನವೆಂದರೆ ಬೋರಿಸ್ ದ್ರುಬೆಟ್‌ಸ್ಕಾಯ್. ಪ್ರಮುಖ ವ್ಯಕ್ತಿಯೊಬ್ಬನಿಗೆ ಅಂಗರಕ್ಷಕನಾಗಿದ್ದ ಅವನು ಪ್ರಷ್ಯನ್ ಸೈನ್ಯದ ವಿಶೇಷ ವಾರ್ತಾವಾಹಕನಾಗಿ ಆದೆ ತಾನೆ ಬಂದಿದ್ದನು.

ಆ ಸಂಜೆ ಸತ್ಕಾರ ಗೋಷ್ಠಿಯ ಮುಂದೆ ರಾಜಕೀಯ ಶಾಖಮಾಪಕ ತೋರಿದ ವಾಯುಗುಣವಿದು : 'ಯೂರೋಪಿನ ಸಾರ್ವಭೌಮರು ಮತ್ತು ದಂಡನಾಯಕರು ಬೋನಪಾರ್ಟಿಯನ್ನು ಶಕ್ತಿಮೀರಿ ಪ್ರೋತ್ಸಾಹಿಸಿ, ನನಗೆ ಮತ್ತು ನಮ್ಮೆಲ್ಲರಿಗೆ ಅವಮಾನ ಗಾಬರಿಗಳನ್ನುಂಟುಮಾಡಿದರೂ, ಬೋನಪಾರ್ಟೆಯ ಬಗೆಗಿನ ನಮ್ಮ ಅಭಿಪ್ರಾಯ ಬದಲಾಗದು. ಆ ವಿಷಯದಲ್ಲಿ ನಮ್ಮ ಪ್ರಾಮಾಣಿಕ ಅಭಿಪ್ರಾಯವನ್ನು ಸ್ಪಷ್ಟಪಡಿಸದೆ ಹಿಂಜರಿಯಲಾರೆವು. "ಏನೆ ಆಗಲಿ, ನಿಮಗೆ ಹಾನಿ ತಪ್ಪದು. ನಿಮಗದು ದೊರಕುತ್ತದೆ, ಜಾರ್ಜ್ ದಂಡಿನ್" ಎಂದಿಷ್ಟೇ ನಾವು ಪ್ರಷ್ಯಾ ದೊರೆಗೂ ಮತ್ತು ಇತರರಿಗೂ ಹೇಳುವುದಿದೆ. ಆ ಬಗ್ಗೆ ನಾವು ಹೇಳಬಹುದಾದ್ದು ಅಷ್ಟೇ.'

ಅತಿಥಿಗಳಿಗೆ ಪರಿಚಯ ಮಾಡಿಕೊಡಬೇಕಾಗಿದ್ದ ಬೋರಿಸ್ ದಿವಾನಖಾನೆಯನ್ನು ಪ್ರವೇಶಿಸಿದಾಗ ಅತಿಥಿಗಳೆಲ್ಲ ಜಮಾಯಿಸಿದ್ದರು. ಅನ್ನಾಪಾವ್‌ಲೋವ್ನಳ ಮಾರ್ಗದರ್ಶನ ದಲ್ಲಿ ಪ್ರಾರಂಭವಾಗಿದ್ದ ಸಂಭಾಷಣೆ ರಷ್ಯಾ ಮತ್ತು ಆಸ್ಟ್ರಿಯಾಗಳ ರಾಯಭಾರಿ ಸಂಬಂಧವನ್ನೂ, ಆಸ್ಟ್ರಿಯಾದೊಡನೆ ರೂಪಿಸಿಕೊಳ್ಳಬೇಕಾಗಿದ್ದ ಮೈತ್ರಿಕೂಟವನ್ನೂ ಕುರಿತದ್ದಾಗಿತ್ತು.

ಅಂಗರಕ್ಷಕನ ಸಮವಸ್ತ್ರವನ್ನು ನಾಜೋಕಾಗಿ ಧರಿಸಿದ್ದ ತುಂಬು ಮೈಕಟ್ಟಿನ, ಪ್ರಶಾಂತಚಿತ್ತದ, ಹೊಸ ಹುರುಪಿನ ಬೋರಿಸ್ ದಿವಾನಖಾನೆಯನ್ನು ಪ್ರವೇಶಿಸಿದ ಕೂಡಲೇ ಅವನನ್ನು ದೊಡ್ಡಮ್ಮನ ಬಳಿ ಕರೆದೊಯ್ಯಲಾಯಿತು. ಅವಳಿಗೆ ಗೌರವ ವನ್ನು ಸಲ್ಲಿಸಿದ ನಂತರ ಅವನನ್ನು ಅತಿಥಿಗಳ ಗುಂಪಿಗೆ ಕರತರಲಾಯಿತು.

ಅನ್ನಾಪಾವ್‌ಲೋವ್ನ ತನ್ನ ಸುಕ್ಕು ಹಿಡಿದ ಕೈಗಳನ್ನು ಚುಂಬನಕ್ಕಾಗಿ ಅವ
ಮುಂದೆ ಹಿಡಿದಳು. ಅವನಿಗೆ ಗೊತ್ತಿಲ್ಲದ ಹಲವು ವ್ಯಕ್ತಿಗಳಿಗೆ ಅವಳು ಅವನನ್ನು
ಪರಿಚಯಿಸಿಕೊಟ್ಟಳು. ಪ್ರತಿಯೊಬ್ಬ ಅತಿಥಿಯ ಬಳಿ ನಿಂತಾಗಲೂ ಅವಳು
ಆ ಅತಿಥಿಯ ವಿವರವನ್ನು ಪಿಸುದನಿಯಲ್ಲಿ ಉಸುರುತ್ತಿದ್ದಳು.

'ರಾಜಕುಮಾರ ಹಿಪ್ಪೊಲೈಟ್ ಕುರಾಗಿನ್ ಮನಮೋಹಕ ವ್ಯಕ್ತಿ; ಕೋಪನ
ಹೇಗೆನ್ನಿನಿಂದ ಬಂದಿರುವ ಉಪರಾಯಭಾರಿ ಎಂ. ಕ್ರಾಂಟ್ ಬೌದ್ಧಿಕ ಶ್ರೀಮಂತರು
ಶ್ರೀ ಮಾಷಿತೊವ್ ಘನತೆವೆತ್ತ ಪ್ರತಿಭಾಶಾಲಿ' ಅವಳು ಅತಿಥಿಗಳನ್ನು ಪರಿಚಯಿ
ಕೊಡುತ್ತಿದ್ದ ಧಾಟಿಯಿದು.

ಅನ್ನಾಮಿಖಾಯ್‌ಲೊವ್ನಳ ಪ್ರಯತ್ನದಿಂದಾಗಿ, ತನ್ನ ಔಚಿತ್ಯ ವಿವೇಕದಿಂದಾಗಿ
ಸಂಕೋಚ ಪ್ರವೃತ್ತಿಯ ವೈಶಿಷ್ಟ್ಯದಿಂದಾಗಿ ಬೋರಿಸ್ ತನ್ನ ಅಧಿಕಾರಾವಧಿಯ
ಅನುಕೂಲವಾದ ಸ್ಥಾನವನ್ನು ಸಂಪಾದಿಸಿಕೊಳ್ಳಲು ಸಾಧ್ಯವಾಗಿತ್ತು. ಅವನು ಮಹ
ನಾಯಕನೊಬ್ಬನ ಅಂಗರಕ್ಷಕನಾಗಿದ್ದನು; ಪ್ರಮುಖ ನಿಯೋಗಿಯಾಗಿ ಪ್ರಷ್ಯ
ನಿಯಮಿತನಾಗಿ, ಕಾರ್ಯಭಾರವನ್ನು ಮುಗಿಸಿ, ಅದೆ ತಾನೆ ಹಿಂದಿರುಗಿದ್ದನು. ತಾನು ಅಲ
ಮೂತ್ಸ್‌ನಲ್ಲಿದ್ದಾಗ ಕಲಿತು, ನೈಪುಣ್ಯವನ್ನು ಸಂಪಾದಿಸಿದ್ದ ಅಲಿಖಿತ ಶಾಸನದಿಂ
ಅವನಿಗೆ ತೃಪ್ತಿಯೊದಗಿತು. ಅದರಿಂದಾಗಿ ಅವನು ಸೇನಾಪಿಗೂ ದಕ್ಕದ ಉತ್ಕೃಷ್ಟವಾ
ಲಾಂಛನವನ್ನು ಪಡೆದಿದ್ದನು; ಸೇವೆಯ ಯಶಸ್ಸಿಗೆ ಬೇಕಾದ್ದು ಪ್ರಯತ್ನವ
ದುಡಿಮೆಯಲ್ಲ, ಧೈರ್ಯವಲ್ಲ, ದೃಢಸಂಕಲ್ಪವಲ್ಲ, ಪದವಿಪ್ರಶಸ್ತಿಗಳನ್ನು ದಾನಮಾಡಬ
ಗಣ್ಯರನ್ನು ಮೂಲಗಿಸುವ ಚಾಕಚಕ್ಯತೆಯೊಂದೆ ಎಂಬುದನ್ನವನು ಅದರಿಂದ ಅರಿ
ಕೊಂಡಿದ್ದನು. ಈ ವಿಷಯಗಳನ್ನರಿಯದ ಇತರರ ಅಸಾಮರ್ಥ್ಯವನ್ನೂ, ತನ್ನ ಯಶಸ್ಸಿ
ತೀವ್ರ ವೇಗವನ್ನೂ ಕಂಡು ಅನೇಕಸಲ ಅವನೇ ಸೋಜಿಗಗೊಂಡಿದ್ದನು. ಈ ಅಲಿಖಿ
ಶಾಸನ ತನಗೆ ವಶವಾದನಂತರ ಅವನ ಬದುಕಿನ ರೀತಿನೀತಿಗಳು ಹಳೆಯ ಗೆಳೆಯ
ಸಂಬಂಧಗಳು, ಮತ್ತು ಭವಿಷ್ಯದ ಬಗೆಗಿನ ಹಂಚಿಕೆಗಳೆಲ್ಲ ಸಂಪೂರ್ಣವಾಗಿ ಬದಲಾವ
ಗೊಂಡಿದ್ದುವು. ಅವನು ಶ್ರೀಮಂತನಾಗಿರಲಿಲ್ಲ. ಇತರರಿಗಿಂತ ಚೆನ್ನಾಗಿ ಕಾಣ
ಉದ್ದೇಶದಿಂದ ವೇಷಭೂಷಣಗಳಿಗಾಗಿ ಕೊನೆಯ ಕಾಸನ್ನು ಸಹ ಖರ್ಚುಮಾಡುತ್ತಿದ್ದ
ಹರುಕುಮುರುಕಲಾದ ದುಸ್ಥಿತಿಯ ಉಡುಗೆ ತೊಡುಗೆಗಳಲ್ಲಿ ಕಾಣಿಸಿಕೊಳ್ಳುವುದಕ್ಕಿಂ
ಪೀಟರ್ಸ್‌ಬರ್ಗ್ ಬೀದಿಗಳಲ್ಲಿ ಹಳೆಯ ಸಮವಸ್ತ್ರದಲ್ಲಿ ತಿರುಗಾಡುವುದಕ್ಕಿಂತ, ಭೋ
ವಿಲಾಸಗಳ ಹವ್ಯಾಸವನ್ನು ತೊರೆಯಲು ಅವನು ಸಿದ್ಧನಾಗಿದ್ದನು. ತನಗಿಂತ ಉನ
ಸ್ಥಾನಮಾನಗಳಲ್ಲಿದ್ದ, ತನಗೆ ಪ್ರಯೋಜನವಾಗಬಹುದಿದ್ದ ವ್ಯಕ್ತಿಗಳನ್ನು ಮಾ
ಓಲೈಸಿ, ಅವರ ಪರಿಚಯ ಮೈತ್ರಿಯನ್ನು ಸಂಪಾದಿಸುತ್ತಿದ್ದನು. ಪೀಟರ್ಸ್‌ಬ
ಅವನಿಗೆ ಇಷ್ಟವಾದ ನಗರ. ಮಾಸ್ಕೋ ಬಗ್ಗೆ ಅವನಿಗೆ ದ್ವೇಷವಿತ್ತು. ರೊಸ್ಟೊ
ಕುಟುಂಬದ ಹಾಗೂ ನತಾಷಳ ಬಗೆಗಿನ ಮಕ್ಕಳಾಟಿಕೆಯ ಪ್ರೇಮದ ನೆನಪು ಅವ
ಅಹಿತವಾಗಿತ್ತು. ಸೈನ್ಯಕ್ಕೆ ತೆರಳಿದ ದಿನದಿಂದ ಅವನು ರೊಸ್ಟೋವ್‌ರ ಮನೆಯ ಕ
ಕಾಲುಹಾಕಿರಲಿಲ್ಲ. ಅನ್ನಾಪಾವ್‌ಲೋವ್ನ ದಿವಾನಖಾನೆಯ ಸತ್ಕಾರಕೂಟ
ಸೇವಾಯಶಸ್ಸಿನ ಮತ್ತೊಂದು ಸೋಪಾನವೆಂದವನು ಬಗೆದನು. ಆತಿಥೇಯ ಮಾ

ತನ್ನಿಂದೇನಾಗಬೇಕೋ ಅದನ್ನೆಲ್ಲ ಪೂರೈಸುವುದರಲ್ಲಿ ತನ್ನ ಪಾತ್ರದ ಔಚಿತ್ಯವಿದೆ ಯೆಂಬುದನ್ನವನು ಗ್ರಹಿಸಿದನು. ಅವನು ಎಚ್ಚರಿಕೆಯಿಂದ ಪ್ರತಿಯೊಂದು ಮುಖವನ್ನು ಅವಲೋಕಿಸಿದನು; ಹಾಗೆ ಅವಲೋಕಿಸುವಾಗ, ಅಲ್ಲಿ ಹಾಜರಿದ್ದ ಪ್ರತಿಯೊಬ್ಬರೊಡನೆ ಆತ್ಮೀಯತೆಯನ್ನು ಕುದುರಿಸುವ ಸಾಧ್ಯತೆಯನ್ನೂ ಅವರಿಂದ ತನಗಾಗುವ ಲಾಭಗಳನ್ನೂ ಅವನು ತೂಗಿ, ಅಂದಾಜು ಮಾಡಿಕೊಳ್ಳುತ್ತಿದ್ದನು. ಹೆಲೆನ್‌ಳ ಪಕ್ಕದಲ್ಲಿ ಮೊದಲೇ ನಿಗದಿಯಾಗಿದ್ದ ಆಸನದಲ್ಲಿ ಅವನು ಕುಳಿತುಕೊಂಡು, ಒಟ್ಟಿನ ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಿದ್ದನು.

'ಈಗ ಆಲೋಚನೆಯಲ್ಲಿರುವ ಕೌಲಿನ ಆಧಾರ ಸೂತ್ರಗಳು ಸಾಧನೀಯವಲ್ಲ ವೆಂದೂ, ನಿರಂತರ ವಿಜಯಪರಂಪರೆಗಳು ಸಹ ಅವನ್ನು ರಕ್ಷಿಸಲಾರವೆಂದೂ ವಿಯನ್ನ ಪರ್ಯಾಲೋಚಿಸುತ್ತಿದೆ; ಅವನ್ನು ಸಾಧಿಸಬಹುದಾದ ಸಾಧನ ಸಲಕರಣೆಗಳ ಬಗೆಗೂ ಅದು ಶಂಕೆಯನ್ನು ವ್ಯಕ್ತಪಡಿಸುತ್ತಿದೆ. ವಿಯನ್ನ ಸಚಿವ ಮಂಡಲಿ ವಾಸ್ತವವಾಗಿ ಬಳಸಿರುವ ಪದಪುಂಜಗಳಿವು' ಎಂದು ಡೆನ್ಮಾರ್ಕ್‌ನ ಉಪರಾಯಭಾರಿ ನುಡಿದನು.

'ಈ ಸಂದೇಹ ಅತಿಯಾಯಿತೆಂದು ತೋರುತ್ತದೆ' ಎಂದು ಪ್ರತಿಭಾಶಾಲಿ ಮೇಧಾವಿ ಅರ್ಥಪೂರ್ಣವಾಗಿ ನಕ್ಕನು.

'ವಿಯನ್ನ ಸಚಿವ ಸಂಪುಟ ಮತ್ತು ಆಸ್ಟ್ರಿಯಾ ಚಕ್ರವರ್ತಿಗಳ ನಡುವೆ ವ್ಯತ್ಯಾಸವಿದೆ. ಚಕ್ರವರ್ತಿ ಆ ರೀತಿ ಎಂದೂ ಯೋಚಿಸಿರಲಾರರು. ಅದು ಸಚಿವ ಸಂಪುಟದ ಅಭಿಪ್ರಾಯವಷ್ಟೆ' ಎಂದು ಮಾರ್ಟಿಮಾರ್ಟ್ ನುಡಿದನು.

'ಅಹ, ಪ್ರಿಯ ವೈಕೌಂಟರೆ, ಯೂರೋಪು ಎಂದೆಂದಿಗೂ ನಮ್ಮ ವಿಶ್ವಸನೀಯ ಮೈತ್ರಿಗೆ ಅರ್ಹವಾಗಲಾರದು' ಎಂದು ಅನ್ನಾಪಾವ್‌ಲೋವ್ನ ನಡುವೆ ಬಾಯಿ ಹಾಕಿದಳು.

ತರುವಾಯ, ಬೋರಿಸ್‌ನನ್ನು ಸಂಭಾಷಣೆಗೆಳೆಯುವಸಲುವಾಗಿ ಅನ್ನಾ ಪ್ರಷ್ಯಾ ದೊರೆಯ ಸಾಹಸ ಸ್ಥೈರ್ಯಗಳ ವಿಷಯವನ್ನೆತ್ತಿಕೊಂಡಳು.

ಬೋರಿಸ್ ಪ್ರತಿಯೊಬ್ಬ ಮಾತುಗಾರನ ಮಾತುಗಳನ್ನು ಆಸಕ್ತಿಯಿಂದ ಆಲಿಸುತ್ತ ತನ್ನ ಸರದಿಗಾಗಿ ಕಾಯುಕೊಂಡಿದ್ದನು. ಆ ಅವಧಿಯಲ್ಲಿ ಅವನು ತನ್ನ ನೆರೆಯಾಕೆ ಚೆಲುವೆ ಹೆಲೆನ್‌ಳ ಕಡೆಗೆ ಹಲವು ಸಲ ಕಣ್ಣು ಮಿಟುಕಿಸಿದ್ದನು. ಅವಳ ಕಣ್ಣುಗಳು ಸುಂದರ ತರುಣ ಅಂಗರಕ್ಷಕನ ಕಣ್ಣುಗಳನ್ನು ಸ್ನಿಗ್ಧ ಮಂದಹಾಸದಿಂದ ಸಂಧಿಸಿದ್ದುವು.

ಪ್ರಷ್ಯಾದ ಪರಿಸ್ಥಿತಿಯ ಬಗ್ಗೆ ಅನ್ನಾಪಾವ್‌ಲೋವ್ನ ಪ್ರಸ್ತಾಪಿಸುತ್ತ, ಅವನ ಗ್ಲೋಗೌ ಪ್ರಯಾಣದ ವಿಷಯವನ್ನೂ, ಪ್ರಷ್ಯಾ ಸೈನ್ಯದ ಅವಸ್ಥೆಯನ್ನೂ ವಿವರಿಸುವಂತೆ ಬೋರಿಸ್‌ನನ್ನು ಪ್ರಚೋದಿಸಿದಳು. ಬೋರಿಸ್ ಸಾವಕಾಶವಾಗಿ ಮಾತಾಡುತ್ತ, ಶುದ್ಧ ಫ್ರೆಂಚ್ ಭಾಷೆಯಲ್ಲಿ ಆಸ್ಥಾನ ಮತ್ತು ಸೈನ್ಯಗಳ ಬಗ್ಗೆ ಅನೇಕ ಕುತೂಹಲಕಾರಿ ವಿವರಣೆ ಗಳನ್ನು ನೀಡಿದನು. ಆದರೆ ತಾನು ವಿವರಿಸುತ್ತಿದ್ದ ಸಂಗತಿಗಳ ಬಗ್ಗೆ ಮರೆತೂ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರಲಿಲ್ಲ. ಕೆಲವು ಕಾಲ ಅವನು ಒಟ್ಟಿನ ಗಮನವನ್ನು ತನ್ನ ಕಡೆಗೆ ಸೆಳೆದುಕೊಂಡಿದ್ದನು. ತಾನು ಬಡಿಸಿದ್ದ ನವೀನರುಚಿ ತನ್ನ ಅತಿಥಿಗಳಿಗೆ ಆಸ್ವಾದನೀಯವಾಗಿತ್ತೆಂದು ಅನ್ನಾ ಹರ್ಷಿಸಿದಳು. ಅತಿಥಿಗಳ ಪೈಕಿ ಬೋರಿಸ್‌ನ

ಕಥಾನಕದಲ್ಲಿ ಸಂಪೂರ್ಣವಾಗಿ ಮಗ್ನಳಾಗಿದ್ದವಳೆಂದರೆ ಹೆಲೆನ್. ಅವನ ಪ್ರಯಾಣದ ಬಗ್ಗೆ ಅವಳು ಅನೇಕ ಪ್ರಶ್ನೆಗಳನ್ನು ಕೇಳಿದಳು; ಪ್ರಷ್ಯಾ ಸೈನ್ಯದ ಬಗ್ಗೆ ಹೆಚ್ಚು ಆಸಕ್ತಿ ತೋರಿದಳು. ಅವನು ಮಾತು ಮುಗಿಸಿದನಂತರ ಅವಳು ಎಂದಿನ ಮುಗುಳು ನಗೆಯಿಂದ ಅವನ ಕಡೆಗೆ ತಿರುಗಿದಳು.

'ನೀವು ಖಂಡಿತ ಬಂದೇ ಬರಬೇಕು' ಎಂದವಳು ಒತ್ತಾಯಿಸಿದಳು. 'ಖಂಡಿತವಾಗಿ' ಎನ್ನುವ ಮಾತು ಆ ಸಂದರ್ಭದಲ್ಲಿ ಅವನಿಗರ್ಥವಾಗಲಾರದೆಂಬ ಧ್ವನಿ ಅವಳ ಮಾತಿನಲ್ಲಡಗಿದ್ದಂತೆ ತೋರಿತು.

'ಮಂಗಳವಾರ ಎಂಟರಿಂದ ಒಂಬತ್ತು ಗಂಟೆಯೊಳಗೆ ಆಗಬಹುದೆ? ನಿಮ್ಮನ್ನು ಸಂದರ್ಶಿಸಲು ನನಗೆ ತುಂಬ ಹರ್ಷವಾಗುತ್ತದೆ.'

ಅವಳ ಆಸೆಯನ್ನೀಡೇರಿಸಲು ವಚನ ನೀಡಿದ ಬೋರಿಸ್ ಅವಳೊಡನೆ ಸಂಭಾಷಣೆಗೆ ಸಿದ್ಧನಾದನು. ಅಷ್ಟರಲ್ಲಿ ಚಿಕ್ಕಮ್ಮ ಅವನೊಡನೆ ಮಾತಾಡಬೇಕೆಂದು ಅಪೇಕ್ಷಿಸಿದ್ದಾಳೆಂಬ ನೆಪದ ಮೇಲೆ ಅನ್ನಾಪಾವ್‌ಲೋವ್ನ ಅವನನ್ನು ಬೇರೆಡೆಗೆ ಕರೆದಳು.

'ನಿನಗೆ ಅವಳ ಗಂಡ ಗೊತ್ತಿರಬೇಕಲ್ಲವೆ?' ಎಂದು ಅನ್ನಾ ತನ್ನ ಕಣ್ಣು ಮುಚ್ಚಿಕೊಂಡು ನುಡಿದು, ಹೆಲೆನ್‌ಳ ಬಗೆಗೆ ಸಂಕಟದ ಸನ್ನೆಯನ್ನು ಸೂಚಿಸಿದಳು. 'ಹಾ, ಅವಳೆಂಥ ನತದೃಷ್ಟ ಲಾವಣ್ಯವತಿ! ಅವಳ ಮುಂದೆ ಅವನ ಹೆಸರೆತ್ತಬೇಡ—ಖಂಡಿತ ಎತ್ತಬೇಡ. ಅದರಿಂದ ಅವಳಿಗೆ ತುಂಬ ಯಾತನೆಯಾಗುತ್ತದೆ.'

ಅಧ್ಯಾಯ ೭

ಬೋರಿಸ್ ಮತ್ತು ಅನ್ನಾಪಾವ್‌ಲೋವ್ನ ಬೇರೆಯವರ ಕಡೆಗೆ ಹೊರಳಿದಾಗ ರಾಜಕುಮಾರ ಹಿಪ್ಪೊಲೈಟ್ ಶ್ರೋತೃಗಳ ಕಿವಿಗಳನ್ನು ತನ್ನ ಕಡೆಗೆ ಸೆಳೆದುಕೊಂಡಿದ್ದನು. ತಾನು ಕುಳಿತಿದ್ದ ತೋಳ್ಕುರ್ಚಿಯಿಂದ ತುಸು ಮುಂದೆ ಬಾಗಿ, 'ಪ್ರಷ್ಯಾ ದೇಶದ ಸಾರ್ವಭೌಮನಿಗಾಗಿ' (ಫ್ರೆಂಚ್ ಭಾಷೆಯ ಈ ನುಡಿಗಟ್ಟಿಗೆ ಬೆಲೆಯಿಲ್ಲದ ಕ್ಷುದ್ರವಸ್ತುವೆಂದರ್ಥ) ಎಂದು ನುಡಿದು ಗಹಗಹಿಸಿ ನಕ್ಕನು. ಪ್ರತಿಯೊಬ್ಬರೂ ಅವನ ಕಡೆಗೆ ಕಿವಿಯಾದರು.

'ಪ್ರಷ್ಯಾ ದೇಶದ ದೊರೆಯೊ?' ಎಂದವನು ಮತ್ತೆ ಪ್ರಶ್ನಾರ್ಥಕವಾಗಿ ಪುನರುಚ್ಚರಿಸಿ, ನಕ್ಕು, ಪ್ರಶಾಂತಗಂಭೀರವಾಗಿ ಮತ್ತೆ ನೆಟ್ಟಗೆ ಕುಳಿತುಕೊಂಡನು. ಅವನು ತನ್ನ ಮಾತು ಮುಂದುವರಿಸಲೆಂದು ಅನ್ನಾ ತುಸು ಕಾದಳು. ಅವನು ಮಾತಾಡಬಾರದೆಂದು ನಿಶ್ಚಯಿಸಿಕೊಂಡಿದ್ದಂತೆ ಕಂಡು ಬಂದದ್ದರಿಂದ, ದುಷ್ಟ ಬೋನಪಾರ್ಟ್ ಪೋಟ್ಸ್‌ಡಮ್‌ನಲ್ಲಿ ಫ್ರೆಡರಿಕ್ ಮಹಾಶಯನ ಕತ್ತಿಯನ್ನು ಕದ್ದುಕೊಂಡ ಬಗೆಯನ್ನು ಕಥಿಸತೊಡಗಿದಳು.

'ಫ್ರೆಡರಿಕ್ ಮಹಾಶಯನ ಕತ್ತಿಯನ್ನು ಕುರಿತು ನಾನು....' ಎಂದವಳು ಶುರು ಮಾಡಿದಾಗ, 'ಪ್ರಷ್ಯಾದೇಶದ ಪ್ರಭು ...' ಎಂದು ಹಿಪ್ಪೊಲೈಟ್ ನಡುವೆ ಬಾಯಿಹಾಕಿದನು. ಸಭಿಕರು ತನ್ನ ಕಡೆಗೆ ಮುಖವಾದಾಗ ಅವನು ಮಧ್ಯೆ ಬಾಯಿ ಹಾಕಿದ್ದಕ್ಕೆ ಕ್ಷಮೆ ಯಾಚಿಸಿ, ಸುಮ್ಮನೆ ಕುಳಿತನು.

ಅನ್ನಾಪಾವ್‌ಲೋವ್ನ ಹುಬ್ಬು ಗಂಟಿಕ್ಕಿದಳು. ಹಿಪ್ಪೊಲೈಟ್‌ನ ಗೆಳೆಯ ಮಾರ್ಟಿಮಾರ್ಟ್ 'ಏಕೆ ತೆಪ್ಪಗಾದೆ? ನಿನ್ನ 'ಪ್ರಷ್ಯಾ ಪ್ರಭು'ವಿನ ವಿಷಯವೇನು? ಹೇಳು' ಎಂದು ಗಟ್ಟಿಸಿದನು.

ಹಿಪ್ಪೊಲೈಟ್ ಲಜ್ಜೆಗೊಂಡವನಂತೆ ನಕ್ಕನು. 'ಓಹೋ, ಅದೇ. ಅದೇನೂ ದೊಡ್ಡ ವಿಷಯವಲ್ಲ. ನಾನು ಹೇಳಬೇಕೆಂದಿದ್ದುದು....' (ವಿಯನ್ನಾದಲ್ಲಿ ಕಿವಿಯ ಮೇಲೆ ಹಾಕಿಕೊಂಡಿದ್ದ ತಮಾಷೆಯೊಂದನ್ನು ಇಲ್ಲಿ ಹೇಳಬೇಕೆಂದಿದ್ದನು; ಸಂಜೆಯಿಂದಲೂ ಅದನ್ನು ಹೇಳಿಬಿಡಬೇಕೆಂದು ಪ್ರಯತ್ನಿಸುತ್ತಿದ್ದನು.) 'ಪಾಪ, ಪ್ರಷ್ಯಾದ ಪ್ರಭುವಿನ ಮೇಲೆ ಕಾಳಗ ಹೂಡುವುದು ತಪ್ಪೆಂದು ಹೇಳಬೇಕೆಂದಿದ್ದೆ.'

ಬೋರಿಸ್ ಎಚ್ಚರಿಕೆಯಿಂದ ನಕ್ಕನು. ಕೇಳುವವರ ಭಾವಕ್ಕನುಗುಣವಾಗಿ ಆ ತಮಾಷೆ ಪ್ರಶಂಸೆಯಾಗುವ ಅಥವಾ ವ್ಯಂಗ್ಯವಾಗುವ ಸಂಭವವಿದ್ದುದರಿಂದ ಅವನು ಎಚ್ಚರಿಕೆ ವಹಿಸಬೇಕಾಯಿತು. ಎಲ್ಲರೂ ನಕ್ಕರು.

'ನಿಮ್ಮ ಕುಚೋದ್ಯ ತಪ್ಪು. ಅದರಲ್ಲಿ ಚಮತ್ಕಾರವಿದೆ ನಿಜ; ಆದರೆ ನ್ಯಾಯ ಸಮ್ಮತವಾದದ್ದಲ್ಲ' ಎಂದು ಅನ್ನಾಪಾವ್‌ಲೋವ್ನ ತನ್ನ ಸುಕ್ಕಿದ ಬೆರಳನ್ನು ಅವನ ಕಡೆಗೆ ಝಳಪಿಸಿದಳು. 'ನಾವು ಪ್ರಷ್ಯಾ ಪ್ರಭುವಿಗಾಗಲ್ಲ ಕಾಳಗಹೂಡಿರುವುದು, ನ್ಯಾಯಕ್ಕಾಗಿ, ತತ್ತ್ವಕ್ಕಾಗಿ. ಓ, ರಾಜಕುಮಾರ ಹಿಪ್ಪೊಲೈಟ್ ಕುಚೇಷ್ಟೆಯ ಮನುಷ್ಯ!'

ಇಡೀ ಸಂಜೆ ಆ ಸಂಭಾಷಣೆ ಸಾಗಿತು. ಅದು ಮುಖ್ಯವಾಗಿ ರಾಜಕೀಯ ವಾರ್ತೆಗೆ ಸಂಬಂಧಿಸಿದುದಾಗಿತ್ತು. ಕೊನೆಕೊನೆಗೆ, ಚಕ್ರವರ್ತಿ ನೀಡಿದ ಇನಾಮುಗಳ ಪ್ರಸ್ತಾಪ ಬಂದಾಗ ಅದು ಕಾವೇರಿತು.

'ಕಳೆದ ವರ್ಷ ಭಾವಚಿತ್ರವಿದ್ದ ನಶ್ಯದ ಭರಣಿ ನನಗೆ ಸಿಕ್ಕಿದ್ದು ನಿಮಗೆ ಗೊತ್ತಿರಬೇಕಲ್ಲವೆ?' ಎಂದು ಪ್ರತಿಭಾವಂತ ಮೇಧಾವಿ ನುಡಿದನು. 'ಹಾಗಾದರೆ ಅದೇ ಕಿಲ್ಲತ್ತು ಷ-ಷ-ಗೇಕೆ ದೊರೆಯಬಾರದು?'

'ಕ್ಷಮಿಸಿ. ಚಕ್ರವರ್ತಿಯ ಭಾವಚಿತ್ರವಿರುವ ನಶ್ಯದ ಭರಣಿ ಇನಾಮೆ ಹೊರತು, ಬಿರುದಲ್ಲ. ಅದೊಂದು ಕಾಣಿಕೆಯಷ್ಟೆ' ಎಂದು ರಾಯಭಾರಿ ನುಡಿದನು.

'ಪೂರ್ವನಿದರ್ಶನಗಳಿಲ್ಲದಿಲ್ಲ. ಷ್ವಾರ್ಜೆನ್‌ಬರ್ಗ್‌ರ ಹೆಸರನ್ನಿಲ್ಲಿ ಸ್ಮರಿಸಿಕೊಳ್ಳಬಹುದು.'

'ಅದೆಲ್ಲ ಸಾಧ್ಯವಿಲ್ಲದ ಮಾತು' ಎಂದು ಮತ್ತೊಬ್ಬ ಉತ್ತರಿಸಿದನು.

'ನೀವು ಬಾಜಿ ಕಟ್ಟುವಿರಾ? ಬಿರುದು ಪಟ್ಟಿಯ ವಿಷಯವೇ ಬೇರೆ.'

ಆ ಸಂಜೆ ಹೆಚ್ಚು ಮಾತಾಡದಿದ್ದವಳೆಂದರೆ ಹೆಲೆನ್. ಎಲ್ಲಗೂ ಹೊರಡಲು ಮೇಲೆದ್ದಾಗ ಅವಳು ಬೋರಿಸ್‌ನ ಕಡೆಗೆ ತಿರುಗಿ, ತನ್ನ ಮನೆಗೆ ಮಂಗಳವಾರ ಬರಬೇಕೆಂದು ಅರ್ಥಪೂರ್ಣವಾದ, ಲಾಲನೆಯಿಂದ ಕೂಡಿದ ಆಜ್ಞೆಯ ಗತ್ತಿನಲ್ಲಿ ವಿನಂತಿಸಿಕೊಂಡಳು.

'ನಾನು ಅಗತ್ಯವಾಗಿ ಭೇಟಿಮಾಡಬೇಕಾಗಿದೆ' ಎಂದವಳು ಅನ್ನಾಪಾವ್‌ಲೋವ್ನ ಕಡೆಗೆ ತಿರುಗಿಕೊಂಡು ಮಂದಹಾಸ ಬೀರಿದಳು. ತನ್ನ ಗೌರವನೀಯ ಪೋಷಕ

ಶ್ರೀಮಂತೆಯ ಬಗ್ಗೆ ದ:ಗುಡ ಬೆರೆತ ಮುಗುಳು ನಗೆಯೊಡನೆ ಮಾತಾಡಿದ್ದಂತೆಯೇ ಅನ್ನಾಪಾವ್ಲೋವ್ನ ಹೆಲೆನ್‌ಳ ಇಚ್ಛೆಯನ್ನು ಬೆಂಬಲಿಸಿದಳು.

ಪ್ರಷ್ಯನ್ ಸೈನ್ಯದ ಬಗ್ಗೆ ಬೋರಿಸ್ ಆಡಿದ್ದ ಮಾತುಗಳ ಕಾರಣವಾಗಿ ಅವನನ್ನು ಮತ್ತೆ ಭೇಟಿಮಾಡಿ, ಆ ಬಗ್ಗೆ ಹೆಚ್ಚು ವಿಷಯ ತಿಳಿದುಕೊಳ್ಳಲು ಹೆಲೆನ್ ಉದ್ದೇಶಿಸಿದ್ದಳು. ಮಂಗಳವಾರ ತನ್ನನ್ನು ಭೇಟಿಮಾಡಿದಾಗ ತನ್ನ ಉದ್ದೇಶವನ್ನು ವಿವರಿಸುವುದಾಗಿ ಅವಳವನಿಗೆ ವಚನ ನೀಡಿದಂತಿತ್ತು.

ಮಂಗಳವಾರ ಸಂಜೆ ಹೆಲೆನ್‌ಳ ಸೊಗಸಾದ ದಿವಾನ್‌ಖಾನೆಗೆ ಬೋರಿಸ್ ಬಂದ. ಆದರೆ ಅವಳು ವಾಗ್ದಾನಮಾಡಿದ್ದ ವಿವರಣೆ ಅವನಿಗೆ ವಿಶದವಾಗಿ ದೊರೆಯಲಿಲ್ಲ. ಅಂದು ಇತರ ಅತಿಥಿಗಳೂ ಇದ್ದುದ್ದರಿಂದ ಅವಳು ಬೋರಿಸ್‌ನ ಬಳಿ ಹೆಚ್ಚು ಮಾತಾಡಲಾಗಲಿಲ್ಲ. ಬೀಳ್ಕೊಡಿಗೆಯ ಸಮಯದಲ್ಲಿ ಅವನವಳ ಕೈಯನ್ನು ಚುಂಬಿಸಿದಾಗ ಮಾತ್ರ, ಅನಿರೀಕ್ಷಿತವಾಗಿ, ಹಾಸಶೂನ್ಯ ಮುಖದೊಡನೆ 'ನಾಳೆ ರಾತ್ರಿ ಊಟಕ್ಕೆ ಬನ್ನಿ....ಸಂಜೆ ನೀವು ಬಂದೇತೀರಬೇಕು,....ಬರಲೇಬೇಕು!' ಎಂದವಳು ಪಿಸುನುಡಿದಳು.

ಪೀಟರ್ಸ್‌ಬರ್ಗ್‌ನ ತಂಗಣೆಯ ಅವಧಿಯಲ್ಲಿ ಬೋರಿಸ್ ಶ್ರೀಮಂತೆಯ ಮನೆಗೆ ಆತ್ಮೀಯನಾದನು.

ಅಧ್ಯಾಯ ೮

ಯುದ್ಧ ಕಾವೇರುತ್ತಿತ್ತು; ರಷ್ಯದ ಗಡಿಯನ್ನು ಸಮೀಪಿಸುತ್ತಿತ್ತು. ಮನುಕುಲದ ಶತ್ರುವಾದ ಬೋನಪಾರ್ಟೆಯ ಮೇಲೆ ಸರ್ವತ್ರ ಶಾಪಗಳು ಸುರಿಯುತ್ತಿದ್ದುವು. ಹಳ್ಳಿ ಹಳ್ಳಿಗಳಲ್ಲಿ ಪ್ರಜಾ ಸೈನಿಕರನ್ನೂ ಹೊಸ ಸಿಪಾಯಿಗಳನ್ನೂ ಸೇರಿಸಿಕೊಳ್ಳಲಾಗುತ್ತಿತ್ತು. ಯುದ್ಧ ಭೂಮಿಯಿಂದ ಪರಸ್ಪರ ವಿರೋಧಾತ್ಮಕವಾದ ವಾರ್ತೆಗಳು ಬರುತ್ತಿದ್ದುವು. ವಾಡಿಕೆಯಂತೆ ಬರುತ್ತಿದ್ದ ಕೆಲವು ಸುಳ್ಳು ಸುದ್ದಿಗಳನ್ನು ಜನ ಬೇಕು ಬೇಕಾದಂತೆ ವ್ಯಾಖ್ಯಾನಿಸಿಕೊಳ್ಳುತ್ತಿದ್ದರು.

ಹಿರಿಯ ರಾಜಕುಮಾರ ಬಲ್ಕೋನ್‌ಸ್ಕಿ, ರಾಜಕುಮಾರ ಆಂಡ್ರೂ ಮತ್ತು ರಾಜಕುಮಾರಿ ಮೇರಿಯರ ಜೀವನ ೧೮೦೫ನೆಯ ಸಂವತ್ಸರದಿಂದೀಚೆಗೆ ಗುರುತು ಸಿಗದಂತೆ ಬದಲಾವಣೆಯಾಗಿತ್ತು.

ರಷ್ಯಾದ ರಾಜಾಜ್ಞೆಯ ಪ್ರಕಾರ ಸಿಪಾಯಿ ದಾಖಲಾತಿಯ ಮೇಲ್ವಿಚಾರಣೆಗಾಗಿ, ೧೮೦೬ರಲ್ಲಿ ಹಿರಿಯ ರಾಜಕುಮಾರನನ್ನು ಎಂಟರಲ್ಲೊಬ್ಬ ದಂಡನಾಯಕನನ್ನಾಗಿ ನೇಮಿಸಿಕೊಳ್ಳಲಾಗಿತ್ತು. ತನ್ನ ಮಗ ಯುದ್ಧದಲ್ಲಿ ಸಾವನ್ನಪ್ಪಿದನೆಂಬ ವಾರ್ತೆ ಬಂದಾಗಲೇ ಅವನ ದೇಹ ಜರ್ಝರಿತವಾಗಿತ್ತು. ಅವನು ವಯಸ್ಸಿನಿಂದ ದುರ್ಬಲನಾಗಿದ್ದರೂ, ಸಾರ್ವಭೌಮರೇ ತನಗೆ ವಹಿಸಿದ ಕರ್ತವ್ಯವನ್ನು ತಿರಸ್ಕರಿಸುವ ಹಕ್ಕು ತನಗಿಲ್ಲವೆಂದೂ, ಈ ಹೊಸ ಉದ್ಯೋಗಾವಕಾಶ ಹುರುಪುಹುಮ್ಮಸ್ಸುಗಳನ್ನು ನೀಡಿತ್ತೆಂದೂ ಅವನು ಬಗೆದಿದ್ದನು. ತನಗೆ ವಹಿಸಿದ್ದ ಮೂರು ಪ್ರಾಂತ್ಯಗಳಲ್ಲಿ ಅವನು ಬಿಡುವಿಲ್ಲದೆ ಪ್ರವಾಸ ಮಾಡುತ್ತಿದ್ದನು; ತನ್ನ ಕರ್ತವ್ಯ ಪಾಲನೆಯಲ್ಲಿ ಶ್ರದ್ಧಾ ನಿಷ್ಠೆಯುಳ್ಳವನಾಗಿದ್ದನು; ತನ್ನ ಅಧೀನ ನೌಕರರ ಬಗ್ಗೆ ಕ್ರೂರಿ ಎನ್ನುವಷ್ಟರ ಮಟ್ಟಿಗೆ ನಿಷ್ಠುರನಾಗಿದ್ದನು; ದೊಡ್ಡದ

ರಿಂದ ಹಿಡಿದು ಸೂಕ್ಷ್ಮ ವಿವರಗಳ ತನಕ ಅವನೇ ಗಮನವಹಿಸುತ್ತಿದ್ದನು. ರಾಜಕುಮಾರಿ ಮೇರಿ ತಂದೆಯಿಂದ ಕಲಿಯುತ್ತಿದ್ದ ಗಣಿತಪಾಠಗಳನ್ನು ನಿಲ್ಲಿಸಿದ್ದಳು. ಅವನು ಮನೆಯಲ್ಲಿದ್ದಾಗ, ಅವಳು ಮೊಲೆಯೂಡುವ ದಾದಿ ಮತ್ತು ಮಗು ರಾಜಕುಮಾರ ನಿಕೊಲಾಸ್ (ತಾತ ಕರೆಯುತ್ತಿದ್ದ ಹೆಸರು)ರೊಡನೆ ಅವನ ಅಧ್ಯಯನ ಕಕ್ಷ್ಯೆಕ್ಕೆ ಹೋಗುತ್ತಿದ್ದಳು. ಮಗು ನಿಕೊಲಾಸ್ ಮೊಲೆಯೂಡುವ ದಾದಿ ಮತ್ತು ಮತ್ತೊಬ್ಬಳು ದಾದಿ ಸಾವಿಷ್ನಳೊಡನೆ ಗತಿಸಿದ ರಾಜಕುಮಾರಿಯ ಕೋಣೆಯಲ್ಲಿರುತ್ತಿದ್ದ. ರಾಜಕುಮಾರಿ ಮೇರಿ ಹೆಚ್ಚು ಕಾಲ ಕೂಸು ಕೋಣೆಯಲ್ಲಿರುತ್ತ, ತನ್ನ ಸೋದರಳಿಯನಿಗೆ ತಾಯಿಯ ಸ್ಥಾನವನ್ನು ತುಂಬಿದ್ದಳು. ಅವಳವನನ್ನು ದೇವತೆಯೆಂದೇ ಕರೆಯುತ್ತಿದ್ದಳು. ಶ್ರೀಮತಿ ಬೌರಿಯನ್ನೆ ಸಹ ಮಗುವನ್ನು ಅತ್ಯಾದರದಿಂದ ಕಾಣುತ್ತಿದ್ದಳು. ತನಗಿಲ್ಲದಿದ್ದರೂ ಸರಿಯೆ, ಆ ಪುಟ್ಟ ದೇವತೆಯನ್ನು ಮುದ್ದುಮಾಡುವ ಮತ್ತು ಅವನೊಡನೆ ಆಟವಾಡುವ ಸಂತೋಷಾವಕಾಶವನ್ನು ಮೇರಿ ತನ್ನ ಗೆಳತಿಗೊದಗಿಸಿಕೊಟ್ಟಿದ್ದಳು.

ಬಾಲ್ಡ್‌ಬೆಟ್ಟಗಳ ಬದಿಯ ಚರ್ಚಿನ ಬಲಿಪೀಠದ ಬಳಿಯಿದ್ದ ಕಿರಿಯ ರಾಜಕುಮಾರಿಯ ಸಮಾಧಿಯ ಮೇಲೊಂದು ಆರಾಧನಾ ಮಂದಿರ ನಿರ್ಮಾಣಗೊಂಡಿತ್ತು. ಆ ಆರಾಧನಾ ಮಂದಿರದಲ್ಲಿ ಇಟಾಲಿಯಾದಿಂದ ತಂದಿದ್ದ ಅಮೃತಶಿಲೆಯ ಸ್ಮಾರಕವೊಂದಿತ್ತು. ರೆಕ್ಕೆಬಿಚ್ಚಿ ಆಕಾಶಕ್ಕೆ ಹಾರಿಹೋಗಲು ಸಿದ್ಧವಾಗಿರುವ ದೇವತೆಯ ಪ್ರತೀಕದಂತಿತ್ತು ಆ ಸ್ಮಾರಕ ವಿಗ್ರಹ. ಮಂದಹಾಸವನ್ನು ಬೀರುವ ರೀತಿಯಲ್ಲಿ ಆ ದೇವತೆಯ ಮೇಲ್ತುಟಿ ಎದ್ದುಕೊಂಡಿತ್ತು. ಆ ದೇವತೆಯ ಮುಖ ಕಿರಿಯ ರಾಜಕುಮಾರಿಯನ್ನು ನೆನಪಿಗೆ ತಂದುಕೊಡುತ್ತದೆಂದು ಒಮ್ಮೆ ಆರಾಧನಾಮಂದಿರದಿಂದ ಹೊರಗೆ ಬರುತ್ತಿದ್ದಾಗ ರಾಜಕುಮಾರ ಅಂಡ್ರೂ ಮತ್ತು ರಾಜಕುಮಾರಿ ಮೇರಿ ಮಾತಾಡಿಕೊಂಡಿದ್ದರು. ಆದರೆ ಅದಕ್ಕಿಂತಲೂ ವಿಚಿತ್ರವಾದದ್ದೆಂದರೆ, ತನ್ನ ಗತಿಸಿದ ಮಡದಿಯ ಮುಖಭಾವದಲ್ಲಿ ಓದಿಕೊಂಡಿದ್ದ 'ಆಹ, ನನ್ನ ಬಗ್ಗೆ ಹೀಗೇಕೆ ನಡೆದುಕೊಂಡಿದ್ದೀರಿ ?' ಎಂಬ ಕೋಮಲ ನಿಂದೆಯನ್ನು ಶಿಲ್ಪಿ ತಾನು ಕೆತ್ತಿದ್ದ ವಿಗ್ರಹದ ಮುಖದಲ್ಲಿಯೂ ಪ್ರತಿಬಿಂಬಿಸಿದ್ದಂತೆ ಅವನಿಗೆ ಭಾಸವಾಗುತ್ತಿತ್ತು. ತನ್ನ ಆ ಊಹೆಯನ್ನವನು ತಂಗಿಗೆ ಬಿಟ್ಟುಕೊಟ್ಟಿರಲಿಲ್ಲ.

ರಾಜಕುಮಾರ ಅಂಡ್ರೂ ಮರಳಿದ ಕೂಡಲೇ ಹಿರಿಯ ರಾಜಕುಮಾರ ಬಾಲ್ಡ್‌ಬೆಟ್ಟಗಳಿಂದ ಇಪ್ಪತ್ತೈದು ಮೈಲಿದೂರದಲ್ಲಿದ್ದ ಬೊಗುಚಾರೊವೊ ಎಂಬ ವಿಸ್ತಾರವಾದ ತೋಟವನ್ನು ಮಗನ ಹೆಸರಿಗೆ ಬರೆದುಕೊಟ್ಟಿದ್ದನು. ಬಾಲ್ಡ್‌ಬೆಟ್ಟಗಳೊಡನೆ ಹೆಣೆದುಕೊಂಡಿದ್ದ ಸಂಕಟಕರ ಸ್ಮೃತಿಗಳಿಂದಾಗಿ, ತಂದೆಯ ವಿಚಿತ್ರವರ್ತನೆಯನ್ನು ಸಹಿಸಿಕೊಳ್ಳಲಾರದ ಕಾರಣಕ್ಕಾಗಿ, ಮೇಲಾಗಿ ತನಗೆ ಬೇಕಾಗಿದ್ದ ಏಕಾಂತಕ್ಕಾಗಿ ರಾಜಕುಮಾರ ಅಂಡ್ರೂ ತೋಟದಲ್ಲಿ ಮನೆ ಕಟ್ಟಿಸಿಕೊಂಡು, ಹೆಚ್ಚಾಗಿ ಅಲ್ಲಿಯೇ ಕಾಲ ಕಳೆಯುತ್ತಿದ್ದನು.

ಆಸ್ಟರ್‌ಲಿಟ್ಜ್ ದಂಡಯಾತ್ರೆಯ ನಂತರ ಸೈನ್ಯಸೇವೆಯಲ್ಲಿ ಮುಂದುವರಿಯಕೂಡದೆಂದು ಅಂಡ್ರೂ ಕಟ್ಟುನಿಟ್ಟಾಗಿ ನಿರ್ಧರಿಸಿಕೊಂಡಿದ್ದನು. ಯುದ್ಧ ಪುನಃ ಪ್ರಾರಂಭವಾಗಿ, ಪ್ರತಿಯೊಬ್ಬರೂ ಸೇವಾರ್ಪಣೆ ಮಾಡಬೇಕಾದ ಸಂದರ್ಭವೊದಗಿದಾಗ, ರಣರಂಗದ ಕ್ರಿಯಾ ಜೀವನದಿಂದ ಪಾರಾಗುವ ಸಲುವಾಗಿ, ತನ್ನ ತಂದೆಯ ಕೈಕೆಳಗೆ ಸಿಪಾಯಿ

ದಾಖಲಾತಿಯ ಉದ್ಯೋಗವನ್ನು ವಹಿಸಿಕೊಂಡಿದ್ದನು. ೧೮೦೫ರ ದಂಡಯಾತ್ರೆಯ ನಂತರ ಹಿರಿಯ ರಾಜಕುಮಾರನೂ ಅವನ ಮಗನೂ ತಂತಮ್ಮ ಪಾತ್ರಗಳನ್ನು ಅದಲು ಬದಲು ಮಾಡಿಕೊಂಡಂತಿತ್ತು. ಕಾರ್ಯೋತ್ಸಾಹದಿಂದ ಹುರುಪುಗೊಂಡ ಮುದುಕ ಹೊಸ ದಂಡಯಾತ್ರೆಯಿಂದ ಅತ್ಯುತ್ತಮ ಫಲಿತಾಂಶವನ್ನು ನಿರೀಕ್ಷಿಸಿಕೊಂಡಿದ್ದನು. ತದ್ವಿರುದ್ಧವಾಗಿ ಆಂಡ್ರೂ ಯುದ್ಧದಲ್ಲಿ ಭಾಗವಹಿಸದೆ, ಆ ಬಗ್ಗೆ ಗುಟ್ಟಾಗಿ ಸಂಕಟ ಪಡುತ್ತ, ಅದರ ಕತ್ತಲೆಯ ಭಾಗವನ್ನು ಮಾತ್ರ ಪರಿಕಿಸುತ್ತಿದ್ದನು.

೧೮೦೭ನೆಯ ಫೆಬ್ರುವರಿ ೨೬ರಂದು ಹಿರಿಯ ರಾಜಕುಮಾರ ಕ್ಷೇತ್ರ ಸಂಚಾರಕ್ಕೆ ಹೊರಟನು. ತನ್ನ ತಂದೆಯ ಗೈರುಹಾಜರಿಯಲ್ಲಿ ಎಂದಿನಂತೆ ಆಂಡ್ರೂ ಬಾಲ್ಡ್ ಬೆಟ್ಟ ಗಳಲ್ಲಿಯೆ ಉಳಿದನು. ಕೂಸು ನಿಕೊಲಾಸ್ ನಾಲ್ಕು ದಿನಗಳಿಂದ ಅಸ್ವಸ್ಥನಾಗಿದ್ದನು. ಹಿರಿಯ ರಾಜಕುಮಾರನನ್ನು ಪೇಟೆಗೆ ಕರೆದುಕೊಂಡು ಹೋಗಿದ್ದ ಬಂಡಿ ಚಾಲಕ ಹಿಂದಿರುಗುವಾಗ ರಾಜಕುಮಾರ ಆಂಡ್ರೂವಿನ ಹೆಸರಿಗಿದ್ದ ಕಾಗದಪತ್ರಗಳನ್ನು ತಂದಿದ್ದನು.

ಅಧ್ಯಯನ ಮಂದಿರದಲ್ಲಿ ರಾಜಕುಮಾರನನ್ನು ಕಾಣದೆ ಸೇವಕ ಕಾಗದ ಪತ್ರಗಳೊಡನೆ ರಾಜಕುಮಾರಿ ಮೇರಿಯ ಕೋಣೆಗೆ ಹೋದನು. ಅಲ್ಲಿಯೂ ಅವನು ಕಾಣಲಿಲ್ಲ. ರಾಜಕುಮಾರ ಕೂಸುಕೋಣೆಯಲ್ಲಿರಬೇಕೆಂದು ಅವನಿಗಲ್ಲಿ ತಿಳಿಯಿತು.

'ಮಹಾಸ್ವಾಮಿಯವರು ಒಪ್ಪಿಸಿಕೊಳ್ಳುವುದಾದರೆ, ಫೆತ್ರೂಷ ಪತ್ರಗಳನ್ನು ತಂದಿದ್ದಾನೆ' ಎಂದು ದಾದಿಯರಲ್ಲೊಬ್ಬಳು ಆಂಡ್ರೂವಿಗೆ ನಿವೇದಿಸಿಕೊಂಡಳು. ಕೂಸು ಕುರ್ಚಿಯಲ್ಲಿ ಕುಳಿತಿದ್ದ ಆಂಡ್ರೂ ಹುಬ್ಬುಗಂಟಿಕ್ಕಿಕೊಂಡು, ನಡುಗುವ ಕೈಗಳಿಂದ ಅರ್ಧ ನೀರು ತುಂಬಿದ ವೈನ್ ಲೋಟದೊಳಕ್ಕೆ ಔಷಧಿ ಬಾಟಲಿಯಿಂದ ಕೆಲವು ತೊಟ್ಟು ದ್ರವವನ್ನು ಬಿಡುತ್ತಿದ್ದನು.

'ಏನದು?' ಎಂದವನು ಸಿಡುಕಿದನು; ಅವನ ಕೈ ನಡುಗುತ್ತಿದ್ದುದರಿಂದ ಉದ್ದೇಶರಹಿತವಾಗಿಯೇ, ಲೋಟದೊಳಗೆ ಹೆಚ್ಚು ಹನಿಗಳನ್ನು ತೊಟ್ಟಿಕ್ಕಿಸಿದನು. ಆ ಮಿಶ್ರಣವನ್ನವನು ನೆಲದ ಮೇಲೆ ಸುರಿದು, ನೀರು ತರುವಂತೆ ದಾದಿಗೆ ಆಜ್ಞಾಪಿಸಿದನು. ದಾದಿ ನೀರು ತಂದಳು.

ಒಂದು ಕೂಸುಮಂಚ, ಎರಡು ಪೆಟ್ಟಿಗೆಗಳು, ಎರಡು ತೋಳ್ಕುರ್ಚಿಗಳು, ಒಂದು ಮೇಜು, ಒಂದು ಕೂಸುಮೇಜು, ಮತ್ತು ಆಂಡ್ರೂ ಕುಳಿತಿದ್ದೊಂದು ಸಣ್ಣ ಕುರ್ಚಿ ಆ ಕೋಣೆಯಲ್ಲಿದ್ದುವು. ಪರದೆಗಳನ್ನು ಎಳೆದಿತ್ತು. ಮೇಜಿನ ಮೇಲೆ ಒಂಟಿ ಮೋಂಬತ್ತಿ ಉರಿಯುತ್ತಿತ್ತು. ಮಂಚದ ಮೇಲೆ ಬೆಳಕು ಬೀಳದಂತೆ ಸಂಗೀತದ ಪುಸ್ತಕವೊಂದನ್ನು ಮರೆಮಾಡಿತ್ತು.

ಮಂಚದ ಪಕ್ಕದಲ್ಲಿ ನಿಂತಿದ್ದ ರಾಜಕುಮಾರಿ ಮೇರಿ 'ಪ್ರಿಯ ಸೋದರ, ತುಸು ತಡೆದರೆ ಮೇಲಲ್ಲವೆ?....ಆಮೇಲೆ' ಎಂದು ಮೆಲ್ಲನುಸುರಿದಳು.

'ಅವೆಲ್ಲ ಕಣಿ ಬೇಡ. ನೀನು ಯಾವಾಗಲೂ ಹುಚ್ಚು ಹುಚ್ಚಾಗಿ ಮಾತಾಡುತ್ತೀಯೆ. ಈಗಲೇ ಮಾಡಬೇಕಾದ್ದನ್ನು ಮುಂದೂಡುತ್ತೀಯೆ. ಅದರ ಫಲವೇ ಇದು'

ಎಂದು ಆಂಡ್ರೂ ಉದ್ರೇಕದಿಂದ ನುಡಿದನು. ಅವನ ಆ ಮಾತಿನಲ್ಲಿ ತನ್ನ ತಂಗಿಯನ್ನು ನೋಯಿಸುವ ಮನಸ್ಸೂ ಇದ್ದಂತೆ ತೋರುತ್ತಿತ್ತು.

'ಹಾಗಲ್ಲ ಅಣ್ಣ....ನಿಜಕ್ಕೂ....ಅವನನ್ನೆಬ್ಬಿಸದಿರುವುದೇ ಮೇಲು. ಅವನು ಗಾಢ ನಿದ್ರೆಯಲ್ಲಿದ್ದಾನೆ' ಎಂದವಳು ಯಾಚನಾಧ್ವನಿಯಲ್ಲಿ ನುಡಿದಳು.

ರಾಜಕುಮಾರ ಆಂಡ್ರೂ ಮೇಲೆದ್ದು, ಕೈಯಲ್ಲಿ ಪೈನುಲೋಟ ಹಿಡಿದುಕೊಂಡೇ ಮೆಟ್ಟುಗಾಲಿನಲ್ಲಿ ಕೂಸುಮಂಚದ ಬಳಿ ಸರಿದನು. 'ಪ್ರಾಯಶಃ ಇವನನ್ನೆಬ್ಬಿಸದಿರುವುದೇ ಮೇಲು' ಎಂದವನು ಹಿಂಜರಿದನು.

'ನಿಮ್ಮಿಷ್ಟ ಬಂದಂತೆ ಮಾಡಿ....ನನ್ನದೂ ಅದೇ ಯೋಚನೆ....ನಿಜಕ್ಕೂ....ಆದರೆ ನಿಮಗಿಷ್ಟ ಬಂದಂತೆ' ಎಂದು ಮೇರಿ ತಡವರಿಸಿದಳು. ತನ್ನ ಅಭಿಪ್ರಾಯವೇ ಮೇಲುಗೈಯಾದದ್ದಕ್ಕಾಗಿ ಅವಳು ಹೆದರಿದುದೂ ಅಲ್ಲದೆ ಗಾಬರಿಗೊಂಡಳು. ಮೆಲುದನಿಯಲ್ಲಿ ಕರೆಯುತ್ತಿದ್ದ ದಾದಿಯ ಕಡೆಗೆ ಅವಳು ಅಣ್ಣನ ಗಮನವನ್ನು ಸೆಳೆದಳು.

ಜ್ವರದ ತಾಪದಿಂದ ಬೇಯುತ್ತಿದ್ದ ಮಗುವಿನ ಉಸ್ತುವಾರಿಯಲ್ಲಿ ಅವರಿಬ್ಬರೂ ಎರಡು ದಿನದಿಂದ ಕಣ್ಣು ಮುಚ್ಚಿರಲಿಲ್ಲ. ಈ ಕೊನೆಯ ದಿನಗಳಲ್ಲಿ ತಮ್ಮ ಗೃಹ ವೈದ್ಯನ ಬಗ್ಗೆ ನಂಬಿಕೆಯಿರಲಿಲ್ಲವಾಗಿ, ಪಟ್ಟಣಕ್ಕೆ ಹೇಳಿಕಳಿಸಿದ್ದ ವೈದ್ಯನ ಬರವನ್ನು ನಿರೀಕ್ಷಿಸುತ್ತ, ಅವರು ಒಂದಲ್ಲ ಒಂದು ವೈದ್ಯೋಪಚಾರದಲ್ಲಿ ತೊಡಗಿದ್ದರು. ನಿದ್ರಾರಾಹಿತ್ಯ ಮತ್ತು ಕಾತರತೆಗಳಿಂದ ಸುಸ್ತಾಗಿದ್ದ ಅವರು ತಮ್ಮ ಸಂಕಟದ ಹೊರೆಯನ್ನು ಒಬ್ಬರ ಹೆಗಲ ಮೇಲಿಂದ ಮತ್ತೊಬ್ಬರ ಹೆಗಲಿಗೆ ತಟಾಯಿಸುತ್ತಿದ್ದರು; ಪರಸ್ಪರ ನಿಂದೆ ವಾಗ್ವಾದಗಳಿಂದ ಅವರು ಮತ್ತಷ್ಟು ಬಳಲಿದ್ದರು.

'ತಮ್ಮ ತಂದೆಯ ಕಡೆಯಿಂದ ಪೆತ್ರೂಷ ಕಾಗದ ಪತ್ರ ತಂದಿದ್ದಾನೆ' ಎಂದು ದಾದಿ ಮತ್ತೆ ಕಂಪಿತ ಧ್ವನಿಯಲ್ಲಿ ಉಸುರಿದಳು.

ರಾಜಕುಮಾರ ಹೊರಗೆ ಹೊರಟನು. 'ಎಲ್ಲರೂ ಹಾಳಾಗಿ ಹೋಗಲಿ!' ಎಂದವನು ಗೊಣಗಿಕೊಂಡನು. ತಂದೆ ಹೇಳಿ ಕಳಿಸಿದ ಮೌಖಿಕ ಮಾಹಿತಿಗಳನ್ನು ಕೇಳಿಕೊಂಡು, ತಂದೆಯ ಕಾಗದವನ್ನೂ, ಇತರ ಪತ್ರ ವ್ಯವಹಾರಗಳನ್ನೂ ಕೈಗೆ ತೆಗೆದುಕೊಂಡು, ಅವನು ಕೂಸುಕೋಣೆಗೆ ಹಿಂದಿರುಗಿದನು.

'ಈಗ ಹೇಗಿದೆ?' ಎಂದವನು ಪ್ರಶ್ನಿಸಿದನು.

'ಹಾಗೆಯೇ ಇದೆ. ಮಗುವಿನ ಆರೋಗ್ಯಕ್ಕಾಗಿ ತುಸು ಕಾಯಿರಿ. ಎಲ್ಲದಕ್ಕಿಂತ ನಿದ್ದೆ ಬಹು ಮುಖ್ಯವೆಂದು ಕಾರ್ಲ್ ಇವಾನಿಚ್ ಸದಾ ಹೇಳುವುದುಂಟು' ಎಂದು ರಾಜಕುಮಾರಿ ಮೇರಿ ಮೆಲ್ಲನುಸುರಿ ಸುಯ್ದಳು.

ಆಂಡ್ರೂ ಮಗುವಿನ ಬಳಿ ನಡೆದು ಮುಟ್ಟಿ ನೋಡಿದನು. ಅವನ ಮೈ ಬೆಂಕಿಯಂತೆ ಸುಡುತ್ತಿತ್ತು.

'ನೀನು ಮತ್ತು ನಿನ್ನ ಕಾರ್ಲ್ ಇವಾನಿಚ್ ಹಾಳಾಗಿಹೋಗಿ!' ಎನ್ನುತ್ತ ಅವನು ಮದ್ದು ತೊಟ್ಟುಗಳಿದ್ದ ಲೋಟವನ್ನು ತೆಗೆದುಕೊಂಡು ಮತ್ತೆ ಮಂಚದ ಬಳಿಗೆ ಹೋದನು.

'ಬೇಡ, ಬೇಡ ಆಂಡ್ರೂ' ಎಂದು ಮೇರಿ ಗೋಗರೆದಳು.

ಅಣ್ಣನ ಕಣ್ಣುಗಳಲ್ಲಿ ಯಾತನೆ ಎದ್ದು ಕಾಣುತ್ತಿತ್ತು ಆದರೂ ಕೋಪದಿಂದ ಮುಖ ಗಂಟುಹಾಕಿಕೊಂಡು ಅವನು ಲೋಟ ಹಿಡಿದುಕೊಂಡು ಮಗುವಿನ ಮೇಲೆ ಬಾಗಿದನು. 'ಆದರೆ ಇದು ಆಗಲೇಬೇಕು. ಇವನಿಗೆ ಇದನ್ನು ಕುಡಿಸು. ಇದು ನನ್ನ ವಿನಂತಿ.'

ರಾಜಕುಮಾರಿ ಮೇರಿ ಭುಜಗಳನ್ನು ಕುಣಿಸಿ, ನಮ್ರತೆಯಿಂದ ಲೋಟವನ್ನೆತ್ತಿ ಕೊಂಡು, ದಾದಿಯನ್ನು ಕರೆದು, ಮದ್ದು ಕುಡಿಸಲಾರಂಭಿಸಿದಳು. ಗಂಟಲು ಕಟ್ಟಿ ಕೊಂಡಿದ್ದ ಮಗು ಚೀರಿತು. ರಾಜಕುಮಾರ ಬೆಚ್ಚಿಬಿದ್ದು, ತಲೆಯನ್ನು ಬಿಗಿಯಾಗಿ ಹಿಡಿದುಕೊಂಡು ಹೊರಗೆ ಹೋಗಿ, ಪಕ್ಕದ ಕೋಣೆಯಲ್ಲಿ ಸೋಫಾದ ಮೇಲೆ ಕುಳಿತು ಕೊಂಡನು.

ಕಾಗದಪತ್ರಗಳೆಲ್ಲ ಇನ್ನೂ ಅವನ ಕೈಯಲ್ಲೇ ಇದ್ದುವು. ಯಾಂತ್ರಿಕವಾಗಿ ಅವನ್ನು ಒಡೆದು ಓದತೊಡಗಿದನು. ಸಂಕೇತಾಕ್ಷರಗಳನ್ನು ಬಳಸಿ, ನೀಲಿ ಕಾಗದದ ಮೇಲೆ ಹಿರಿಯ ರಾಜಕುಮಾರ ವಿರಳವಾಗಿ ಬರೆದಿದ್ದ ದೀರ್ಘಪತ್ರದ ಒಕ್ಕಣೆಯಿದು :

'ಈಗ ತಾನೆ ವಿಶೇಷ ದೂತನ ಮೂಲಕ ಅತ್ಯಂತ ಸಂತೋಷದಾಯಕವಾದ ಸದ್ದಿಯನ್ನು ತಿಳಿದೆ–ಅದು ಸುಳ್ಳಾಗದಿರಲೆಂದು ಆಶಿಸುತ್ತೇನೆ. ಐಲಾವು ಕದನದಲ್ಲಿ ಬೆನ್ನಿಗ್‌ಸೆನ್ ಬೋನಪಾರ್ಟ್‌ನ ಮೇಲೆ ಪೂರ್ಣ ವಿಜಯವನ್ನು ಸಾಧಿಸಿರುವನಂತೆ. ಪೀಟರ್ಸ್‌ಬರ್ಗ್ ಜನ ಆನಂದೋತ್ಸಾಹದಲ್ಲಿ ಮುಳುಗಿದ್ದಾರೆ. ಸೈನ್ಯಕ್ಕೆ ರವಾನಿಸಿರುವ ಇನಾಮುಗಳಿಗೆ ಲೆಕ್ಕವಿಲ್ಲ. ಅವನು ಜರ್ಮನಿಯವನಾದರೂ–ನಾನವನನ್ನು ಅಭಿನಂದಿಸು ತ್ತೇನೆ! ಕೊರ್ಚೆವೊನಲ್ಲಿರುವ ದಳನಾಯಕ (ಯಾವನೊ ಖಾಂದ್ರಿಕೋವ್‌ನಂತೆ) ಏನು ಮಾಡುತ್ತಿರುವನೋ ಕಾಣೆ. ಹೆಚ್ಚಿನ ಜನರಾಗಲಿ, ಸರಬರಾಯಿಯಾಗಲಿ ಈ ತನಕ ಬಂದಿಲ್ಲ. ಈ ಕೂಡಲೇ ಅವನಲ್ಲಿಗೆ ಸವಾರಿಸಿ, ಇನ್ನೊಂದು ವಾರದೊಳಗಾಗಿ ತಜವೀಜು ಬರದಿದ್ದರೆ, ಅವನ ತಲೆ ಹಾರಿಹೋಗುತ್ತದೆಂದು ತಿಳಿಸು. ಪ್ರಸಿಶ್ಚ್–ಐಲಾವು ವಿನ ಕದನದಲ್ಲಿ ಪಾಲ್ಗೊಂಡಿದ್ದ ಪೇತೆಂಕನಿಂದ ಮತ್ತೊಂದು ಪತ್ರ ಬಂದಿದೆ. ಅದೆಲ್ಲವೂ ನಿಜ. ಕಿಡಿಗೇಡಿಗಳು ಮಧ್ಯೆ ತಲೆಹಾಕಲಿಲ್ಲವೆಂದರೆ, ಬೋನಪಾರ್ಟ್‌ನನ್ನು ಬಡಿಯಲು ಒಬ್ಬ ಜರ್ಮನಿಯವ ಸಾಕು. ಅವನ ಸೈನ್ಯ ಅಸ್ತವ್ಯಸ್ತವಾಗಿ ಪಲಾಯನ ಮಾಡುತ್ತಿದೆ ಯಂತೆ. ತಳುವದೆ ಕೊರ್ಚೆವೊಗೆ ಧಾವಿಸಿ, ನನ್ನ ಮಾತು ನಡೆಸು.'

ರಾಜಕುಮಾರ ಆಂಡ್ರೂ ನಿಟ್ಟುಸಿರಿಟ್ಟು, ಮತ್ತೊಂದು ಲಕೋಟೆಯ ಮುದ್ರೆ ಯನ್ನೊಡೆದನು. ಎರಡು ಹಾಳೆಗಳಲ್ಲಿ ಒತ್ತೊತ್ತಾಗಿ ಬರೆದಿದ್ದ ಬಿಲೀಬಿನ್‌ನ ಪತ್ರವದು. ಅದನ್ನೋದದೆಯೇ ಮಡಿಸಿಟ್ಟನು. 'ತಳುವದೆ ಕೊರ್ಚೆವೊಗೆ ಧಾವಿಸು. ನನ್ನ ಮಾತು ನಡೆಸು' ಎಂಬ ಮಾತುಗಳಿಂದ ಕೊನೆಗೊಂಡಿದ್ದ ತನ್ನ ತಂದೆಯ ಪತ್ರವನ್ನು ಮತ್ತೆ ಓದಿ ದನು.

'ಅಕ್ಕ ಕ್ಷಮಿಸಿ, ಮಗ ಚೇತರಿಸಿಕೊಳ್ಳುವ ತನಕ ನಾನು ಹೋಗಲಾರೆ' ಎಂದವನು ಯೋಚಿಸುತ್ತ, ಕೂಡಲೆ ಕೋಣೆಯ ಬಾಗಿಲ ಬಳಿ ನಿಂತು, ಒಳಗೆ ಇಣುಕಿದನು.

ಮಂಚದ ಬಳಿ ನಿಂತಿದ್ದ ರಾಜಕುಮಾರಿ ಮೇರಿ ಇನ್ನೂ ಮಗುವನ್ನು ತೂಗು ತ್ತಿದ್ದಳು.

'ಆಹ, ಅದರಲ್ಲಿ ಬೇಡವಾದದ್ದು ಮತ್ತೇನಿದೆ?' ಎಂದು ಆಂಡ್ರೂ ತಂದೆಯ ಕಾಗದದ ಒಕ್ಕಣೆಯನ್ನು ನೆನೆಸಿಕೊಂಡು, ಯೋಚಿಸಿದನು. 'ಹೌದು ನಾನು ರಣರಂಗದಲ್ಲಿಲ್ಲದಿರುವಾಗಲೇ ಬೋನಪಾರ್ಟ್‌ನ ಮೇಲೆ ನಾವು ಜಯ ಸಾಧಿಸಿದ್ದೇವೆ. ಹೌದ್ಹೌದು, ಅವನು ಯಾವಾಗಲೂ ನನ್ನನ್ನು ತಮಾಷೆ ಮಾಡುತ್ತಿದ್ದ....ಒಳ್ಳೆಯದು. ಇನ್ನೂ ಮುಂದುವರಿಸಲಿ!' ಅನಂತರ ಅವನು ಫ್ರೆಂಚ್ ಭಾಷೆಯಲ್ಲಿ ಬರೆದಿದ್ದ ಬಿಲೀಬಿನ್‌ನ ಪತ್ರವನ್ನು ಓದತೊಡಗಿದನು. ಅದರಲ್ಲರ್ಧ ಅವನಿಗರ್ಥವಾಗಲಿಲ್ಲ; ಬಹಳ ಹೊತ್ತಿನಿಂದ ತನ್ನ ಮನಸ್ಸನ್ನೆಲ್ಲ ಆಕ್ರಮಿಸಿಕೊಂಡಿದ್ದ ಕ್ಲೇಶದಾಯಕವಾದ ಚಿಂತೆಗಳನ್ನು ಕ್ಷಣಕಾಲವಾದರೂ ಮರೆಯುವ ಸಲುವಾಗಿ ಉಳಿದರ್ಧವನ್ನು ಓದಿದನು.

ಅಧ್ಯಾಯ ೯

ಬಿಲೀಬಿನ್ ಈಗ ರಾಯಭಾರ ಸ್ಥಾನಮಾನವನ್ನು ಪಡೆದು ಸೈನ್ಯದ ಕೇಂದ್ರ ಕಾರ್ಯಾಲಯದಲ್ಲಿದ್ದನು. ಅವನು ಫ್ರೆಂಚ್ ಭಾಷೆಯಲ್ಲಿ ಬರೆದಿದ್ದರೂ, ಫ್ರೆಂಚ್ ಪರಿಹಾಸ್ಯ ಮತ್ತು ನುಡಿಗಳನ್ನು ಬಳಸಿದ್ದರೂ, ರಷ್ಯನ್ನನಿಗೆ ಸಹಜವೂ ನಿರ್ಭಯವೂ ಆದ ಸ್ವ-ನಿಂದೆ ಸ್ವ-ಖಂಡನೆಗಳ ಮೂಲಕ ಇಡೀ ದಂಡಯಾತ್ರೆಯನ್ನು ವರ್ಣಿಸಿದ್ದನು. ರಾಯಭಾರಕ್ಕೆ ಸಂಬಂಧಿಸಿದ ವಿವೇಚನೆಯ ಕಟ್ಟುಪಾಡುಗಳು ತನ್ನ ಕೈ ಕಟ್ಟುತ್ತಿದ್ದುವೆಂದೂ, ರಾಜಕುಮಾರ ಆಂಡ್ರೂ ವಿಶ್ವಾಸಾರ್ಹನಾದ ಪತ್ರವ್ಯವಹಾರಿಯಾದ್ದರಿಂದ, ಸೈನ್ಯದಲ್ಲಿ ನಡೆಯುತ್ತಿದ್ದ ಸಕಲ ವ್ಯವಹಾರಗಳ ಮಥನದಿಂದ ಉದ್ಭವಿಸುತ್ತಿರುವ ನಂಜನ್ನು ಅವನ ಮುಂದೆ ತೋಡಿಕೊಳ್ಳಲು ಸಂತೋಷವಾಗುತ್ತದೆಂದೂ ಅವನು ಬರೆದಿದ್ದನು. ಪ್ರಷಿಶ್ಚ್-ಐಲಾವು ಕದನಕ್ಕೆ ಮುಂಚೆ ಬರೆದ ಪತ್ರವಾದ್ದರಿಂದ ಅದು ಸಾಕಷ್ಟು ಹಳೆಯದಾಗಿತ್ತು.

'ನಿಮಗೆ ತಿಳಿದಿರುವಂತೆ, ಆಸ್ಟರ್‌ಲಿಜ್ ಕದನದ ಮಹಾವಿಜಯದ ನಂತರ ನಾನೆಂದೂ ಕೇಂದ್ರ ಕಾರ್ಯಾಲಯದಿಂದ ಹೊರಗೆ ಹೋದದ್ದಿಲ್ಲ. ಯುದ್ಧದ ರುಚಿ ಅಭ್ಯಾಸದ ಮೂಲಕ ರಕ್ತವಾಗಿದೆ. ಅದರಿಂದ ನನಗನುಕೂಲವಾಗಿದೆ. ಕಳೆದ ಮೂರು ತಿಂಗಳಿಂದ ನಾನು ನೋಡಿರುವ ಸಂಗತಿಗಳು ಆಶ್ಚರ್ಯಕರವಾಗಿವೆ.

'ನಾನು ಮೊದಲಿಂದ ಪ್ರಾರಂಭಿಸುತ್ತೇನೆ' "ಮಾನವ ಜನಾಂಗದ ಶತ್ರು" ಪ್ರಷ್ಯನ್ನರ ಮೇಲೆ ಧಾಳಿಮಾಡುತ್ತಾನೆ. ಪ್ರಷ್ಯನ್ನರು ಮೂರು ವರ್ಷದಲ್ಲಿ ಮೂರು ಬಾರಿ ನಮಗೆ ದ್ರೋಹವೆಸಗಿದ್ದರೂ, ನಮಗೆ ನಂಬಿಕೆಯ ಮಿತ್ರರಾಗುಳಿದಿದ್ದಾರೆ. ನಾವವರ ಪಕ್ಷವನ್ನು ವಹಿಸಿಕೊಳ್ಳುತ್ತೇವೆ. ಆದರೆ "ಮನುಕುಲದ ಶತ್ರು" ನಮ್ಮ ಪ್ರಚಂಡ ಭಾಷಣಗಳಿಗೆ ಬೆಲೆ ಕೊಡುತ್ತಿಲ್ಲ. ಬರ್ಬರ ಸಹಜವಾದ ಅನಾಗರಿಕ ರೀತಿಯಲ್ಲಿ ಅವನು ಪ್ರಷ್ಯನ್ನರ ಮೇಲೆ ಬೀಳುತ್ತಾನೆ. ಅವರು ಪ್ರಾರಂಭಿಸಿದ ಸೈನ್ಯ ಜಮಾವಣೆಗಾಗಲಿ ಮೆರವಣಿಗೆಗಾಗಲಿ ಅವನು ಅವಕಾಶ ಕೊಡುವುದಿಲ್ಲ. ಒಂದೆರಡು ಕೈಚಳಕಗಳಲ್ಲಿಯೇ ಅವರನ್ನು ಪುಡಿಗುಟ್ಟುತ್ತಾನೆ. ಪಾಟ್ಸ್‌ಡಮ್ ಅರಮನೆಯಲ್ಲಿ ತನ್ನನ್ನು ತಾನೇ ಪ್ರತಿಷ್ಠಾಪಿಸಿಕೊಳ್ಳುತ್ತಾನೆ.

"ಘನತೆವೆತ್ತ ಮಹಾಪ್ರಭುಗಳಿಗೆ ಸ್ವಾಗತ ಸಮಾರಂಭವೇರ್ಪಡಿಸಬೇಕೆಂಬುದೂ, ಪ್ರಭುಗಳ ಚಿತ್ತಕ್ಕೊಪ್ಪುವ ರೀತಿಯಲ್ಲಿ ನನ್ನ ಅರಮನೆಯಲ್ಲಿ ಸತ್ಕರಿಸಬೇಕೆಂಬುದೂ ನನ್ನ ಹೆಬ್ಬಯಕೆಯಾಗಿದೆ ಇಂದಿನ ಪರಿಸ್ಥಿತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಆತುರಾತುರವಾಗಿ ಆ ದಿಶೆಯಲ್ಲಿ ನಾನು ಪ್ರಯತ್ನ ನಡೆಸಿದ್ದೇನೆ. ನನ್ನ ಈ ಪ್ರಯತ್ನ ಕೈಗೂಡಲೆಂಬುದೇ ನನ್ನ ಪ್ರಾರ್ಥನೆ" ಎಂದು ಪ್ರಷ್ಯಾದೊರೆ ಬೋನಪಾರ್ಟ್‌ಗೆ ಪತ್ರ ಬರೆದಿದ್ದಾನೆ. ಫ್ರೆಂಚರ ಮುಂದೆ ವಿನಯದಿಂದ ವರ್ತಿಸುವುದೇ, ಅಂತೆಯೇ ಮೊದಲ ಆಣತಿ ಹೊರಬರುತ್ತಿದ್ದಂತೆ ತಮ್ಮ ಶಸ್ತ್ರಾಸ್ತ್ರಗಳನ್ನೆಲ್ಲ ಕೆಳಗಿಡುವುದೇ ಹೆಮ್ಮೆಯ ಕರ್ತವ್ಯವೆಂದು ಪ್ರಷ್ಯಾದ ಸೇನಾನಿಗಳು ತಿಳಿದುಕೊಂಡಿದ್ದಾರೆ.

'ಶರಣಾಗತನಾಗುವಂತೆ ಆಜ್ಞೆ ಮಾಡಿದರೆ, ತಾನೇನು ಮಾಡಬೇಕೆಂದು ಗ್ಲೋಗೌ ದುರ್ಗದ ಕಾವಲು ಪಡೆಯ ಹತ್ತುಸಾವಿರ ಸೈನಿಕರ ಮುಖಂಡ ಪ್ರಷ್ಯಾ ರಾಜ ಕೇಳುತ್ತಾನೆ ಇದೆಲ್ಲ ಪೂರ್ಣ ಸತ್ಯ.

'ಸಂಗ್ರಹವಾಗಿ ಹೇಳುವುದಾದರೆ, ಯುದ್ಧಪರ ಮನೋಭಾವದಿಂದ ಈ ವ್ಯವಹಾರಗಳನ್ನು ತೀರ್ಮಾನಿಸಬಹುದೆಂದು ನಂಬಿಕೊಂಡಿರುವಾಗಲೇ, ಕುರುಡು ಕಾಂಚಾಣದ ಪ್ರಯೋಜನವಿಲ್ಲದೆ, ಪ್ರಷ್ಯನ್ ದೊರೆಗಾಗಿ ಹೆಣಗಾಡುತ್ತಿರುವಾಗಲೇ ನಾವು ಯುದ್ಧದ ಉರುಬಿನಲ್ಲಿ ತೊಡರಿಕೊಂಡಿದ್ದೇವೆ; ಅಷ್ಟೇ ಅಲ್ಲ, ಯುದ್ಧ ನಮ್ಮ ಗಡಿಯತನಕ ಬಂದುಬಿಟ್ಟಿದೆ. ಎಲ್ಲವೂ ಸಕ್ರಮವಾಗಿದೆ. ದಂಡನಾಯಕನದೇ ನಮ್ಮಲ್ಲಿ ರುವ ಕೊರತೆ. ಮಹಾದಂಡನಾಯಕ ವಯಸ್ಸಿನಿಂದ ಹಿರಿಯವನಾಗಿದ್ದರೆ ಆಸ್ಟರ್‌ಲಿಜ್ ಕದನದಲ್ಲಿ ಹೆಚ್ಚು ನಿರ್ಣಾಯಕ ವಿಜಯವನ್ನು ಪಡೆಯಬಹುದಿತ್ತೆಂಬ ನಂಬಿಕೆ ಯಿಂದ ಎಂಬತ್ತು ತುಂಬಿರುವ ಸೇನಾನಿಗಳನ್ನು ಸಂದರ್ಶಿಸಲಾಗುತ್ತಿದೆ. ಪ್ರಜರೋವ್‌ಸ್ಕಿ ಮತ್ತು ಕಾಮೆನ್‌ಸ್ಕಿಯರನ್ನು ಸಂದರ್ಶಿಸಿ, ಎರಡನೆಯವನಿಗೆ ಆದ್ಯತೆ ನೀಡು ವಂತಾಗಿದೆ. ಸುವೊರೊವ್‌ನಂತೆ ಸೇನಾನಿ ಮರದ ಗಾಡಿಯಲ್ಲಿ (ಕಿಬೀತ್ಕ) ನಮ್ಮೆಡೆಗೆ ಬರುತ್ತಾನೆ: ಸಂತೋಷ ಸಡಗರಗಳ ಕೋಲಾಹಲದ ಮಧ್ಯೆ ಅವನನ್ನು ಸ್ವಾಗತಿಸ ಲಾಗುತ್ತದೆ.

'ನಾಲ್ಕನೆಯ ದಿನದಂದು ಮೊದಲನೆಯ ಹರಿಕಾರ ಪೀಟರ್ಸ್‌ಬರ್ಗ್‌ನಿಂದ ಬರುತ್ತಾನೆ. ಟಪಾಲನ್ನು ಸರ್ವದಂಡಾಧಿಕಾರಿಯ ಕೋಣೆಗೆ ಕೊಂಡೊಯ್ಯಲಾಗುತ್ತದೆ. ಎಲ್ಲವನ್ನು ಖುದ್ದಾಗಿ ತಾನೇ ನೋಡಬೇಕೆಂಬುದು ಅವನ ಧೋರಣೆ. ಪತ್ರಗಳ ವಿಂಗಡಣೆಗೆ ನನ್ನ ನೆರವು ಬೇಕಾಗುತ್ತದೆ. ನಮಗೆ ಸಂಬಂಧಿಸಿದುವನ್ನು ನಾನು ತೆಗೆದು ಕೊಳ್ಳುತ್ತೇನೆ. ತನ್ನ ಹೆಸರಿನ ಪತ್ರಗಳಿಗಾಗಿ ಸರ್ವದಂಡಾಧಿಕಾರಿ ಕಾಯುತ್ತಾನೆ. ಹುಡುಕಿದಾಗ ಒಂದೂ ಸಿಗುವುದಿಲ್ಲ. ಸರ್ವದಂಡಾಧಿಕಾರಿ ತಾಳ್ಮೆ ಕಳೆದುಕೊಳ್ಳುತ್ತಾನೆ. ಅವನೇ ಪತ್ರಗಳ ವಿಂಗಡಣೆಗೆ ಕೈ ಹಾಕುತ್ತಾನೆ. ಚಕ್ರವರ್ತಿಯಿಂದ ಶ್ರೀಮಂತ ಟಿ. ರಾಜಕುಮಾರ ವಿ. ಮತ್ತು ಇತರರಿಗೆ ಬಂದಿದ್ದ ಪತ್ರಗಳು ಅವನ ಕಣ್ಣಿಗೆ ಬೀಳುತ್ತವೆ. ಅನಂತರ ಅವನ ಹುಚ್ಚುಹುಚ್ಚಾಗಿ ರೋಷಾವೇಶದಿಂದ ಕುದಿಯುತ್ತಾನೆ. ಕಂಡಕಂಡವರ ಮೇಲೆ, ಕಣ್ಣಿಗೆ ಬಿದ್ದವರ ಮೇಲೆ ರೇಗಾಡುತ್ತಾನೆ. ಕೆಲವು ಲಕೋಟೆ ಗಳನ್ನು ತೆಗೆದುಕೊಂಡು ಒಡೆಯುತ್ತಾನೆ. ಚಕ್ರವರ್ತಿಯಿಂದ ಇತರರಿಗೆ ಬಂದಿದ

ಪತ್ರಗಳನ್ನು ಓದುತ್ತಾನೆ. "ಆಹ, ನನ್ನ ಬಗ್ಗೆ ಅವರು ನಡೆದುಕೊಳ್ಳುತ್ತಿರುವ ರೀತಿಯಿದು! ನನ್ನಲ್ಲಿ ವಿಶ್ವಾಸವಿಲ್ಲ. ಆಹ! ನನ್ನ ಮೇಲೆ ಕಣ್ಣಿಟ್ಟಿರಬೇಕೆಂದು ಆಜ್ಞೆಯಾಗಿದೆ. ಆಗಲಂತೆ! ತೊಲಗು! ಶುದ್ಧ ಅವಿವೇಕ!" ಹಾಗಾಗಿ ಅವನು ಸೇನಾನಿ ಬೆನ್ನಿಗ್‌ಸೆನ್‌ಗೆ ಸುಪ್ರಸಿದ್ಧ ನಿರೂಪವೊಂದನ್ನು ಹೊರಡಿಸುತ್ತಾನೆ:

"ನನಗೆ ಗಾಯವಾಗಿದೆ. ಸವಾರಿ ಮಾಡಲಾರೆ. ಆದ್ದರಿಂದ ಸೈನ್ಯದ ಮುಖಂಡತ್ವ ವನ್ನು ವಹಿಸಿಕೊಳ್ಳಲಾರೆ. ಶರಣಾಗತವಾದ ಸೈನ್ಯಭಾಗವನ್ನು ಪುಲ್‌ತಸ್ಕ್‌ಗೆ ತಂದಿದ್ದೀರಿ: ಅದಿಲ್ಲಿ ಅಪಾಯಗಳಿಗೆ ಗುರಿಯಾಗಿದೆ. ಸೌದೆ ಮೇವುಗಳಿಲ್ಲ. ಏನಾದರೂ ಏರ್ಪಾಡು ಅತ್ಯವಶ್ಯವಾಗಿ ಆಗಬೇಕಾಗಿದೆ. ನಿನ್ನೆಯೇ ನೀವು ಶ್ರೀಮಂತ ಬಕ್ಸ್‌ಹೌಡೆನ್ ನಿಗೆ ತಿಳಿಸಿದಂತೆ, ನಮ್ಮ ಗಡಿಯ ಬಳಿಗೆ ಹಿಂದಿರುಗುವ ಯೋಚನೆ ನಡಸಬೇಕು. ಈ ದಿನವೆ ಸಿದ್ಧವಾಗಿ."

"ನಿರಂತರವಾದ ಕುದುರೆ ಸವಾರಿಯಿಂದಾಗಿ ನನಗೆ ಜೀನು ಹುಣ್ಣಾಗಿದೆ; ನಾನಿನ್ನು ಮುಂದೆ ಸವಾರಿ ಮಾಡಲಾರೆ; ಅಷ್ಟೊಂದು ದೊಡ್ಡ ಸೈನ್ಯದ ಜವಾಬ್ದಾರಿ ಯನ್ನು ಹೊರಲಾರೆ. ಆದ್ದರಿಂದ ನನ್ನ ಜವಾಬ್ದಾರಿಯನ್ನೆಲ್ಲ ನನ್ನ ತರುವಾಯದ ಜ್ಯೇಷ್ಠ ಸೇನಾನಿ, ಶ್ರೀಮಂತ ಬಕ್ಸ್ ಹೌವೆನ್‌ರಿಗೆ ವಹಿಸಿಕೊಡುತ್ತೇನೆ. ನನ್ನ ಸಿಬ್ಬಂದಿ ವರ್ಗವನ್ನೂ, ಅದಕ್ಕೆ ಸಂಬಂಧಿಸಿದ ಸಕಲ ಸರಂಜಾಮುಗಳನ್ನೂ ಅವರೆಡೆಗೆ ಕಳಿಸಿ ಕೊಡುತ್ತೇನೆ. ಆಹಾರದ ಅಭಾವವಾದಾಗ ಪ್ರಷ್ಯದ ಒಳನಾಡಿಗೆ ಸರಿಯುವಂತೆ ಸಲಹೆ ನೀಡಿದ್ದೇನೆ. ಏಕೆಂದರೆ, ವಿಭಾಗೀಯ ನಾಯಕರಾದ ಆಸ್ಟರ್‌ಮನ್ ಮತ್ತು ಸೆದ್‌ಮೊ ರೇತ್‌ಸ್ಕಿಯರ ವರದಿಯ ಪ್ರಕಾರ ಸದ್ಯದಲ್ಲಿ ಒಂದು ದಿನದ ಆಹಾರ ಸಾಮಗ್ರಿ ಮಾತ್ರ ಉಳಿದಿದೆ; ಕೆಲವು ದಳಗಳಲ್ಲಂತು ಅದೂ ಇಲ್ಲ; ರೈತರ ಬಳಿ ಇದ್ದದ್ದನ್ನೆಲ್ಲ ತಿಂದು ಮುಗಿಸಲಾಗಿದೆ. ನಾನು ಚೇತರಿಸಿಕೊಳ್ಳುವ ತನಕ ಆಸ್ಟ್ರೋಲೆಂಕ ಆಸ್ಪತ್ರೆಯಲ್ಲಿ ಉಳಿಯುತ್ತೇನೆ. ಈಗಿನ ಬಯಲು ಬೀಡಿನಲ್ಲಿಯೇ ಸೈನ್ಯ ತಂಗುವುದಾದರೆ ವಸಂತಕಾಲದ ಹೊತ್ತಿಗೆ, ಏಕೆ ಇನ್ನು ಹದಿನೈದು ದಿನಗಳಲ್ಲಿ ಒಬ್ಬ ಸೈನಿಕನೂ ಆರೋಗ್ಯವಂತನಾಗಿ ಬದುಕುವಂತಿಲ್ಲ. ಈ ಎಲ್ಲ ಸಂಗತಿಗಳನ್ನು ಖಾವಂದರಿಗೆ ಅರಿಕೆಮಾಡಿಕೊಂಡಿದ್ದೇನೆ" ಎಂದವನು ಚಕ್ರವರ್ತಿಗಳಿಗೆ ಪತ್ರ ಬರೆದಿದ್ದಾನೆ.

"ಯಾವ ಪ್ರತಿಷ್ಠೆಯ ಮಹಾಕಾರ್ಯಕ್ಕೆ ನಿಯೋಜಿತನಾಗಿದ್ದನೋ ಆ ಗೌರವದ ಯಜ್ಞಕಾರ್ಯವನ್ನು ಪೂರೈಸಲಾರದ ಅವಮಾನದಿಂದ ಕುಗ್ಗಿಹೋಗಿರುವ ಮುದುಕ ನೊಬ್ಬ ತನ್ನ ಹಳ್ಳಿಗೆ ಹಿಂದಿರುಗಲು ಅನುಮತಿ ಕೊಡಿ. ಆಸ್ಪತ್ರೆಯಲ್ಲಿದ್ದುಕೊಂಡು ಮಹಾಪ್ರಭುಗಳ ಅನುಗ್ರಹಕ್ಕಾಗಿ ಕಾಯುತ್ತಿರುತ್ತೇನೆ. ಸೈನ್ಯದ ನಾಯಕತ್ವವನ್ನು ತೊರೆದ ನಂತರ ಕಾರ್ಯದರ್ಶಿಯಾಗಿ ಕೆಲಸಮಾಡಲು ನನಗಿಷ್ಟವಿಲ್ಲ. ಸೈನ್ಯದಿಂದ ನಾನು ನಿವೃತ್ತಿಗೊಂಡ ಕಾರಣಕ್ಕಾಗಿ ಏನೊಂದು ಕೋಲಾಹಲವೂ ಸಂಭವಿಸುವುದಿಲ್ಲ. ಕುರುಡನೊಬ್ಬ ಬಿಟ್ಟುಹೋದನೆಂದು ಸೈನಿಕರು ತಿಳಿಯುತ್ತಾರೆ. ರಷ್ಯಾದಲ್ಲಿ ನನ್ನಂಥ ವರು ಸಹಸ್ರ ಸಹಸ್ರ ಸಂಖ್ಯೆಯಲ್ಲಿದ್ದಾರೆ."

'ಸರ್ವದಂಡಾಧಿಕಾರಿ ಚಕ್ರವರ್ತಿಯ ಮೇಲೆ ಕೋಪಗೊಂಡಿದ್ದಾನೆ. ಅವನು ನಮ್ಮನ್ನು ಶಿಕ್ಷಿಸುತ್ತಾನೆ. ಅದು ತರ್ಕಬದ್ಧವಾಗಿದೆಯಲ್ಲವೆ?

'ಇದು ಮೊದಲ ವಿಷಯ. ಅದಾದನಂತರ ಸಂಭವಿಸುವ ಘಟನೆಗಳು ಸಹಜವಾಗಿಯೇ ಕುತೂಹಲಕಾರಿಯಾಗಿವೆ, ರಂಜನೀಯವಾಗಿವೆ. ಸರ್ವದಂಡಾಧಿಕಾರಿಯ ನಿರ್ಗಮನದ ನಂತರ, ನಾವು ಶತ್ರುಗಳ ಕಣ್ಬೊಲದಲ್ಲಿದ್ದುದರಿಂದ, ಕಾಳಗ ಅನಿವಾರ್ಯವೆಂದು ತೋರುತ್ತದೆ. ಸೇವಾ ಜ್ಯೇಷ್ಠತೆಯಿಂದಾಗಿ ಬಕ್ಸ್‌ಹೌಡೆನ್ ಮಹಾದಂಡನಾಯಕ ನಾಗುತ್ತಾನೆ; ಆದರೆ ಆ ಬದಲಾವಣೆ ಸೇನಾನಿ ಬೆನ್ನಿಗ್‌ಸೆನ್‌ಗೆ ಹಿಡಿಸುವುದಿಲ್ಲ. ಅವನು ಮತ್ತು ಅವನ ಸೈನ್ಯದಳ ಶತ್ರುವಿನ ದೃಷ್ಟಿವಲಯದಲ್ಲಿದ್ದುದರಿಂದ, ಸ್ವಂತ ಜವಾಬ್ದಾರಿಯ ಮೇಲೆ ಕಾಳಗವನ್ನು ನಡೆಸಬಹುದಾದ ಅವಕಾಶದಿಂದ ಲಾಭ ಪಡೆಯಲು ಆಶಿಸುತ್ತಿದ್ದಾನೆ. ಹಾಗವನು ಮಾಡಿಯೇ ಮಾಡುತ್ತಾನೆ. ಪುಲ್‌ತಸ್ಕ್ ಕಾಳಗದಲ್ಲಿ ಗಳಿಸಿದ ಜಯ ಮಹಾವಿಜಯವೆಂದು ಘೋಷಿಸಲಾಗಿದೆ. ನನ್ನ ಅಭಿಪ್ರಾಯದಲ್ಲಿ ಅದೇನೂ ಅಂಥದಲ್ಲ. ನಿಮಗೆ ತಿಳಿದಂತೆ, ಒಂದು ಕಾಳಗದ ಜಯಾಪ ಜಯಗಳನ್ನು ನಮ್ಮಂಥ ಅಯೋಧ ಜನ ನಿರ್ಣಯಿಸುವ ರೀತಿ ಕೆಟ್ಟದ್ದಾಗಿದೆ. ಕಾಳಗದ ನಂತರ ಯಾರು ಹಿಮ್ಮೆಟ್ಟುತ್ತಾರೆಯೋ ಅವರು ಸೋತವರೆಂದು ನಾವು ಹೇಳುತ್ತೇವೆ; ಆ ಪ್ರಕಾರ ಪುಲ್‌ತಸ್ಕ್ ಕದನದಲ್ಲಿ ಸೋತವರು ನಾವು. ಎರಡು ಮಾತಿನಲ್ಲಿ ಹೇಳುವು ದಾದರೆ, ಕದನದ ನಂತರ ನಾವು ಹಿಮ್ಮೆಟ್ಟುತ್ತೇವೆ; ಆದರೆ ಪೀಟರ್ಸ್‌ಬರ್ಗ್‌ಗೆ ಹರಿಕಾರನ ಮೂಲಕ ವಿಜಯವಾರ್ತೆಯನ್ನು ಮುಟ್ಟಿಸುತ್ತೇವೆ. ತನ್ನ ವಿಜಯ ಸಿದ್ಧಿಗೆ ಪ್ರತಿಫಲವಾಗಿ ಪೀಟರ್ಸ್‌ಬರ್ಗ್‌ನಿಂದ ತನ್ನನ್ನು ಮಹಾದಂಡನಾಯಕ ಪದವಿಗೇರಿಸಿದ ನಿರೂಪ ಬರುವ ನಿರೀಕ್ಷೆಯಿಂದ ಸೇನಾನಿ ಬೆನ್ನಿಗ್‌ಸೆನ್ ಸೇನಾನಿ ಬಕ್ಸ್‌ಹೌಡೆನ್‌ಗೆ ಸೈನ್ಯದ ನಾಯಕತ್ವವನ್ನು ಬಿಟ್ಟುಕೊಡುವುದಿಲ್ಲ. ಈ ಅಂತರದಲ್ಲಿ ನಾವು ಅತ್ಯಂತ ನವೀನವೂ ಕುತೂಹಲಕಾರಿಯೂ ಆದ ವ್ಯೂಹತಂತ್ರಗಳನ್ನು ರೂಪಿಸುತ್ತೇವೆ. ನಮ್ಮ ಗುರಿ ಶತ್ರುವನ್ನು ಹೊಡೆದುರುಳಿಸುವುದಲ್ಲ; ಅವನ ಮೇಲೆ ಲಗ್ಗೆ ಹೂಡುವುದೂ ಅಲ್ಲ. ನ್ಯಾಯವಾಗಿ ನಾವು ಮಾಡಬೇಕಾದ್ದೇ ಇದು. ಆದರೆ ತನ್ನ ಸೇವಾ ಜ್ಯೇಷ್ಠತೆಯಿಂದ ನಮ್ಮ ನಾಯಕನಾಗುವ ಹಕ್ಕು ಪಡೆದಿರುವ ಸೇನಾನಿ ಬಕ್ಸ್‌ಹೌಡೆನ್‌ನನ್ನು ನಾಯಕ ನಾಗದಂತೆ ತಪ್ಪಿಸುವುದೇ ನಮ್ಮ ಉದ್ದೇಶವಾಗಿದೆ. ಎಷ್ಟು ಹುರುಪಿನಿಂದ ಈ ಗುರಿ ಯನ್ನು ನಾವು ಸಾಧಿಸುತ್ತೇವೆಂದರೆ, ದಾಟಲಾರದ ನದಿಯನ್ನು ದಾಟಿದ ನಂತರ ಶತ್ರು ವನ್ನು ಬೇರ್ಪಡಿಸುವ ಸಲುವಾಗಿ ಸೇತುವೆಗಳನ್ನು ಸುಡುತ್ತೇವೆ. ಈ ಸಂದರ್ಭಗಳಲ್ಲಿ ನಮ್ಮ ಶತ್ರು ಬಕ್ಸ್‌ಹೌಡೆನ್‌ನೇ ಹೊರತು, ಬೋನಪಾರ್ಟ್ ಅಲ್ಲ. ಈ ಹೂಟ ದಿಂದಾಗಿ ಸೇನಾನಿ ಬಕ್ಸ್‌ಹೌಡೆನ್‌ನಿಂದ ನಾನು ತಪ್ಪಿಸಿಕೊಳ್ಳಲು ಸಾಧ್ಯವಾಯಿತು. ಅವನು ನಮ್ಮನ್ನಟ್ಟಿಸಿಕೊಂಡು ಬಂದನು. ನಾವು ಪಲಾಯನ ಸೂತ್ರ ಹಿಡಿದೆವು. ನಾವು ಮತ್ತೊಂದು ದಡ ಮುಟ್ಟುವ ಮುಂಚೆ ನದಿ ದಾಟಿ ನಮ್ಮ ಕಡೆಗೆ ಅವನು ಬರುವುದು ಕಷ್ಟವಾಗುತ್ತದೆ. ಕೊನೆಗೆ ನಮ್ಮ ಶತ್ರು, ಬಕ್ಸ್‌ಹೌಡೆನ್ ನಮ್ಮನ್ನು ಬೆನ್ನಟ್ಟಿ, ನಮ್ಮ ಮೇಲೆ ಧಾಳಿ ಮಾಡುತ್ತಾನೆ. ಇಬ್ಬರು ಸೇನಾನಿಗಳೂ ಕೋಪಾರೂಢ ರಾಗಿದ್ದಾರೆ. ಬಕ್ಸ್‌ಹೌಡೆನ್‌ನ ಸವಾಲು ಮತ್ತು ಬೆನ್ನಿಗ್‌ಸೆನ್‌ನ ಮೂರ್ಛೆಯೇ ಆ ಕೋಪದ ಫಲ. ಆದರೆ ಈ ಸಂದಿಗ್ಧ ಸಮಯದಲ್ಲಿ ಪೀಟರ್ಸ್‌ಬರ್ಗ್‌ಗೆ ಪುಲ್‌ತಸ್ಕ್ ಕದನದ ವಿಜಯವಾರ್ತೆಯನ್ನು ಕೊಂಡೊಯ್ದಿದ್ದ ಹರಿಕಾರ ಮಹಾದಂಡನಾಯಕನ

ಸ್ಥಾನಕ್ಕೆ ನಾನು ನೇಮಕಗೊಂಡ ಸುದ್ದಿಯನ್ನು ತರುತ್ತಾನೆ. ನಮ್ಮ ಪ್ರಥಮ ಶತ್ರು ಬೆಕ್ಸೆಹೌಡೆನ್ ದಮನಗೊಂಡಿದ್ದಾನೆ; ನಾವೀಗ ನಮ್ಮ ಲಕ್ಷ್ಯವನ್ನು ಎರಡನೆಯ ಹಗೆ ಬೋನಪಾರ್ಟ್ ಕಡೆಗೆ ತಿರುಗಿಸಬಹುದು. ಆದರೆ ಅಷ್ಟು ಹೊತ್ತಿಗೆ ಸಂಪ್ರದಾಯಬದ್ಧ ರಷ್ಯನ್ ಸೈನಿಕರ ಹೆಸರಿನಲ್ಲಿ ಮೂರನೆಯ ಶತ್ರು ಹುಟ್ಟಿಕೊಳ್ಳುತ್ತಾನೆ. ರೊಟ್ಟಿ, ಮಾಂಸ, ಬಿಸ್ಕತ್ತು, ಮೇವು ಇವೇ ಮೊದಲಾದ ಸರಂಜಾಮುಗಳು ಬೇಕೆಂದು ಅವರು ಗಲಾಟೆ ಮಾಡುತ್ತಾರೆ. ಗೋದಾಮುಗಳು ಖಾಲಿಯಾಗಿವೆ; ರಸ್ತೆಗಳು ದುರ್ಗಮವಾಗಿವೆ. ಸಂಪ್ರದಾಯವಾದಿಗಳು ಲೂಟಿ ಮಾಡುತ್ತಾರೆ. ಹಿಂದಿನ ದಂಡಯಾತ್ರೆಯ ಸಮಯದಲ್ಲಿ ಇಂಥ ಲೂಟಿ ನಡೆದಿರಲಿಲ್ಲವಾದ್ದರಿಂದ ನೀವದನ್ನು ಊಹಿಸಿಕೊಳ್ಳಲಾರಿರಿ. ಅರ್ಧಭಾಗ ಸೈನ್ಯ ಗುಂಪು ಗುಂಪಾಗಿ ಹಳ್ಳಿಗಳನ್ನು ಒಕ್ಕಲಿಕ್ಕುತ್ತಿವೆ. ಕೈಗೆ ಸಿಕ್ಕಿದ್ದನ್ನೆಲ್ಲ ಕತ್ತಿ ಬೆಂಕಿಗಳಿಗೆ ಗುರಿಮಾಡುತ್ತಾರೆ. ಹಳ್ಳಿಯ ಜನ ಪೂರ್ಣವಾಗಿ ಹಾನಿಗೊಳಗಾಗಿದ್ದಾರೆ. ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಸ್ಥಳ ಸಾಲದು. ಎಲ್ಲಿ ನೋಡಿದರೂ ಕ್ಷಾಮ ಭೀಕರವಾಗಿ ಹಬ್ಬುತ್ತಿದೆ. ಎರಡು ಸಾರಿ ಕೊಳ್ಳೆಕಾರರು ನಮ್ಮ ಕೇಂದ್ರ ಕಾರ್ಯಾಲಯವನ್ನು ಲೂಟಿ ಹೊಡೆದಿದ್ದಾರೆ. ಅವರನ್ನು ಚೆದರಿಸಲು ದಂಡನಾಯಕ ಸೈನಿಕದಳದ ನೆರವು ಪಡೆಯಬೇಕಾಗಿದೆ. ಈ ಕೊಳ್ಳೆಗಳ ಕಾಲದಲ್ಲಿ ಅವರು ನನ್ನ ಖಾಲಿ ತೊಗಲ ಕೈಚೀಲವನ್ನೂ, ಮೇಲಂಗಿಯನ್ನೂ ಹಾರಿಸಿಕೊಂಡು ಹೋಗಿದ್ದಾರೆ. ಕಂಡಕಡೆ ಕೊಳ್ಳೆಗಾರರಿಗೆ ಗುಂಡಿಕ್ಕುವ ಅಧಿಕಾರವನ್ನು ವಿಭಾಗೀಯ ನಾಯಕರಿಗೆ ನೀಡಲು ಚಕ್ರವರ್ತಿಗಳು ಯೋಚಿಸಿದ್ದಾರೆ. ಆದರೆ ಸೈನ್ಯದ ಒಂದರ್ಧ ಭಾಗ ಮತ್ತೊಂದರ್ಧದ ಮೇಲೆ ಗುಂಡು ಹಾರಿಸಲು ಇದರಿಂದ ಅಧಿಕಾರ ಪಡೆದಂತಾಗಿದೆ.'

ಮೊದಮೊದಲು ರಾಜಕುಮಾರನ ಕಣ್ಣು ಮಾತ್ರ ಆ ಪತ್ರವನ್ನೋದುತ್ತಿದ್ದುವು. ಆದರೆ ತುಸು ಹೊತ್ತಿನ ನಂತರ ತನಗರಿವಿಲ್ಲದೆಯೆ (ಬಿಲೀಬಿನ್‌ನ ಮಾತನ್ನೆಷ್ಟು ನಂಬಬಹುದೆನ್ನುವ ವಿಷಯ ಅವನಿಗೆ ಗೊತ್ತಿತ್ತು) ತಾನು ಓದಿದ ಕಾಗದದ ಬಗ್ಗೆ ಆಸಕ್ತಿ ಹೆಚ್ಚು ಹೆಚ್ಚಾಗಿ ಬೆಳೆಯತೊಡಗಿತು. ಓದು ಮುಗಿದ ನಂತರ ಅದನ್ನು ಮುದುರಿ ಆಚೆಗೆಸೆದನು. ಅದರ ಓದಿನಿಂದ ಅವನಿಗೆ ಕಳವಳವಾಗಲಿಲ್ಲ. ತಾನೀಗ ಪಾಲ್ಗೊಳ್ಳದಿದ್ದ ಆಚೆಗಿನ ಜೀವನ ಅವನ ಮನಸ್ಸನ್ನು ಕದಡಿತು. ತಾನು ಓದಿದ ಕಾಗದದ ಬಗೆಗಿನ ಆಸಕ್ತಿಯನ್ನೊರಸುವಂತೆ ಅವನು ಕಣ್ಣು ಮುಚ್ಚಿಕೊಂಡನು, ಹಣೆಯನ್ನುಜ್ಜಿಕೊಂಡನು; ಕೂಸುಕೋಣೆಯಲ್ಲಿ ನಡೆಯುತ್ತಿದ್ದುದನ್ನು ಕೇಳಿಸಿಕೊಳ್ಳಲು ಆ ಕಡೆಗೆ ಗಮನ ಹರಿಸಿದನು. ಕೂಡಲೆ ಬಾಗಿಲ ಮೂಲಕ ತೂರಿ ಬಂದ ವಿಚಿತ್ರ ಧ್ವನಿ ಅವನ ಕಿವಿಯನ್ನು ತಾಕಿತು. ತಾನು ಕಾಗದವನ್ನೋದುತ್ತಿದ್ದಾಗ ಮಗುವಿಗೇನಾದರೂ ಅನಿಷ್ಟ ಸಂಭವಿಸಿರಬಹುದೆ ಎಂಬ ಅಳುಕು ಅವನ ಮನವನ್ನಾಕ್ರಮಿಸಿಕೊಂಡಿತು. ಅವನು ಮೆಟ್ಟುಗಾಲಿನಲ್ಲಿ ಕೂಸುಕೋಣೆಯ ಬಾಗಿಲ ಬಳಿಗೆ ನಡೆದು, ಕದ ನೂಕಿದನು.

ಒಳಗೆ ಹೋಗುತ್ತಿದ್ದಂತೆ ದಾದಿ ಭಯಭೀತಳಾಗಿ ಏನನ್ನೋ ತನ್ನಿಂದ ಮುಚ್ಚುತ್ತಿದ್ದುದಾಗಿ ಕಂಡಿತು. ರಾಜಕುಮಾರಿ ಮೇರಿ ಮಂಚದ ಬಳಿ ಕಾಣಲಿಲ್ಲ.

'ನನ್ನ ಒಲವೆ' ಎಂಬೊಂದು ನಿರಾಶೆಯ ಮೆಲ್ಲುಲಿ ಹಿಂದುಗಡೆಯಿಂದ ಅವನ ಕಿವಿಯ ಮೇಲೆ ಬಿದ್ದಂತಾಯಿತು.

ಯಾರಿಗಾದರೂ ಸುದೀರ್ಘ ನಿದ್ರಾರಾಹಿತ್ಯ ಮತ್ತು ಭಯಂಕರ ಕಾತರತೆಗಳ ನಂತರ ಆಗುವಂತೆ, ಅವನು ನಿಷ್ಕಾರಣವಾದ ಭೀತಿಗೊಳಗಾದನು. ಮಗು ಸತ್ತು ಹೋಗಿರಬೇಕೆಂದು ಅವನಿಗನಿಸಿತು. ತಾನು ಕಂಡು ಕೇಳಿದ ಸಂಗತಿಗಳು ಆ ಭಯವನ್ನು ದೃಢಪಡಿಸುತ್ತಿದ್ದಂತೆ ತೋರಿದುವು.

'ಎಲ್ಲ ಮುಗಿಯಿತು' ಎಂದವನು ತಳಮಳಿಸಿದನು. ಅವನ ಹಣೆಯ ಮೇಲೆ ಕುಳಿರ್ ಬೆವರು ಹರಿಯಿತು. ಮಂಚ ಖಾಲಿಯಾಗಿರಬೇಕೆಂಬ ಮತ್ತು ದಾದಿ ಸತ್ತ ಮಗುವನ್ನು ಬಚ್ಚಿಟ್ಟಿರಬೇಕೆಂಬ ನಿಶ್ಚಯದಿಂದ, ತಳಮಳಗುಟ್ಟುತ್ತ ಅವನು ಅದರ ಬಳಿಗೆ ನಡೆದನು. ಅವನು ಪರದೆಯನ್ನು ಪಕ್ಕಕ್ಕೆ ಸರಿಸಿದನು. ತುಸು ಹೊತ್ತು, ಭಯ ದಿಂದ ಚಡಪಡಿಸುತ್ತಿದ್ದ ಅವನ ಕಣ್ಣುಗಳಿಗೆ ಮಗು ಕಾಣಲಿಲ್ಲ. ಕಡೆಗೆ ಅವನ ಕಣ್ಣು ಕೂಸನ್ನು ಗುರುತಿಸಿದುವು : ಗುಲಾಬಿ ಬಣ್ಣದ ಮಗು ಹೊರಳಾಡಿಕೊಂಡು ಹಾಸುಗೆಯ ಅಂಚಿನಲ್ಲಿ ಬಿದ್ದುಕೊಂಡಿತ್ತು ; ಅದರ ತಲೆ ತಲೆದಿಂಬಿನಡಿಯಲ್ಲಿತ್ತು ; ಸಮಾಧಾನದಿಂದ ಉಸಿರಾಡುತ್ತ, ನಿದ್ದೆಯಲ್ಲಿ ತನ್ನ ತುಟಿಗಳನ್ನು ಚಪ್ಪರಿಸುತ್ತಿತ್ತು.

ಮಗುವನ್ನು ಕಳೆದುಕೊಂಡಂತೆ ಚಿಂತಿಸುತ್ತಿದ್ದ ಹೊತ್ತಿನಲ್ಲಿ, ಅವನನ್ನು ಆ ಸ್ಥಿತಿಯಲ್ಲಿ ಕಂಡಾಗ ರಾಜಕುಮಾರ ಆಂಡ್ರೂವಿಗೆ ಸಂತೋಷವಾಯಿತು. ತನ್ನ ತಂಗಿ ಹೇಳಿಕೊಟ್ಟಿದ್ದಂತೆ ಅವನು ಮಗುವಿನ ಮೇಲೆ ಬಾಗಿ, ಜ್ವರ ಪರೀಕ್ಷೆಗಾಗಿ ತನ್ನ ತುಟಿ ಗಳನ್ನವನ ಮೇಲೆ ಒತ್ತಿದನು. ನುಣ್ಣನೆಯ ಹಣೆ ತೇವವಾಗಿತ್ತು. ಆಂಡ್ರೂ ಅವನ ತಲೆ ಸವರಿದನು. ಅದು ಸಹ ಒದ್ದೆಯಾಗಿತ್ತು. ಮಗು ತುಂಬ ಬೆವರಿದ್ದ. ಅವನು ಸತ್ತಿರಲಿಲ್ಲ. ವಿಷಮಸ್ಥಿತಿ ಸರಿದು ಹೋಗಿತ್ತು. ಅವನು ಗುಣಮುಖನಾಗುತ್ತಿದ್ದನು. ಅನಾಥ ಸ್ಥಿತಿಯಲ್ಲಿದ್ದ ಆ ಪುಟ್ಟ ಪ್ರಾಣಿಯನ್ನೆತ್ತಿಕೊಂಡು, ಎದೆಗವಚಿಕೊಳ್ಳಬೇಕೆಂದು ಆಂಡ್ರೂವಿನ ಮನಸ್ಸು ಹಾತೊರೆಯುತ್ತಿತ್ತು. ಆದರೆ ಧೈರ್ಯ ಬರಲಿಲ್ಲ. ಕಂಬಳಿಯೊಳ ಗಿಂದ ಇಣುಕುತ್ತಿದ್ದ ಅವನ ಪುಟ್ಟ ಕೈಕಾಲುಗಳನ್ನೂ, ಅವನ ತಲೆಯನ್ನೂ ನಿಂತು ಕೊಂಡೆ ದಿಟ್ಟಿಸುತ್ತಿದ್ದನು. ಹಿಂದಿನಿಂದ ಸಪ್ಪುಳ ಕೇಳಿಸಿತು. ಮಂಚದ ಪರದೆಯಡಿಯಲ್ಲಿ ನೆರಳು ಕಾಣಿಸಿತು. ಅವನು ಆ ಕಡೆ ಈ ಕಡೆ ಕಣ್ಣು ಹೊರಳಿಸದೆ, ಮಗುವಿನ ಮುಖವನ್ನೆ ದಿಟ್ಟಿಸುತ್ತ, ಅವನ ಕ್ರಮಬದ್ಧವಾದ ಉಸಿರನ್ನೆ ಆಲಿಸುತ್ತಿದ್ದನು. ಪರದೆಯಡಿ ಬಿದ್ದಿದ್ದ ನೆರಳು ಮೇರಿಯದು. ಸದ್ದಾಗದಂತೆ ಅವಳು ನಡೆದು ಬಂದು, ಪರದೆಯನ್ನೆತ್ತಿ ಇಣುಕಿ, ಮತ್ತೆ ಅದನ್ನು ಇಳಿಬಿಟ್ಟು ಹಿಂದಿರುಗುತ್ತಿದ್ದಳು. ರಾಜಕುಮಾರ ಆಂಡ್ರೂ ಅವಳ ಕಡೆ ನೋಡದೆಯೇ, ಅವಳನ್ನು ಗುರುತಿಸಿ, ತನ್ನ ಕೈಯನ್ನವಳ ಮುಂದೆ ಚಾಚಿದನು. ಅವಳದನ್ನದುಮಿದಳು.

'ಮಗು ತುಂಬ ಬೆವರಿದ್ದಾನೆ' ಎಂದು ಆಂಡ್ರೂ ನುಡಿದನು.

'ನಿನಗದನ್ನು ತಿಳಿಸಲು ಬರುತ್ತಿದ್ದೆ.'

ಮಗು ನಿದ್ದೆಯಲ್ಲಿಯೇ ತುಸು ಅಲುಗಾಡಿ, ಮುಗುಳುನಗೆ ನಕ್ಕನು ; ತಲೆದಿಂಬಿಗೆ ತನ್ನ ಹಣೆಯನ್ನು ಉಜ್ಜಿದನು.

ರಾಜಕುಮಾರ ಆಂಡ್ರ್ರ್ಯೂ ಸೋದರಿಯ ಕಡೆಗೆ ದೃಷ್ಟಿ ಬೀರಿದನು. ಪರದೆಯ ಮಬ್ಬು ನೆರಳಿನಲ್ಲಿ ಅವಳ ಹೊಳಪುಗಣ್ಣುಗಳು ಹರ್ಷಾಶ್ರುವಿನಿಂದಾಗಿ ಎಂದಿಗಿಂತ ಹೆಚ್ಚು ಪ್ರಕಾಶಮಾನವಾಗಿ ತೊಳಗುತ್ತಿದ್ದುವು. ಮಂಚದ ಪರದೆಯನ್ನು ಹುಸು ಸರಿಸಿ, ಅವಳು ಅಣ್ಣನ ಕಡೆಗೆ ಬಾಗಿ, ಚುಂಬಿಸಿದಳು. ಒಬ್ಬರಿಗೊಬ್ಬರು ಎಚ್ಚರಿಕೆಯ ಸನ್ನೆ ಮಾಡಿಕೊಂಡರು. ತಾವು ಮೂವರನ್ನು ಬಾಹ್ಯ ಜಗತ್ತಿನಿಂದ ಬೇರ್ಪಡಿಸಿದ್ದ ಆ ಏಕಾಂತ ಪ್ರದೇಶವನ್ನು ಬಿಡಲೊಲ್ಲದವರಂತೆ ಅವರು ಆ ಮಬ್ಬು ಬೆಳಕಿನಲ್ಲಿ ನೀರವವಾಗಿ ನಿಂತಿದ್ದರು. ಅಲ್ಲಿಂದ ಮೊದಲು ಹೊರಟವನು ರಾಜಕುಮಾರ. ಹೊರಡುವಾಗ ಅವನ ತಲೆ ಪರದೆಯ ಬಟ್ಟೆಗೆ ತಗುಲಿ ಕೆದರಿಕೊಂಡಿತು.

'ಹೌದು. ಈಗ ನನಗುಳಿದಿರುವುದು ಇದೊಂದೇ' ಎಂದವನು ಸುಯ್ದನು.

ಅಧ್ಯಾಯ ೧೦

ಸೌಭ್ರಾತೃಮಂಡಲಿಗೆ ಪ್ರವೇಶ ದೊರೆತ ನಂತರ ಪಿಯರಿ ಕೀವ್ ಪ್ರಾಂತ್ಯಕ್ಕೆ ತೆರಳಿದನು. ಅಲ್ಲಿಯ ಅವನ ತೋಟದಲ್ಲಿ ಹೆಚ್ಚಿನ ಜೀತದಾಳುಗಳಿದ್ದರು. ತೋಟದಲ್ಲಿ ತಾನು ನಿರ್ವಹಿಸಬೇಕಾಗಿದ್ದ ಯೋಜನೆಗಳ ಬಗ್ಗೆ ತನ್ನ ಮಾರ್ಗದರ್ಶನಕ್ಕಾಗಿ ಅವನೇ ಕೆಲವು ಸೂತ್ರಗಳನ್ನು ರೂಪಿಸಿಕೊಂಡಿದ್ದನು.

ಕೀವ್ ತಲುಪಿದ ಕೂಡಲೇ ಅವನು ಕೇಂದ್ರ ಕಚೇರಿಗೆ ಬರುವಂತೆ ತನ್ನ ಕಾರಬಾರಿಗಳಿಗೆ ಹೇಳಿ ಕಳಿಸಿದನು. ತನ್ನ ಧ್ಯೇಯೋದ್ದೇಶವಾಂಛೆಗಳನ್ನವರಿಗೆ ತಿಳಿಸಿದನು. ಕೂಡಲೇ ಜೀತಗಾರರನ್ನು ಮುಕ್ತಗೊಳಿಸಲು ಏರ್ಪಾಡು ಮಾಡಲಾಗುವುದೆಂದೂ, ಅಲ್ಲಿಯ ತನಕ ಹೊರಲಾರದ ಕೆಲಸದ ಹೊರೆಯನ್ನವರ ಮೇಲೆ ಹೊರಿಸಬಾರದೆಂದೂ, ಬಾಣಂತಿಯರನ್ನು ಕೆಲಸಕ್ಕೆ ಕಳಿಸಬಾರದೆಂದೂ, ಜೀತಗಾರರಿಗೆ ಅವಶ್ಯವಾದ ನೆರವು ನೀಡಬೇಕೆಂದೂ, ಶಿಕ್ಷೆವಾಗ್ದಂಡನೆಯ ರೂಪದಲ್ಲಿರಬೇಕೇ ಹೊರತು, ದೇಹದಂಡನೆಯಾಗಬಾರದೆಂದೂ, ಎಲ್ಲ ತೋಟಗಳಲ್ಲಿ ಆಸ್ಪತ್ರೆ, ಅನಾಥಾಲಯ ಮತ್ತು ಶಾಲೆಗಳನ್ನು ಪ್ರಾರಂಭಿಸಬೇಕೆಂದೂ ಅವನು ಕಾರಬಾರಿಗಳಿಗೆ ತಿಳಿಸಿದನು. ಹಣದ ದುರುಪಯೋಗ ಮತ್ತು ಆಡಳಿತದಿಂದ ಅತೃಪ್ತಗೊಂಡ ಕಿರಿಯ ಶ್ರೀಮಂತನ ಮಾತುಗಳೆಂದು ಕೆಲವು ಪಾರುಪತ್ಯಗಾರರು (ಅವರ ಪೈಕಿ ಅರೆ ಅಕ್ಷರಸ್ಥರಾದ ಕಾರೆಗಾರಿಗಳು ಇದ್ದರು) ಗಾಬರಿಗೊಂಡರು; ಮೊದಮೊದಲು ಭಯಗೊಂಡ ಕೆಲವರಿಗೆ ಹಿಂದೆಂದೂ ಕೇಳದಿದ್ದ ಪಿಯರಿಯ ನೂತನ ಶಬ್ದ ಪ್ರಯೋಗಗಳೂ ಅವನ ತೊದಲು ನುಡಿಗಳೂ ತಮಾಷೆಯಾಗಿ ತೋರಿದುವು; ತಮ್ಮ ಧಣಿಯ ಮಾತುಗಳನ್ನು ಕೇಳುವಷ್ಟರಿಂದಲೇ ಮತ್ತೆ ಕೆಲವರು ಸಂತೃಪ್ತರಾದರು; ಮುಖ್ಯ ಪಾರುಪತ್ಯಗಾರ ಮೊದಲುಗೊಂಡು, ಅವರಲ್ಲಿ ಚತುರರಾದವರು ಸ್ವಪ್ರಯೋಜನಕ್ಕಾಗಿ ಧಣಿಯನ್ನು ಹೇಗೆ ಬಳಸಿಕೊಳ್ಳಬಹುದೆನ್ನುವ ದೃಷ್ಟಿಯಿಂದ ಅವನ ಭಾಷಣವನ್ನು ಗ್ರಹಿಸಿದರು.

ಮುಖ್ಯ ಪಾರುಪತ್ಯಗಾರ ಪಿಯರಿಯ ಧ್ಯೇಯೋದ್ದೇಶಗಳ ಬಗ್ಗೆ ಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸಿದನು; ಆದರೆ ಒಟ್ಟಿನ ವ್ಯವಹಾರಗಳು ಅತೃಪ್ತಿಕರವಾಗಿದ್ದುದರಿಂದ, ಅವುಗಳ ಬಗ್ಗೆಯೂ ಸೂಕ್ತಕ್ರಮ ಕೈಗೊಳ್ಳಬೇಕೆಂದು ಅವನು ಸೂಚಿಸಿದನು.

ಶ್ರೀಮಂತ ಬೆಜುಕೋವ್‌ನ ಐಶ್ವರ್ಯ ಅಗಾಧವಾಗಿತ್ತು. ಆಸ್ತಿ ತನ್ನ ಕೈಗೆ ಬರುವ ಮುನ್ನ ಅವನ ತಂದೆ ಹತ್ತು ಸಾವಿರ ವರ್ಷಾಶನವನ್ನು ನಿಗದಿಗೊಳಿಸಿದ್ದನು. ಈಗಿನ ಅವನ ವಾರ್ಷಿಕ ಆದಾಯ ಸುಮಾರು ಐದು ಲಕ್ಷ ರೂಬಲ್‌ಗಳಷ್ಟಿತ್ತು. ಆದರೂ ತಾನು ಹಿಂದೆ ಇದ್ದುದಕ್ಕಿಂತ ಈಗ ಬಡವನಾಗಿದ್ದುದಾಗಿ ಅವನು ಭಾವಿಸಿಕೊಂಡಿದ್ದನು. ಅವನ ಆಯವ್ಯಯದ ತಃಖ್ತೆಯೇ ಅವನಿಗೆ ಸ್ಪಷ್ಟವಾಗಿ ಗ್ರಹಿಕೆಯಾಗಿರಲಿಲ್ಲ.

ಎಲ್ಲ ತೋಟ ತುಡಿಕೆಗಳ ಸಿಬ್ಬಂದಿವರ್ಗಕ್ಕೆ ಸಲ್ಲಬೇಕಾಗಿದ್ದ ೮೦,೦೦೦ ರೂಬಲ್ ಭೂ ಬ್ಯಾಂಕಿನ ಲೆಕ್ಕಕ್ಕೆ ಜಮೆ ಆಗುತ್ತಿತ್ತು. ಮಾಸ್ಕೋ ಬಳಿಯ ಆಸ್ತಿ ಮನೆಗಳ ರಕ್ಷಣೆ ದುರಸ್ತಿಗಾಗಿ ಮತ್ತು ಮೂವರು ರಾಜಕುಮಾರಿಯರ ವರ್ಷಾಶನಕ್ಕಾಗಿ ಮೂವತ್ತು ಸಾವಿರ ರೂಬಲ್ ಖರ್ಚಾಗುತ್ತಿತ್ತು. ಪಿಂಚಣಿಯ ಲೆಕ್ಕಕ್ಕೆ ೧೫,೦೦೦ ಮತ್ತು ಅನಾಥಾಲಯಗಳಿಗಾಗಿ ಅಷ್ಟೇ ಹಣ ಸಂದಾಯವಾಗುತ್ತಿತ್ತು. ಪ್ರತ್ಯೇಕವಾಗಿ ವಾಸಿಸುತ್ತಿದ್ದ ಶ್ರೀಮಂತೆಯ ಜೀವನಾಂಶಕ್ಕಾಗಿ ೧,೫೦,೦೦೦ ರೂಬಲ್ ಸಲ್ಲುತ್ತಿತ್ತು; ಸಾಲದ ಮೇಲಣ ಬಡ್ಡಿಯ ತೀರುವೆಗಾಗಿ ೭೦,೦೦೦ ರೂಬಲ್ ಕಟ್ಟಲಾಗುತ್ತಿತ್ತು. ಮೊದಲೇ ಪ್ರಾರಂಭವಾಗಿದ್ದ ಹೊಸ ಚರ್ಚ್ ಕಟ್ಟಡಕ್ಕೆ ಸಾಲಿಯಾನ ೧೦,೦೦೦ ರೂಬಲ್‌ಗಳಂತೆ ಎರಡು ಸಾಲುಗಳಿಂದ ಹಣ ಖರ್ಚಾಗುತ್ತಿತ್ತು. ಉಳಿದ ೧೦೦೦೦ ರೂಬಲ್ ಹೇಗೆ ಖರ್ಚಾಗುತ್ತಿತ್ತೆಂಬುದೇ ಅವನಿಗೆ ಅರ್ಥವಾಗುತ್ತಿರಲಿಲ್ಲ. ಪ್ರತಿವರ್ಷವೂ ಅವನು ಸಾಲ ಮಾಡಬೇಕಾಗಿತ್ತು. ಇವುಗಳ ಜತೆಗೆ ಅಗ್ನಿಯ ಅನಾಹುತ, ಸುಗ್ಗಿಯ ಕೇಡು ಹಾಗೂ ಗಿರಣಿ ಮತ್ತು ಕಾರ್ಯಾಲಯಗಳನ್ನು ಪುನರ್ನಿರ್ಮಿಸಬೇಕಾದ ಆವಶ್ಯಕತೆ, ಇವೇ ಮೊದಲಾದುವನ್ನು ಕುರಿತು ಪ್ರತಿವರ್ಷ ಮುಖ್ಯ ಪಾರುಪತ್ಯಗಾರ ಪತ್ರ ಬರೆಯುತ್ತಲೇ ಇದ್ದನು. ಯಾವುದರಲ್ಲಿ ತನಗೆ ಸಾಮರ್ಥ್ಯ ಪ್ರವೃತ್ತಿಗಳಿಲ್ಲವೋ ಅಂಥ ಕಾರ್ಯರೂಪದ ವ್ಯವಹಾರವನ್ನು ಎದುರಿಸುವುದೇ ಪಿಯರಿಯ ಮೊದಲ ಕೆಲಸವಾಗಿತ್ತು.

ಅವನು ಪ್ರಶಿಕ್ಷಿತ್ವ ತನ್ನ ಪ್ರಮುಖ ಪಾರುಪತ್ಯಗಾರನೊಡನೆ ತೋಟತುಡಿಕೆಗಳ ವ್ಯವಹಾರಗಳನ್ನು ಕುರಿತು ಚರ್ಚಿಸುತ್ತಿದ್ದನು. ಅದರಿಂದ ಆಸ್ತಿಪಾಸ್ತಿಗಳ ಅಭಿವೃದ್ಧಿಗಾಗಲಿ, ಸಮಸ್ಯೆಗಳ ಪರಿಹಾರಕ್ಕಾಗಲಿ ಏನೇನೂ ಪ್ರಯೋಜನವಾಗುತ್ತಿರಲಿಲ್ಲ. ಸಮಾಲೋಚನೆಗಳು ವಾಸ್ತವಿಕ ವ್ಯವಹಾರಗಳಿಗೆ ಅನ್ವಯವಾಗುವಂತಿದ್ದು, ಅವುಗಳ ಮುನ್ನಡೆಗೆ ಸಹಾಯವಾಗುವಂತೆ ಅವನಿಗೆ ತೋರಲಿಲ್ಲ. ಪ್ರಮುಖ ಪಾರುಪತ್ಯಗಾರ ಅಂದಿನ ಸ್ಥಿತಿಗತಿಗಳ ಮೇಲೆ ಸರಿಯಾಗಿ ಬೆಳಕು ಚೆಲ್ಲದೆ, ಸಾಲವನ್ನು ತೀರಿಸಬೇಕಾದ, ಮತ್ತು ಜೀತಗಾರರ ದುಡಿಮೆಯಿಂದ ನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದ ಆವಶ್ಯಕತೆಯನ್ನು ಒತ್ತಿಹೇಳುತ್ತಿದ್ದನು. ಪಿಯರಿಗೆ ಆ ಒತ್ತಾಯ ಹಿಡಿಸಲಿಲ್ಲ. ಅದಕ್ಕೆ ಪ್ರತಿಯಾಗಿ ಜೀತದಾಳುಗಳನ್ನು ಮೊದಲು ಮುಕ್ತಗೊಳಿಸಬೇಕೆಂದು ಅವನು ವಾದಿಸುತ್ತಿದ್ದನು. ಭೂಬ್ಯಾಂಕಿನ ಋಣವನ್ನು ಮೊದಲು ತೀರಿಸಬೇಕೆಂದೂ, ತೀರಿಸಿದ ನಂತರ ಜೀತದಾಳುಗಳ ಶೀಘ್ರ ಮುಕ್ತಿ ಸಾಧ್ಯವಿಲ್ಲವೆಂದೂ ಪಾರುಪತ್ಯಗಾರ ಪ್ರತಿವಾದವನ್ನೊಡ್ಡುತ್ತಿದ್ದನು.

ಜೀತವಿಮುಕ್ತಿ ಅಸಾಧ್ಯವೆಂದು ಅವನೇನೂ ಖಡಾಖಂಡಿತವಾಗಿ ಹೇಳಲಿಲ್ಲ. ಆದರೆ ಕಸ್ತ್ರೋಮಾ ಪ್ರಾಂತ್ಯದ ಕಾಡನ್ನೂ, ನದಿಯ ಕೆಳಗಿನ ಜಮೀನನ್ನೂ, ಕ್ರಿಮಿಯಾದ

ಲ್ಲಿದ್ದ ಆಸ್ತಿಯನ್ನೂ ಮಾರಿ ಸಾಲ ತೀರಿಸಿದನಂತರ ಉಳಿದದ್ದು ಸಾಧ್ಯವಾದೀತೆಂದು ಅವನು ಸೂಚಿಸಿದನು. ಆಜ್ಞೆ, ಅರ್ಜಿ, ಮನವಿ, ಮೊದಲಾದ ತೊಡಕುಗಳಿಂದ ಪಾರಾಗ ಬೇಕಾದರೆ ತನ್ನ ಸಲಹೆಗಳ ಅನುಷ್ಠಾನ ಅತ್ಯಗತ್ಯವೆಂದು ಅವನು ನುಡಿದನು. ದಿಗ್ಭ್ರಾಂತನಾದ ಪಿಯರಿ 'ಆಗಲಿ, ಆಗಲಿ, ಹಾಗೆಯೇ ಮಾಡಿ' ಎಂದಷ್ಟೇ ಉತ್ತರ ವಿತ್ತನು.

ಪಟ್ಟುಹಿಡಿದು ಕೆಲಸಮಾಡುವ ಸಾಮರ್ಥ್ಯ ಪಿಯರಿಯ ಜಾಯಮಾನಕ್ಕೆ ಒಗ್ಗಿದ್ದಲ್ಲ; ಒಗ್ಗಿದ್ದರೆ, ತನ್ನ ವ್ಯವಹಾರಗಳನ್ನು ತಾನೇ ಸ್ವತಂತ್ರವಾಗಿ ನಿರ್ವಹಿಸ ಬಹುದಿತ್ತು. ಎಲ್ಲ ಕೆಲಸಗಳನ್ನು ತಾನೇ ನಿರ್ವಹಿಸುವುದಾಗಿ ಪಾರುಪತ್ಯಗಾರನ ಮುಂದೆ ಅವನು ನಟಿಸುತ್ತಿದ್ದನು. ತನ್ನ ಸಲಹೆಗಳು ತನಗನುಕೂಲವಾಗದಿದ್ದರೂ, ಮಾಲೀಕನಿಗೆ ಲಾಭದಾಯಕವಾಗುತ್ತವೆಂದು ಶ್ರೀಮಂತನ ಮುಂದೆ ಪಾರುಪತ್ಯಗಾರ ಸೋಗು ಹಾಕು ತ್ತಿದ್ದನು.

ಕೀವ್‌ನಲ್ಲಿ ಪೂರ್ವ ಪರಿಚಯದ ಕೆಲವು ಜನ ಪಿಯರಿಗೆ ದೊರೆತರು. ಆ ಪ್ರಾಂತ್ಯ ದಲ್ಲಿಯೇ ದೊಡ್ಡ ಜಮೀನುದಾರನಾದ ಶ್ರೀಮಂತನನ್ನು ಪರಿಚಯಿಸಿಕೊಂಡು, ಸಂತೋಷ ದಿಂದ ಸ್ವಾಗತಿಸಲು ಹೊಸಬರು ಕಾತರರಾಗಿದ್ದರು. ಪಿಯರಿಯ ದೊಡ್ಡ ದೌರ್ಬಲ್ಯ ವೆಂದರೆ ಪ್ರಲೋಭನೆಗೆ ವಶನಾಗುವುದು. ಮಂಡಲಿಯನ್ನು ಸೇರುವಾಗಲೂ ತನ್ನ ದೌರ್ಬಲ್ಯವನ್ನೊಪ್ಪಿಕೊಂಡಿದ್ದನು. ಮತ್ತೆ ಅವನ ಬದುಕಿನ ಇಡೀ ದಿನಗಳು, ವಾರ ಗಳು ಮತ್ತು ತಿಂಗಳು ಆತುರಾತುರವಾಗಿ ಕಳೆಯುತ್ತಿದ್ದುವು. ಗೋಷ್ಠಿ, ಉಪಾಹಾರ, ಭೋಜನ, ನೃತ್ಯಗಳಿಲ್ಲದ ದಿನವಾರಗಳೆ ಇರಲಿಲ್ಲ. ಇವುಗಳಿಂದಾಗಿ, ಪೀಟರ್ಸ್‌ಬರ್ಗ್‌ನಲ್ಲಿ ಸಾಧ್ಯವಿದ್ದಂತೆ ಇಲ್ಲಿ ಚಿಂತನ ಮಂಥನಗಳಿಗೆ ಅವಕಾಶವಿರಲಿಲ್ಲ. ತಾನು ನಿರೀಕ್ಷಿಸಿಕೊಂಡಿದ್ದ ಹೊಸ ಬಾಳಿಗೆ ಬದಲಾಗಿ ಅವನು ಹೊಸ ಪರಿಸರದಲ್ಲಿ ಹಳೆಯ ಬದುಕನ್ನೆ ಮುಂದು ವರಿಸಿದ್ದನು.

ಸೌಭ್ರಾತೃಪಂಥದ ಮೂರು ವಿಧಿಗಳ ಪೈಕಿ, ನೈತಿಕ ಜೀವನದ ಆದರ್ಶವನ್ನು ಪರಿಪಾಲಿಸಬೇಕೆಂಬ ಸೂತ್ರವನ್ನು ಪಿಯರಿ ಇನ್ನೂ ಅನುಷ್ಠಾನಕ್ಕೆ ತಂದಿರಲಿಲ್ಲ; ಸಪ್ತಶೀಲ ಗಳ ಪೈಕಿ ಅವನು ಎರಡನ್ನು ಅನುಸರಿಸುತ್ತಿರಲಿಲ್ಲ: ನೈತಿಕತೆ ಮತ್ತು ಮರಣ ಪ್ರೇಮ. ಉಳಿದ ವಿಧಿಗಳಲ್ಲೊಂದಾದ ಮಾನವ ಜನಾಂಗದ ಸುಧಾರಣೆಯನ್ನು ತಾನು ನೆರವೇರಿಸು ತ್ತಿದ್ದುದಾಗಿ ಸಮಾಧಾನದಿಂದಿದ್ದನು. ಉಳಿದ ಶೀಲಗಳನ್ನು, ವಿಶೇಷವಾಗಿ ನೆರೆಯವರ ಪ್ರೀತಿ ಮತ್ತು ಔದಾರ್ಯಗಳನ್ನು ತನ್ನ ಜೀವನದಲ್ಲಳವಡಿಸಿಕೊಂಡಿದ್ದನು.

೧೮೦೭ರ ವಸಂತ ಋತುವಿನಲ್ಲಿ ಪೀಟರ್ಸ್‌ಬರ್ಗ್‌ಗೆ ಹಿಂದಿರುಗಲು ಅವನು ನಿಶ್ಚಯಿಸಿಕೊಂಡನು. ತನ್ನ ಆಜ್ಞೆಗಳು ಹೇಗೆ ಕಾರ್ಯಗತಗೊಂಡಿವೆಯೆಂಬುದನ್ನು ಸ್ವತಃ ಪರಿಶೀಲಿಸುವ ಸಲುವಾಗಿ ಅವನು ದಾರಿಯಲ್ಲಿದ್ದ ತನ್ನ ತೋಟ ತುಡಿಕೆಗಳಿಗೆ ಭೇಟಿ ಕೊಟ್ಟನು. ತನ್ನ ಆಸರೆಗೆ ಭಗವಂತ ಒಪ್ಪಿಸಿದ್ದ ಜೀತದಾಳುಗಳು ಯಾವ ಸ್ಥಿತಿಯಲ್ಲಿ ದ್ದಾರೆ, ತನ್ನಿಂದ ಅವರಿಗೆ ಏನಾದರೂ ಪ್ರಯೋಜನವಾಗಿದೆಯೆ ಎಂಬುದನ್ನು ಅವಲೋಕಿ ಸುವುದೂ ಅವನ ಉದ್ದೇಶವಾಗಿತ್ತು. ತರುಣ ಶ್ರೀಮಂತನ ಯೋಜನೆಗಳು ಭ್ರಾಂತಿ ಮೂಲವಾದುವೆಂದು, ಅವು ತನಗಾಗಲಿ, ಶ್ರೀಮಂತನಿಗಾಗಲಿ, ಜೀತದಾಳುಗಳಿಗಾಗಲಿ

ಲಾಭದಾಯಕವಾಗುವುದಿಲ್ಲವೆಂದು ತಿಳಿದಿದ್ದ ಮುಖ್ಯ ಪಾರುಪತ್ಯಗಾರ ನಿರೂಪಗಳ ಬಗ್ಗೆ ರಿಯಾಯಿತಿ ತೋರಿಸಿದ್ದನು. ಜೀತದಾಳುಗಳ ವಿಮೋಚನೆ ಅಪ್ರಾಯೋಗಿಕ ವಾದುದೆಂದು ನಂಬಿಕೊಂಡಿದ್ದ ಅವನು ದಣಿ ಆಗಮಿಸುವ ಮುನ್ನವೆ, ಎಲ್ಲ ಆಸ್ತಿಗಳಲ್ಲಿ ಶಾಲೆ, ಆಸ್ಪತ್ರೆ ಮತ್ತು ಅನಾಥಾಶ್ರಮಗಳಿಗಾಗಿ ದೊಡ್ಡ ಸೌಧಗಳನ್ನು ನಿರ್ಮಿಸುವು ದೆಂದು ಏರ್ಪಾಡುಮಾಡಿದ್ದನು. ಸಂಪ್ರದಾಯಬದ್ಧವಾದ ಸತ್ಕಾರ ಸಮಾರಂಭಗಳು ಪಿಯರಿಗೆ ಹಿಡಿಸುವುದಿಲ್ಲವೆಂದು ತಿಳಿದಿದ್ದ ಅವನು ಕೃತಜ್ಞತೆಯ ಸಂಕೇತವಾಗಿ ಧಾರ್ಮಿಕ ಸಮಾರಂಭಗಳ ಆಚರಣೆಗೆ ಸಿದ್ಧತೆ ಮಾಡಿಕೊಂಡಿದ್ದನು. ವಿಗ್ರಹ ರೊಟ್ಟಿ ಮೊದಲಾದು ವುಗಳ ನೈವೇದ್ಯದಿಂದ ಮಾತ್ರ ತನ್ನ ದಣಿಯನ್ನು ಮರುಳು ಮಾಡಬಹುದೆಂದು ಅವನು ಎಣಿಕೆ ಹಾಕಿಕೊಂಡಿದ್ದನು.

ತೆಂಕಣ ವಸಂತ, ವಿಯನ್ನ ಬಂಡಿಯ ಚುರುಕು ಸುಖಪ್ರಯಾಣ ಮತ್ತು ರಸ್ತೆಯ ನಿರ್ಜನತೆ, ಇವೆಲ್ಲ ಪಿಯರಿಯ ಮನಸ್ಸಿಗೆ ಆಹ್ಲಾದವುಂಟುಮಾಡಿದ್ದುವು. ಹಿಂದೆ ತಾನು ನೋಡದಿದ್ದ ತೋಟಗಳು ಇತರ ತೋಟಗಳಿಗಿಂತ ಚಿತ್ತಾಕರ್ಷಕವಾಗಿದ್ದುವು. ಎಲ್ಲ ಕಡೆಯೂ ಜೀತದಾಳುಗಳು ಏಳ್ಗೆ ಹೊಂದುತ್ತಿದ್ದಂತೆ, ತಮ್ಮ ಮೇಲೆ ಅನುಗ್ರಹಿಸಿದ್ದ ಉಪಕಾರಗಳಿಂದ ಅವರು ದಣಿಗೆ ಕೃತಜ್ಞರಾಗಿದ್ದಂತೆ ತೋರುತ್ತಿತ್ತು. ತಾನು ಹೋದೆಡೆಯಲ್ಲೆಲ್ಲ ಏರ್ಪಾಡಾಗಿದ್ದ ಸತ್ಕಾರ ಸಮಾರಂಭಗಳು ಅವನಿಗೆ ಮುಜುಗರವುಂಟು ಮಾಡಿದ್ದರೂ ಅವನ ಹೃದಯಾಂತರಾಳದಲ್ಲಿ ಆನಂದದ ಸೆಲೆಯೊಡೆದಿತ್ತು. ಅವನಿಗೆ ರೊಟ್ಟಿ, ಉಪ್ಪು ಮತ್ತು ಸಂತಪೀಟರ್ ಸಂತಪಾಲರ ವಿಗ್ರಹಗಳನ್ನು ಕಾಣಿಕೆಯಾಗಿ ನೀಡಿದ ಒಂದು ಜಾಗದ ರೈತರು ತಮ್ಮ ದಣಿ ತಮಗೆ ಅನುಗ್ರಹಿಸಿದ್ದ ಉಪಕಾರದ ಸ್ಮರಣೆಗಾಗಿ, ಅವನ ರಕ್ಷಕ ಸಂತರಾದ ಪೀಟರ್ ಮತ್ತು ಪಾಲರ ಹೆಸರಿನಲ್ಲಿ ಚರ್ಚಿಗೆ ಸೇರಿದಂತೆ ನವಮಂದಿರವನ್ನು ನಿರ್ಮಿಸಲು ಅನುಮತಿ ಬೇಕೆಂದು ಪ್ರಾರ್ಥಿಸಿದರು. ತಮ್ಮನ್ನು ದುಡಿಮೆಯಿಂದ ಬಿಡುಗಡೆ ಮಾಡಿದ್ದಕ್ಕಾಗಿ, ತೋಳುಗಳಲ್ಲಿ ಕೂಸುಗಳ ನ್ನಿರುಕಿಕೊಂಡು ಬಂದಿದ್ದ ಹೆಂಗಳೆಯರು ತಮ್ಮ ದಣಿಗೆ ವಂದನೆ ಸಲ್ಲಿಸುವ ಸಲುವಾಗಿ ಮತ್ತೊಂದೆಡೆ ಜಮಾಯಿಸಿದ್ದರು. ಮೂರನೆಯ ತೋಟದಲ್ಲಿ ದಣಿಯ ಔದಾರ್ಯದಿಂದ ಮಕ್ಕಳಿಗೆ ಓದು ಬರಹ ಮತ್ತು ಮತ ಶಾಸ್ತ್ರಗಳನ್ನು ಕಲಿಸುತ್ತಿದ್ದ ಪುರೋಹಿತ ಶಿಲುಬೆಯನ್ನು ಧರಿಸಿ, ಮಕ್ಕಳೊಡಗೂಡಿ, ಅವನಿಗೆ ವಂದನೆ ಸಲ್ಲಿಸುವ ಸಲುವಾಗಿ ಕಾದುಕೊಂಡಿದ್ದನು. ಎಲ್ಲ ತೋಟಗಳಲ್ಲಿ ಆಸ್ಪತ್ರೆ, ಶಾಲೆ ಮತ್ತು ಭಿಕ್ಷಾಮಂದಿರಗಳಿ ಗಾಗಿ ನಿರ್ಮಾಣಗೊಂಡು ಪ್ರಾರಂಭೋತ್ಸವಕ್ಕೆ ಸಿದ್ಧವಾಗಿದ್ದ, ಅಥವಾ ನಿರ್ಮಾಣದ ಹಂತದಲ್ಲಿದ್ದ ಏಕನಕ್ಷೆಗನುಗುಣವಾದ ಇಟ್ಟಿಗೆಯ ಕಟ್ಟಡಗಳನ್ನು ಪಿಯರಿ ಕಣ್ಣಾರೆ ಕಂಡನು. ಅವನು ಹೋದೆಡೆಯಲ್ಲೆಲ್ಲ ಪಾರುಪತ್ಯಗಾರನ ಲೆಕ್ಕಪತ್ರಗಳನ್ನು ತನಿಖೆ ಮಾಡಿದನು; ಅವುಗಳ ಪ್ರಕಾರ ಜೀತಗಾರರ ಊಳಿಗ ದುಡಿಮೆ ತುಂಬ ಕಡಮೆ ಯಾಗಿತ್ತು. ನೈತುಂಬ ಕೊಟ್ಟು ಹಾಕಿಕೊಂಡು ಬಂದಿದ್ದ ಜೀತದಾಳುಗಳ ನಿಯೋಗ ಗಳು ಸಲ್ಲಿಸಿದ ಹೃದಯಸ್ಪರ್ಶಿ ವಂದನೆಗಳನ್ನು ಸ್ವೀಕರಿಸಿದನು.

ಪಿಯರಿಗೆ ಉಪ್ಪು ರೊಟ್ಟಿಗಳನ್ನು ನೀಡಿ, ಪೀಟರ್ ಪಾಲರ ಹೆಸರಿನಲ್ಲಿ ಮಂದಿರ ನಿರ್ಮಿಸುವುದಾಗಿ ಕೇಳಿಕೊಂಡಿದ್ದ ಜಾಗ ಸಂತೆಯ ಸ್ಥಳವಾಗಿತ್ತು. ಸಂತ ಪೀಟರ್

ದಿನದಂದು ಸಂತೆಯೂ ನೆರೆಯುತ್ತಿತ್ತು. ನಿಯೋಗದಲ್ಲಿದ್ದ ಶ್ರೀಮಂತ ರೈತರು ಬಹು ಹಿಂದೆಯೇ ಮಂದಿರ ನಿರ್ಮಾಣವನ್ನು ಪ್ರಾರಂಭಿಸಿದ್ದರು. ಆ ಊರಿನ ಹತ್ತರಲ್ಲೊಂಬತ್ತು ಭಾಗ ರೈತರು ಕಡುಬಿಕ್ಷರು. ಪಿಯರಿಗೆ ಈ ವಿರೋಧಾಭಾಸ ಅರ್ಥವಾಗಲಿಲ್ಲ. ಬಾಣಂತಿಯರು ತನ್ನ ಜಮೀನಿನಲ್ಲಿ ದುಡಿಯದಿದ್ದರೂ, ಅವರವರ ಸ್ವಂತ ಜಮೀನಿನಲ್ಲಿ ದುಡಿಯುತ್ತಿದ್ದ ಸಂಗತಿ ಅವನಿಗೆ ಗೊತ್ತಾಗಲಿಲ್ಲ. ತನ್ನನ್ನು ಭೇಟಿಮಾಡಿದ್ದ ಪುರೋಹಿತ ರೈತರನ್ನು ಸುಲಿಗೆಯ ಮೂಲಕ ಹಿಂಸಿಸುತ್ತಿದ್ದ, ಮತ್ತು ತಮ್ಮ ಹೊಲ ಮನೆಗಳ ಕೆಲಸವನ್ನು ತಪ್ಪಿಸಿ ಮಕ್ಕಳನ್ನು ಶಾಲೆಗೊಯ್ಯುತ್ತಿದ್ದಾಗ ಅಳುತ್ತಿದ್ದ ತಂದೆ ತಾಯಿಯರಿಂದ ಅಪಾರ ಧನವನ್ನು ಸುಲಿದುಕೊಂಡು ಮುಕ್ತಗೊಳಿಸುತ್ತಿದ್ದ ವಿಚಾರಗಳೂ ಪಿಯರಿಯ ಗಮನಕ್ಕೆ ಬರಲಿಲ್ಲ. ದಾಖಲೆಗಳಲ್ಲಿ ಜೀತದಾಳುಗಳ ಊಳಿಗ ದುಡಿಮೆಯನ್ನು ಕಡಮೆ ತೋರಿಸಿ, ಇಟ್ಟಿಗೆ ಕಟ್ಟಡಗಳಿಗೆ ಅವರ ದುಡಿಮೆಯನ್ನು ಎಂದಿಗಿಂತ ಹೆಚ್ಚಾಗಿ ಬಳಸಿಕೊಳ್ಳುತ್ತಿದ್ದ ವಿಚಾರವೂ ಅವನಿಗೆ ತಿಳಿಯುವಂತಿರಲಿಲ್ಲ. ಲೆಕ್ಕಪತ್ರಗಳ ಮಣಗಳಲ್ಲಿ ಜೀತದಾಳುಗಳು ಕೊಡುತ್ತಿದ್ದ ಗುತ್ತಿಗೆ ಹಣ ಕಡಿತಗೊಂಡಿದ್ದರೂ, ಪಾರುಪತ್ಯಗಾರರು ಅವರ ಊಳಿಗ ದುಡಿಮೆಯನ್ನು ಎರಡು ಪಟ್ಟು ಹೆಚ್ಚಿಸಿದ್ದ ವಿಷಯವೂ ಅವನ ತಿಳಿವಳಿಕೆಗೆ ಬಂದಿರಲಿಲ್ಲ. ಅದೇನೇ ಇರಲಿ, ತನ್ನ ತೋಟತುಡಿಕೆಗಳಿಗೆ ಭೇಟಿನೀಡಿದ್ದರಿಂದ ಪಿಯರಿ ಆನಂದ ತುಂದಿಲನಾಗಿದ್ದನು. ಪೀಟರ್ಸ್‌ಬರ್ಗ್ ಬಿಟ್ಟಾಗ ಅವನ ಮನಸ್ಸಿನಲ್ಲಿ ಮೊಳೆತಿದ್ದ ಧಾರ್ಮಿಕ ಭಾವನೆ ಮತ್ತೆ ಮರುಕೊಳಿಸಿತು. ಮಹಾಬೋಧಕನೆಂದು ತಾನು ಕರೆಯುತ್ತಿದ್ದ ಸೋದರ—ಬೋಧಕನಿಗೆ ಅವನು ಉತ್ಸಾಹ ಉಲ್ಲಾಸಗಳಿಂದ ಪತ್ರಗಳನ್ನು ಬರೆದನು.

'ಇಷ್ಟೆಲ್ಲ ಒಳ್ಳೆಯ ಕೆಲಸವಮಾಡಲು ಹೆಚ್ಚು ಪ್ರಯತ್ನ ಅನಾವಶ್ಯಕ. ಇದೆಲ್ಲ ತುಂಬ ಸರಳ, ಸುಲಭ. ಆದರೂ ಈ ಕಡೆಗೆ ನಾವು ಲಕ್ಷ್ಯವನ್ನೆ ಹರಿಸುವುದಿಲ್ಲವಲ್ಲ' ಎಂದು ಪಿಯರಿ ಆಲೋಚನಾಮಗ್ನನಾದನು.

ಜೀತದಾಳುಗಳು ತೋರಿಸಿದ ಕೃತಜ್ಞತೆಗೆ ಪಿಯರಿ ಮಾರುಹೋದನು ; ಆದರೆ ಅದನ್ನು ಸ್ವೀಕರಿಸಿದ್ದಕ್ಕಾಗಿ ಅವನು ನಾಚಿಕೆಯ ಮುಳ್ಳಾದನು. ಆ ಸರಳ ಮುಗ್ಧ ದರಿದ್ರರಿಗೆ ತಾನು ಸಲ್ಲಿಸಬೇಕಾದ ಉಪಕಾರ ಬಹಳವಿದೆಯೆಂಬುದನ್ನು ಆ ಕೃತಜ್ಞತೆಯ ಪ್ರದರ್ಶನ ಅವನಿಗೆ ನೆನಪು ಮಾಡಿಕೊಡುತ್ತಿತ್ತು.

ಶ್ರೀಮಂತ ಬುದ್ಧಿವಂತನಾದರೂ ಮುಗ್ಧನೆಂಬುದನ್ನು ಪರಮ ನೀಚನೂ ಕುಯುಕ್ತಿವಂತನೂ ಆದ ಪ್ರಮುಖ ಪಾರುಪತ್ಯಗಾರ ಅರಿತುಕೊಂಡಿದ್ದನು. ಪೂರ್ವ ಯೋಜಿತ ಸಮಾರಂಭಗಳು ಪಿಯರಿಯ ಮನಸ್ಸಿನ ಮೇಲೆ ಬೀರಿದ್ದ ಪರಿಣಾಮವನ್ನು ಕಣ್ಣಾರೆ ಕಂಡಿದ್ದ ಅವನು ತನ್ನ ದಣಿಯನ್ನು ಬೊಂಬೆಯ ರೀತಿಯಲ್ಲಿ ಕುಣಿಸಬಹುದೆಂದು ಹಂಚಿಕೆ ಹಾಕಿಕೊಳ್ಳುತ್ತಿದ್ದನು. ಪಿಯರಿಯ ಯೋಜನೆಗಳ ಅಸಾಧ್ಯತೆಯ ಬಗ್ಗೆ ನಿದರ್ಶನಗಳನ್ನೊದಗಿಸಿ, ಇದ್ದದ್ದರಲ್ಲಿ ಸುಖದಿಂದಿರುವ ಜೀತಗಾರರ ಬಿಡುಗಡೆಯ ನಿಷ್ಪ್ರಯೋಜಕ ಪರಿಣಾಮವನ್ನು ಹಲವು ಬಗೆಗಳಲ್ಲಿ ಪಿಯರಿಯ ಗಮನಕ್ಕೆ ತಂದನು.

ಪಾರುಪತ್ಯಗಾರನ ವಾದದಲ್ಲಿ ಸತ್ಯಾಂಶವಿದೆಯೆಂದು ಪಿಯರಿಯ ಒಳದನಿ ನುಡಿಯುತ್ತಿತ್ತು. ಜೀತಗಾರರು ಸುಖವಾಗಿದ್ದರೆಂಬುದನ್ನು ಅವನು ಕಣ್ಣಾರೆ ಕಂಡಿದ್ದನು.

ಅವರನ್ನು ಮುಕ್ತಗೊಳಿಸಿದಾಗ ಎಂಥ ಸಂಕಟಕ್ಕೀಡಾಗುತ್ತಾರೆಯೋ ದೇವರೇ ಬಲ್ಲ ಎಂಬ ಪಾರುಪತ್ಯಗಾರನ ಶಂಕೆಯೂ ಅವನನ್ನು ಕಾಡುತ್ತಿತ್ತು. ಆದರೂ ತಾನೇನು ಸರಿಯೆಂದು ತಿಳಿದಿದ್ದನೋ, ಒಲ್ಲದ ಮನಸ್ಸಿನಿಂದ, ಅದು ಕಾರ್ಯಗತಗೊಳ್ಳಬೇಕೆಂದು ಒತ್ತಾಯಿಸಿದನು. ಶ್ರೀಮಂತನ ಮನೋರಥವನ್ನೀಡೇರಿಸಲು ಶಕ್ತಿಮೀರಿ ದುಡಿಯುವುದಾಗಿ ಪಾರುಪತ್ಯಗಾರ ವಾಗ್ದಾನ ಮಾಡಿದನು. ಜಮೀನು ಮತ್ತು ಕಾಡುಗಳನ್ನು ಭೂ ಬ್ಯಾಂಕಿನಿಂದ ಬಿಡಿಸಿಕೊಂಡು, ಮಾರಾಟ ಮಾಡಲು ಸೂಕ್ತವಾದ ವ್ಯವಸ್ಥೆ ಮಾಡಲಾಗಿದೆಯೋ ಇಲ್ಲವೇ ಎಂಬ ಸಂಗತಿ ಶ್ರೀಮಂತನಿಗೆ ಗೊತ್ತಾಗಲಾರದೆಂದು ಅವನು ಖಾತರಿಪಡಿಸಿಕೊಂಡಿದ್ದನು. ಶ್ರೀಮಂತ ಆ ಬಗ್ಗೆ ವಿಚಾರಿಸಲಾರನೆಂಬುದೂ ಅವನಿಗೆ ಗೊತ್ತಿತ್ತು. ಹೊಸದಾಗಿ ಕಟ್ಟಿದ ಸೌಧಗಳು ಪಾಳುಬಿದ್ದಿವೆಯೋ, ಜೀತಗಾರರು ಸಲ್ಲಿಸುತ್ತಿದ್ದ ಗುತ್ತಿಗೆ ಹಣ ಇಳಿಮುಖವಾಗಿದೆಯೋ, ಅವರ ಊಳಿಗ ದುಡಿಮೆ ಕಡಮೆಯಾಗಿದೆಯೋ ಇತ್ಯಾದಿ ವಿಷಯಗಳು ಶ್ರೀಮಂತನಿಗೆ ಅರ್ಥವಾಗುವುದಿಲ್ಲವೆಂದೇ ಅವನು ತಿಳಿದಿದ್ದನು.

ಅಧ್ಯಾಯ ೧೧

ದಕ್ಷಿಣ ರಷ್ಯಾದ ಪ್ರವಾಸದಿಂದ ಉಲ್ಲಾಸ ಚಿತ್ತನಾಗಿ ಹಿಂದಿರುಗಿದ ಪಿಯರಿ ತನ್ನ ಗೆಳೆಯ ಬಲ್ಕೋನ್‌ಸ್ಕಿಯನ್ನು ನೋಡಬೇಕೆಂಬ ತನ್ನ ಬಹುದಿನಗಳ ಆಸೆಯನ್ನು ಪೂರೈಸಿಕೊಳ್ಳಲು ನಿಶ್ಚಯಿಸಿಕೊಂಡನು. ಅವನನ್ನು ಪಿಯರಿ ಎರಡು ವರ್ಷಗಳಿಂದ ಭೇಟಿಯಾಗಿರಲಿಲ್ಲ.

ಬೊಗುಚಾರೊವೊ ಇದ್ದದ್ದು ಅಷ್ಟೇನೂ ಸುಂದರವಲ್ಲದ ಮೈದಾನದ ಪ್ರದೇಶದಲ್ಲಿ, ಹೊಲಕಾನುಗಳ ಮಧ್ಯೆ. ಕಾಡಿನಲ್ಲಿದ್ದ ಭೂರ್ಜ ಮತ್ತು ಫರ್‌ವೃಕ್ಷಗಳನ್ನು ಭಾಗಶಃ ಕಡಿಯಲಾಗಿತ್ತು. ಹೊಸದಾಗಿ ನಿರ್ಮಿಸಿದ ಕೊಳದ ಹಿಂದೆ ಮನೆಯನ್ನು ಕಟ್ಟಲಾಗಿತ್ತು. ಕೊಳದಲ್ಲಿ ನೀರು ಅಂಚಿನವರೆಗೂ ತುಂಬಿತ್ತು. ದಡಗಳಲ್ಲಿ ಇನ್ನೂ ಗರುಕೆ ಬೆಳೆದಿರಲಿಲ್ಲ. ಹೆದ್ದಾರಿಯುದ್ದಕ್ಕೂ ಹಬ್ಬಿದ್ದ ಹಳ್ಳಿಯ ಕೊನೆಯಲ್ಲಿ, ಅಲ್ಲೊಂದು ಇಲ್ಲೊಂದು ಫರ್ ವೃಕ್ಷಗಳಿದ್ದ ಕುರುಚಲಿನ ನಡುವೆ ಆ ಮನೆ ನಿಂತಿತ್ತು.

ಆ ಹೊಲಮನೆಯ ಆವರಣದಲ್ಲಿ ಕಣ, ಹೊರಮನೆ, ಲಾಯ, ನೀರ್ಮನೆ, ಬಿಡದಿ ಮತ್ತು ನಿರ್ಮಾಣದ ಹಂತದಲ್ಲಿದ್ದು ಅರ್ಧ ವೃತ್ತಾಕಾರದ ಮುಖಭಾಗವನ್ನುಳ್ಳ ದೊಡ್ಡದೊಂದು ಇಟ್ಟಿಗೆಯ ಮನೆ ಇತ್ತು. ಮನೆಯ ಸುತ್ತ ಹೊಸದಾಗಿ ರೂಪಿಸಿದ ಉದ್ಯಾನವಿತ್ತು. ಹೊಸ ಸುತ್ತುಗೋಡೆ ಮತ್ತು ಬಾಗಿಲುಗಳು ಭದ್ರವಾಗಿದ್ದುವು. ಎರಡು ಬೆಂಕಿಪಂಪು ಮತ್ತು ಹಸುರು ಬಣ್ಣದ ನೀರು ಬಂಡಿಪಟ್ಟಡಿಯಲ್ಲಿದ್ದುವು. ಬೀದಿಗಳು ನೇರವಾಗಿದ್ದುವು. ಕೈಪಿಡಿಗಳಿದ್ದ ಸೇತುವೆಗಳು ಸುಭದ್ರವಾಗಿದ್ದುವು. ಪ್ರತಿಯೊಂದೂ ಅಚ್ಚುಕಟ್ಟಾಗಿದ್ದು, ಸುವ್ಯವಸ್ಥೆಗೆ ಸಾಕ್ಷಿಯಾಗಿದ್ದುವು. ರಾಜಕುಮಾರನ ನೆಲೆಯ ಬಗ್ಗೆ ಎದುರಿಗೆ ಸಿಕ್ಕಿದ ಮನೆಯಾಳುಗಳನ್ನು ವಿಚಾರಿಸಲಾಗಿ, ಅವರು ಪಿಯರಿಗೆ ಕೊಳದ ಬಳಿಯಿದ್ದ ಸಣ್ಣದಾದ ಹೊಸ ಬಿಡದಿಯನ್ನು ತೋರಿಸಿದರು. ಚಿಕ್ಕಂದಿನಲ್ಲಿ ರಾಜಕುಮಾರ ಆಂಡ್ರ್ಯೂವನ್ನು ಶುಶ್ರೂಷೆಮಾಡಿದ್ದ ಆಂಟಾನ್ ಪಿಯರಿಯನ್ನು ಗಾಡಿಯಿಂದಿಳಿಸಿ, ಆಂಡ್ರ್ಯೂ ಇದ್ದ ಮುಂಗೋಣೆಯ ಕಡೆಗೆ ಕಳಿಸಿದನು.

ಪೀಟರ್ಸ್‌ಬರ್ಗ್‌ನ ವೈಭವೋಪೇತ ವಾತಾವರಣದಲ್ಲಿ ತನ್ನ ಗೆಳೆಯನನ್ನು ಹಿಂದೆ ಭೇಟಿ ಮಾಡಿದ್ದ ಪಿಯರಿ ಈಗವನು ವಾಸಿಸುತ್ತಿದ್ದ ನಿರಾಡಂಬರದ, ಆದರೆ ಸ್ವಚ್ಛತೆಯ ಮನೆಯನ್ನು ನೋಡಿದಾಗ ಆಶ್ಚರ್ಯವಾಯಿತು.

ಅವನು ಸರಸರನೆ ಪೈನ್ ಮರದ ವಾಸನೆ ಎರಚುತ್ತಿದ್ದ ಗಾರೆಗಚ್ಚಿಲ್ಲದ ಮರಗೋಡೆಯ ಸ್ವಾಗತ ಕೋಣೆಯನ್ನು ಹೊಕ್ಕು, ಅಲ್ಲಿಂದ ಮುಂದೆಯೂ ಹೋಗುವುದರಲ್ಲಿದ್ದನು. ಅಷ್ಟರಲ್ಲಿ ಅಂಟಾನ್ ಮೆಟ್ಟಿಲುಗಾಲಿನಲ್ಲಿ ಮುಂದೆ ಓಡಿ, ಬಾಗಿಲು ತಟ್ಟಿದನು.

'ಯಾರದು ?' ಎಂಬ ಕರ್ಕಶ ಧ್ವನಿಯೊಂದು ಕೇಳಿಸಿತು.

'ಅತಿಥಿ ಬಂದಿದ್ದಾರೆ' ಎಂದು ಅಂಟಾನ್ ಉತ್ತರಿಸಿದನು.

'ಇರುವಂತೆ ಹೇಳು' ಕುರ್ಚಿಯನ್ನು ಹಿಂದಕ್ಕೆ ಝಾಡಿಸಿದ ಶಬ್ದ ಕೇಳಿಸಿತು.

ಪಿಯರಿ ಚುರುಕು ಹೆಜ್ಜೆಯಿಡುತ್ತ ಬಾಗಿಲಿಗೆ ಹೋದನು. ಕೂಡಲೇ ರಾಜಕುಮಾರ ಆಂಡ್ರೂ ಎದುರಿಗೆ ಕಾಣಿಸಿಕೊಂಡನು. ಆಂಡ್ರೂವಿನ ಹುಬ್ಬು ಗಂಟಿಕ್ಕಿಕೊಂಡಿತ್ತು; ಅವನ ಮುಖದಲ್ಲಿ ಮುಪ್ಪಿನ ಚಿಹ್ನೆ ಕಾಣಿಸಿದುವು. ಪಿಯರಿ ಅವನನ್ನು ಬಾಚಿ ತಬ್ಬಿಕೊಂಡು, ಕನ್ನಡಕವನ್ನು ಮೇಲೆತ್ತಿ ತನ್ನ ಗೆಳೆಯನ ಕೆನ್ನೆಯನ್ನು ಚುಂಬಿಸಿ, ಅವನನ್ನು ಹತ್ತಿರದಿಂದ ನೋಡಿದನು.

'ನಾನು ನಿಮ್ಮನ್ನು ನಿರೀಕ್ಷಿಸಿರಲಿಲ್ಲ. ತುಂಬ ಸಂತೋಷ' ಎಂದು ರಾಜಕುಮಾರ ಆಂಡ್ರೂ ನುಡಿದನು.

ಪಿಯರಿ ಬಾಯಿ ತೆರೆಯಲಿಲ್ಲ; ಅವನ ಆಶ್ಚರ್ಯಚಕಿತ ದೃಷ್ಟಿ ತನ್ನ ಗೆಳೆಯನ ಮುಖದಲ್ಲಿ ಕೀಲಿಸಿದ್ದುವು. ಗೆಳೆಯನ ಪ್ರಕೃತಿಯಲ್ಲಿ ತಲೆದೋರಿದ್ದ ಬದಲಾವಣೆಗಳಿಂದ ಅವನಿಗೆ ಗಾಬರಿಯಾಯಿತು. ಆಂಡ್ರೂವಿನ ಮಾತಿನಲ್ಲಿ ನಯವಿತ್ತು; ತುಟಿ ಮೋರೆಗಳಲ್ಲಿ ಮುಗುಳುನಗೆಯಿತ್ತು. ಆದರೆ ಅವನ ಕಣ್ಣುಗಳು ಮಂಕಾಗಿ, ಜೀವರಹಿತವಾಗಿದ್ದುವು. ಅವನು ಪ್ರಯತ್ನಿಸಿದರೂ ಅವನ ಕಣ್ಣುಗಳಲ್ಲಿ ಹರ್ಷದ ಹೊಳಪು ಕಾಣುತ್ತಿರಲಿಲ್ಲ. ಅವನು ತೆಳ್ಳಗಾಗಿದ್ದ, ಮಂಕಾಗಿದ್ದ; ಆದರೆ ಗಂಡುಗುಣ ಲುಪ್ತವಾಗಿರಲಿಲ್ಲ, ಯಾವುದೋ ಚಿಂತೆಯಲ್ಲಿ ದೀರ್ಘಕಾಲ ಮಗ್ನವಾಗಿದ್ದುದರ ಫಲವಾಗಿಯೆಂಬಂತೆ ಅವನ ಹುಬ್ಬಿನಲ್ಲಿದ್ದು ಕಾಣುತ್ತಿದ್ದ ಸುಕ್ಕು ಜಡತನಗಳನ್ನು ನೋಡಿದಾಗ ಪಿಯರಿಗೆ ಸೋಜಿಗವಾಯಿತು, ಅವನ ಮನಸ್ಸು ವಿಮುಖವಾಯಿತು; ನಿಧಾನವಾಗಿ ಅವನ ಬಗ್ಗೆ ಸಹಾನುಭೂತಿ ಮೂಡಿತು.

ದೀರ್ಘಕಾಲದ ನಂತರ ಭೇಟಿಯಾಗುವ ಗೆಳೆಯರು ಮಾತುಕತೆ ಶುರುಮಾಡಬೇಕಾದರೆ ಸಾಮಾನ್ಯವಾಗಿ ವಿಳಂಬವಾಗುತ್ತದಷ್ಟೆ. ಅವರ ಪ್ರಶ್ನೋತ್ತರಗಳು ಸಂಕ್ಷೇಪವಾಗಿದ್ದರೂ, ಅವುಗಳ ವಿಷಯ ಮಾತ್ರ ದೀರ್ಘಾವಧಿಯ ಸಂಭಾಷಣೆಗರ್ಹವಾಗಿದ್ದುವು. ಹಿಂದೆ ಸೂಕ್ಷ್ಮವಾಗಿ ಗಮನಿಸಿದ್ದ ವಿಷಯಗಳನ್ನು ಕುರಿತ ಸಂಭಾಷಣೆ ಬರಬರುತ್ತ ದೀರ್ಘವಾಯಿತು. ಅವರ ಭೂತಕಾಲದ ಜೀವನ, ಭವಿಷ್ಯದ ಯೋಜನೆಗಳು, ಪಿಯರಿಯ ಪ್ರವಾಸ ಮತ್ತು ಉದ್ಯೋಗ, ಯುದ್ಧ, ಇತ್ಯಾದಿ, ಇತ್ಯಾದಿ. ಭೂತಭವಿಷ್ಯತ್ತುಗಳನ್ನು ಕುರಿತು ತಾನು ಸಡಗರ ಸಂಭ್ರಮಗಳಿಂದ ಮಾತಾಡುತ್ತಿದ್ದಾಗ, ತನ್ನ ಗೆಳೆಯನ ಮುಖದ ಮೇಲೆ ಅನ್ಯಮನಸ್ಕತೆಯ ಮತ್ತು ನಿರಾಶೆಯ

ಛಾಯೆಯನ್ನು ಪಿಯರಿ ಸ್ಪಷ್ಟವಾಗಿ ಗುರುತಿಸಿದನು. ಕೇವಲ ಸಹಾನುಭೂತಿಗಾಗಿ ಪಿಯರಿಯ ಮಾತುಗಳನ್ನವನು ಆಲಿಸುತ್ತಿದ್ದಂತೆ ಭಾಸವಾಗುತ್ತಿತ್ತು. ರಾಜಕುಮಾರ ಆಂಡ್ರೂವಿನ ಮುಂದೆ ಭವಿಷ್ಯದ ಸುಖಸಂತೋಷ ಶುಭಗಳ ಬಗ್ಗೆ ಭರವಸೆ ತಾಳುವುದಾಗಲಿ, ಕನಸುಕಾಣುವುದಾಗಲಿ, ಉತ್ಸಾಹ ಪ್ರದರ್ಶಿಸುವುದಾಗಲಿ ಶಿಷ್ಟಾಚಾರವಾಗದೆಂದು ಅವನು ಬಗೆದನು. ಪ್ರವಾಸಕಾಲದಲ್ಲಿ ನವಚೈತನ್ಯವನ್ನು ಪಡೆದಿದ್ದ ಸೌಭ್ರಾತ್ರೀಯ ತತ್ತ್ವಗಳನ್ನು ಪ್ರಸ್ತಾಪಿಸಲು ಅವನು ಹಿಂಜರಿದನು. ನಿಷ್ಕಪಟಿಯೆಂಬಂತೆ ತೋರಿಸಿಕೊಳ್ಳಲು ಪ್ರಯತ್ನಿಸಿದರೂ, ತಾನು ಪೀಟರ್ಸ್‌ಬರ್ಗ್‌ನ ಹಿಂದಿನ ವ್ಯಕ್ತಿಯಲ್ಲ, ಸಂಪೂರ್ಣವಾಗಿ ಬದಲಾವಣೆ ಹೊಂದಿದ್ದೇನೆಂಬ ಭಾವನೆಯನ್ನು ಅವನಲ್ಲಿ ಮೂಡಿಸಬೇಕೆಂಬ ಬಯಕೆ ಪಿಯರಿಯ ಮನಸ್ಸಿನಲ್ಲಿ ತೀವ್ರವಾಗಿತ್ತು.

'ಅಂದಿನಿಂದ ಇಂದಿನವರೆಗೆ ಎಷ್ಟರ ಮಟ್ಟಿಗೆ ಬೆಳೆದಿದ್ದೇನೆಂಬುದನ್ನು ನಾನು ಹೇಳಿಕೊಳ್ಳಲಾರೆ. ನನಗೆಯೇ ಆ ಬಗ್ಗೆ ಹೆಚ್ಚು ತಿಳಿವಳಿಕೆಯಿಲ್ಲ.'

'ಹೌದು, ಆ ಹೊತ್ತಿನಿಂದ ಈ ಹೊತ್ತಿಗೆ ನಾವು ತುಂಬ ಬದಲಾಯಿಸಿದ್ದೇವೆ' ಎಂದು ರಾಜಕುಮಾರ ಆಂಡ್ರೂ ನುಡಿದನು.

'ನೀವೊ? ನಿಮ್ಮ ಮುಂದಿನ ಯೋಜನೆಗಳೇನು?'

'ಯೋಜನೆ!' ಎಂಬ ಮಾತನ್ನು ವ್ಯಂಗ್ಯ ಧ್ವನಿಯಲ್ಲಿ ಆಂಡ್ರೂ ಪುನರುಚ್ಚರಿಸಿದನು. 'ನನ್ನ ಯೋಜನೆಗಳೆ?' ಎಂದವನು ಸೋಜಿಗಗೊಂಡವನಂತೆ ಪ್ರಶ್ನಾರ್ಥಕವಾಗಿ ನುಡಿದನು. 'ನಿಮಗೆ ಕಾಣುತ್ತಿದೆಯಲ್ಲ, ನಾನು ಮನೆ ಕಟ್ಟುತ್ತಿದ್ದೇನೆ. ಮುಂದಿನ ವರ್ಷದಿಂದ ಪೂರ್ತಿಯಾಗಿ ಇಲ್ಲಿಯೇ ನೆಲಸುವುದೆಂದು ಯೋಚಿಸಿದ್ದೇನೆ.'

ಹೆಚ್ಚು ವಯಸ್ಸಾದಂತೆ ಕಾಣುತ್ತಿದ್ದ ಆಂಡ್ರೂವಿನ ಮುಖವನ್ನು ಪಿಯರಿ ಕುತೂಹಲ ಮೌನಗಳಿಂದ ನೋಡುತ್ತಿದ್ದನು.

'ಹಾಗಲ್ಲ, ನಾನು ಮಾತಾಡಬೇಕೆಂದಿದ್ದದ್ದು....' ಎಂದು ಪಿಯರಿ ಪ್ರಾರಂಭಿಸುತ್ತಿದ್ದಾಗಲೇ ಆಂಡ್ರೂ ನಡುವೆ ಬಾಯಿ ಹಾಕಿದನು.

'ನನ್ನ ವಿಷಯಬೇಡ....ನಿಮ್ಮ ಪ್ರವಾಸದ ಬಗ್ಗೆ ನಿಮ್ಮ ಆಸ್ತಿಪಾಸ್ತಿಗಳ ಬಗ್ಗೆ ಮಾತಾಡಿ.'

ತನ್ನ ಆಸ್ತಿಪಾಸ್ತಿಗಳಲ್ಲಿ ನಡೆಸಿದ್ದ ಕಾರುಬಾರುಗಳನ್ನು ಪಿಯರಿ ವರ್ಣಿಸಿದನು. ಅವುಗಳ ಅಭಿವೃದ್ಧಿಯ ವಿಷಯದಲ್ಲಿ ತನ್ನ ಪಾತ್ರವೇನೆಂಬುದನ್ನು ಅವನು ಆದಷ್ಟು ಮುಚ್ಚಿಟ್ಟಿದ್ದನು. ಹಳೆಯ ಕತೆಯನ್ನು ಬಿಟ್ಟು, ಹೊಸದೇನಾದರೂ ಇದ್ದರೆ ಹೇಳುವಂತೆ ಆಂಡ್ರೂ ಹಲವು ಸಾರಿ ಅವನನ್ನು ಎಚ್ಚರಿಸುತ್ತಿದ್ದನು. ಪಿಯರಿಯ ಮಾತಿನಲ್ಲವನಿಗೆ ಆಸಕ್ತಿಯಿದ್ದಂತೆ ತೋರುತ್ತಿರಲಿಲ್ಲ. ಅಷ್ಟು ಮಾತ್ರವಲ್ಲ; ಅವನ ಮಾತಿನಿಂದ ತಾನೇ ತಲೆ ತಗ್ಗಿಸುವಂತಾಗುತ್ತಿತ್ತು.

ಪಿಯರಿಗೆ ಮುಜುಗರವಾಯಿತು: ತನ್ನ ಮಿತ್ರನ ಸಂಗದಿಂದ ನಿರುತ್ಸಾಹವಾದಂತಾಗಿ, ಮೌನಕ್ಕೆ ಶರಣಾದನು.

ತನ್ನ ಗೆಳೆಯನ ದೆಸೆಯಿಂದಾಗಿ ತನಗೂ ನಿರುತ್ಸಾಹವಾದಂತೆ, ತಾನೂ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಂತೆ ರಾಜಕುಮಾರ ಆಂಡ್ರೂ ತಳಮಳಗೊಂಡನು. 'ಇಲ್ಲಿಯ ನನ್ನ ತಂಗಣೆ

ತಾತ್ಕಾಲಿಕ. ಮನೆ ಹೊಲ ನೋಡಿಕೊಂಡು ಹೋಗೋಣವೆಂದು ಬಂದೆ. ಇಂದೇ ನಾನು ನನ್ನ ತಂಗಿಯ ಬಳಿಗೆ ಹೋಗುತ್ತೇನೆ. ನಿಮ್ಮನ್ನವಳಿಗೆ ಪರಿಚಯಿಸಿಕೊಡುತ್ತೇನೆ. ನೀವು ಈ ಹಿಂದೆಯೇ ಅವಳನ್ನು ನೋಡಿರಬೇಕು. ಊಟ ಮುಗಿಸಿದನಂತರ ಇಲ್ಲಿಂದ ಹೊರಡೋಣ. ಈ ಜಾಗವನ್ನು ನೋಡುವ ಅಭಿಲಾಷೆ ನಿಮಗಿದೆಯೆ?' ತಮ್ಮಿಬ್ಬರಿಗೂ ಸಾಧಾರಣವಾದ ಗುಣ ಯಾವುದೂ ಇಲ್ಲವೆಂಬುದನ್ನು ಕಂಡುಕೊಂಡ ಆಂಡ್ರೂ ಅತಿಥಿಯನ್ನು ಕರೆದುಕೊಂಡು ಹೊರಗೆ ಹೊರಟನು.

ಇಬ್ಬರೂ ರಾಜಕೀಯ ವಾರ್ತೆಗಳ ಬಗ್ಗೆ, ಪರಸ್ಪರ ಆತ್ಮೀಯತೆಯಿಲ್ಲದ ಹಳೆಯ ಪರಿಚಯಸ್ಥರ ಬಗ್ಗೆ ಮಾತಾಡುತ್ತ ಊಟದ ತನಕ, ಸುತ್ತಾಡಿದರು. ತಾನು ನಿರ್ಮಿಸುತ್ತಿದ್ದ ಹೊಲಮನೆಯ ಬಗ್ಗೆ, ಅದಕ್ಕೆ ಸೇರಿದ ಇತರ ಕಟ್ಟಡಗಳ ಬಗ್ಗೆ ರಾಜಕುಮಾರ ಆಂಡ್ರೂ ಉತ್ಸಾಹೋಲ್ಲಾಸಗಳಿಂದ ವಿವರಣೆ ನೀಡಿದನು. ಕಾಲಾವಧಿಯ ಮೇಲೆ ನಿಂತು, ಮನೆಯ ಬಗೆಗಿನ ಮುಂದಿನ ಏರ್ಪಾಡುಗಳನ್ನು ಕುರಿತು ಮಾತಾಡುತ್ತಿದ್ದಾಗಲೆ, ಆ ಮಾತನ್ನರಿಗಡಿದು, 'ಏನೇ ಇರಲಿ, ಇದೇನೂ ಅಷ್ಟು ಸ್ವಾರಸ್ಯವಾದದ್ದಲ್ಲ. ಊಟ ಮುಗಿಸಿ, ಹೊರಡೋಣ, ಬನ್ನಿ' ಎಂದವನು ಕರೆದನು.

ಊಟದ ಸಮಯದಲ್ಲಿ ಮಾತು ಪಿಯರಿಯ ಮದುವೆಯ ಕಡೆಗೆ ಹೊರಳಿತು. 'ಆ ವಿಷಯ ಕೇಳಿದಾಗ ನನಗೆ ತುಂಬ ಆಶ್ಚರ್ಯವಾಯಿತು' ಎಂದು ರಾಜಕುಮಾರ ನುಡಿದನು.

ಪಿಯರಿಯ ಮುಖ ಕೆಂಪೇರಿತು. ಆ ವಿಷಯ ಎತ್ತಿದಾಗಲೆಲ್ಲ ಅವನಿಗಾಗುತ್ತಿದ್ದುದೇ ಹಾಗೆ. 'ಆ ವಿಚಾರವನ್ನು ಎಂದಾದರೊಂದು ದಿನ ನಿಮಗೆ ತಿಳಿಸುತ್ತೇನೆ. ಆದರೆ ಅದು ಯಾವೊತ್ತಿಗೂ ಮುಗಿದ ಕತೆಯೆಂಬುದು ನಿಮಗೆ ಗೊತ್ತಿರಬೇಕಲ್ಲವೆ?' ಎಂದು ಪಿಯರಿ ದಿಢೀರನೆ ನುಡಿದನು.

'ಯಾವೊತ್ತಿಗೂ? ಯಾವೊತ್ತಿಗೂ ಎಂದು ಹೇಳಲಾಗದು' ಎಂದು ರಾಜಕುಮಾರ ತಿಳಿಸಿದನು.

'ಆದರೆ ಅದೆಲ್ಲ ಹೇಗೆ ಕೊನೆಗೊಂಡಿತೆಂಬುದು ನಿಮಗೆ ಗೊತ್ತಿರಬೇಕಲ್ಲವೆ? ದ್ವಂದ್ವ ಯುದ್ಧದ ವಿಷಯವೂ ನಿಮ್ಮ ಕಿವಿಗೆ ಬಿದ್ದಿರಬೇಕಲ್ಲವೆ?'

'ಅಂತು, ಆ ಪರೀಕ್ಷೆಯೂ ನಡೆದು ಹೋಯಿತೆ?' 'ಸದ್ಯ ದೇವರು ದೊಡ್ಡವನು. ನಾನವನನ್ನು ಕೊಲ್ಲಲಿಲ್ಲ.' ಎಂದು ಪಿಯರಿ ನುಡಿದನು.

'ಏಕಾಗಲಿಲ್ಲ? ನೀಚ ನಾಯಿಯನ್ನು ಕೊಲ್ಲುವುದು ಲೇಸಲ್ಲವೆ?' ಎಂದು ರಾಜಕುಮಾರ ಆಂಡ್ರೂ ಪ್ರಶ್ನಿಸಿದನು.

'ಇಲ್ಲ, ಮನುಷ್ಯನನ್ನು ಕೊಲ್ಲುವುದೇ ತಪ್ಪು.'

'ಏಕೆ ತಪ್ಪಾಗುತ್ತದೆ?' ಎಂದು ರಾಜಕುಮಾರ ಆಂಡ್ರೂ ಪ್ರಶ್ನಿಸಿದನು. 'ಯಾವುದು ಸರಿ, ಯಾವುದು ತಪ್ಪೆಂದು ಮನುಷ್ಯ ನಿರ್ಧರಿಸಲಾರ. ಮನುಷ್ಯ ಹಿಂದೆ ಸದಾ ತಪ್ಪು ಮಾಡಿದ್ದುಂಟು; ಮುಂದೆಯೂ ತಪ್ಪು ಮಾಡುತ್ತಾನೆ; ಸರಿತಪ್ಪುಗಳ ವಿಷಯ ತಿಳಿದಾಗಲೂ ತಪ್ಪು ಮಾಡುವುದುಂಟು.'

'ಬೇರೊಬ್ಬನಿಗೆ ತೊಂದರೆ ಕೊಡುವುದೇ ತಪ್ಪು' ಎಂದು ಪಿಯರಿ ನುಡಿದನು. ತಾನು ಬಂದನಂತರ ಮೊಟ್ಟಮೊದಲ ಬಾರಿಗೆ ಆಂಡ್ರೂ ಕಾವೇರಿ ಮಾತಾಡು

ತ್ತಿದ್ದುದೂ, ತಾನು ಸದ್ಯಸ್ಥಿತಿಯನ್ನು ಮುಟ್ಟಿದ ಬಗೆಯನ್ನು ವಿವರಿಸುವ ಅವಕಾಶ ದೊರೆತದ್ದೂ ಪಿಯುರಿಯ ಸಂತೋಷಕ್ಕೆ ಕಾರಣವಾಗಿದ್ದುವು.

'ಮತ್ತೊಬ್ಬನಿಗೆ ಯಾವುದು ಕೆಟ್ಟದ್ದೆಂಬುದನ್ನು ನಿಮಗೆ ಹೇಳಿದವರಾರು ?'

'ಕೆಟ್ಟದ್ದು, ಕೆಟ್ಟದ್ದು ಯಾವುದೆಂದೆ ! ನಮಗೆ ಯಾವುದು ಕೆಟ್ಟದ್ದೆಂದು ನಮಗೇ ಗೊತ್ತಿರಬೇಕಲ್ಲವೆ ?' ಎಂದು ಪಿಯುರಿ ಆಶ್ಚರ್ಯ ವ್ಯಕ್ತಪಡಿಸಿದನು.

'ಹೌದು ನಮಗದು ಗೊತ್ತಿದೆ. ನಮಗೆ ಯಾವುದು ತೊಂದರೆಯೆಂದು ತಿಳಿದಿದೆಯೋ ಅದನ್ನು ಪರರ ಮೇಲೆ ಹೇರಬಾರದೆಂಬುದು ನಮಗೆ ಗೊತ್ತಿರುವ ಸಂಗತಿ.' ಎಂದು ರಾಜಕುಮಾರ ಆಂಡ್ರೂ ಹೆಚ್ಚು ಉತ್ತೇಜಿತನಾಗಿ ನುಡಿದನು. ತನ್ನ ಹೊಸ ನಿಲವನ್ನು ಪಿಯುರಿಗೆ ತಿಳಿಸಬೇಕೆಂಬ ಇಚ್ಛೆಯೇ ಅವನನ್ನು ಹುರುಪುಗೊಳಿಸಿತ್ತು. ಅವನು ಫ್ರೆಂಚ್ ಭಾಷೆಯಲ್ಲಿ ಮಾತಾಡುತ್ತಿದ್ದನು. 'ನನ್ನ ಬದುಕಿನಲ್ಲಿ ನನಗೆ ಅರಿವಾಗಿರುವ ನಿಜವಾದ ಎರಡು ಕೆಡುಕುಗಳೆಂದರೆ, ತೀಕ್ಷ್ಣ ಪರಿತಾಪ ಮತ್ತು ಖಾಯಿಲೆ. ಅವುಗಳ ಗೈರು ಹಾಜರಿಯೊಂದೆ ಒಳ್ಳೆಯದು. ಅವೆರಡರಿಂದ ದೂರವಾಗಿ ನನ್ನಷ್ಟಕ್ಕೆ ನಾನು ಬದುಕುವುದೇ ನನ್ನ ಈಗಿನ ಸಿದ್ಧಾಂತ.'

'ನೆರೆಯುವರ ಪ್ರೇಮ ಮತ್ತು ಆತ್ಮನಿವೇದನೆಗಳೂ ?' ಎಂದು ಪಿಯುರಿ ತನ್ನ ವಿಚಾರಲಹರಿಯನ್ನು ಹರಿಸಿದನು. 'ಇಲ್ಲ. ನಿಮ್ಮ ಮಾತು ನನಗೆ ಸಮ್ಮತವಿಲ್ಲ. ಮತ್ತೊಬ್ಬರಿಗೆ ಕೇಡೆಣಿಸದೆ, ಪಶ್ಚಾತ್ತಾಪ ಪಡದೆ ಬದುಕುವುದಷ್ಟೆ ಸಾಲದು. ಅದೇ ರೀತಿ ನಾನು ಬದುಕುತ್ತಿದ್ದೆ ; ನನ್ನಷ್ಟಕ್ಕೆ ನಾನು ಬದುಕಿದೆ ; ನನ್ನ ಬದುಕನ್ನೇ ಹಾಳುಮಾಡಿಕೊಂಡೆ. ಪರರಿಗಾಗಿ ಬದುಕುತ್ತಿರುವ, ಅಥವಾ ಬದುಕಲು ಪ್ರಯತ್ನಿಸುತ್ತಿರುವ (ವಿನಯಕ್ಕಾಗಿ ಅವನು ತನ್ನ ಮಾತನ್ನು ತುಸು ವ್ಯತ್ಯಾಸಮಾಡಿಕೊಂಡನು) ಈ ಸಮಯದಲ್ಲಿ ಮಾತ್ರ ಬಾಳಿನ ಸಕಲ ಸುಖವನ್ನು ಅರ್ಥಮಾಡಿಕೊಂಡಿದ್ದೇನೆ. ಇಲ್ಲ, ನಿಮ್ಮ ಮಾತು ನನಗೆ ಸಮ್ಮತವಿಲ್ಲ. ನಿಮ್ಮ ಮಾತಿನಲ್ಲಿಯೇ ನಿಮಗೆ ವಿಶ್ವಾಸವಿದ್ದಂತಿಲ್ಲ.'

ವ್ಯಂಗ್ಯ ಸೂಚಕ ಮಂದಹಾಸದಿಂದ ಆಂಡ್ರೂ ಮಾತಿಲ್ಲದೆ ಪಿಯುರಿಯನ್ನು ನೋಡಿದನು. 'ನನ್ನ ತಂಗಿ ರಾಜಕುಮಾರಿ ಮೇರಿಗೆ ನಿಮ್ಮ ಮಾತು ಒಪ್ಪಿಗೆಯಾಗುತ್ತದೆ. ಪ್ರಾಯಶಃ ನಿಮ್ಮಷ್ಟಕ್ಕಾದರೆ ನೀವು ಹೇಳಿದ್ದು ಸರಿ' ತುಸು ಮಾತು ನಿಲ್ಲಿಸಿ, ಅವನು ಮತ್ತೆ ಪ್ರಾರಂಭಿಸಿದನು. 'ಪ್ರತಿಯೊಬ್ಬನೂ ತನಗೆ ತಿಳಿದಂತೆ ಬದುಕು ನಡಸುತ್ತಾನೆ. ನಿಮಗೆ ತಿಳಿದಂತೆ ನೀವು ಬದುಕು ನಡಸಿದ್ದರಿಂದ ಅದನ್ನು ಹಾಳುಮಾಡಿಕೊಂಡುದಾಗಿ ಹೇಳಿದಿರಿ. ಪರರಿಗಾಗಿ ಬದುಕಲು ಪ್ರಾರಂಭಿಸಿದ ಮೇಲೆ ಅದರ ಸುಖವನ್ನನುಭವಿಸುತ್ತಿರುವುದಾಗಿ ನುಡಿದಿರಿ. ನನ್ನ ಅನುಭವ ಅದಕ್ಕೆ ವಿರುದ್ಧವಾದದ್ದು. ನಾನು ಪ್ರತಿಷ್ಠೆಗಾಗಿ ಬದುಕಿದೆ—ಆ ಪ್ರತಿಷ್ಠೆ ಯಾವುದು ? ಪರರ ಮೇಲಣ ಪ್ರೀತಿ, ಅವರಿಗೆ ಸಹಾಯಮಾಡುವ ಬಯಕೆ, ಅವರು ಮೆಚ್ಚಬೇಕೆಂಬ ಆಸೆ. ಹೀಗೆ ನಾನು ಪರರಿಗಾಗಿ ಬದುಕಿದೆ ನನ್ನ ಬದುಕನ್ನು ಹಾಳುಮಾಡಿಕೊಂಡೆ. ನನ್ನಷ್ಟಕ್ಕೆ ನಾನು ಬದುಕಲುಪಕ್ರಮಿಸಿದ ಮೇಲೆ ನನಗೆ ಶಾಂತಿ ದೊರತಿದೆ.'

'ಅದರೆ ನಿಮ್ಮಷ್ಟಕ್ಕೆ ನೀವು ಬದುಕುವುದೆಂದರೇನು ?' ಎಂದು ಪಿಯುರಿ ಭಾವೋದ್ರಿಕ್ತನಾಗಿ ಪ್ರಶ್ನಿಸಿದನು. 'ನಿಮ್ಮ ಮಗ, ತಂದೆ ಮತ್ತು ತಂಗಿಯರ ಬಗ್ಗೆ ನಿಮಗೆ ಕಾಳಜಿಯಿಲ್ಲವೆ ?'

'ಅವರು ನನಗೆ ಪರಕೀಯರಲ್ಲ. ಅವರು ನಾನು ಪ್ರತ್ಯೇಕವಲ್ಲ.' ಎಂದು ಆಂಡ್ರ್ಯೂ ವಿವರಣೆ ನೀಡಿದನು. 'ನೀವು ಮತ್ತು ಮೇರಿ ಸೋದರ ಮಾನವರೆಂದು ಕರೆಯುವ ಇತರರು, ನೆರೆಯವರು ಇದ್ದಾರಲ್ಲ, ಅವರು ಎಲ್ಲ ಕೇಡು ತಪ್ಪುಗಳ ಮೂಲ. ನೀವು ಲೇಸನ್ನು ಬಯಸಲೆಳಸುವ ಕೀವ್ ರೈತರು ಸೋದರ ಮಾನವರೆ ಹೌದು.'

ಅವನು ಪಿಯರಿಯ ಕಡೆಗೆ ವಿಡಂಬನೆ ಸವಾಲುಗಳ ದೃಷ್ಟಿಹರಿಸಿದನು. ಅವನನ್ನು ತನ್ನ ಮಾರ್ಗಕ್ಕೆ ಸೆಳೆಯಬೇಕೆಂಬುದು ಆಂಡ್ರ್ಯೂವಿನ ಆಸೆ.

'ನೀವು ಕುಚೋದ್ಯ ಮಾಡುತ್ತಿದ್ದೀರಿ' ಎಂದು ಪಿಯರಿ ಭಾವಾವೇಶದಿಂದ ಉತ್ತರಿಸಿದನು. 'ಒಳಿತು ಮಾಡಬೇಕೆಂಬ—ನಾನು ಮಾಡಿದ್ದಾದರೂ ಅದೇ ಅಲ್ಲವೇ; ಅದೂ ಅಸಮರ್ಪಕವಾಗಿ—ನನ್ನ ಬಯಕೆಯಲ್ಲಿ ತಪ್ಪು ಕೇಡುಗಳು ಯಾವುವು? ಅರ್ಥಹೀನ ಮೌಢ್ಯ ಸಂಪ್ರದಾಯ ಮತ್ತು ಪ್ರಾರ್ಥನೆಗಳ ಮಧ್ಯೆ ಬೆಳೆದು, ದೇವರು ಮತ್ತು ಸತ್ಯಗಳ ನಿಜಸ್ಥಿತಿಯನ್ನರಿಯದೆಯೆ ಸಾಯುತ್ತಿದ್ದ ನತದೃಷ್ಟ ಜನರಿಗೆ, ಜೀತದಾಳುಗಳಿಗೆ ನಮ್ಮ ಸೋದರ ಮಾನವರಿಗೆ ಭವಿಷ್ಯ ಜೀವನದ ಬಗೆಗಿನ ವಿಶ್ವಾಸ, ವಿಚಾರಣೆ, ಪರಿಹಾರ ಮತ್ತು ಸಮಾಧಾನಗಳನ್ನು ಕುರಿತು ಉಪದೇಶ ನೀಡಿದರೆ ಕೇಡಾಗುತ್ತದೆಯೆ? ಭೌತಿಕಾನುಕೂಲಗಳನ್ನು ಒದಗಿಸಬಹುದಾಗಿದ್ದರೂ, ಅನಾಥರಂತೆ ರೋಗಪೀಡಿತರಾಗಿ ಸಾಯುತ್ತಿದ್ದ ದೀನರಿಗೆ ನಾನು ಆಸ್ಪತ್ರೆಯನ್ನು ನಿರ್ಮಿಸಿ, ವೈದ್ಯನನ್ನೊದಗಿಸಿದರೆ, ಮುದುಕರಿಗೆ ವೃದ್ಧಾಶ್ರಮವನ್ನು ಕಟ್ಟಿಸಿಕೊಟ್ಟದ್ದರಲ್ಲಿ ಕೇಡು ತಪ್ಪುಗಳೇನಿವೆ? ಹಗಲಿರುಳು ದುಡಿಯುವ ರೈತರಿಗೂ ಬಾಣಂತಿಯರಿಗೂ ವಿಶ್ರಾಂತಿ ವಿರಾಮಗಳನ್ನು ಕಲ್ಪಿಸುವಲ್ಲಿ ಲೇಸು ಸ್ಪಷ್ಟವಾಗಿ ಎದ್ದು ಕಾಣುವುದಿಲ್ಲವೆ?' ಎಂದು ಪಿಯರಿ ಆತುರಾತುರವಾಗಿ ನುಡಿಯುವಾಗ ತೊದಲಿದನು. 'ನಾನು ಮಾಡಿದ್ದು ಅಲ್ಪ ಮತ್ತು ಅಸಮರ್ಪಕ. ಆದರೂ ಅಲ್ಪಸ್ವಲ್ಪ ಮಾಡಿದ್ದೇನೆಂಬ ತೃಪ್ತಿ ನನಗಿದೆ. ನನ್ನ ಈ ಕಾರ್ಯ ಒಳ್ಳೆಯದಲ್ಲವೆಂದು ನೀವು ಸಾಧಿಸಲಾರಿರಿ. ನೀವು ಅದೇರೀತಿ ಆಲೋಚಿಸುತ್ತಿಲ್ಲವೆಂಬ ನಿಮ್ಮ ಮಾತನ್ನು ಸಹ ನಾನು ನಂಬಲಾರೆ. ಲೇಸನ್ನೆಸಗುವುದರಲ್ಲಿರುವ ಸಂತೋಷವೇ ಬದುಕಿನ ನಿಜವಾದ ನೆಮ್ಮದಿ, ಅದೇ ಜೀವನದ ಮುಖ್ಯ ಗುರಿ ಎಂದು ನಾನು ಖಚಿತವಾಗಿ ನಂಬಿದ್ದೇನೆ.'

'ಹೌದು, ನೀವು ಆ ರೀತಿ ಹೇಳುವುದಾದರೆ, ಅದು ಪ್ರತ್ಯೇಕವಾದ ವಿಚಾರವಾಗುತ್ತದೆ' ಎಂದು ರಾಜಕುಮಾರ ಆಂಡ್ರ್ಯೂ ನುಡಿದನು. 'ನಾನು ಮನೆ ಕಟ್ಟುತ್ತೇನೆ. ಉದ್ಯಾನ ಬೆಳೆಸುತ್ತೇನೆ, ನೀವು ಆಸ್ಪತ್ರೆ ಕಟ್ಟುತ್ತೀರಿ. ಇದು, ಅದು, ಎಲ್ಲವೂ ಆಟವೇ. ಯಾವುದು ಸರಿ, ಯಾವುದು ಲೇಸೆಂಬುದನ್ನು ಎಲ್ಲ ಬಲ್ಲವರು ನಿರ್ಣಯಿಸಬೇಕೇ ಹೊರತು, ನಾವಲ್ಲ. ಚರ್ಚೆ ಬೇಕೆಂದರೆ, ಬನ್ನಿ, ಸಿದ್ಧನಿದ್ದೇನೆ.'

ಅವರು ಮೇಜನ್ನು ಬಿಟ್ಟು, ವರಾಂಡವಂತಿದ್ದ ದ್ವಾರ ಮಂಟಪದಲ್ಲಿ ಕುಳಿತರು.

'ಹಾಗಾದರೆ ಬನ್ನಿ, ಚರ್ಚೆ ಮಾಡೋಣ' ಎಂದು ರಾಜಕುಮಾರ ಆಂಡ್ರ್ಯೂ ಕರೆದನು. ಅವನು ಬೆರಳೊಂದನ್ನು ಬಗ್ಗಿಸುತ್ತ 'ನೀವು ಶಾಲೆ, ಶಿಕ್ಷಣ ಮೊದಲಾದ ವಿಷಯಗಳನ್ನು ಕುರಿತು ಮಾತಾಡುತ್ತೀರಿ. (ತನ್ನ ಟೋಪಿಯನ್ನೆತ್ತಿಕೊಂಡು ತಮ್ಮ ಮುಂದೆ ಅಡ್ಡಲಾಗಿ ಹೋದ ರೈತನ ಕಡೆಗೆ ಬೆರಳು ತೋರಿಸಿ) ಪಾಶವಿಕ ಸ್ಥಿತಿಯಿಂದ

ಅವನನ್ನು ಮೇಲೆತ್ತಿ, ಆಧ್ಯಾತ್ಮಿಕ ಆವಶ್ಯಕತೆಯ ಕಡೆಗೆ ಅವನನ್ನು ಎಚ್ಚರಿಸಿ, ಉದ್ಧರಿಸಬೇಕೆನ್ನುತ್ತೀರಿ. ಪಾಶವಿಕ ಸುಖಸಂತೋಷವೇ ಅವನ ನಿಜವಾದ ಸುಖಸಂತೋಷವೆಂದೂ, ಅವು ಅವನಿಗೆ ದಕ್ಕದಂತೆ ಮಾಡುವುದೇ ನಿಮ್ಮ ಹವಣಾಗಿದೆಯೆಂಬುದೂ ನನ್ನ ತಿಳಿವಳಿಕೆ. ಅವನನ್ನು ನೋಡಿದರೆ ನಾನು ಹೊಟ್ಟೆಕಿಚ್ಚುಪಡುವಂತಾಗುತ್ತದೆ. ನನಗಿರುವ ಅನುಕೂಲಗಳನ್ನೊದಗಿಸದೆ ಅವನೂ ನನ್ನಂತಾಗಬೇಕೆಂದು ಎಣಿಸುತ್ತೀರಿ’ ಎಂದವನು ಮಾತು ಮುಂದುವರಿಸಿದನು. “ಅವನ ದುಡಿಮೆಯನ್ನು ಹಗುರಗೊಳಿಸಿದ್ದೇನೆ” ಎಂದು ನೀವು ಹೇಳಿದಿರಿ. ಆದರೆ ನನಗೆ ತಿಳಿದಂತೆ, ನನಗಾಗಲಿ ನಿಮಗಾಗಲಿ ಮಾನಸಿಕ ಕ್ರಿಯೆಯೆಂತು ಅನಿವಾರ್ಯವೋ, ಅಂತೆಯೇ, ಅವನ ಬದುಕಿಗೆ ಹಾಗೂ ಅಸ್ತಿತ್ವಕ್ಕೆ ದೈಹಿಕ ಶ್ರಮ ಅತ್ಯಾವಶ್ಯಕ. ಚಿಂತನೆಯಿಲ್ಲದೆ ನಿಮ್ಮ ಉಳಿವು ಸಾಧ್ಯವೇ ಇಲ್ಲ. ಬೆಳಗ್ಗೆ ಎರಡು ಗಂಟೆಯ ನಂತರ ನಾನು ಹಾಸುಗೆಯ ಮೇಲುರುಳಿಕೊಳ್ಳುತ್ತೇನೆ; ಆಲೋಚನೆಗಳು ನನ್ನನ್ನು ಮುತ್ತುತ್ತವೆ. ಬೆಳಗಿನ ಜಾವದ ತನಕ ಕಣ್ಣಿಗೆ ನಿದ್ದೆ ಹತ್ತದೆ, ಆ ಕಡೆ ಈ ಕಡೆ ಹೊರಳಾಡುತ್ತೇನೆ. ಏಕೆಂದರೆ ನಾನು ಆಲೋಚನಾಮಗ್ನನಾಗಿರುತ್ತೇನೆ; ಅವನೆಂತು ಉಳದೆ, ಕೊಯ್ಲು ಮಾಡದೆ ಬದುಕುವುದು ಸಾಧ್ಯವಿಲ್ಲವೋ ನಾನು ಸಹ ಆಲೋಚಿಸದೆ ಬದುಕಲಾರೆ. ಅವನು ದುಡಿಯಲಿಲ್ಲವೆನ್ನಿ, ಪಾನಾಸಕ್ತನಾಗುತ್ತಾನೆ, ಇಲ್ಲವೆ ಖಾಯಿಲೆ ಬೀಳುತ್ತಾನೆ. ನಾನೆಂತು ಉಗ್ರ ದೈಹಿಕ ಶ್ರಮವನ್ನು ಸಹಿಸಲಾರೆನೊ, ಅದರಿಂದ ಒಂದು ವಾರದಲ್ಲಿ ಸತ್ತುಹೋಗುತ್ತೇನೆಯೊ, ಅಂತೆಯೇ ಅವನು ಶಾರೀರಕ ನಿರ್ವ್ಯಾಪಾರವನ್ನು ಸಹಿಸಿಕೊಳ್ಳಲಾರ; ಕೊಬ್ಬು ಹೆಚ್ಚಿ ಸತ್ತುಹೋಗುತ್ತಾನೆ. ಮೂರನೆಯ ವಿಷಯ—ನೀವು ಪ್ರಸ್ತಾಪ ಮಾಡಿದ ವಿಷಯ ಯಾವುದು?’ ಎಂದವನು ಮೂರನೆಯ ಬೆರಳನ್ನು ಮಡಿಚಿದನು. ‘ಓಹೊ, ಹೌದು, ಆಸ್ಪತ್ರೆಗಳು, ಔಷಧಿ. ಅವನಿಗೆ ಮೂರ್ಛೆರೋಗವಿದೆ. ಸಾಯುತ್ತಿದ್ದಾನೆ. ನೀವು ಬರುತ್ತೀರಿ. ಸುಲಿಯುತ್ತೀರಿ. ತೇಪೆಹಾಕಿ ಕಳಿಸುತ್ತೀರಿ. ಮತ್ತೆ ಹತ್ತು ವರ್ಷ ಎಲ್ಲರಿಗೂ ಭಾರವಾಗಿ, ಕುಂಟಕೊಂಡು, ಬದುಕನ್ನು ಸಾಗಿಸುತ್ತಾನೆ. ಅವನಿಗೆ ಮರಣವೇ ಮುಕ್ತಿ, ಸರಳ, ಸುಲಭ. ಹುಟ್ಟು ಸಾವು ಇದ್ದದ್ದೇ; ಅಂಥವರು ಹೇರಳವಾಗಿದ್ದಾರೆ. ಒಬ್ಬ ಕಾರ್ಮಿಕನನ್ನು ಕಳೆದುಕೊಳ್ಳಲು ನಿಮಗೆ ಇಷ್ಟವಿಲ್ಲದಿರಬಹುದು. ಆ ವಿಷಯವೇ ಬೇರೆ. ಅವನ ಬಗ್ಗೆ ನಾನು ಯೋಚಿಸುವುದೇ ಹೀಗೆ. ಆದರೆ ಅವನ ಮೇಲಣ ಪ್ರೀತಿಯಿಂದ ಅವನನ್ನು ಗುಣಪಡಿಸಲು ಪ್ರಯತ್ನಿಸುತ್ತೀರಿ. ಅವನಿಗದು ಬೇಕಿಲ್ಲ. ಮೇಲಾಗಿ, ಔಷಧಿ ಯಾರನ್ನಾದರೂ ಯಾವಾಗಲಾದರೂ ಗುಣಪಡಿಸುತ್ತದೆಂಬ ಕಲ್ಪನೆಯೂ ವಿಚಿತ್ರವಾದದ್ದೇ! ಪ್ರೇಮವೇ ಅವರನ್ನು ಪ್ರಾಣಾಪಾಯಕ್ಕೀಡುಮಾಡುತ್ತದೆ. ಹೌದು!’ ಎಂದವನು ಕೋಪದಿಂದ ಹುಬ್ಬು ಗಂಟಿಕ್ಕಿಕೊಂಡು, ಬೇರೆಕಡೆಗೆ ತಿರುಗಿಕೊಂಡನು.

ಆ ವಿಷಯವನ್ನು ಕುರಿತು ಬಹು ದಿನಗಳಿಂದ ಚಿಂತನಮಂಥನ ನಡಸಿದವನಂತೆ ರಾಜಕುಮಾರ ಆಂಡ್ರೂ ಸುಸ್ಪಷ್ಟವಾಗಿ ಸುನಿಶ್ಚಯವಾಗಿ ತನ್ನ ಭಾವನೆಗಳನ್ನು ವಿವರಿಸಿದನು; ದೀರ್ಘಕಾಲದಿಂದ ಮಾತಾಡಲವಕಾಶವಿಲ್ಲದ ವ್ಯಕ್ತಿಯಂತೆ, ಸಿದ್ಧಹಸ್ತನೆಂಬಂತೆ ಸರಸರನೆ ಮಾತಿನ ಧಾರೆ ಹರಿಸಿದನು. ಅವನ ನಿರ್ಣಯಗಳು ಸಮ್ಮತಿಗೆ ಅನರ್ಹವಾದಂತೆಲ್ಲ ಅವನ ದೃಷ್ಟಿ ಉತ್ಸಾಹಪೂರ್ಣವಾಗುತ್ತಿತ್ತು.

(ಮುಂದುವರಿಯುವುದು)

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಪ್ರೊ|| ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨

2. ಎಲ್. ಎಸ್. ಶೇಷಗಿರಿರಾವ್
267, 'ಜ್ಯೋತಿ' ಮೂರನೇ ಬ್ಲಾಕ್, ಜಯನಗರ, ಬೆಂಗಳೂರು–೫೬೦ ೦೦೧

3. ಎ. ಆರ್. ನಾಗಭೂಷಣ
1235, ಕೆ. ಎಂ. ಪುರಂ, ಮೈಸೂರು–೫೭೦ ೦೦೪

4. ಡಾ|| ಆರ್. ರಾಮಚಂದ್ರ, ಅಧ್ಯಾಪಕರು
ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

5. ಡಾ|| ಕೆ. ಸಿ. ಬೆಳ್ಳಿಯಪ್ಪ, ರೀಡರ್
ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು೫೭೦ ೦೦೬

6. ಡಾ|| ಆರ್ವಿಯಸ್. ಸುಂದರಂ, ರೀಡರ್
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

7. ಪ್ರೊ. ಟಿ. ವಿ. ಸುಬ್ಬರಾವ್
ತೆಲುಗು ವಿಭಾಗದ ಮುಖ್ಯಸ್ಥರು
ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು–೫೬೦ ೦೫೬

8. ನಾಗರಾಜೇಗೌಡ
ಕಾರ್ಯಕ್ರಮ ಸಮನ್ವಯಾಧಿಕಾರಿ (ತರಬೇತಿ ವಿಭಾಗ)
ರಾಜ್ಯ ಸಂಪನ್ಮೂಲ ಕೇಂದ್ರ, 464, ಎ ಮತ್ತು ಬಿ ಬ್ಲಾಕ್
ಕುವೆಂಪುನಗರ, ಮೈಸೂರು–೫೭೦ ೦೨೩

9. ಕೆ. ಆರ್. ನಾರಾಯಣ C/o ಕೆ. ಎಸ್. ಭಗವಾನ್
ನಂ. 10, ಹುಡ್ಕೊ ಮನೆಗಳು, ಕುವೆಂಪುನಗರ, ಮೈಸೂರು–೫೭೦ ೦೨೩

10. ಶಂಸ ಐತಾಳ
ನಂ. 616, 'ಚಂದನ', ಪಿ ಮತ್ತು ಟಿ ಬ್ಲಾಕ್, ಕುವೆಂಪುನಗರ,
ಮೈಸೂರು–೫೭೦ ೦೨೩

11. ಪ್ರೊ|| ಎ. ಎನ್. ಮೂರ್ತಿರಾವ್
185, ಎಚ್. ಎ. ಎಲ್. ಲೇ ಔಟ್, 2ನೇ ಹಂತ, ಸಂಜಯನಗರ
ಬೆಂಗಳೂರು–೫೬೦ ೦೨೪

ನಿಮ್ಮ ವಾಹನವೂ ಸಹ ಹೆಚ್ಚು ಹೊಗೆ ಉಗುಳುತ್ತಿದೆಯೆ ?

ಹೊಗೆಯುಗುಳುವ ವಾಹನ ನಮ್ಮ ಆರೋಗ್ಯಕ್ಕೆ ಹಾನಿಕರ. ವಾಯುಮಾಲಿನ್ಯವನ್ನು ತಡೆಗಟ್ಟಿರಿ—ನಿಮ್ಮ ವಾಹನವನ್ನು ಸದಾ ಸುಸ್ಥಿತಿಯಲ್ಲಿಟ್ಟಿರಿ.

ಬೆಂಗಳೂರು ನಗರದಲ್ಲೇ ದಿನನಿತ್ಯ ಮೂರು ಲಕ್ಷಗಳಿಗಿಂತಲೂ ಅಧಿಕ ವಾಹನಗಳು ವಿನಾಶಕಾರೀ ಹೊಗೆಯನ್ನು ಉಗುಳುತ್ತವೆ.

ನಿಮ್ಮ ವಾಹನ ನಿಂತಿರುವಾಗ ಅನಗತ್ಯವಾಗಿ ಎಂಜಿನನ್ನು ಚಾಲನೆಯಲ್ಲಿಡಬೇಡಿ.

ವಾಹನ ನಿಂತೆ ಇದ್ದು, ಯಂತ್ರ ಮಾತ್ರ ಚಲಿಸುತ್ತಿದ್ದರೆ, ಹಾನಿಕಾರಕ ಹೊಗೆ ಮತ್ತು ಇಂಗಾಲದ ಮೊನಾಕ್ಸೈಡ್ ಉತ್ಪತ್ತಿ ಹೆಚ್ಚುತ್ತದೆ.

ವಾಹನದ ವೇಗವನ್ನು ಅನಗತ್ಯವಾಗಿ ಬದಲಾಯಿಸಬೇಡಿ.

ಪ್ರತೀ ಬಾರಿ ವೇಗ ಬದಲಾಯಿಸಿದಾಗ ಹೊಗೆ ಮತ್ತು ಇಂಗಾಲದ ಮೊನಾಕ್ಸೈಡ್ ಹೆಚ್ಚಿನ ಪ್ರಮಾಣದಲ್ಲಿ ಹೊರಬರುತ್ತವೆ. ನಿಮ್ಮ ವಾಹನವನ್ನು ಆದಷ್ಟು ನಯವಾಗಿ ಓಡಿಸಿ.

ಗಾಳಿ ಮತ್ತು ಇಂಧನ ತೆಳುವಾದ ರೀತಿಯಲ್ಲಿ ಸಂಮಿಶ್ರಗೊಳ್ಳುವಂತೆ ನಿಮ್ಮ ವಾಹನದ ಕಾರ್ಬ್ಯುರೇಟರನ್ನು ಸರಿಪಡಿಸಿಕೊಳ್ಳಿ.

ಅಧಿಕ ರೀತಿಯ ಇಂಧನ ಸಂಮಿಶ್ರಣ ಅಧಿಕ ಮಟ್ಟದಲ್ಲಿ ಇಂಗಾಲದ ಮೊನಾಕ್ಸೈಡನ್ನು ಹೊರದೂಡುತ್ತದೆ.

ಕನಿಷ್ಟ ಪಕ್ಷ ಮೂರು ತಿಂಗಳಿಗೊಮ್ಮೆ ನಿಮ್ಮ ವಾಹನವನ್ನು ನಿಯಮಿತವಾಗಿ ಸರ್ವೀಸಿಂಗ್‌ಗೆ ಕಳುಹಿಸಿ.

ಹೀಗೆ ಮಾಡುವಾಗ ಎಂಜಿನ್ ಟ್ಯೂನಿಂಗ್, ಸ್ಪಾರ್ಕ್ ಪ್ಲಗ್ ಮತ್ತು ಇಂಜೆಕ್ಷನ್ ಸಿಸ್ಟಮ್‌ಗಳಿಗೆ ವಿಶೇಷ ಗಮನ ನೀಡಿ. ಇದರಿಂದ ವಾಯು ಮಾಲಿನ್ಯ ಇಳಿತ ಮತ್ತು ಇಂಧನ ವೆಚ್ಚ ಕಡಿತ.

ವಾಹನ ಮಾಲಿನ್ಯತೆಯನ್ನು ನಿಯಂತ್ರಿಸಿ—ಹೆಚ್ಚಾಗುತ್ತಿರುವ ವಾಯು ಮಾಲಿನ್ಯವನ್ನು ತಡೆಯಲು ಸಹಕರಿಸಿ.

ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, 1963ರ 196ನೆಯ ನಿಯಮ 1985ರ ನವೆಂಬರ್ 8 ರಿಂದ ಜಾರಿಗೆ ಬಂದಿದೆ, ಇದು, ಮೋಟಾರು ವಾಹನಗಳು ಹೊರದೂಡಬಹುದಾದ ಹೊಗೆ ಮತ್ತು ಇತರ ಮಾಲಿನ್ಯದ ಮಟ್ಟವನ್ನು ನಿಗದಿ ಪಡಿಸುತ್ತದೆ.

ಬಸ್ಸುಗಳು, ಲಾರಿಗಳು ಮತ್ತು ವ್ಯಾನುಗಳಂಥ ಡೀಸೆಲ್ ವಾಹನಗಳು ವಿಸರ್ಜಿಸುವ ಹೊಗೆಯ ಪ್ರಮಾಣದ ಪರೀಕ್ಷೆ ಸೆಪ್ಟೆಂಬರ್ 25, 1986 ರಿಂದ ಪ್ರಾರಂಭವಾಗುವುದು. ಇದೇ ರೀತಿ ಇತರ ಮೋಟಾರು ವಾಹನಗಳ ಪರೀಕ್ಷೆಯನ್ನೂ ಹಂತ ಹಂತವಾಗಿ ಪ್ರಾರಂಭಿಸಲಾಗುವುದು.

ಪುನರ್ ಪರಿಶೀಲನೆಗಾಗಿ ನಿಗದಿ ಪಡಿಸಿರುವ ಅವಧಿಯೊಳಗೆ ವಾಹನದ ಚಾಲಕರಾಗಲಿ, ಮಾಲೀಕರಾಗಲಿ ವಾಹನವನ್ನು ತರದೇ ಹೋದಲ್ಲಿ ಅವರ ರಿಜಿಸ್ಟ್ರೇಷನ್ ಸರ್ಟಿಫಿಕೇಟನ್ನು ರದ್ದು ಪಡಿಸಲಾಗುವುದು.

ಕರ್ನಾಟಕ ಸರ್ಕಾರ—ನಿರ್ಮಲವಾದ ವಾತಾವರಣ ಮತ್ತು ಆರೋಗ್ಯಕರ ಜೀವನಕ್ಕಾಗಿ ಪರಿಸರ ಮಾಲಿನ್ಯವಾಗದಂತೆ ಪ್ರಯತ್ನಿಸುತ್ತಿದೆ.

"ಕರ್ನಾಟಕ ವಾರ್ತೆ"



ಶೇಷೇಂದ್ರ ಶರ್ಮ